ನೃತ್ಯ ಪ್ರದರ್ಶನ
ಮನಾಲಿಯಲ್ಲಿ ನಡೆದ ಚಳಿಗಾಲದ ಉತ್ಸವದಲ್ಲಿ ಕಲಾವಿದೆಯೊಬ್ಬರು ಜನಪದ ನೃತ್ಯ ಪ್ರದರ್ಶನ ಮಾಡಿದರು

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಬೂಮ್ರಾ ಮಿಂಚಿನ ದಾಳಿ
ಗುವಾಹಟಿಯಲ್ಲಿ ಭಾನುವಾರ ನ್ಯೂಜಿಲೆಂಡ್ ಎದುರು ನಡೆದ ಮೂರನೇ ಟಿ20 ಕ್ರಿಕೆಟ್ ಪಂದ್ಯದಲ್ಲಿ ಭಾರತದ ವೇಗಿ ಜಸ್‌ಪ್ರೀತ್ ಬೂಮ್ರಾ 3 ವಿಕೆಟ್ ಗಳಿಸಿದರು

Reliance Growth is Life

ಇದೀಗ ಇನ್ನೂ ದೊಡ್ಡದು ಅತ್ಯುತ್ತಮ
ಫೀನಿಕ್ಸ್ ಮಾರ್ಕೆಟ್ ಸಿಟಿ, ಕೆಳ ಮಹಡಿ, ಶಾಪ್ ನಂ.ಜಿ-22, 28ಎ 29

ಸ್ಟೋರ್‌ಗಳು ಬೆಳಗ್ಗೆ 9 ಕ್ಕೆ ತೆರೆಯುತ್ತವೆ

Reliance digital
PERSONALISING TECHNOLOGY
www.reliancedigital.in

ALL ABOUT APPLE

iPhone 15 128 GB ₹49990* EMI of ₹2888*
iPhone 16 128 GB ₹57990* EMI of ₹3388*
*Price post bank cashback & store discount

iPhone 17 256 GB ₹78900* EMI of ₹3454*
iPhone 17 Pro 256 GB ₹130900* EMI of ₹2888*
*Price post bank cashback & store discount

Built for Apple Intelligence.
MacBook Air Powered by M2
IDFC FIRST Bank
₹85990 ₹64990* EMI of ₹5458*
FREE MS Office 365 worth ₹6899*

iPad A16 128 GB WiFi
₹34900 ₹30900* EMI of ₹1371*

*Price inclusive of all offers, cashback & student discount

ಡಿಜಿಟಲ್ ಇಂಡಿಯಾ ಸೇಲ್
ಇಂಡಿಯಾದ ಅತಿದೊಡ್ಡ ಎಲೆಕ್ಟ್ರಾನಿಕ್ಸ್ ಸೇಲ್
ಸೇಲ್ ಇಂದು ಕೊನೆಗೊಳ್ಳುತ್ತದೆ

₹26000 ವರೆಗೆ ತ್ವರಿತ ರಿಯಾಯಿತಿ*
BOBCARD ICICI Bank kotak YES BANK

₹30000 ವರೆಗೆ ಕ್ಯಾಶ್ ಬ್ಯಾಕ್*
ಇಸಿ ಇಎಂಐ ಮೇಲೆ
BAJAJ FINSERV IDFC FIRST Bank CONSUMER DURABLE LOAN HDB FINANCIAL SERVICES REIMAGINING OPPORTUNITIES

0% ಫೈನಾನ್ಸ್*
5% UPI ಅನ್ ಲಿಮಿಟೆಡ್ ಡಿಸ್ಕೌಂಟ್ ಆಯ್ದ ಪ್ರಾಡಕ್ಟ್‌ಗಳ ಮೇಲೆ*

PRICES INCREASING SOON, BUY NOW!

AI LAPTOPS
Intel Core Ultra 5 ₹82890 ₹49999*
Unrivaled with Snapdragon X ₹82890 ₹49999*
AMD R5 AI ₹104890 ₹59999*
*Prices inclusive of all offers

GAMING LAPTOPS
RTX 3050A ₹95590 ₹59499*
RTX 4050 ₹107799 ₹67999*
RTX 5050 ₹119999 ₹79999*
*Prices inclusive of all offers

1T ACs Starting from ₹17990* EMI of ₹1749*
1.5T ACs Starting from ₹18990* EMI of ₹1833*
BLUE STAR Haier Hisense LLOYD LG GENERAL SAMSUNG VOLTAS
*Prices after cashback & under exchange

PHILIPS Air Fryer NA221/00 1500W 4.2 L ₹9995 ₹8399*
BENEFITS Get assured freebie worth upto ₹3000*

EUREKA FORBES Robotic Vacuum Cleaner Smart Clean Pro S2
• 9000 Pascal High Suction • Wet Mopping • LiDAR 3.0 & Quick Home Mapping
₹34499 ₹23999*
*Price inclusive of bank cashback
BENEFITS Get assured attractive freebies

TOSHIBA No.1 TV BRAND IN JAPAN
QLED 2 Year Warranty
147 CM (58) NEW PRICE ₹33990*
165 CM (65) NEW PRICE ₹44990*

STADIUM AT YOUR HOME
BIG SCREEN DEALS
292 CM (115)
216 CM (85) | 249 CM (98) | 254 CM (100) | 292 CM (115)
Range starting from ₹119990* EMI starting from ₹10990*
Haier LG SAMSUNG SONY TCL TOSHIBA

BPL HOME THEATRE TV
81 CM (32) OLD PRICE ₹11990 NEW PRICE ₹9990*
HD READY GAME Optimizer WIDE VIEWING ADS Panel

TCL Google TV 2 Year Warranty
QD-MINI LED
139 CM (55) NEW PRICE ₹46990*
165 CM (65) NEW PRICE ₹63990*

UP TO ₹5000 ADDITIONAL EXCHANGE BONUS*

motorola signature • Gold standard photography • Privilege access
PREBOOK NOW & GET moto watch worth ₹5999 at just ₹999*

motorola Edge Series Starting from ₹19999*
*Price inclusive of bank offer

REDMI Note 15 5G 8 GB | 128 GB ₹26999 ₹19999*
*Inclusive ₹3000 off cashback on leading banks

oppo Reno15 8 GB | 256 GB ₹45999 ₹41399*
*Price inclusive of bank offer
BENEFITS Air Fryer worth ₹10000 at ₹1*

vivo X300 12 GB | 256 GB ₹75999 ₹68499*
*Price inclusive of bank offer

SAMSUNG S25 Ultra 12 GB | 256 GB ₹129999 ₹122999*
BENEFITS Get ₹7000 Instant Discount* + 24M EMI + Best Exchange Value

REFRIGERATORS STARTING FROM ₹7990*

FRENCH DOOR Starting from ₹69990* EMI of ₹3999*
GLASS DOOR SIDE BY SIDE Starting from ₹65990* EMI of ₹3999*
SIDE BY SIDE Starting from ₹39990* EMI of ₹2999*
BENEFITS Havells Air Fryer at ₹99*

SAMSUNG 467L ₹46990* EMI of ₹2490*
LG 322L ₹32990* EMI of ₹1999*
DOUBLE DOOR Starting from ₹18990* EMI of ₹1490*
BENEFITS boAt Soundbar at ₹49* Philips Iron at ₹9*

BOSCH BPL Electrolux Godrej Haier IFB LLOYD LG LIEBHERR SAMSUNG Whirlpool
*Prices inclusive of bank cashback & under exchange

UP TO 20% CASHBACK* I UP TO 30% CLEARANCE SALE DISCOUNT*

FRONT LOAD SAMSUNG 9 KG Starting from ₹34990* EMI of ₹2916*
FRONT LOAD IFB 9 KG Starting from ₹37490* EMI of ₹3124*
FRONT LOAD LG 10 KG Starting from ₹37490* EMI of ₹3124*

TOP LOAD VOLTAS 6.5 KG Starting from ₹10990* EMI of ₹916*
TOP LOAD LG 8 KG Starting from ₹18990* EMI of ₹1583*
TOP LOAD HEATER WHIRLPOOL 8.5 KG Starting from ₹18490* EMI of ₹1541*
TOP LOAD SAMSUNG 8 KG Starting from ₹18990* EMI of ₹1583*

*Price inclusive of bank offer
BENEFITS Freebies worth up to ₹10000*
BOSCH Haier IFB Godrej LG SAMSUNG VOLTAS beko Whirlpool

ಇದರೊಂದಿಗೆ ತ್ವರಿತ ರಿಯಾಯಿತಿ ಲಭ್ಯವಿದೆ
AMERICAN EXPRESS AXIS BANK HDFC BANK HSBC IDFC FIRST Bank CREDIT CARDS SBI card
ಶುಲ್ಕ ರಹಿತ ಇಎಂಐ ಲಭ್ಯವಿದೆ
kotak TVS CREDIT

SCAN TO VISIT WEBSITE OR STORE
ಉಚಿತ ಡೆಲಿವರಿ & ತ್ವರಿತ ಇನ್‌ಸ್ಟಾಲೇಷನ್*
ಇತ್ತೀಚಿನ ತಂತ್ರಜ್ಞಾನದ ವ್ಯಾಪಕ ಶ್ರೇಣಿ
ಪರಿಣಿತ ಸಲಹೆ
ವಿಸ್ತೃತ ವಾರಂಟಿ*
ಸುಲಭ ಇಎಂಐಗಳು*
ಇಲ್ಲಿ ಕೂಡ ಶಾಪಿಂಗ್ ಮಾಡಿ: SHOP ANY ELECTRONICS AT MY JIO STORE, Jio DIGITAL LIFE

‘ಪದ್ಮ ಪ್ರಶಸ್ತಿ’ ಪುರಸ್ಕೃತರ ಪರಿಚಯ

ಸಾಹಿತ್ಯ, ಶಿಕ್ಷಣ, ವೈದ್ಯಕೀಯ ಮತ್ತು ಸಮಾಜ ಸೇವೆ ಮತ್ತಿತರ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಕರ್ನಾಟಕದ ಎಂಟು ಸಾಧಕರು ದೇಶದ ಅತ್ಯುನ್ನತ ನಾಗರಿಕ ಗೌರವವಾದ ‘ಪದ್ಮ ಪ್ರಶಸ್ತಿ’ಗಳಿಗೆ ಭಾಜನರಾಗಿದ್ದಾರೆ. ಸಾಧಕರ ಪರಿಚಯ ಇಲ್ಲಿದೆ.

ಶತಾವಧಾನಿ.ಆರ್. ಗಣೇಶ್

ಪದ್ಮ ಭೂಷಣ, ಕ್ಷೇತ್ರ: ಕಲೆ

ಶತಾವಧಾನಿ ಆರ್.ಗಣೇಶ್ ಅವರು ಬಹು ಭಾಷಾ ಪಂಡಿತರು. ಕನ್ನಡ, ಸಂಸ್ಕೃತ, ತೆಲುಗು, ತಮಿಳು ಸಹಿತ 8 ಭಾಷೆಗಳಲ್ಲಿ ಅವಧಾನವನ್ನು ನಿರರ್ಗಳವಾಗಿ ಮಾಡಬಲ್ಲವರು. 1962ರ ಡಿಸೆಂಬ ೯4ರಂದು ಕೋಲಾರದಲ್ಲಿ ಜನನ. ಆರ್. ಶಂಕರನಾರಾಯಣ ಅಯ್ಯರ್ ಹಾಗೂ ಅಲಮೇಲಮ್ಮ ಅವರ ತಂದೆ–ತಾಯಿ.

ಬೆಂಗಳೂರಿನಲ್ಲಿ ಪ್ರಾಥಮಿಕ, ಗೌರಿಬಿದನೂರಿನಲ್ಲಿ ಪ್ರೌಢ ಶಿಕ್ಷಣ ಪಡೆದರು. ವಿಶ್ವೇಶ್ವರಯ್ಯ ಎಂಜಿನಿಯರಿಂಗ್ ಕಾಲೇಜು ವಿಶ್ವವಿದ್ಯಾಲಯದಲ್ಲಿ (ಯುವಿಸಿಇ) ಎಂಜಿನಿಯರಿಂಗ್ ಪದವಿ, ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್‌ನಲ್ಲಿ ಎಂ.ಎಸ್ಸಿ ಪಡೆದರು. ಆದರೆ ಆಸಕ್ತಿ ಬೆಳೆದಿದ್ದು ಭಾರತೀಯ ತತ್ವಶಾಸ್ತ್ರ, ಇತಿಹಾಸ, ಸಾಹಿತ್ಯ, ವೇದಾಂತ, ಉಪನಿಷತ್, ಕಲೆ ಇತ್ಯಾದಿ ವಿಷಯಗಳಲ್ಲಿ. ಮೈಸೂರು ವಿಶ್ವವಿದ್ಯಾಲಯದಲ್ಲಿ ಸಂಸ್ಕೃತದಲ್ಲಿ ಎಂ.ಎ ಸ್ನಾತಕೋತ್ತರ ಪದವಿ ಪಡೆದರು. ಕನ್ನಡದಲ್ಲಿ ಅವಧಾನ ಕಲೆ ಎನ್ನುವ ಪ್ರಬಂಧಕ್ಕೆ ಹಂಪಿಯ ಕನ್ನಡ ವಿಶ್ವವಿದ್ಯಾನಿಲಯ ಡಿ.ಲಿಟ್ ನೀಡಿದೆ.

ಚಿತ್ರಕಾವ್ಯ ಕಲೆಯ ಕುರಿತು ಶತಾವಧಾನ ಶಾರದೆ ಹಾಗೂ ಶತಾವಧಾನ ಶ್ರೀವಿದ್ಯೆ, ಸಂಸ್ಕೃತದಲ್ಲಿ 12 ನಾಟಕ, 16 ಕಾವ್ಯ, ಕನ್ನಡದಲ್ಲಿ 8 ಕಾವ್ಯ, 3 ಕಾದಂಬರಿ ಹಾಗೂ 6 ಅನುವಾದ ಕೃತಿ ಹೊರತಂದಿದ್ದಾರೆ. ಭಾರತೀಯ ವಿದ್ಯಾಭವನದ ಬೆಂಗಳೂರು ಶಾಖೆಯ ಸಂಸ್ಕೃತ ವಿಭಾಗದ ನಿರ್ದೇಶಕರೂ ಹೌದು. ಕರ್ನಾಟಕ ರಾಜ್ಯೋತ್ಸವ ಸೇರಿದಂತೆ ಹಲವು ಪ್ರಶಸ್ತಿಗಳು ಸಂದಿವೆ.

ಡಾ.ಸುರೇಶ್ ಹನಗವಾಡಿ

ಪದ್ಮ ಶ್ರೀ, ಕ್ಷೇತ್ರ: ವೈದ್ಯಕೀಯ

ರಾಜ್ಯದ ಎಲ್ಲ ಜಿಲ್ಲಾ ಆಸ್ಪತ್ರೆಗಳಲ್ಲಿ ಹಿಮೋಫಿಲಿಯಾ ರೋಗಿಗಳ ಆರೈಕೆಯಲ್ಲಿ ಸುಧಾರಣೆ ತರುವಲ್ಲಿ ಮಹತ್ತರ ಪಾತ್ರ ವಹಿಸಿರುವ ದಾವಣಗೆರೆಯ ಜೆಜೆಎಂ ವೈದ್ಯಕೀಯ ಕಾಲೇಜಿನ ರೋಗಶಾಸ್ತ್ರ ವಿಭಾಗದ ಪ್ರಾಧ್ಯಾಪಕ ಡಾ.ಸುರೇಶ್ ಹನಗವಾಡಿ ಸ್ವತಃ ಕುಸುಮರೋಗಿ (ಹಿಮೋಫಿಲಿಯಾ). ರಕ್ತ ಹೆಪ್ಪುಗಟ್ಟದಿರುವ ಸಮಸ್ಯೆಯಿಂದ ಕಾಣಿಸಿಕೊಳ್ಳುವ ಈ ರೋಗಕ್ಕೆ ರಾಜ್ಯದಲ್ಲೇ ಮೊದಲ ಚಿಕಿತ್ಸಾ ಕೇಂದ್ರ ಸ್ಥಾಪಿಸಿ ಸೇವೆ ಒದಗಿಸುತ್ತಿದ್ದಾರೆ. ರಕ್ತಕ್ಕೆ ಸಂಬಂಧಿಸಿದ ವಿರಳ ರೋಗಗಳಿಗೆ ಒಂದೇ ಸೂರಿನಡಿ ಚಿಕಿತ್ಸೆ ಸಿಗುವಂತೆ ಮಾಡಿದ್ದಾರೆ.

ದೇಶದಾದ್ಯಂತ ಸಂಚರಿಸಿ ಕುಸುಮರೋಗಿಗಳ ಆರೈಕೆಗೆ ಶ್ರಮಿಸುತ್ತಿದ್ದಾರೆ. ಅಗತ್ಯ ಸಮಯಕ್ಕೆ ರಕ್ತ, ದುಬಾರಿ ಬೆಲೆಯ ಔಷಧ, ಚಿಕಿತ್ಸೆ ಉಚಿತವಾಗಿ ಸಿಗುವಂತಹ ವ್ಯವಸ್ಥೆ ರೂಪುಗೊಳ್ಳುವಲ್ಲಿ ಇವರ ಪರಿಶ್ರಮವಿದೆ. ಹಿಮೋಫಿಲಿಯಾ ಕಾಯಿಲೆಯ ಕುರಿತು ಸಮಾಜದಲ್ಲಿ ಜಾಗೃತಿ ಮೂಡಿಸುವಲ್ಲಿ ಕಾರ್ಯನಿರತರಾಗಿದ್ದಾರೆ. ಹಿಮೋಫಿಲಿಯಾ ರೋಗಿಗಳು ಅಂಗವೈಕಲ್ಯಕ್ಕೆ ತುತ್ತಾಗಂತೆ ನೋಡಿಕೊಳ್ಳುತ್ತಿದ್ದಾರೆ.

> **ನಾಲ್ಕು ದಶಕಗಳ ಪ್ರಯತ್ನಕ್ಕೆ ಪ್ರತಿಫಲ ಸಿಕ್ಕಿದೆ. ಇದು ದೇಶದಾದ್ಯಂತ ಕುಸುಮರೋಗಿಗಳಿಗೆ ಉತ್ತಮ ಚಿಕಿತ್ಸೆ ಸಿಗಲು ಸಹಕಾರಿ ಆಗಲಿದೆ ಎಂದು ಭಾವಿಸಿದ್ದೇನೆ**
> **ಡಾ.ಸುರೇಶ್ ಹನಗವಾಡಿ,** ವೈದ್ಯ, ದಾವಣಗೆರೆ

ಪುಸ್ತಕ ಪ್ರೇಮಿ ಅಂಕೇಗೌಡ

ಪದ್ಮ ಶ್ರೀ, ಕ್ಷೇತ್ರ: ಸಮಾಜಕಾರ್ಯ

ಪಾಂಡವಪುರ ತಾಲ್ಲೂಕಿನ ಹರಳಹಳ್ಳಿಯಲ್ಲಿ ಅಂಕೇಗೌಡ ಪ್ರತಿಷ್ಠಾನದಡಿ 20ಲಕ್ಷಕ್ಕೂ ಹೆಚ್ಚು ಪುಸ್ತಕಗಳನ್ನು ಸಂಗ್ರಹಿಸಿ ದ್ದಾರೆ. ‘ಪುಸ್ತಕ ಮನೆ ಅಂಕೇಗೌಡ’ ಎಂದೇ ಖ್ಯಾತಿ ಗಳಿಸಿದ್ದಾರೆ. ಪಾಂಡವಪುರಸಹಕಾರಿ ಸಕ್ಕರೆ ಕಾರ್ಖಾನೆಯಲ್ಲಿ ವೇಳಾಧಿಕಾರಿಯಾಗಿ ದುಡಿದ ಹಣದಲ್ಲಿ ಮೈಸೂರಿನಲ್ಲಿ ಖರೀದಿಸಿದ್ದ ನಿವೇಶನವನ್ನು ₹ 6 ಲಕ್ಷಕ್ಕೆ ಮಾರಿ ₹ 5 ಲಕ್ಷವನ್ನು ಪುಸ್ತಕಗಳ ಖರೀದಿಗೇ ವ್ಯಯಿಸಿದವರು. ಕನ್ನಡ, ಹಿಂದಿ, ಇಂಗ್ಲಿಷ್, ತಮಿಳು ಸೇರಿದಂತೆ ವಿವಿಧ ಭಾಷೆಯ ಸಾವಿರಾರು ಪುಸ್ತಕಗಳಿವೆ. ಮಹಾತ್ಮ ಗಾಂಧಿಯವರ ಕುರಿತ 2,500 ಕೃತಿಗಳ ಬೃಹತ್ ಸಂಗ್ರಹವಿದೆ. ಭಗವದ್ಗೀತೆ, ಮಹಾಭಾರತ, ಜೈನ, ಬೌದ್ಧ ಸಾಹಿತ್ಯ, ಬೈಬಲ್‌ಗೆ ಸಂಬಂಧಿಸಿದ ಸಾವಿರಾರು ಕೃತಿಗಳಿವೆ. ರಾಜ್ಯೋತ್ಸವ ಸೇರಿದಂತೆ ಹಲವು ಪ್ರಶಸ್ತಿಗಳು ಅವರನ್ನು ಅರಸಿ ಬಂದಿವೆ. ಲಿಮ್ಕಾ ದಾಖಲೆಯಲ್ಲೂ ಅವರು ಹೆಸರಿದೆ.

> **ನನಗೆ ಪದ್ಮಶ್ರೀ ಬಂದಿದ್ದು ಕೇಳಿ ಖುಷಿಯಾಯಿತು. ಪ್ರಪಂಚದ ಜ್ಞಾನವನ್ನೆಲ್ಲ ಒಂದೆಡೆ ಸಂಗ್ರಹಿಸಿ ಸಾಮಾನ್ಯರಿಗೆ ತಲುಪಿಸುವ ಆಸೆ ಇತ್ತು. ಪುಸ್ತಕ ಓದುವ, ಸಂಗ್ರಹಿಸುವ ಹವ್ಯಾಸ ಜೀವಂತವಾಗಿ ಇಟ್ಟುಕೊಳ್ಳಬೇಕು**
> **ಅಂಕೇಗೌಡ**

ಅಡುಗೆ ಮನೆ ಸಾಮ್ರಾಟ ಜಗನ್ನಾಥನ್

ಪದ್ಮ ಶ್ರೀ, ಕ್ಷೇತ್ರ: ವ್ಯಾಪಾರ ಮತ್ತು ಉದ್ದಿಮೆ

ಅಡುಗೆ ಮನೆಗೆ ಅಗತ್ಯವಿರುವ ಹತ್ತು ಹಲವು ಉಪಕರಣಗಳ ತಯಾರಿಕಾ ವಲಯದಲ್ಲಿ ದೇಶದ ದೊಡ್ಡ ಕಂಪನಿಯಾಗಿರುವ ಟಿಟಿಕೆ ಪ್ರೆಸ್ಟೀಜ್‌ನ ಅಧ್ಯಕ್ಷರಾಗಿದ್ದರು ಟಿ.ಟಿ. ಜಗನ್ನಾಥನ್. ಅವರು ‘ಅಡುಗೆ ಮನೆಯ ಸಾಮ್ರಾಟ’ ಎಂದೇ ಪ್ರಸಿದ್ಧರಾಗಿದ್ದರು. ಐಐಟಿ–ಚೆನ್ನೈನಿಂದ ಚಿನ್ನದ ಪದಕ ಪಡೆದಿದ್ದ ಜಗನ್ನಾಥನ್, ಅಮೆರಿಕದ ಕಾರ್ನೆಲ್ ವಿಶ್ವವಿದ್ಯಾಲಯದಿಂದ ಪಿಎಚ್‌ಡಿ ಪಡೆದಿದ್ದರು. 50 ವರ್ಷಗಳ ಕಾಲ ಟಿಟಿಕೆ ಪ್ರೆಸ್ಟೀಜ್‌ನ ಆಡಳಿತ ಮಂಡಳಿಯಲ್ಲಿ ಕರ್ತವ್ಯ ನಿರ್ವಹಿಸಿದ್ದರು. ಮುಳುಗುತ್ತಿದ್ದ ಕಂಪನಿಯನ್ನು ಮೇಲೆತ್ತಿ ಕಟ್ಟಿದ ವ್ಯಕ್ತಿ ಇವರು ಎಂದು ಹೇಳಲಾಗುತ್ತದೆ.

1975ರಲ್ಲಿ ವ್ಯವಸ್ಥಾಪಕ ನಿರ್ದೇಶಕರಾಗಿ ಜಗನ್ನಾಥನ್ ಕಂಪನಿ ಸೇರಿದರು. 2000ವರೆಗೆ ಇದೇ ಹುದ್ದೆಯಲ್ಲಿ ಮುಂದುವರಿದ ಅವರು ಬಳಿಕ 19 ವರ್ಷ ಕಾರ್ಯನಿರ್ವಾಹಕ ಅಧ್ಯಕ್ಷರಾಗಿದ್ದರು. 2019ರಿಂದ 2025ರ ಮಾರ್ಚ್‌ವರೆಗೆ ಕಾರ್ಯನಿರ್ವಾಹಕೇತರ ಅಧ್ಯಕ್ಷರಾಗಿದ್ದರು. ಇವರಿಗೆ ಮರಣೋತ್ತರವಾಗಿ ಪದ್ಮಶ್ರೀ ಪುರಸ್ಕಾರ ಘೋಷಿಸಲಾಗಿದೆ.

ಪ್ರಭಾಕರ ಕೋರೆ

ಪದ್ಮ ಶ್ರೀ, ಕ್ಷೇತ್ರ: ಸಾಹಿತ್ಯ ಮತ್ತು ಶಿಕ್ಷಣ

1947ರ ಆಗಸ್ಟ್ 1ರಂದು ಜನಿಸಿದ ಪ್ರಭಾಕರ ಕೋರೆ, ಬಿ.ಕಾಂ ಪದವೀಧರರು. ಶಿಕ್ಷಣ, ಕೃಷಿ, ಸಹಕಾರ, ರಾಜಕೀಯ ವಲಯ, ಚಲನಚಿತ್ರ ಉದ್ಯಮ ಮತ್ತು ಸಾಮಾಜಿಕ ಕೆಲಸಗಳಲ್ಲಿ ತೊಡಗಿಸಿಕೊಂಡಿದ್ದಾರೆ. ಮೂರು ಅವಧಿಗೆ(1990-1996, 2008-2014, 2014-2020) ರಾಜ್ಯಸಭಾ ಸದಸ್ಯರಾಗಿ, 2001ರಿಂದ 2007ರವರೆಗೆ ವಿಧಾನ ಪರಿಷತ್ ಸದಸ್ಯರಾಗಿ ಕರ್ತವ್ಯ ನಿರ್ವಹಣೆ. 1984ರಲ್ಲಿ ಕೆಎಲ್‌ಇ ಸಂಸ್ಥೆ ಕಾರ್ಯಾಧ್ಯಕ್ಷರಾಗಿ ಅಧಿಕಾರ ಹಿಡಿದಾಗ ಇದ್ದ ಅಂಗಸಂಸ್ಥೆಗಳ ಸಂಖ್ಯೆ 38 ರಿಂದ 317ಕ್ಕೆ ಏರಿಕೆ.

2006 ಮತ್ತು 2009ರಲ್ಲಿ ಕೆಎಲ್‌ಇ ಸಂಸ್ಥೆಯ ಜೆಎನ್‌ಎಂಸಿ ಆವರಣದಲ್ಲಿ ಎರಡು ಬಾರಿ ಕರ್ನಾಟಕ ವಿಧಾನಮಂಡಲ ಅಧಿವೇಶನ ಆಯೋಜಿಸಿದ್ದಾರೆ. 2011ರಲ್ಲಿ ಬೆಳಗಾವಿಯಲ್ಲಿ ನಡೆದ ವಿಶ್ವ ಕನ್ನಡ ಸಮ್ಮೇಳನದ ಸ್ವಾಗತ ಸಮಿತಿ ಅಧ್ಯಕ್ಷರಾಗಿ ಕೆಲಸ ಮಾಡಿದ್ದಾರೆ. ಬೆಳಗಾವಿಯಲ್ಲಿ ಸುವರ್ಣ ವಿಧಾನಸೌಧ ನಿರ್ಮಾಣದಲ್ಲಿ ಮಹತ್ವದ ಪಾತ್ರನಿರ್ವಹಣೆ.

> **ಸಾಮಾಜಿಕ ಸೇವೆ ನನ್ನ ಉಸಿರು. ‘ಪದ್ಮಶ್ರೀ’ ಪ್ರಶಸ್ತಿ ಸಿಕ್ಕಿದ್ದಕ್ಕೆ ಖುಷಿಯಾಗಿದೆ. ಇದನ್ನು ಕೆಎಲ್‌ಇ ಸಂಸ್ಥೆಯ ಇಡೀ ಸಮೂಹಕ್ಕೆ ಮತ್ತು ರೈತರಿಗೆ ಅರ್ಪಿಸುವೆ.**
> **ಪ್ರಭಾಕರ ಕೋರೆ,** ರಾಜ್ಯಸಭೆಯ ಮಾಜಿ ಸದಸ್ಯ.

ಎಸ್.ಜಿ. ಸುಶೀಲಮ್ಮ

ಪದ್ಮ ಶ್ರೀ, ಕ್ಷೇತ್ರ: ಸಮಾಜಸೇವೆ

ತಮ್ಮ ಜೀವನವನ್ನು ಸಮಾಜಸೇವೆಗೆ ಮುಡಿಪಾಗಿಟ್ಟವರು ಎಸ್.ಜಿ. ಸುಶೀಲಮ್ಮ ಅವರು ಬೆಂಗಳೂರಿನಲ್ಲಿರುವ ಸುಮಂಗಲಿ ಸೇವಾಶ್ರಮದ ಸಂಸ್ಥಾಪನಾ ಅಧ್ಯಕ್ಷರಾಗಿದ್ದಾರೆ. ‘ಕರ್ನಾಟಕದ ಮದರ್ ತೆರೇಸಾ’ ಎಂದೂ ಪ್ರಸಿದ್ಧರಾಗಿದ್ದಾರೆ. 50 ವರ್ಷಗಳಿಂದ ಸಮಾಜ ಸೇವೆಯಲ್ಲಿ ತೊಡಗಿರುವ ಅವರಿಗೆ ಈಗ 87 ವರ್ಷ. ಅವರು 1975ರಲ್ಲಿ ಸ್ಥಾಪಿಸಿರುವ ಸುಮಂಗಲಿ ಸೇವಾಶ್ರಮ, ಅನಾಥ ಮಕ್ಕಳು, ನಿರ್ಗತಿಕ ಮಹಿಳೆಯರು ಮತ್ತು ವೃದ್ಧರಿಗೆ ಆಶ್ರಯ, ಶಿಕ್ಷಣ ಹಾಗೂ ವೃತ್ತಿಪರ ತರಬೇತಿಯನ್ನು ನೀಡುತ್ತಿದೆ.

ಸುಶೀಲಮ್ಮ ಅವರು 1939ರ ಮೇ 24ರಂದು ಬೆಂಗಳೂರಿನಲ್ಲಿ ಜನಿಸಿದರು. ಪದವಿಪೂರ್ವ ಶಿಕ್ಷಣ ಪಡೆದ ಅವರು, ರೆಂಕೋ ಕಾರ್ಖಾನೆಯಲ್ಲಿ (ಬಿ.ಎಚ್.ಇ.ಎಲ್) 15 ವರ್ಷ ಕಾರ್ಯನಿರ್ವಹಿಸಿದ್ದರು. ಬಳಿಕ ವೃತ್ತಿ ಜೀವನಕ್ಕೆ ರಾಜೀನಾಮೆ ನೀಡಿ, ತಮ್ಮನ್ನು ಸಂಪೂರ್ಣವಾಗಿ ಸಮಾಜಸೇವೆಯಲ್ಲಿ ತೊಡಗಿಸಿಕೊಂಡರು.

1976ರಲ್ಲಿ ಬಸವಾನಂದ ನರ್ಸರಿ, 1979ರಲ್ಲಿ ಸುಮಂಗಲಿ ಯುವತಿ ಮಂಡಳಿಯನ್ನು ಸ್ಥಾಪಿಸಿದರು. 1985ರಲ್ಲಿ ಚೋಳನಾಯಕನಹಳ್ಳಿಯಲ್ಲಿ ಬಸವಾನಂದ ಹಿರಿಯ ಪ್ರಾಥಮಿಕ ಶಾಲೆಯನ್ನು ಪ್ರಾರಂಭಿಸಿದರು. ವಸತಿನಿಲಯ, ವೃದ್ಧಾಶ್ರಮವನ್ನೂ ನಡೆಸುತ್ತಿದ್ದಾರೆ. ಕೌಟುಂಬಿಕ ಸಮಾಲೋಚನೆ ವ್ಯವಸ್ಥೆ, ಗಿಡಗಳ ವಿತರಣೆಯಂತಹ ಕಾರ್ಯವನ್ನೂ ಕೈಗೊಂಡಿದ್ದಾರೆ.

> **ಅನಿರೀಕ್ಷಿತವಾಗಿ ಈ ಪ್ರಶಸ್ತಿ ಬಂದಿದೆ. ಎಲ್ಲರ ಬೆಂಬಲದಿಂದ ಅಂದುಕೊಂಡಿದ್ದನ್ನು ಸಾಕಾರ ಮಾಡಲು ಸಾಧ್ಯವಾಯಿತು. ಈ ಪ್ರಶಸ್ತಿಯು ಇನ್ನುಷ್ಟು ಕಾರ್ಯಸಾಧನೆ ಮಾಡಲು ಉತ್ತೇಜಿಸಲಿದೆ. ಬುಡಕಟ್ಟು ಸಮುದಾಯದವರಿಗೆ ಮನೆ, ಉದ್ಯೋಗ ಒದಗಿಸಬೇಕೆಂಬ ಕನಸಿದೆ. ಸದ್ಯ ಆ ನಿಟ್ಟಿನಲ್ಲಿ ಕಾರ್ಯ ಮಾಡಲಾಗುತ್ತಿದೆ. ನಮ್ಮ ಕನಸುಗಳಿಗೆ ವಿವಿಧ ಸಂಘ–ಸಂಸ್ಥೆಗಳು ನೆರವಾಗುತ್ತಿವೆ. ಇದರಿಂದ ಸಮಾಜಸೇವೆ ಸಾಧ್ಯವಾಗುತ್ತಿದೆ.**
> **ಎಸ್.ಜಿ. ಸುಶೀಲಮ್ಮ**

ಶಶಿ ಶೇಖರ್ ವೆಂಪತಿ

ಪದ್ಮ ಶ್ರೀ, ಕ್ಷೇತ್ರ: ಸಾಹಿತ್ಯ ಮತ್ತು ಶಿಕ್ಷಣ

ಭಾರತ್ ಫೌಂಡೇಷನ್‌ನ ಡೀಪ್‌ಟೆಕ್‌ನ ಸಹ ಸಂಸ್ಥಾಪಕರಾದ ಶಶಿ ಶೇಖರ್ ವೆಂಪತಿ ಅವರು ‘ಎಐ4ಇಂಡಿಯಾ’ ಉಪಕ್ರಮದ ಮೂಲಕ ಭಾರತದ ಕೃತಕ ಬುದ್ಧಿಮತ್ತೆ ವ್ಯವಸ್ಥೆಯನ್ನು ಬಲಪಡಿಸುತ್ತಿದ್ದಾರೆ. ಅವರು ಭಾರತ ಸರ್ಕಾರದ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯ ವಿಜ್ಞಾನ ಮತ್ತು ತಂತ್ರಜ್ಞಾನ ಸಂವಹನ ಸಮಿತಿ ಅಧ್ಯಕ್ಷ ಮತ್ತು ಶೈಕ್ಷಣಿಕ ಮಾಧ್ಯಮದ ಕುರಿತು ಯುಜಿಸಿ ತಜ್ಞರ ಸಮಿತಿ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿದ್ದಾರೆ.

ಅವರು ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಮಾಸ್ ಕಮ್ಯುನಿಕೇಷನ್ಸ್ (ಐಐಎಂಸಿ), ಜಾಮಿಯಾದ ಎಜೆಕೆ ಮಾಸ್ ಕಮ್ಯುನಿಕೇಷನ್ ಮತ್ತು ಮೀಡಿಯಾ ರಿಸರ್ಚ್ ಸೆಂಟರ್ ಸೇರಿದಂತೆ ವಿವಿಧ ಸಂಸ್ಥೆಗಳ ಆಡಳಿತ ನಿರ್ವಹಣೆಗೂ ಕೊಡುಗೆ ನೀಡಿದ್ದಾರೆ. ಅವರು ಅಂತರರಾಷ್ಟ್ರೀಯ ಪ್ರಸಾರ ಮಾನದಂಡಗಳ ಸಂಸ್ಥೆಯಾದ ಎಟಿಎಸ್‌ಸಿನ ಜಾಗತಿಕ ಸಲಹಾ ಮಂಡಳಿಯ ಸದಸ್ಯರೂ ಆಗಿದ್ದಾರೆ. ಪ್ರಸಾರ ಭಾರತಿಯ ಸಿಇಒ ಆಗಿ ಕಾರ್ಯನಿರ್ವಹಿಸಿದ್ದಾರೆ. ದೂರದರ್ಶನ ಮತ್ತು ಆಲ್ ಇಂಡಿಯಾ ರೇಡಿಯೊದ ಆಧುನೀಕರಣಕ್ಕೆ ಒತ್ತು ನೀಡಿದ್ದರು. ಅದೇ ಸಮಯದಲ್ಲಿ ರಾಜ್ಯಸಭಾ ಟಿವಿಯನ್ನು ಮುನ್ನಡೆಸಿದ್ದರು.

ಐಐಟಿ ಬಾಂಬೆಯ ಹಿರಿಯ ವಿದ್ಯಾರ್ಥಿಯಾಗಿರುವ ಶಶಿ, ‘ಕಲೆಕ್ಟಿವ್ ಸ್ಪಿರಿಟ್ ಕಾಂಕ್ರೀಟ್ ಆ್ಯಕ್ಷನ್– ಮನ್ ಕಿ ಬಾತ್ ಆ್ಯಂಡ್ ಇಟ್ಸ್ ಇನ್ಫ್ಲುಯೆನ್ಸ್ ಆನ್ ಇಂಡಿಯಾ’ ಎಂಬ ಕೃತಿಯನ್ನೂ ರಚಿಸಿದ್ದಾರೆ.

ಶುಭಾ ವೆಂಕಟೇಶ ಅಯ್ಯಂಗಾರ್

ಪದ್ಮ ಶ್ರೀ, ಕ್ಷೇತ್ರ: ವಿಜ್ಞಾನ ಮತ್ತು ಎಂಜಿನಿಯರಿಂಗ್

ಬೆಂಗಳೂರಿನಲ್ಲಿ 1954ರ ಮೇ 14ರಂದು ವೆಂಕಟೇಶ ಅಯ್ಯಂಗಾರ್ ಹಾಗೂ ರಾಜಮ್ಮ ದಂಪತಿಯ ಪುತ್ರಿಯಾಗಿ ಜನಿಸಿದ ಶುಭಾ ಅವರು ನ್ಯಾಷನಲ್ ಕಾಲೇಜಿನಲ್ಲಿ ಬಿಎಸ್ಸಿ ಆನರ್ಸ್ ಹಾಗೂ ಸೆಂಟ್ರಲ್ ಕಾಲೇಜಿನಲ್ಲಿ ಎಂಎಸ್ಸಿ ಸ್ನಾತಕೋತ್ತರ ಪದವಿ ಪಡೆದಿದ್ದಾರೆ. 1974ರಲ್ಲಿ ಎನ್‌ಎಎಲ್ ಸೇರಿದ ಅವರು ಸಿಎಸ್‌ಐಆರ್ ಫೆಲೋಶಿಪ್ ಪಡೆದು ಮೈಸೂರು ವಿಶ್ವವಿದ್ಯಾಲಯದಿಂದ ಪಿಎಚ್.ಡಿ ಪೂರ್ಣಗೊಳಿಸಿದರು. 1982ರಲ್ಲಿ ವಿಜ್ಞಾನಿಯಾಗಿ ವೃತ್ತಿ ಜೀವನ ಆರಂಭಿಸಿ ಮೆಟೀರಿಯಲ್ ಸೈನ್ಸ್‌ನಲ್ಲಿ ತೊಡಗಿಸಿಕೊಂಡರು. ಪೈಲಟ್‌ಗಳು ವಿಮಾನ ಓಡಿಸುವ ಹಾಗೂ ನಿಗದಿತ ನಿಲ್ದಾಣಗಳಲ್ಲಿ ಇಳಿಸಲು ಸೂಕ್ತ ಮಾರ್ಗದರ್ಶನ ಮಾಡುವ ‘ದೃಷ್ಟಿ’ ಎನ್ನುವ ತಂತ್ರಜ್ಞಾನವನ್ನು ಶುಭಾ ಅಭಿವೃದ್ಧಿಪಡಿಸಿದರು. ಈಗ ವಾಯುಪಡೆಯಲ್ಲೂ ಇದೇ ತಂತ್ರಜ್ಞಾನ ಬಳಕೆಯಾಗುತ್ತಿದೆ. ಇದು ಸಂಪೂರ್ಣ ದೇಸಿ ನಿರ್ಮಿತ ತಂತ್ರಜ್ಞಾನ.

ಇದಲ್ಲದೇ ಹೈದರಾಬಾದ್‌ನ ಡಿಆರ್‌ಡಿಎಲ್ ರೂಪಿಸಿದ ಅಗ್ನಿಮಿಸೈಲ್ ಯೋಜನೆಯಲ್ಲೂ ಪ್ರಮುಖ ಪಾತ್ರ ವಹಿಸಿದರು. ಏರೋಸ್ಪೇಸ್‌ಗೆ ಸಂಬಂಧಿಸಿದ ಹಲವು ಸಂಶೋಧನಾ ಚಟುವಟಿಕೆಗಳಲ್ಲೂ ತೊಡಗಿಸಿಕೊಂಡಿದ್ದಾರೆ. ಏರೋಸ್ಪೇಸ್ ಸಂಶೋಧನೆಯಲ್ಲಿ ಪರಿಣತಿ ಹೊಂದಿರುವ ಪ್ರಮುಖ ಮಹಿಳಾ ವಿಜ್ಞಾನಿಯಾದ ಶುಭಾ 2020ರಲ್ಲಿ ನಿವೃತ್ತಿಯಾಗಿದ್ದಾರೆ. ಶುಭಾ ಅವರಿಗೆ 2024ರಲ್ಲಿ ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿಯ ಪ್ರಶಸ್ತಿ ನೀಡಲಾಗಿತ್ತು.

ಗಣರಾಜ್ಯೋತ್ಸವ: 27 ಮಂದಿಗೆ ರಾಷ್ಟ್ರಪತಿ ಪದಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗೃಹ ಇಲಾಖೆಯಲ್ಲಿ ಅತ್ಯುತ್ತಮ ಸೇವೆ ಸಲ್ಲಿಸಿದ ರಾಜ್ಯದ ಕುಂದು ಕೊರತೆ ಹಾಗೂ ಮಾನವ ಹಕ್ಕುಗಳ ವಿಭಾಗದ ಎಡಿಜಿಪಿ ದೇವಜ್ಯೋತಿ ರೇ ಮತ್ತು ಬೆಂಗಳೂರಿನ ಹಲಸೂರು ಉಪ ವಿಭಾಗದ ಎಸಿಪಿ ಟಿ.ರಂಗಪ್ಪ ಅವರು ರಾಷ್ಟ್ರಪತಿಗಳ ವಿಶಿಷ್ಟ ಸೇವಾ ಪದಕದ ಗೌರವಕ್ಕೆ ಪಾತ್ರರಾಗಿದ್ದಾರೆ. ಅದೇ ರೀತಿ 25 ಪೊಲೀಸರಿಗೆ ಅಧಿಕಾರಿಗಳಿಗೆ ಶ್ಲಾಘನೀಯ ಸೇವಾ ಪದಕ ಲಭಿಸಿದೆ.

ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ಇಲಾಖೆಯ ಇಬ್ಬರಿಗೆ ರಾಷ್ಟ್ರಪತಿಗಳ ಶ್ಲಾಘನೀಯ ಸೇವಾ ಪದಕ ಹಾಗೂ ಮೂವರಿಗೆ ಶೌರ್ಯ ಪದಕದ ಗೌರವ ಸಂದಿದೆ. ಬೆಂಗಳೂರಿನ ಮೆಯೋ ಹಾಲ್ ಅಗ್ನಿಶಾಮಕ ಠಾಣೆಯ ಸಹಾಯಕ ಅಗ್ನಿಶಾಮಕ ಠಾಣಾಧಿಕಾರಿ ಗುರುಸ್ವಾಮಿ ಮತ್ತು ಪ್ರಮುಖ ಅಗ್ನಿಶಾಮಕ ಅರುಣ್.ಸಿ.ನಾಯಕ್ ಅವರಿಗೆ ಶ್ಲಾಘನೀಯ ಸೇವಾ ಪದಕ ಲಭಿಸಿದೆ.

ಬೆಂಗಳೂರು ದಕ್ಷಿಣ ವಲಯದ ಪ್ರಾದೇಶಿಕ ಅಗ್ನಿಶಾಮಕ ಅಧಿಕಾರಿ ಕೆ.ವಿ.ಮಂಜುನಾಥ, ಬಾಣಸವಾಡಿ ಅಗ್ನಿಶಾಮಕ ಠಾಣೆಯ ಅಗ್ನಿಶಾಮಕ ಮಲ್ಲಿಕಾರ್ಜುನ ಹಾಗೂ ಮೈಸೂರಿನ ಬನ್ನಿಮಂಟಪ ಅಗ್ನಿಶಾಮಕ ಠಾಣೆಯ ಅಗ್ನಿಶಾಮಕ ಡಿ.ಹೇಮಂತ್ ಕುಮಾರ್ ಅವರು ಶೌರ್ಯ ಪದಕದ ಗೌರವಕ್ಕೆ ಪಾತ್ರರಾಗಿದ್ದಾರೆ.

ಪೊಲೀಸ್ ಇಲಾಖೆಯ ಶ್ಲಾಘನೀಯ ಸೇವಾ ಪದಕ ಪುರಸ್ಕೃತರು	
ಡಾ.ಚೇತನ್ ಸಿಂಗ್ ರಾಥೋಡ್	ಉತ್ತರ ವಲಯ ಐಜಿಪಿ
ಅಮಿತ್ ಸಿಂಗ್	ಪೂರ್ವ ವಲಯ ಐಜಿಪಿ
ಸೀಮಾ ಲಾಟ್ಕರ್	ಮೈಸೂರು ನಗರ ಪೊಲೀಸ್ ಕಮಿಷನರ್
ಎಸ್.ಸವಿತಾ	ಡಿಐಜಿಪಿ, ಹೆಚ್ಚುವರಿ ಮಹಾ ಸಮಾದೇಷ್ಟರು, ಗೃಹ ರಕ್ಷಕ ದಳ
ಎಂ.ಪುಟ್ಟಮಾದಯ್ಯ	ಡಿಐಜಿಪಿ ಮತ್ತು ಕಲಬುರಗಿ ಪೊಲೀಸ್ ತರಬೇತಿ ಶಾಲೆ ಪ್ರಾಂಶುಪಾಲ
ಎನ್.ನವೀನ್‌ಕುಮಾರ್	ಹೆಚ್ಚುವರಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ, ಬಳ್ಳಾರಿ
ಪಿ.ರಾಜ ಇಮಾಮ್ ಖಾಸೀಂ	ಸಿಸಿಬಿ ಡಿಸಿಪಿ, ಬೆಂಗಳೂರು ನಗರ
ಸಿ.ಎ.ಸೈಮನ್	ಎಸ್‌ಪಿ, ಡಿಸಿಆರ್‌ಇ, ಮಂಗಳೂರು
ಎಸ್.ಹಣಮಂತರಾಯ	ಡಿವೈಎಸ್‌ಪಿ, ಲೋಕಾಯುಕ್ತ, ಬೀದರ್
ಎಂ.ಎ.ಮೊಹಮ್ಮದ್	ಇನ್‌ಸ್ಪೆಕ್ಟರ್, ಮಡಿವಾಳ ಠಾಣೆ, ಬೆಂಗಳೂರು ನಗರ
ಸಿ.ಬಿ.ಶಿವಸ್ವಾಮಿ	ಇನ್‌ಸ್ಪೆಕ್ಟರ್, ವಿದ್ಯಾರಣ್ಯಪುರ ಠಾಣೆ, ಬೆಂಗಳೂರು ನಗರ
ಮಹಮ್ಮದ್ ರಫೀಕ್ ಎಂ.ತಹಶೀಲ್ದಾರ್	ಇನ್‌ಸ್ಪೆಕ್ಟರ್, ವಿದ್ಯಾಗಿರಿ ಠಾಣೆ, ಹುಬ್ಬಳ್ಳಿ-ಧಾರವಾಡ ನಗರ
ಬಿ.ಕಾಶಿನಾಥ್	ಆರ್‌ಎಸ್‌ಐ, ಕೆಎಸ್‌ಆರ್‌ಪಿ, ಬೆಂಗಳೂರು
ಶ್ರೀಶೈಲ್ ಕೆ.ಬ್ಯಾಕೋಡ್	ಇನ್‌ಸ್ಪೆಕ್ಟರ್, ಮೂಡಲಗಿ ವೃತ್ತ, ಬೆಳಗಾವಿ ಜಿಲ್ಲೆ
ವಯಲೆಟ್ ಫೆಮಿನಾ	ಸಬ್ ಇನ್‌ಸ್ಪೆಕ್ಟರ್, ಕರಾವಳಿ ಕಾವಲು ಪೊಲೀಸ್ ಠಾಣೆ, ಮಲ್ಪೆ
ಎಚ್.ಕೆ.ಶಕುಂತಲಾ	ಸಬ್ ಇನ್‌ಸ್ಪೆಕ್ಟರ್, ಡಿಎಸ್‌ಬಿ, ಶಿವಮೊಗ್ಗ
ಹರ್ಷ ನಾಗರಾಜ್	ಸಹಾಯಕ ಸಬ್ ಇನ್‌ಸ್ಪೆಕ್ಟರ್, ಹೆಬ್ಬಾಳ ಸಂಚಾರ ಠಾಣೆ, ಬೆಂಗಳೂರು ನಗರ
ಜಿ.ಸಿದ್ದರಾಜು	ಸಹಾಯಕ ಸಬ್ ಇನ್‌ಸ್ಪೆಕ್ಟರ್, ಹುಳಿಮಾವು ಠಾಣೆ, ಬೆಂಗಳೂರು ನಗರ
ಎಚ್. ದೊಡ್ಡ ಈರಪ್ಪ	ಆರ್‌ಎಚ್‌ಸಿ, ಕೆಎಸ್‌ಆರ್‌ಪಿ, ಬೆಂಗಳೂರು
ಬಸವರಾಜ್ ಮ್ಯಾಗೇರಿ	ಹೆಡ್ ಕಾನ್‌ಸ್ಟೆಬಲ್, ನ್ಯೂ ಮಾರ್ಕೆಟ್ ಠಾಣೆ, ಶಿರಸಿ, ಉತ್ತರ ಕನ್ನಡ ಜಿಲ್ಲೆ

ಅಗ್ನಿಶಾಮಕ ಇಲಾಖೆಯ ಪದಕ ವಿಜೇತರು

ಗುರುಸ್ವಾಮಿ



ಮಂಜುನಾಥ

ಮಲ್ಲಿಕಾರ್ಜುನ



ಹೇಮಂತ್ ಕುಮಾರ್



ಅರುಣ್‌ಕುಮಾರ್

ಹಣಮಂತರಾಯ, ಸಿ.ಎ ಸೈಮನ್, ಮಹಮದ್, ಶಿವಸ್ವಾಮಿ, ಸಿದ್ಧರಾಜು, ಹರ್ಷ ನಾಗರಾಜ್, ಶ್ರೀಶೈಲ್, ನವೀನ್ ಕುಮಾರ್, ಕಾಶಿನಾಥ್, ರಂಗಪ್ಪ, ದೇವಜ್ಯೋತಿ

ಸವಿತಾ ಎಸ್, ಪುಟ್ಟಮಾದಯ್ಯ, ಸೀಮಾ ಲಾಟ್ಕರ್, ಚೇತನ್ ಸಿಂಗ್, ಅಮಿತ್ ಸಿಂಗ್, ವಯಲೆಟ್, ರಾಜಾ ಇಮಾಮ್, ಶಕುಂತಲ, ಬಸವರಾಜ್, ಮಹಮ್ಮದ್ ರಫೀಕ್, ದೊಡ್ಡ ಈರಪ್ಪ

ರಥೋತ್ಸವ

ಪ್ರಜಾವಾಣಿ ಚಿತ್ರ ಫಕ್ರುದ್ದೀನ್ ಎಚ್

ಮಂಗಳೂರಿನ ರಥಬೀದಿಯ ವೆಂಕಟರಮಣ ದೇವಸ್ಥಾನದ ರಥೋತ್ಸವ ಭಾನುವಾರ ಸಂಜೆ ಅಪಾರ ಸಂಖ್ಯೆಯ ಭಕ್ತರ ಸಮ್ಮುಖದಲ್ಲಿ ವಿಜೃಂಭಣೆಯಿಂದ ನಡೆಯಿತು

9ನೇ ಪರಿಚ್ಛೇದಕ್ಕೆ ಸೇರಿಸಲು ಆಗ್ರಹ

ಶೇ 56ರಷ್ಟು ಮೀಸಲಾತಿ: ವಿ.ಎಸ್. ಉಗ್ರಪ್ಪ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಇತರೆ ಹಿಂದುಳಿದ ವರ್ಗದವರಿಗೆ ಮೀಸಲಾತಿ ಪ್ರಮಾಣವನ್ನು 2022ರಲ್ಲಿ ಶೇಕಡ 56ಕ್ಕೆ ಹೆಚ್ಚಿಸಿದ್ದರೂ, ಅದು ಜಾರಿಗೆ ಬಂದಿಲ್ಲ. ಇದನ್ನು ಸಂವಿಧಾನದ 9ನೇ ಪರಿಚ್ಛೇದಕ್ಕೆ ಸೇರಿಸುವ ಮೂಲಕ ಈ ಸಮುದಾಯಗಳಿಗೆ ಶಿಕ್ಷಣ ಮತ್ತು ಉದ್ಯೋಗದಲ್ಲಿ ಅನುಕೂಲ ಮಾಡಿಕೊಡಬೇಕು ಎಂದು ರಾಜ್ಯ ವಾಲ್ಮೀಕಿ ಸಮಾಜದ ಸಮಾನ ಮನಸ್ಕರ ವೇದಿಕೆಯ ಅಧ್ಯಕ್ಷ ವಿ.ಎಸ್. ಉಗ್ರಪ್ಪ ಆಗ್ರಹಿಸಿದರು.

ಭಾನುವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ನ್ಯಾಯಮೂರ್ತಿ ಎಚ್. ಎನ್. ನಾಗಮೋಹನದಾಸ್ ಆಯೋಗದ ಶಿಫಾರಸಿನಂತೆ ಬಸವರಾಜ ಬೊಮ್ಮಾಯಿ ನೇತೃತ್ವದ ಸರ್ಕಾರವು ಪರಿಶಿಷ್ಟ ಜಾತಿಯ ಮೀಸಲಾತಿಯನ್ನು ಶೇ 15ರಿಂದ ಶೇ 17ಕ್ಕೆ ಮತ್ತು ಪರಿಶಿಷ್ಟ ಪಂಗಡಗಳ ಮೀಸಲಾತಿಯನ್ನು ಶೇ 3ರಿಂದ ಶೇ 7ಕ್ಕೆ ಏರಿಸಿತ್ತು. ಇದರಿಂದ ಒಟ್ಟು ಮೀಸಲಾತಿ ಪ್ರಮಾಣ ಶೇ 56ಕ್ಕೆ ಏರಿಕೆಯಾಗಿತ್ತು. ಆದರೆ, ಕೆಲವರು ಇದನ್ನು ನ್ಯಾಯಾಲಯದಲ್ಲಿ ಪ್ರಶ್ನಿಸಿದ್ದರು. ನ್ಯಾಯಾಲಯ ತಡೆಯಾಜ್ಞೆ ನೀಡಿದ್ದು, ಹಿಂದಿನ ಮೀಸಲಾತಿಯೇ ಮುಂದುವರಿದಿದೆ’ ಎಂದರು.



ವಿ.ಎಸ್.ಉಗ್ರಪ್ಪ

ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಇತರೆ ಹಿಂದುಳಿದ ವರ್ಗಗಳ ಮೀಸಲಾತಿ ಕಾಯ್ದೆ–2022 ಅನ್ನು 9ನೇ ಪರಿಚ್ಛೇದಕ್ಕೆ ಸೇರಿಸಲು ರಾಜ್ಯ ಸರ್ಕಾರ ವಿಧಾನಮಂಡಲದ ಬೆಳಗಾವಿ ಅಧಿವೇಶನದಲ್ಲಿ ನಿರ್ಣಯ ಕೈಗೊಂಡಿರುವುದು ಸ್ವಾಗತಾರ್ಹ. ಈ ಬಗ್ಗೆ ಕೇಂದ್ರ ಸರ್ಕಾರಕ್ಕೆ ಪತ್ರ ಬರೆಯಬೇಕು. ಕೇಂದ್ರ ಸರ್ಕಾರ ಕೂಡ ಈ ಸಮುದಾಯಗಳೊಂದಿಗೆ ಚೆಲ್ಲಾಟವಾಡದೇ ನಿರ್ಣಯ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು.

ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಕ್ಕೆ ಸೇರದ ಕೆಲವರು ಸುಳ್ಳು ಜಾತಿ ಪ್ರಮಾಣ ಪತ್ರ ಪಡೆದುಕೊಂಡು ಮೀಸಲಾತಿಯನ್ನು ದುರ್ಬಳಕೆ ಮಾಡಿಕೊಳ್ಳುತ್ತಿದ್ದಾರೆ. ಅವರ ವಿರುದ್ಧ ಪ್ರಕರಣ ದಾಖಲಿಸಿ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದರು.

2028ರಲ್ಲೂ ನಮ್ಮದೇ ಸರ್ಕಾರ: ಸಿದ್ದರಾಮಯ್ಯ

‘ಜೆಡಿಎಸ್ ಅಧಿಕಾರಕ್ಕೆ ಬರುವುದೇ ಇಲ್ಲ’

ಪ್ರಜಾವಾಣಿ ವಾರ್ತೆ

ಮೈಸೂರು: ‘ಜೆಡಿಎಸ್ ಅಧಿಕಾರಕ್ಕೆ ಬರುವುದಿಲ್ಲ. ಒಂದೊಮ್ಮೆ ಜೆಡಿಎಸ್–ಬಿಜೆಪಿ ಮೈತ್ರಿ ಮಾಡಿಕೊಂಡರೂ ಅಧಿಕಾರಕ್ಕೆ ಬರಲು ಸಾಧ್ಯವಿಲ್ಲ’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಇಲ್ಲಿನ ವಿಮಾನನಿಲ್ದಾಣದಲ್ಲಿ ಭಾನುವಾರ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ‘2028ರಲ್ಲೂ ನಾವೇ ಅಧಿಕಾರಕ್ಕೆ ಬರುತ್ತೇವೆ’ ಎಂದರು. ‘ನಮಗೂ ಸಮಯ ಬರುತ್ತದೆ’ ಎಂಬ ಮಾಜಿ ಪ್ರಧಾನಿ ಎಚ್.ಡಿ. ದೇವೇಗೌಡ ಅವರ ಹೇಳಿಕೆಗೆ ಪ್ರತಿಕ್ರಿಯಿಸಿದ ಮುಖ್ಯಮಂತ್ರಿ, ‘ಜೆಡಿಎಸ್ ಯಾವುದೇ ಕಾರಣಕ್ಕೂ ಅಧಿಕಾರಕ್ಕೆ ಬರುವುದಿಲ್ಲ. ಅವರು ಯಾವ ಅರ್ಥದಲ್ಲಿ ಹೇಳುತ್ತಾರೆಯೋ ಗೊತ್ತಿಲ್ಲ’ ಎಂದು ಕೇಳಿದರು.

‘ಸುಮ್ಮನೆ ರಾಜಕೀಯ ಭಾಷಣ ಮಾಡಿದಾಕ್ಷಣಕ್ಕೆ ಆಗುತ್ತದೆಯೇ? ನಾನು ಅಧ್ಯಕ್ಷನಾಗಿದ್ದಾಗ 2004ರಲ್ಲಿ 59 ಸ್ಥಾನಗಳನ್ನು ಜೆಡಿಎಸ್ ಗೆದ್ದಿತ್ತು. ಈಗ ಎಷ್ಟಿದ್ದಾರೆ’ ಎಂದು ಕೇಳಿದರು.

‘ಹಾಗೊಂದು ವೇಳೆ ಬಿಜೆಪಿಯವರು ಹೆಚ್ಚು ಸ್ಥಾನ ಗೆದ್ದರೆ ಸುಮ್ಮನೆ ಬಿಟ್ಟುಬಿಡುತ್ತಾರೆಯೇ? ನೀವೇ ಸಿಎಂ ಆಗಿ ಎಂದು ಜೆಡಿಎಸ್‌ನವರಿಗೆ ಹೇಳುತ್ತಾರೆಯೇ?’ ಎಂದು ಪ್ರಶ್ನಿಸಿದರು.

‘ಕಾನೂನಿನ ಪ್ರಕಾರ ಪ್ರಜ್ವಲ್ ರೇವಣ್ಣ ಬಂಧನವಾಗಿದೆ. ಇದರಲ್ಲಿ ನಾವು ಮಧ್ಯಪ್ರವೇಶಿಸಿಲ್ಲ. ರೇವಣ್ಣ ಅವರದು ಮಾತ್ರವಲ್ಲ, ಯಾವುದೇ ಪ್ರಕರಣದಲ್ಲೂ ಸರ್ಕಾರ ಮಧ್ಯಪ್ರವೇಶ ಮಾಡುವುದಿಲ್ಲ. ಅಧಿಕಾರಿ ಗಳಿಗೆ ಸರ್ಕಾರ ಬಹುಮಾನ ಕೊಟ್ಟಿಲ್ಲ?’ ಎಂದರು. ‘ಹಾಗೇನಾದರೂ ಅಧಿಕಾರಕ್ಕೆ ಬಂದರೆ ಅವರೂ (ಜೆಡಿಎಸ್) ಕಾನೂನು ಪ್ರಕಾರ ಕ್ರಮ ಕೈಗೊಳ್ಳಲಿ’ ಎಂದು ಹೇಳಿದರು. ‘2028ಕ್ಕೂ ನಿಮ್ಮದೇ ನಾಯಕತ್ವವೇ’ ಎಂಬ ಪ್ರಶ್ನೆಗೆ, ‘ಹೈಕಮಾಂಡ್ ತೀರ್ಮಾನ ಮಾಡುತ್ತದೆ’ ಎಂದರು.

ರಾಜ್ಯಪಾಲರು ಭಾಷಣ ಬದಲಾಯಿಸುವ ಸಾಧ್ಯತೆ: ಸಿದ್ದರಾಮಯ್ಯ

‘ವಿಧಾನಮಂಡಲದ ಅಧಿವೇಶನದಲ್ಲಿ ನಡೆದಿರುವ ಬೆಳವಣಿಗೆಗಳ ಬಗ್ಗೆ ರಾಜ್ಯಪಾಲರು ವರದಿ ಕೊಡಲಿ ಬಿಡಿ. ಬೇಡ ಎಂದವರಾರು? ನಮ್ಮ ಕಡೆಯಿಂದ ವಿವರಣೆ ಏನೂ ಇಲ್ಲ’ ಎಂದು ಸಿದ್ದರಾಮಯ್ಯ ಹೇಳಿದರು.

‘ಅಧಿವೇಶನದಲ್ಲಿ ಏನು ನಡೆಯಿತೆಂದು ಅವರು ರಾಷ್ಟ್ರಪತಿಯವರಿಗೆ ತಿಳಿಸಿದ್ದಾರಷ್ಟೆ. ರಾಜ್ಯಪಾಲರು ಜಂಟಿ ಅಧಿವೇಶನ ಉದ್ದೇಶಿಸಿ ಮಾತನಾಡಬೇಕೆಂದು ಸಂವಿಧಾನದ 176 ಮತ್ತು 163 ಪರಿಚ್ಛೇದದಲ್ಲಿ ಸ್ಪಷ್ಟವಾಗಿ ಹೇಳಿದೆ. ಸರ್ಕಾರ ನೀಡಿದ್ದ ಭಾಷಣವನ್ನು ಅವರು ಓದಲೇಬೇಕಾಗಿತ್ತು’ ಎಂದು ಹೇಳಿದರು.

‘ಗಣರಾಜ್ಯೋತ್ಸವಕ್ಕೂ ಭಾಷಣ ಬರೆದುಕೊಡುತ್ತೇವೆ. ಆದರೆ, ಓದುವವರು ಅವರೇ ಅಲ್ಲವೇ? ಅವರು ಅದನ್ನು ಬದಲಾಯಿಸಿಕೊಳ್ಳುವ ಸಾಧ್ಯತೆ ಇರುತ್ತದೆ’ ಎಂದುಪ್ರತಿಕ್ರಿಯಿಸಿದರು.

‘ಗಣರಾಜ್ಯೋತ್ಸವ ಪರೇಡ್‌ನಲ್ಲಿ ಕರ್ನಾಟಕದ ಸ್ತಬ್ಧಚಿತ್ರವನ್ನು ಕೇಂದ್ರ ಸರ್ಕಾರ ಆಯ್ಕೆ ಮಾಡಿಲ್ಲ. ನಾವು ಪತ್ರ ವ್ಯವಹಾರವನ್ನೆಲ್ಲಾ ನಡೆಸಿದ್ದೇವೆ. ಆದರೂ ಆಯ್ಕೆ ಮಾಡದಿದ್ದರೆ ಏನು ಮಾಡುವುದು?’ ಎಂದು ಕೇಳಿದರು.

ಸಿದ್ದರಾಮಯ್ಯ

ಫೆಬ್ರುವರಿಯಿಂದ ಬಜೆಟ್ ಸಭೆ

‘ಬಜೆಟ್ ಸಿದ್ಧತಾ ಸಭೆಯನ್ನು ಇನ್ನೂ ಅರಂಭಿಸಿಲ್ಲ. ಹಣಕಾಸು ಇಲಾಖೆಯೊಂದಿಗೆ ಪ್ರಾಥಮಿಕ ಹಂತದ ಚರ್ಚೆ ನಡೆಸುತ್ತಿದ್ದೇನೆ. ಫೆ.2ರಿಂದ ಕಟ್ಟುನಿಟ್ಟಾಗಿ ಆರಂಭಿಸಲಿದ್ದೇವೆ’ ಎಂದು ತಿಳಿಸಿದರು.

’ವೀರಲೋಕ ಪುಸ್ತಕ ಸಂತೆ’ಯಲ್ಲಿ ಸಾಹಿತಿ ಎಸ್.ದಿವಾಕರ್

ಭಿನ್ನ ಬರಹದ ಬಗ್ಗೆ ಲೇಖಕರು ಯೋಚಿಸಲಿ

ಪ್ರಜಾವಾಣಿ ವಾರ್ತೆ

ಬೀದರ್: ಪುಸ್ತಕಗಳನ್ನೇಕೆ ಓದಬೇಕು ಎಂಬುದು ಈ ಕಾಲದ ಓದುಗರ ಪ್ರಶ್ನೆ. ಈಗಿನ ಹೆಚ್ಚಿನ ಲೇಖಕರು ಹೊಗಳಿಕೆ ಬಯಸುತ್ತಿದ್ದಾರೆ. ಹಾಗಾಗಿಯೇ ಈ ಲೇಖಕರ ಪುಸ್ತಕಗಳನ್ನು ಏಕೆ ಓದಬೇಕೆಂಬ ಪ್ರಶ್ನೆ ಓದು ಗರಲ್ಲಿ ಸಹಜವಾಗಿಯೇ ಮೂಡುತ್ತಿದೆ ಎಂದು ಸಾಹಿತಿ ಎಸ್. ದಿವಾಕರ್ ಅಭಿಪ್ರಾಯಪಟ್ಟರು.

ವೀರಲೋಕ ಬುಕ್ಸ್, ಭಾಲ್ಕಿ ಹಿರೇಮಠ ಸಂಸ್ಥಾನ ಹಾಗೂ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಸಹಯೋಗದಲ್ಲಿ ನಗರದಲ್ಲಿ ಏರ್ಪಡಿಸಿರುವ ‘ವೀರಲೋಕ ಪುಸ್ತಕ ಸಂತೆ’ಯ ಎರಡನೇ ದಿನವಾದ ಭಾನುವಾರ ‘ಕಾಲದ ಎದುರು ನಿಂತ ಪದಗಳು’ ಗೋಷ್ಠಿಯಲ್ಲಿ ವಿಷಯ ಮಂಡಿಸಿ ಮಾತನಾಡಿದರು.

ಈ ಕಾಲಘಟ್ಟದಲ್ಲಿ ಓದುವುದಕ್ಕೆ ಅರ್ಹವಾದ ಪುಸ್ತಕಗಳು ಯಾವುವು ಎಂದು ಪಟ್ಟಿ ಮಾಡಲು ಸಾಧ್ಯವಾಗದ ಪರಿಸ್ಥಿತಿ ಇದೆ. ಇಂದಿನ ಯುವಪೀಳಿಗೆ ಕೂಡ ಕುವೆಂಪು, ಬೇಂದ್ರೆ ಅವರನ್ನೇ ಹೆಚ್ಚಾಗಿ ಓದುತ್ತಿದ್ದಾರೆ. ಎಸ್. ಎಲ್. ಭೈರಪ್ಪನವರ ಸೃಜನಶೀಲ, ಡಿವಿಜಿಯವರ ಸೃಜನೇತರ ಕೃತಿಗಳನ್ನು ಇಷ್ಟ ಪಡುತ್ತಿದ್ದಾರೆ. ಇವರಿಗಿಂತ ನಾನು ಏನು ಭಿನ್ನವಾಗಿ ಬರೆಯಬಹುದು ಎಂದು ಲೇಖಕರು ಗಂಭೀರವಾಗಿ ಯೋಚಿಸಬೇಕು ಎಂದು ಸಲಹೆ ನೀಡಿದರು.

ಲೇಖಕ ಲಿಂಗರಾಜ ಸೊಟ್ಟಪ್ಪನವರ ಮಾತನಾಡಿ, ‘ಭಾಷೆ ಪರಿಕರವಷ್ಟೇ ಅಲ್ಲ, ಸಶಕ್ತ ಅಭಿವ್ಯಕ್ತಿ ಮಾಧ್ಯಮ. ಮನುಷ್ಯನ ಪರಿವರ್ತನೆಗಿರುವ ಸಾಹಿತ್ಯದ ಮಾಧ್ಯಮವೂ ಹೌದು ಎಂದರು. ಲೇಖಕ ರಾಜಶೇಖರ ಹಳೇಮನೆ, ಸಾಹಿತಿ ರಾಗಂ (ರಾಜಶೇಖರಯ್ಯ ಮಠಪತಿ) ಮಾತನಾಡಿದರು. ಸಾಹಿತಿ ಶರತ್ ಭಟ್ ಸೇರಾಜೆ ಕಾರ್ಯಕ್ರಮ ನಡೆಸಿಕೊಟ್ಟರು.

ಕಾರ್ಯಕ್ರಮದಲ್ಲಿ ಸಾಹಿತಿ ಎಸ್. ದಿವಾಕರ್ ಮಾತನಾಡಿದರು. ರಾಜಶೇಖರಯ್ಯ ಮಠಪತಿ, ಲಿಂಗರಾಜ ಸೊಟ್ಟಪ್ಪನವರ, ರಾಜಶೇಖರ ಹಳೇಮನಿ, ಶರತ್ ಭಟ್ ಸೇರಾಜೆ ಭಾಗವಹಿಸಿದ್ದರು

ಮುಖ್ಯಾಂಶಗಳು

- ಯುವ ಪೀಳಿಗೆಗೆ ಈಗಲೂ ಕುವೆಂಪು, ಬೇಂದ್ರೆ ಇಷ್ಟ
- ಮನುಷ್ಯನ ಪರಿವರ್ತನೆಗಿರುವ ಮಾಧ್ಯಮ ಸಾಹಿತ್ಯ
- ಲೇಖಕನಿಗಿಂತ ಓದುಗ ಹೆಚ್ಚು ಜಾಗರೂಕ

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಕ್ಷಣ ಕ್ಷಣದ ಅಪ್‌ಡೇಟ್‌ಗಳಿಗಾಗಿ
ಸ್ಕ್ಯಾನ್ ಮಾಡಿ

ಕುಮಾರಸ್ವಾಮಿ ಪಂಥಾಹ್ವಾನ 4
ಬೆಳ್ಳಿ, ಚಿನ್ನ: ಬೆಲೆ ಇಳಿಕೆ ಸಾಧ್ಯತೆ ಇಲ್ಲ 10

ರಾಜ್ಯದ 8 ಸಾಧಕರಿಗೆ 'ಪದ್ಮ' ಪ್ರಶಸ್ತಿ

ಶತಾವಧಾನಿ ಆರ್. ಗಣೇಶ್‌ಗೆ 'ಪದ್ಮಭೂಷಣ' ಗೌರವ

ಪ್ರಜಾವಾಣಿ ವಾರ್ತೆ/ ಪಿಟಿಐ

ಮುಖ್ಯಾಂಶಗಳು

- ಒಟ್ಟು 131 ಸಾಧಕರಿಗೆ ಗೌರವ
- ಪ್ರಶಸ್ತಿ ಪುರಸ್ಕೃತರಲ್ಲಿ 19 ಮಹಿಳೆಯರು
- 16 ಮಂದಿಗೆ ಮರಣೋತ್ತರ ಗೌರವ

ನವದೆಹಲಿ: ಶತಾವಧಾನಿ ಆರ್. ಗಣೇಶ್ ಸೇರಿದಂತೆ ರಾಜ್ಯದ ಎಂಟು ಸಾಧಕರು ಈ ಸಾಲಿನ ಪ್ರತಿಷ್ಠಿತ ಪದ್ಮ ಪ್ರಶಸ್ತಿಗಳಿಗೆ ಭಾಜನರಾಗಿದ್ದಾರೆ.

ಗಣರಾಜ್ಯೋತ್ಸವದ ಮುನ್ನಾ ದಿನವಾದ ಭಾನುವಾರ ಕೇಂದ್ರ ಗೃಹ ಸಚಿವಾಲಯ 2026ರ ಸಾಲಿನ ಪದ್ಮ ಪ್ರಶಸ್ತಿ ಪುರಸ್ಕೃತರ ವಿವರ ಪ್ರಕಟಿಸಿತು. 5 ಸಾಧಕರು 'ಪದ್ಮವಿಭೂಷಣ', 13 ಸಾಧಕರು 'ಪದ್ಮಭೂಷಣ' ಮತ್ತು 113 ಮಂದಿ ತಮ್ಮ ಕ್ಷೇತ್ರಗಳಲ್ಲಿನ ಗಣನೀಯ ಸಾಧನೆಗಾಗಿ 'ಪದ್ಮಶ್ರೀ' ಪ್ರಶಸ್ತಿಗೆ ಪಾತ್ರರಾಗಿದ್ದಾರೆ.

ಕರ್ನಾಟಕದ ಎಂ.ಅಂಕೇಗೌಡ, ಎಸ್.ಜಿ.ಸುಶೀಲಮ್ಮ (ಸಮಾಜ ಸೇವೆ), ಪ್ರಭಾಕರ ಕೋರೆ, ಶಶಿ ಶೇಖರ್ ವೆಂಪತಿ (ಸಾಹಿತ್ಯ ಮತ್ತು ಶಿಕ್ಷಣ), ಡಾ.ಸುರೇಶ್ ಹನಗವಾಡಿ (ವೈದ್ಯಕೀಯ), ಶುಭಾ ವೆಂಕಟೇಶ್ ಅಯ್ಯಂಗಾರ್ (ವಿಜ್ಞಾನ ಮತ್ತು ಎಂಜಿನಿಯರಿಂಗ್) ಮತ್ತು ಟಿ.ಟಿ. ಜಗನ್ನಾಥನ್ (ಮರಣೋತ್ತರವಾಗಿ; ವ್ಯಾಪಾರ ಮತ್ತು ಕೈಗಾರಿಕೆ) ಅವರಿಗೆ 'ಪದ್ಮಶ್ರೀ' ಗೌರವ ಒಲಿದಿದೆ.

ಸುಪ್ರೀಂ ಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ಕೇರಳದ ಕೆ.ಟಿ ಥಾಮಸ್ (ಸಾರ್ವಜನಿಕ ವ್ಯವಹಾರ), ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತಗಾರ ಮತ್ತು ವಯೊಲಿನ್ ವಾದಕ ಉತ್ತರ ಪ್ರದೇಶದ ಎನ್.ರಾಜಮ್ (ಕಲೆ) ಹಾಗೂ ಹಿರಿಯ ಪತ್ರಕರ್ತ ಕೇರಳದ ಪಿ.ನಾರಾಯಣನ್ (ಸಾಹಿತ್ಯ ಮತ್ತು ಶಿಕ್ಷಣ) ಅವರು 'ಪದ್ಮವಿಭೂಷಣ' ಗೌರವಕ್ಕೆ ಪಾತ್ರರಾಗಿದ್ದಾರೆ.

▶4

ಪದ್ಮ ಪ್ರಶಸ್ತಿ ಪುರಸ್ಕೃತರಿಗೆ ಅಭಿನಂದನೆಗಳು. ವಿವಿಧ ಕ್ಷೇತ್ರಗಳಲ್ಲಿ ಅವರ ಸಾಧನೆ, ಸಮರ್ಪಣೆ ಮತ್ತು ಸೇವೆಯು ನಮ್ಮ ಸಮಾಜವನ್ನು ಸಮೃದ್ಧಿಗೊಳಿಸಿದೆ

ನರೇಂದ್ರ ಮೋದಿ, ಪ್ರಧಾನಿ

ವೀರಪ್ಪನ್‌ನನ್ನು 'ಬೇಟೆ'ಯಾಡಿದ್ದ ಅಧಿಕಾರಿಗೆ 'ಪದ್ಮಶ್ರೀ'

ಚೆನ್ನೈ: 'ಪದ್ಮಶ್ರೀ' ಪ್ರಶಸ್ತಿಗೆ ಭಾಜನರಾದ ನಿವೃತ್ತ ಐಪಿಎಸ್ ಅಧಿಕಾರಿ ಕೆ. ವಿಜಯ್ ಕುಮಾರ್ ಅವರು ಕಾಡುಗಳ್ಳ ವೀರಪ್ಪನ್ ವಿರುದ್ಧದ ಕಾರ್ಯಾಚರಣೆಯಿಂದ ಹೆಸರುವಾಸಿಯಾಗಿದ್ದಾರೆ.

2004ರಲ್ಲಿ ತಮಿಳುನಾಡಿನ ಧರ್ಮಪುರಿ ಜಿಲ್ಲೆಯ ಪಾಪರಪಟ್ಟಿ ಬಳಿ ತಮಿಳುನಾಡಿನ ಆಗಿನ ಎಸ್‌ಟಿಎಫ್ ಮುಖ್ಯಸ್ಥರಾಗಿದ್ದ ವಿಜಯ್‌ಕುಮಾರ್ ನೇತೃತ್ವದ ತಂಡ ಕಾರ್ಯಾಚರಣೆ ನಡೆಸಿ ವೀರಪ್ಪನ್‌ನನ್ನು ಹತ್ಯೆ ಮಾಡಿತ್ತು.

73 ವರ್ಷದ ಅವರು 2010ರಿಂದ ಎರಡು ವರ್ಷ ಕೇಂದ್ರ ಮೀಸಲು ಪೊಲೀಸ್ ಪಡೆ (ಸಿಆರ್‌ಪಿಎಫ್) ನೇತೃತ್ವ ವಹಿಸಿದ್ದರು. ನಕ್ಸಲ್ ಪೀಡಿತ ಪ್ರದೇಶಗಳಲ್ಲಿ ನಡೆದ ಕಾರ್ಯಾಚರಣೆಗಳಲ್ಲಿ ಕೇಂದ್ರ ಗೃಹ ಸಚಿವಾಲಯಕ್ಕೆ ಸಲಹೆಗಾರರಾಗಿಯೂ ಕೆಲಸ ಮಾಡಿದ್ದಾರೆ.

ರಾಷ್ಟ್ರಪತಿಗೆ ರಾಜ್ಯಪಾಲರಿಂದ ವರದಿ

ಬೆಂಗಳೂರು: ವಿಧಾನಮಂಡಲದ ಜಂಟಿ ಅಧಿವೇಶನದ ಭಾಷಣ ಬಗೆಗಿನ ವಿವಾದಗಳ ಕುರಿತ ಪ್ರತ್ಯೇಕ ವರದಿಯನ್ನು ರಾಜ್ಯಪಾಲ ಥಾವರಚಂದ್ ಗೆಹಲೋತ್ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರಿಗೆ ಸಲ್ಲಿಸಿದ್ದಾರೆ.

ಸುದ್ದಿ ▶4



ಸೂರ್ಯ ಪಡೆಗೆ ಸರಣಿ ಕೈವಶ



ಸೂರ್ಯಕುಮಾರ್ ಯಾದವ್

ಗುವಾಹಟಿ (ಪಿಟಿಐ): ಭಾರತ ತಂಡವು ಭಾನುವಾರ ನ್ಯೂಜಿಲೆಂಡ್ ಎದುರು ನಡೆದ ಮೂರನೇ ಟಿ20 ಕ್ರಿಕೆಟ್ ಪಂದ್ಯದಲ್ಲಿ 8 ವಿಕೆಟ್‌ಗಳಿಂದ ಜಯಿಸಿತು. ಇದರೊಂದಿಗೆ ಐದು ಪಂದ್ಯಗಳ ಸರಣಿಯನ್ನು 3–0ಯಿಂದ ಕೈವಶ ಮಾಡಿಕೊಂಡಿತು.

ಟಾಸ್ ಗೆದ್ದು ಬೌಲಿಂಗ್ ಮಾಡಿದ ಭಾರತ ತಂಡದ, ಸ್ಪಿನ್ನರ್ ರವಿ ಬಿಷ್ಣೋಯಿ (18ಕ್ಕೆ2), ಹಾರ್ದಿಕ್ ಪಾಂಡ್ಯ (23ಕ್ಕೆ2) ಮತ್ತು ಜಸ್‌ಪ್ರೀತ್ ಬೂಮ್ರಾ (17ಕ್ಕೆ3) ಅವರು ಪರಿಣಾಮಕಾರಿ ದಾಳಿ ನಡೆಸಿದರು. ಕಿವೀಸ್ ಬಳಗವು 20 ಓವರ್‌ಗಳಲ್ಲಿ 9ಕ್ಕೆ153 ರನ್ ಗಳಿಸಿತು. ಅದಕ್ಕುತ್ತರವಾಗಿ ಭಾರತ 10 ಓವರ್‌ಗಳಲ್ಲಿ 2 ವಿಕೆಟ್‌ಗಳಿಗೆ 155 ರನ್ ಗಳಿಸಿತು.

ಅಭಿಷೇಕ್ ಶರ್ಮಾ (ಔಟಾಗದೇ 68; 20 ಎಸೆತ) ಮತ್ತು ನಾಯಕ ಸೂರ್ಯಕುಮಾರ್ ಯಾದವ್ (ಔಟಾಗದೇ 57; 26 ಎಸೆತ) ಅವರು ಅಬ್ಬರಿಸಿದರು.

₹3,522 ಕೋಟಿ ವಂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿನ್‌ಝೋ ಪ್ರೈವೆಟ್ ಲಿಮಿಟೆಡ್ ಕಂಪನಿಯು ಆನ್‌ಲೈನ್ ಗೇಮ್‌ಗಳಲ್ಲಿ ಚಂದಾದಾರರಿಗೆ ವಂಚಿಸುವ ಮತ್ತು ಠೇವಣಿ ಹಿಂದಿರುಗಿಸದೇ ಇರುವ ಮೂಲಕ ₹3,522 ಕೋಟಿಯನ್ನು ಅಕ್ರಮ ವಾಗಿ ಗಳಿಸಿದೆ ಎಂದು ಜಾರಿ ನಿರ್ದೇಶನಾಲಯವು (ಇ.ಡಿ) ಹೇಳಿದೆ.

ನಗರದ ಆರ್ಥಿಕ ಅಪರಾಧಗಳ ವಿಶೇಷ ನ್ಯಾಯಾಲಯಕ್ಕೆ ಇ.ಡಿಯು ಪ್ರಾಸಿಕ್ಯೂಷನ್ ದೂರನ್ನು ಸಲ್ಲಿಸಿದ್ದು, ಅದರಲ್ಲಿ ಈ ಮಾಹಿತಿ ಇದೆ.

ವಿನ್‌ಝೋ ಕಂಪನಿಯು 100ಕ್ಕೂ ಹೆಚ್ಚು ಮೊಬೈಲ್ ಗೇಮಿಂಗ್ ಆ್ಯಪ್‌ಗಳನ್ನು ನಿರ್ವಹಣೆ ಮಾಡುತ್ತಿತ್ತು. ಇವೆಲ್ಲವೂ ನೈಜ ಹಣ ತೊಡಗಿಸಿ ಆಟವಾಡುವ ಗೇಮ್‌ಗಳಾಗಿದ್ದವು (ರಿಯಲ್ ಮನಿ ಗೇಮ್–ಆರ್‌ಎಂಜಿ). ಈ ಗೇಮ್‌ಗಳಲ್ಲಿ ಕೃತಕ ಬುದ್ಧಿಮತ್ತೆ (ಎಐ), ಬಾಟ್ ಮತ್ತು ಅಲ್ಗಾರಿದಮ್‌ಗಳನ್ನು ಬಳಸಿಕೊಳ್ಳುವುದಿಲ್ಲ ಎಂದು ಕಂಪನಿಯು ಘೋಷಿಸಿಕೊಂಡಿತ್ತು. ಆದರೆ ವಾಸ್ತವದಲ್ಲಿ ಎಲ್ಲ ಗೇಮ್‌ಗಳಲ್ಲೂ ಎಐ, ಬಾಟ್ ಮತ್ತು ಅಲ್ಗಾರಿದಮ್‌ಗಳನ್ನು ವಿಪರೀತ ಪ್ರಮಾಣದಲ್ಲಿ ಬಳಸಿಕೊಳ್ಳಲಾಗಿತ್ತು ಎಂದು ಇ.ಡಿ ವಿವರಿಸಿದೆ.

▶10

ಹವಾಮಾನ ಮುನ್ಸೂಚನೆ: ನಗರದಲ್ಲಿ ಮಂಜು ಮತ್ತು ಮೋಡ ಕವಿದ ವಾತಾವರಣ ಇರಲಿದೆ.

FURNITURE WAREHOUSE SALE

DIVISION OF SME TRADING

LOCATE US

121/3 - 121/8, Near Alanoville Villa, Kannur Village & Post Bengaluru East, Bengaluru - 560077.

SOFAS | BEDS | DINING | OFFICE | OUTDOOR | RECLINER | HOME DECOR & MORE

BIGGEST REPUBLIC DAY SALE

FREE DELIVERY | FREE INSTALLATION | PAY IN EASY INSTALLMENTS AT NO EXTRA COST | HDFC BANK We understand your world | BAJAJ FINSERV EMI FINANCE | +91 7899398176 / 84316 43064

ಫಲಪುಷ್ಪ ಪ್ರದರ್ಶನಕ್ಕೆ 1.14 ಲಕ್ಷ ಜನ

ಪ್ರಜಾವಾಣಿ ವಾರ್ತೆ

ಲಾಲ್‌ಬಾಗ್‌ನಲ್ಲಿ ಆಯೋಜಿಸಿರುವ ಫಲಪುಷ್ಪ ಪ್ರದರ್ಶನ ವೀಕ್ಷಿಸಲು ಭಾನುವಾರ ಬಂದಿದ್ದ ಜನ ಪ್ರಜಾವಾಣಿ ಚಿತ್ರ

ಬೆಂಗಳೂರು: ಗಣರಾಜ್ಯೋತ್ಸವದ ಅಂಗವಾಗಿ ಲಾಲ್‌ಬಾಗ್ ಗಾಜಿನ ಮನೆಯಲ್ಲಿ ಆಯೋಜಿಸಿರುವ 'ತೇಜಸ್ವಿ ವಿಸ್ಮಯ' ವಿಷಯ ಆಧಾರಿತ ಫಲಪುಷ್ಪಪ್ರದರ್ಶನ ವೀಕ್ಷಿಸಲು ಭಾನುವಾರ 1.14 ಲಕ್ಷ ಜನ ಭೇಟಿ ನೀಡಿದ್ದು, ₹46 ಲಕ್ಷ ಪ್ರವೇಶ ಶುಲ್ಕ ಸಂಗ್ರಹವಾಗಿದೆ.

ಲಾಲ್‌ಬಾಗ್‌ನ ನಾಲ್ಕೂ ಪ್ರವೇಶ ದ್ವಾರಗಳಲ್ಲಿ ಜನಸಂದಣಿ ಹೆಚ್ಚಿತ್ತು. ಲಾಲ್‌ಬಾಗ್‌ನ ಮುಖ್ಯ ಗೇಟಿನ ರಸ್ತೆಯಲ್ಲಿ ಸಂಚಾರ ದಟ್ಟಣೆ ನಿಯಂತ್ರಿಸಲು ಏಕಮುಖ ಸಂಚಾರಕ್ಕೆ ಅವಕಾಶ ಕಲ್ಪಿಸಿದ್ದರೂ, ಬೀದಿ ವ್ಯಾಪಾರಿಗಳ ಹಾವಳಿಯಿಂದಾಗಿ ಸಂಚಾರ ದಟ್ಟಣೆ ಉಂಟಾಗಿತ್ತು.

ಲಾಲ್‌ಬಾಗ್ ಮೆಟ್ರೊ ನಿಲ್ದಾಣದಲ್ಲಿ ಟಿಕೆಟ್ ಖರೀದಿಗೆ ಪ್ರಯಾಣಿಕರು ಹರಸಾಹಸ ಪಡುತ್ತಿದ್ದರು. ಶಾಂತಿನಗರ ಬಸ್ ನಿಲ್ದಾಣದಿಂದ ಲಾಲ್‌ಬಾಗ್‌ನ ಗೇಟಿನವರೆಗೆ, ಉದ್ಯಾನದ ವೆಸ್ಟ್‌ಗೇಟ್‌ನ ಪಾದಚಾರಿ ಮಾರ್ಗಗಳಲ್ಲಿ ಕಿರು ಮಾರುಕಟ್ಟೆಗಳು ಸೃಷ್ಟಿಯಾಗಿದ್ದವು.

ಗಾಜಿನ ಮನೆಯಲ್ಲಿ ಪುಷ್ಪಗಳಲ್ಲಿ ಅರಳಿದ ತೇಜಸ್ವಿ ಅವರ ಜೀವನದ ಪ್ರಮುಖ ಘಟನೆಗಳನ್ನು ನೋಡಲು ಬಂದಿದ್ದ ಜನ ಸರತಿ ಸಾಲಿನಲ್ಲಿ ನಿಂತಿದ್ದರು. ಕಿಕ್ಕಿರಿದು ಸೇರಿದ್ದ ಜನರನ್ನು ನಿಯಂತ್ರಿಸಲು ಪೊಲೀಸರು ಮತ್ತು ತೋಟಗಾರಿಕೆ ಇಲಾಖೆ ಸಿಬ್ಬಂದಿ ಹರಸಾಹಸಪಟ್ಟರು.

ಗಣರಾಜ್ಯೋತ್ಸವ: ಗಣ್ಯರಿಗೆ ಕೈದಿಗಳು ಸಿದ್ಧಪಡಿಸಿದ ಆಹಾರ

ಬೆಂಗಳೂರು: ನಗರದ ಫೀಲ್ಡ್ ಮಾರ್ಷಲ್ ಮಾಣೆಕ್ ಷಾ ಮೈದಾನದಲ್ಲಿ ಸೋಮವಾರ ನಡೆಯುವ ಗಣರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಭಾಗವಹಿಸುವ ರಾಜ್ಯಪಾಲ ಥಾವರ್ ಚಂದ್ ಗೆಹಲೋತ್ ಸೇರಿ ಗಣ್ಯರಿಗೆ ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಲ್ಲಿ ಸಿದ್ಧವಾಗುವ ಲಘು ಉಪಾಹಾರ ನೀಡಲಾಗುತ್ತದೆ.

ನವ ಸಂಕಲ್ಪ ಕಾರ್ಯಕ್ರಮದ ಅಡಿಯಲ್ಲಿ ಕೈದಿಗಳೇ ಜೈಲಿನ ಬೇಕರಿಯಲ್ಲಿ ಸಿದ್ಧಪಡಿಸುವ ತಿನಿಸುಗಳನ್ನು ಗಣರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಭಾಗಿಯಾಗುವ ಗಣ್ಯರು ಹಾಗೂ ಪತ್ರಕರ್ತರಿಗೂ ನೀಡಲಾಗುತ್ತದೆ. ಅದಕ್ಕಾಗಿಯೇ ಜೈಲಿನ ಬೇಕರಿಯಲ್ಲಿ ಬಿಸ್ಕೆಟ್, ಬ್ರೆಡ್, ಡ್ರೈ ಫ್ರೂಟ್ಸ್ ಸೇರಿ ಕೆಲ ವಿಶೇಷ ತಿಂಡಿಗಳನ್ನು ಸಿದ್ಧಪಡಿಸಲಾಗಿದೆ ಎಂದು ಜೈಲಿನ ಅಧಿಕಾರಿಗಳು ಮಾಹಿತಿ ನೀಡಿದರು.

'ಗಣರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಗಣ್ಯರು ಹಾಗೂ ಪತ್ರಕರ್ತರಿಗೆ ಜೈಲಿನ ಬೇಕರಿಯಲ್ಲೇ ಸಿದ್ಧಪಡಿಸಿದ ಬೇಕರಿ ತಿನಿಸುಗಳನ್ನು ವಿತರಿಸಲಾಗುತ್ತದೆ. ಹೈದರಾಬಾದ್‌ನ ಆಹಾರ ತಜ್ಞರು ಹತ್ತು ದಿನ ಕೈದಿಗಳಿಗೆ ತರಬೇತಿ ನೀಡಿದ್ದಾರೆ. ಆಹಾರ ತಜ್ಞರ ಸಮ್ಮುಖದಲ್ಲಿ ಕೈದಿಗಳೇ ಬೇಕರಿ ತಿನಿಸುಗಳನ್ನು ಸಿದ್ಧಪಡಿಸಿದ್ದಾರೆ. ಒಟ್ಟು 700 ಆಹಾರದ ಪ್ಯಾಕೆಟ್ ಸಿದ್ಧವಾಗಿವೆ' ಎಂದು ಕಾರಾಗೃಹ ಮತ್ತು ಸುಧಾರಣಾ ಸೇವೆ ಇಲಾಖೆ ಡಿಜಿಪಿ ಅಲೋಕ್ ಕುಮಾರ್ 'ಪ್ರಜಾವಾಣಿ'ಗೆ ತಿಳಿಸಿದರು.

ಕಬ್ಬನ್ ರಸ್ತೆ: ಸಂಚಾರ ಮಾರ್ಪಾಡು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಬ್ಬನ್ ರಸ್ತೆಯ ಫೀಲ್ಡ್ ಮಾರ್ಷಲ್ ಮಾಣೆಕ್ ಷಾ ಕವಾಯತು ಮೈದಾನದಲ್ಲಿ ಜನವರಿ 26ರಂದು ಗಣರಾಜ್ಯೋತ್ಸವ ಕಾರ್ಯಕ್ರಮ ನಡೆಯಲಿರುವ ಕಾರಣ ಸುತ್ತಮುತ್ತಲ ರಸ್ತೆಗಳ ಸಂಚಾರ ವ್ಯವಸ್ಥೆಯಲ್ಲಿ ಬದಲಾವಣೆ ಮಾಡಲಾಗಿದೆ.

ಬೆಳಿಗ್ಗೆ 8.30ರಿಂದ 10.30ರವರೆಗೆ ಕಬ್ಬನ್ ರಸ್ತೆಯ ಬಿಆರ್‌ವಿ ಜಂಕ್ಷನ್‌ನಿಂದ ಕಾಮರಾಜ ರಸ್ತೆ ಜಂಕ್ಷನ್‌ವರೆಗೆ ಎರಡೂ ದಿಕ್ಕುಗಳಲ್ಲಿ ವಾಹನ ಸಂಚಾರ ನಿರ್ಬಂಧಿಸಲಾಗಿದೆ. ಸುಗಮ ಸಂಚಾರದ ದೃಷ್ಟಿಯಿಂದ ಈ ಮಾರ್ಪಾಡು ಮಾಡಲಾಗಿದ್ದು, ಸಾರ್ವಜನಿಕರು ಸಹಕರಿಸಬೇಕು ಎಂದು ಪೊಲೀಸರು ತಿಳಿಸಿದ್ದಾರೆ.

ಇನ್‌ಫೆಂಟ್ರಿ ರಸ್ತೆಯಲ್ಲಿ ಮಣಿಪಾಲ್ ಸೆಂಟರ್ ಕಡೆಗೆ ಸಂಚರಿಸುವ ವಾಹನಗಳು ಸಫೀನಾ ಪ್ಲಾಜಾ ಬಳಿ ಎಡಕ್ಕೆ ತಿರುಗಿ ಮೈನ್‌ಗಾರ್ಡ್, ಆಲೀಸ್ ಸರ್ಕಲ್, ಡಿಸ್ಪೆನ್ಸರಿ ರಸ್ತೆ, ಕಾಮರಾಜ ರಸ್ತೆ ಮೂಲಕ ಬಂದು ಡಿಕನ್ಸನ್ ರಸ್ತೆ ಜಂಕ್ಷನ್‌ನಲ್ಲಿ ಬಲಕ್ಕೆ ತಿರುಗಬೇಕು. ಬಳಿಕ ಕಾಮರಾಜ ರಸ್ತೆ, ಕಬ್ಬನ್ ರಸ್ತೆಯಲ್ಲಿ ಸಾಗಿ ಕಾಮರಾಜ ರಸ್ತೆ ಜಂಕ್ಷನ್‌ನಲ್ಲಿ ಎಡ ತಿರುವು ಪಡೆದು ಮಣಿಪಾಲ್ ಸೆಂಟರ್ ಕಡೆಗೆ ಹೋಗಬೇಕು.

ಕಬ್ಬನ್ ರಸ್ತೆಯಲ್ಲಿ ಮಣಿಪಾಲ್ ಸೆಂಟರ್ ಜಂಕ್ಷನ್‌ನಿಂದ ಬಿಆರ್‌ವಿ ಜಂಕ್ಷನ್ ಕಡೆಗೆ ಬರುವ ವಾಹನಗಳ ಸಂಚಾರವನ್ನು ನಿರ್ಬಂಧಿಸಲಾಗಿದೆ. ಈ ಮಾರ್ಗದ ಬದಲು ವೆಬ್ ಜಂಕ್ಷನ್ ಬಳಿ ಬಲ ತಿರುವು ಪಡೆದು ಎಂ.ಜಿ. ರಸ್ತೆ, ಮೆಯೋ ಹಾಲ್, ಕಾವೇರಿ ಎಂಪೋರಿಯಂ ಕಡೆಗೆ ಬಂದು ಅನಿಲ್ ಕುಂಬ್ಳೆ ವೃತ್ತದಲ್ಲಿ ಬಲ ತಿರುವು ಪಡೆದು ಮುಂದೆ ಸಾಗಬೇಕು.

ಅನಿಲ್ ಕುಂಬ್ಳೆ ವೃತ್ತದಿಂದ ಕಬ್ಬನ್ ರಸ್ತೆ ಕಡೆಗೆ ಹೋಗುವ ವಾಹನಗಳು ಸೆಂಟ್ರಲ್ ಸ್ಟ್ರೀಟ್‌ನಲ್ಲಿ ಸಾಗಿ ಬಲ ತಿರುವು ಪಡೆದು ಇನ್‌ಫೆಂಟ್ರಿ ರಸ್ತೆ, ಸಫೀನಾ ಪ್ಲಾಜಾ ಬಳಿ ಬಂದು ಎಡಕ್ಕೆ ತಿರುವು ಪಡೆದು ಮೈನ್‌ಗಾರ್ಡ್, ಆಲೀಸ್ ಸರ್ಕಲ್ , ಡಿಸ್ಪೆನ್ಸರಿ ರಸ್ತೆ, ಕಾಮರಾಜ ರಸ್ತೆ, ಡಿಕನ್ಸನ್ ರಸ್ತೆ ಜಂಕ್ಷನ್‌ನಲ್ಲಿ ಬಲಕ್ಕೆ ತಿರುಗಬೇಕು. ನಂತರ ಕಾಮರಾಜ ರಸ್ತೆ ಜಂಕ್ಷನ್‌ನಲ್ಲಿ ಎಡ ತಿರುವು ಪಡೆದು ಮಣಿಪಾಲ್ ಸೆಂಟರ್ ಕಡೆಗೆ ಹೋಗಬಹುದು.

ವಾಹನ ನಿಲುಗಡೆ ನಿಷೇಧ ರಸ್ತೆಗಳು

- ಸೆಂಟ್ರಲ್ ಸ್ಟ್ರೀಟ್, ಅನಿಲ್ ಕುಂಬ್ಳೆ ವೃತ್ತದಿಂದ ಶಿವಾಜಿನಗರ ಬಸ್ ನಿಲ್ದಾಣವರೆಗೆ
- ಕಬ್ಬನ್ ರಸ್ತೆ, ಸಿ.ಟಿ.ಒ ವೃತ್ತದಿಂದ ಕೆ.ಆರ್. ರಸ್ತೆ ಮತ್ತು ಕಬ್ಬನ್ ರಸ್ತೆ ಜಂಕ್ಷನ್‌ವರೆಗೆ
- ಎಂ.ಜಿ.ರಸ್ತೆ, ಅನಿಲ್ ಕುಂಬ್ಳೆ ವೃತ್ತದಿಂದ ಕ್ವೀನ್ಸ್ ವೃತ್ತದವರೆಗೆ

ನೇರ ಸಂದರ್ಶನ 30ಕ್ಕೆ

ಬೆಂಗಳೂರು: ಅಂಚೆ ಜೀವ ವಿಮೆ ಹಾಗೂ ಗ್ರಾಮೀಣ ಜೀವ ವಿಮೆ ಪಾಲಿಸಿಗಳನ್ನು ಮಾರಾಟ ಮಾಡಲು ಪ್ರತಿನಿಧಿಗಳ ನಿಯುಕ್ತಿಗಾಗಿ ಅಂಚೆ ಇಲಾಖೆಯು ಇದೇ 30ರಂದು ಬೆಳಿಗ್ಗೆ 11ಕ್ಕೆ ಅಭ್ಯರ್ಥಿಗಳಿಗೆ ನೇರ ಸಂದರ್ಶನ ಏರ್ಪಡಿಸಿದೆ.

ಸ್ವವಿವರ, ಶೈಕ್ಷಣಿಕ ಪ್ರಮಾಣ ಪತ್ರದ ನಕಲು ಪ್ರತಿಗಳೊಂದಿಗೆ ಮಹಾಲಕ್ಷ್ಮಿಪುರ ಪೊಲೀಸ್ ಠಾಣೆ ಬಳಿಯ ಬೆಂಗಳೂರು ಪಶ್ಚಿಮ ಅಂಚೆ ವಿಭಾಗ, ಅಧೀಕ್ಷಕರ ಕಚೇರಿಯಲ್ಲಿ ಸಂದರ್ಶನಕ್ಕೆ ಹಾಜರಾಗಬೇಕು. ನಿರುದ್ಯೋಗಿಗಳು, ಸ್ವಯಂ ಉದ್ಯೋಗಿಗಳು, ವಿಮಾ ಕಂಪನಿಗಳ ಮಾಜಿ ಏಜೆಂಟರು, ಮಾಜಿ ಸೈನಿಕರು, ಅಂಗನವಾಡಿ ಕಾರ್ಯಕರ್ತೆಯರು, ಗ್ರಾ. ಪಂ.ಗಳ ಮಾಜಿ ಸದಸ್ಯರು, ಮಹಿಳಾ ಮಂಡಲ ಕಾರ್ಯಕರ್ತೆಯರು ಭಾಗವಹಿಸಬಹುದು. ಆಯ್ಕೆಯಾಗುವವರು ರಾಷ್ಟ್ರೀಯ ಉಳಿತಾಯ ಪತ್ರದ ರೂಪದಲ್ಲಿ ₹5,000 ಭದ್ರತಾ ಠೇವಣಿ ಇಡಬೇಕು. ವ್ಯವಹಾರಕ್ಕೆ ತಕ್ಕಂತೆ ಕಮಿಷನ್ ನೀಡಲಾಗುವುದು. ವಿವರಗಳಿಗೆ 7975127704/080-23493283 ಸಂಪರ್ಕಿಸುವುದು.

ಗಣರಾಜ್ಯೋತ್ಸವದ ರಾಯಲ್ ಡೀಲ್‌ಗಳು

ROYAL REPUBLIC DEALS
January 22nd - 27th

ಗೆಲ್ಲಿರಿ 4 ರಾಯಲ್ ಎನ್‌ಫೀಲ್ಡ್ ಬುಲೆಟ್ 350

ಸ್ಮಾರ್ಟ್‌ಫೋನ್ಸ್
iPhone 17, 256GB @ just ₹71,900/-*
Samsung Galaxy A36 @ just ₹30,499/-*
Oppo Reno 15 @ just ₹43,424/-*

ಲ್ಯಾಪ್‌ಟಾಪ್ಸ್
Asus TUF Gaming A15 (2025) @ just ₹70,990/-*
Lenovo LOQ @ just ₹86,990/-*
HP AMD R5 Quad Core 7520U @ just ₹44,490/-*

ಎಲ್‌ಇಡಿ ಟಿವಿ
Sony 75 @ just ₹1,03,990/-*
Samsung 65 @ just ₹55,990/-*
LG 55 @ just ₹41,995/-*

ಫ್ರಾಸ್ಟ್ ಫ್ರೀ ರೆಫ್ರಿಜರೇಟರ್ಸ್
LG 650 lt. @ just ₹78,799/-*
Liebherr 316 lt. @ just ₹31,990/-*
Haier 240 lt. @ just ₹19,990/-*

ವಾಶಿಂಗ್ ಮಶಿನ್ಸ್
LG 7kg @ just ₹28,190/-*
Bosch 10kg @ just ₹35,690/-*
Electrolux - Washer Dryer 9/6kg @ just ₹54,390/-*

ಡಿಶ್‌ವಾಶರ್ಸ್
LG 14-place @ just ₹46,499/-*
Bosch 14-place @ just ₹44,890/-*
IFB 14-place @ just ₹39,690/-*

ICICI Bank | HDFC BANK | Canara Bank | YES BANK | Bank of Baroda Credit Card | BAJAJ FINSERV | HDB FINANCIAL SERVICES | IDFC FIRST Bank

ರಾಯಲ್ ಬೋನಸ್

ಒಟ್ಟು ಕ್ಯಾಶ್ ಬೆನಿಫಿಟ್ಸ್ ₹70,000/-* ದ ವರೆಗೆ = ಇನ್ಸ್ಟಂಟ್ ಕ್ಯಾಶ್‌ಬ್ಯಾಕ್ ₹30,000/-* ದ ವರೆಗೆ + ಇನ್ಸ್ಟಂಟ್ ಡಿಸ್ಕೌಂಟ್ ₹30,000/-* ದ ವರೆಗೆ + ಅಪ್‌ಗ್ರೇಡ್ ಬೋನಸ್ ₹10,000/-* ದ ವರೆಗೆ

ಈ ಬಾರಿಯ ಗಣರಾಜ್ಯೋತ್ಸವದಲ್ಲಿ, ಸ್ಮಾರ್ಟ್ ಆಗಿ ಯೋಚಿಸಿ ಹಾಗೂ ಸ್ಮಾರ್ಟ್ ಆಗಿ ಶಾಪಿಂಗ್ ಮಾಡಿ. ಅದಕ್ಕಾಗಿ ಭೇಟಿ ನೀಡಿ "ಹರ್ಷ ರಾಯಲ್ ರಿಪಬ್ಲಿಕ್ ಡೀಲ್ಸ್" ಡಿಜಿಟಲ್ ಹಾಗೂ ಗೃಹೋಪಕರಣಗಳ ಅತಿದೊಡ್ಡ ಸಂಗ್ರಹದಲ್ಲಿ ನಿಮಗಿಷ್ಟವಾದುದನ್ನೇ ಆಯ್ಕೆ ಮಾಡಿ, ಅತ್ಯಧಿಕ ಕ್ಯಾಶ್‌ಬ್ಯಾಕ್, ಡಿಸ್ಕೌಂಟ್, ಎಕ್ಸ್‌ಚೇಂಜ್ ಬೋನಸ್ ಸೇರಿದಂತೆ ಹಲವು ಆಕರ್ಷಕ ಕೊಡುಗೆಗಳು ಜೊತೆಗೆ 4 ರಾಯಲ್ ಎನ್‌ಫೀಲ್ಡ್ ಬುಲೆಟ್ ಗೆಲ್ಲುವ ಅವಕಾಶ ನಿಮ್ಮದಾಗಲಿದೆ. ಇನ್ನೇಕೆ ತಡ! ಇಂದೇ 'ಹರ್ಷ'ಕ್ಕೆ ಬನ್ನಿ, ರಾಯಲ್ ಕೊಡುಗೆಗಳೊಂದಿಗೆ ಶಾಪಿಂಗ್ ಮಾಡಿ.

HARSHA Happiness. Redefined.

Conditions apply. All offers applicable on select models and brands. Models shown are indicative. Offer valid till stocks last. Finance at the sole discretion of the financier. Finance available only within city limits. Prices are inclusive of cashback, instant discount and exchange bonus. Win 4 Royal Enfield Bullet 350 through lucky draw.

BLUE STAR | BOSCH | Electrolux | Godrej | Haier | Hisense | IFB | LG | LIEBHERR | LLOYD | MITSUBISHI ELECTRIC | Panasonic | SAMSUNG | SONY | TCL | VOLTAS | Whirlpool

ಉಳ್ಳಾಲ್ ಮುಖ್ಯ ರಸ್ತೆ, ಜ್ಞಾನ ಗಂಗಾ ನಗರ, ಬೆಂಗಳೂರು - 56. • ಫೀಲ್ಡ್ ಮಾರ್ಷಲ್ ಜನರಲ್ ಕಾರ್ಯಪ್ಪ ಪಾರ್ಕ್ ಸಮೀಪ, ರಾಜರಾಜೇಶ್ವರಿ ನಗರ, ಬೆಂಗಳೂರು -98. eHarsha.India digital_harsha www.harshaindia.com

ಕ್ಷೌರಿಕರ ನಿಂದನೆ ತಡೆಗೆ ಕಾನೂನು

ಸವಿತಾ ಮಹರ್ಷಿ ಜಯಂತಿ ಕಾರ್ಯಕ್ರಮದಲ್ಲಿ ಶಿವರಾಜ ತಂಗಡಗಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸವಿತಾ ಸಮಾಜದವರನ್ನು ನಿಂದಿಸುವ ಪದ ಬಳಕೆಗೆ ಕಡಿವಾಣ ಹಾಕಲು ವಿಶೇಷ ಕಾನೂನು ರೂಪಿಸುವ ಬಗ್ಗೆ ಮುಖ್ಯಮಂತ್ರಿಯವರೊಂದಿಗೆ ಚರ್ಚೆ ನಡೆಸಲಾಗುವುದು ಎಂದು ಕನ್ನಡ ಮತ್ತು ಸಂಸ್ಕೃತಿ ಸಚಿವ ಶಿವರಾಜ ತಂಗಡಗಿ ತಿಳಿಸಿದರು.

ನಗರದಲ್ಲಿ ಭಾನುವಾರ ನಡೆದ ಸವಿತಾ ಮಹರ್ಷಿ ಜಯಂತಿ ಕಾರ್ಯಕ್ರಮ ದಲ್ಲಿ ಅವರು ಮಾತನಾಡಿದರು.

‘ಹುಟ್ಟಿನಿಂದ ಜಾತಿ ಬಂದಿಲ್ಲ. ವೃತ್ತಿಯಿಂದ ಜಾತಿ ಬಂದಿದೆ. ಯಾರೂ ಯಾವುದೇ ಜಾತಿಯನ್ನು ಆಯ್ಕೆ ಮಾಡಿಕೊಂಡು ಹುಟ್ಟಿರುವುದಿಲ್ಲ. ನಾನು ಕೂಡ ಸಣ್ಣ ಸಮಾಜದಿಂದ ಬಂದವನು. ನಿಂದನಾತ್ಮಕ ಪದ ಬಳಸುವವರಿಗೆ ಹೆದರಿಕೆ ಹುಟ್ಟಬೇಕಿದ್ದರೆ ಅವರಿಗೆ ಶಿಕ್ಷೆಯಾಗಬೇಕು. ಶಿಕ್ಷೆಯಾಗಬೇಕಾದರೆ ಅದಕ್ಕೆ ಸರಿಯಾದ ಕಾನೂನು ಬೇಕು’ ಎಂದು ಹೇಳಿದರು.

‘ಸವಿತಾ ಸಮುದಾಯದವರು ಒಗ್ಗಟ್ಟಿನಿಂದ ಮುನ್ನಡೆಯಬೇಕು. ಸಂವಿಧಾನ ಶಿಲ್ಪಿ ಡಾ.ಬಿ.ಆರ್. ಅಂಬೇಡ್ಕರ್ ಹೇಳಿದಂತೆ ಶಿಕ್ಷಣ, ಸಂಘಟನೆ ಹಾಗೂ ಹೋರಾಟ ತತ್ವಗಳನ್ನು ಅಳವಡಿಸಿಕೊಳ್ಳಬೇಕು. ಸಣ್ಣ ಜಾತಿಗಳು ಮೊದಲು ಒಗ್ಗಟ್ಟಾಗುವ ಅಗತ್ಯವಿದೆ. ಆದರೆ, ಒಗ್ಗಟ್ಟಿಗೆ ವಿರುದ್ಧವಾಗಿ ಅಪಸ್ವರ ಆಯಾ ಸಮಾಜದಿಂದಲೇ ಮೊದಲು ಬರುತ್ತಿರುವುದು ವಿಪರ್ಯಾಸ’ ಎಂದರು.

ಕ್ಷೌರ ಮಾಡುವ ಮೂಲಕ ಜನರನ್ನು ಸ್ವಚ್ಛವಾಗಿ ಇಡುವ ಸಮಾಜ ಇದು. ಹಡಪದ ಅಪ್ಪಣ್ಣ ಮತ್ತು ಸವಿತಾ ಮಹರ್ಷಿಗಳು ಒಂದೇ ಕಾಲದಲ್ಲಿ ದೀಕ್ಷೆ ತೆಗೆದುಕೊಂಡವರು. ಈ ಎರಡು ಸಮುದಾಯದವರ ವೃತ್ತಿ ಒಂದೇ. ಜೊತೆಗೆ ಮಂಗಳವಾದ್ಯ ನುಡಿಸುವ ಕಸುಬನ್ನೂ ಸವಿತಾ ಸಮಾಜ ಮಾಡುತ್ತಿದೆ ಎಂದು ವಿವರಿಸಿದರು.

ಸವಿತಾ ಸಮಾಜ ಅಭಿವೃದ್ಧಿ ನಿಗಮದ ಅಧ್ಯಕ್ಷ ಎಂ.ಎಸ್. ಮುತ್ತುರಾಜ್ ಮಾತನಾಡಿ, ‘ನಮ್ಮಲ್ಲಿ ಕೀಳರಿಮೆ ಹುಟ್ಟಿಸುವ ರೀತಿಯಲ್ಲಿ ನಿಂದನಾತ್ಮಕ ಪದವನ್ನು ಎಲ್ಲೆಡೆ ಬಳಸುತ್ತಿದ್ದಾರೆ. ನಾವು ಆರ್ಥಿಕವಾಗಿ ಬಲಿಷ್ಠರಾಗಿದ್ದರೆ ಯಾರೂ ನಿಂದಿಸುತ್ತಿರಲಿಲ್ಲ. ಎಲ್ಲ ಕ್ಷೇತ್ರದಲ್ಲಿ ನಮ್ಮ ಸಮಾಜದವರು ಇದ್ದರೂ ಜಾತಿ ಹೇಳಿಕೊಳ್ಳಲು ಸಂಕೋಚ ಪಡುತ್ತಿದ್ದಾರೆ. ನಿಂದನೆ ಮಾಡುವುದನ್ನು ನಿಯಂತ್ರಿಸಲು ಕ್ರಮ ಕೈಗೊಳ್ಳಬೇಕು’ ಎಂದು ಆರಂಭದಲ್ಲಿ ಸಚಿವರನ್ನು ಒತ್ತಾಯಿಸಿದ್ದರು.

ಸವಿತಾ ಮಹರ್ಷಿ ಭಾವಚಿತ್ರಕ್ಕೆ ಶಿವರಾಜ ತಂಗಡಗಿ ಪುಷ್ಪ ನಮನ ಸಲ್ಲಿಸಿದರು. ಎಂ.ಎಸ್. ಮುತ್ತುರಾಜ್, ಡಿ.ಆರ್. ಕೃಷ್ಣಪ್ಪ, ಕೆ.ಎಂ. ಗಾಯಿತ್ರಿ, ಬಲವಂತರಾವ್ ಪಾಟೀಲ ಉಪಸ್ಥಿತರಿದ್ದರು — ಪ್ರಜಾವಾಣಿ ಚಿತ್ರ

ಏನು ಕ್ರಮ ಕೈಗೊಂಡಿದ್ದೀರಿ: ಸಚಿವರಿಗೆ ಸಭಿಕರ ಪ್ರಶ್ನೆ

‘ಇತ್ತೀಚೆಗೆ ವಿಧಾನ ಪರಿಷತ್ ಸದಸ್ಯರೊಬ್ಬರು ಕೂಡ ನಿಂದನಾತ್ಮಕ ಪದ ಬಳಸಿದ್ದರು. ಏನು ಕ್ರಮ ಕೈಗೊಂಡಿದ್ದೀರಿ? ಕಾನೂನು ಮಾಡಲು ಅನುದಾನವೇನು ಬೇಕಾಗಿಲ್ಲ’ ಎಂದು ಸಭೆಯಲ್ಲಿದ್ದ ನಿವೃತ್ತ ಪೊಲೀಸ್ ಇನ್‌ಸ್ಪೆಕ್ಟರ್ ನಾರಾಯಣ ಅವರು ತಿಳಿಸಿದರು.

‘ಎಲ್ಲರೂ ಬನ್ನಿ ನಾನೇ ಮುಖ್ಯಮಂತ್ರಿ ಬಳಿ ಕರೆದುಕೊಂಡು ಹೋಗಿ ನಿಂದನಾ ಪದ ಬಳಸುವುದನ್ನು ನಿಯಂತ್ರಿಸಲು ಕಾನೂನು ಮಾಡಲು ಒತ್ತಾಯಿಸೋಣ. ನೀವೇ ದಿನಾಂಕ ನಿಗದಿಪಡಿಸಿ’ ಎಂದು ಸಚಿವ ಶಿವರಾಜ ತಂಗಡಗಿ ಅವರು ಉತ್ತರಿಸಿದರು.

‘ಜಾತಿ ನಿಂದನೆ ಪದಗಳನ್ನು ಬಳಸುವವರ ವಿರುದ್ಧ ಕಾನೂನು ಮಾಡಲಾಗುವುದು ಎಂದು ರಾಜಕಾರಣಿಗಳು ಹೇಳುವುದನ್ನು ನಾನು ಬಾಲ್ಯದಿಂದಲೂ ಕೇಳಿಕೊಂಡೇ ಬಂದಿದ್ದೇನೆ. ಯಾರೂ ಕ್ರಮ ಕೈಗೊಂಡಿಲ್ಲ’ ಎಂದು ನಾರಾಯಣ ಅವರು ಅಸಮಾಧಾನ ವ್ಯಕ್ತಪಡಿಸಿದರು.

‘ನಿಮ್ಮಲ್ಲೇ ಒಗ್ಗಟ್ಟಿಲ್ಲ. ಉತ್ತರ ಕರ್ನಾಟಕ–ದಕ್ಷಿಣ ಕರ್ನಾಟಕ, ಸಸ್ಯಾಹಾರಿ–ಮಾಂಸಾಹಾರಿ ಎಂದು ಗುಂಪುಗಳನ್ನು ಮಾಡಿಕೊಂಡಿದ್ದೀರಿ. ಸಮಾಜದಲ್ಲಿ ಏನೇ ಇರಲಿ. ಎಲ್ಲರೂ ಒಗ್ಗಟ್ಟಾಗಿ ರಾಜಕೀಯ ಶಕ್ತಿ ಪ್ರದರ್ಶಿಸಿದರೆ ಸಮಸ್ಯೆಗಳು ಸರಿಯಾಗಲು ಸಾಧ್ಯ. ಬಜೆಟ್ ಅಧಿವೇಶನದ ಮೊದಲು ಅಥವಾ ನಂತರ ಮುಖ್ಯಮಂತ್ರಿ ಬಳಿಗೆ ನಿಯೋಗ ಹೋಗೋಣ’ ಎಂದು ಸಚಿವರು ತಿಳಿಸಿದರು.

ಸಂಚಾರ ದಟ್ಟಣೆ: 5 ವರ್ಷಗಳಲ್ಲಿ ₹ 2.50 ಲಕ್ಷ ಕೋಟಿ ವೆಚ್ಚ- ಡಿಕೆಶಿ

ಬೆಂಗಳೂರು: ‘ನಗರದ ಸಂಚಾರ ದಟ್ಟಣೆ ನಿಯಂತ್ರಿಸಲು ಐದು ವರ್ಷಗಳಲ್ಲಿ ಮೂಲಸೌಕರ್ಯ ಅಭಿವೃದ್ಧಿಗೆ ₹ 2.50 ಲಕ್ಷ ಕೋಟಿ ವೆಚ್ಚ ಮಾಡಲಾಗುತ್ತಿದೆ’ ಎಂದು ಬೆಂಗಳೂರು ಅಭಿವೃದ್ಧಿ ಸಚಿವರೂ ಆಗಿರುವ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಿಳಿಸಿದರು.

ಸುದ್ದಿಗಾರರ ಜೊತೆ ಭಾನುವಾರ ಮಾತನಾಡಿದ ಅವರು, ‘ಸಂಚಾರ ದಟ್ಟಣೆ ನಿಯಂತ್ರಿಸುವ ಉದ್ದೇಶದಿಂದ ಬೆಂಗಳೂರು ಬಿಸಿನೆಸ್ ಕಾರಿಡಾರ್ ನಿರ್ಮಿಸಲಾಗುತ್ತಿದೆ. ಜೊತೆಗೆ, ಟನಲ್ ರಸ್ತೆಗಳು, 123 ಕಿ.ಮೀ ಎಲಿವೇಟೆಡ್ ಕಾರಿಡಾರ್‌ಗಳು, 300 ಕಿ.ಮೀ ಉದ್ದದ ಬಫರ್ ರಸ್ತೆಗಳನ್ನು ನಿರ್ಮಿಸಲಾಗುತ್ತಿದೆ’ ಎಂದು ಹೇಳಿದರು.

‘ಬಫರ್ ರಸ್ತೆ ಬಗ್ಗೆ ಘೋಷಣೆ ಮಾಡಿದಾಗ ಅನೇಕರು ನಕ್ಕಿದ್ದರು. ಟೀಕೆ ಮಾಡಿದ್ದರು.ಈಜಿಪುರ ಬಳಿ ಕೆಲಸ ನಡೆಯು ತ್ತಿದೆ. ಅಲ್ಲಿ ಹೇಗಿದೆ ಎಂದು ನೀವೇ (ಮಾಧ್ಯಮಗಳು) ನೋಡಿ. ಈ ಯೋಜನೆಗೆ ಮಿಲಿಟರಿಯವರು ಜಾಗ ಬಿಟ್ಟುಕೊಟ್ಟಿದ್ದಾರೆ. ಈ ರಸ್ತೆಯಿಂದ ಆಗುತ್ತಿರುವ ಬದಲಾವಣೆ ನಿಮಗೇ ಅರ್ಥವಾಗುತ್ತದೆ’ ಎಂದರು.

ಟನಲ್ ರಸ್ತೆ ವಿಚಾರವಾಗಿ ಬಿಜೆಪಿ ಶಾಸಕರು, ಸಂಸದರು ಟೀಕೆ ಮಾಡುತ್ತಿರುವ ಬಗ್ಗೆ ಕೇಳಿದಾಗ, ‘ಅವರ ಎಲ್ಲ ಟೀಕೆಗಳಿಗೆ ಕೇಂದ್ರ ಸಚಿವರಾದ ನಿತಿನ್ ಗಡ್ಕರಿ ಅವರೇ ಉತ್ತರ ನೀಡಿದ್ದಾರೆ. ಹೀಗಾಗಿ, ನಾನು ಅವರಿಗೆ ಉತ್ತರ ನೀಡುವುದಿಲ್ಲ’ ಎಂದರು.

ಬೈಕ್ ಟ್ಯಾಕ್ಸಿ: ಮೇಲ್ಮನವಿ ಸಲ್ಲಿಸಲು ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೈಕ್ ಟ್ಯಾಕ್ಸಿಗಳ ಪರವಾಗಿ ಬಂದಿರುವ ಹೈಕೋರ್ಟ್ ಆದೇಶವನ್ನು ಪ್ರಶ್ನಿಸಿ ರಾಜ್ಯ ಸರ್ಕಾರವು ಸುಪ್ರೀಂಕೋರ್ಟ್‌ನಲ್ಲಿ ಮೇಲ್ಮನವಿ ಸಲ್ಲಿಸ ಬೇಕು. ಅಲ್ಲಿವರೆಗೆ ಬೈಕ್ ಟ್ಯಾಕ್ಸಿ ಸಂಚಾರವನ್ನು ನಿರ್ಬಂಧಿಸಬೇಕು ಎಂದು ರಾಜ್ಯ ಖಾಸಗಿ ಸಾರಿಗೆ ಸಂಘಗಳ ಒಕ್ಕೂಟದ ಅಧ್ಯಕ್ಷ ಎಸ್. ನಟರಾಜ ಶರ್ಮ ಒತ್ತಾಯಿಸಿದ್ದಾರೆ.

ಎಸ್. ನಟರಾಜ ಶರ್ಮ

‘ಬಿಳಿ ಅಥವಾ ಹಳದಿ ಫಲಕಗಳ (ನಂಬರ್ ಪ್ಲೇಟ್) ಬೈಕ್ ಟ್ಯಾಕ್ಸಿಗಳಿಗೆ ಅವಕಾಶ ನೀಡಬಾರದು ಎಂದು ಖಾಸಗಿ ಸಾರಿಗೆ ಸಂಘಟನೆಗಳ ಒಕ್ಕೂಟವು ಪ್ರತಿಪಾದಿಸುತ್ತಲೇ ಬಂದಿದೆ. ಸರ್ಕಾರವು ಸಮಿತಿ ರಚಿಸಿ ವರದಿಯನ್ನು ಕೂಡ ಸಲ್ಲಿಸಿತ್ತು. ಆಟೊ ಚಾಲಕರ ಪರವಾಗಿ ನಾವು ಕೋರಿದ ಹಾಗೆ ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಅವರು ಅಡ್ವೋಕೆಟ್ ಜನರಲ್ ಕಡೆಯಿಂದಲೇ ವಾದ ಮಾಡಿಸಿದ್ದರೂ, ನಮ್ಮ ವಾದವನ್ನು ಗಣನೆಗೆ ತೆಗೆದುಕೊಂಡಿಲ್ಲ ಎಂದು ತಿಳಿಸಿದ್ದಾರೆ. ಈಗ ಹೈಕೋರ್ಟ್ ಆದೇಶ ಹೊರಬಂದಿದೆ. ಆದೇಶದಲ್ಲಿ ಹಲವು ನ್ಯೂನತೆಗಳಿವೆ. ರಾಜ್ಯ ಸರ್ಕಾರವು ಮೇಲ್ಮನವಿ ಸಲ್ಲಿಸಲು ಮತ್ತು ಬೈಕ್ ಟ್ಯಾಕ್ಸಿ ಸೇವೆ ನಿರ್ಬಂಧಿಸಲು ಒತ್ತಾಯಿಸಿ ಲಿಖಿತವಾಗಿ ಮನವಿ ಸಲ್ಲಿಸಲಾಗುವುದು ಎಂದು ಹೇಳಿಕೆ ನೀಡಿದ್ದಾರೆ.

ಶ್ರೀ ಸಿದ್ದರಾಮಯ್ಯ
ಸನ್ಮಾನ್ಯ ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ

ಶ್ರೀ ಡಿ. ಕೆ. ಶಿವಕುಮಾರ್
ಮಾನ್ಯ ಉಪ ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ

ಮಾನಸಿಕ ಕಾಯಿಲೆಗಳ ಕುರಿತು ಮಾಹಿತಿಗಳು

ದೆವ್ವ ಭೂತಗಳ ಚೇಷ್ಟೆಯಿಂದ, ಮಾಟ ಮಂತ್ರಗಳಿಂದ, ಪೂರ್ವಜನ್ಮದ ಪಾಪಗಳಿಂದ, ಮದ್ದು ಹಾಕುವುದರಿಂದ ಮಾನಸಿಕ ಕಾಯಿಲೆಗಳು ಬರುವುದಿಲ್ಲ. ಮಿದುಳಿನಲ್ಲಿ ಆಗುವ ಕೆಲವು ಬದಲಾವಣೆಗಳು, ಮಿದುಳಿನ ಕಾಯಿಲೆಗಳು, ವಾತಾವರಣದಲ್ಲಿ ಕಂಡು ಬರುವ ತೊಂದರೆಗಳು, ಕಷ್ಟನಷ್ಟಗಳು, ಮೇಲಿಂದ ಮೇಲೆ ಮನಸ್ಸಿಗೆ ಆಗುವ ನೋವು ನಿರಾಶೆಗಳು, ಮದ್ಯಪಾನ ಮತ್ತು ಮಾದಕ ವಸ್ತುಗಳ ಸೇವನೆ ಇವುಗಳಿಂದ ಮಾನಸಿಕ ಕಾಯಿಲೆಗಳು ಬರುತ್ತವೆ.

ಮಾನಸಿಕ ಅಸ್ವಸ್ಥರು ತಮ್ಮ ಚಿಕಿತ್ಸೆಗಾಗಿ ಮುಂಚಿತ ನಿರ್ದೇಶನ ನೀಡಬಹುದು ಮತ್ತು ತಮ್ಮ ಪ್ರತಿನಿಧಿಗಳನ್ನು ನಾಮ ನಿರ್ದೇಶನ ಮಾಡಬಹುದು (ಮಾನಸಿಕ ಆರೋಗ್ಯ ಆರೈಕೆ ಕಾಯಿದೆ 2017).

ಮಾನಸಿಕ ಆರೋಗ್ಯ ಆರೈಕೆ ಕಾಯಿದೆ 2017 ರ ಪ್ರಕಾರ ಮಾನಸಿಕ ಅಸ್ವಸ್ಥರ ಹಕ್ಕುಗಳು ಕುರಿತು ಮಾಹಿತಿಗಳು

☑ “ಉತ್ತಮ ಗುಣಮಟ್ಟದ ಮಾನಸಿಕ ಚಿಕಿತ್ಸೆ ಪಡೆಯುವ ಹಕ್ಕು, ಸಮುದಾಯದಲ್ಲಿ ಜೀವಿಸುವ ಹಕ್ಕು, ಚಿಕಿತ್ಸಾ ಸಮಯದಲ್ಲಿ ಘನತೆಯುಳ್ಳ ಸಮಾನ ಚಿಕಿತ್ಸೆ ಪಡೆಯುವ ಹಕ್ಕು, ಅಂಬ್ಯುಲೆನ್ಸ್‌ಸೇವೆ ಪಡೆಯುವ ಹಕ್ಕು, ಆರೋಗ್ಯ ವಿಮೆ ಪಡೆಯುವ ಹಕ್ಕು” ಹಾಗೂ ಸೇವೆಗಳಲ್ಲಿನ ಕೊರತೆಗಳ ಬಗ್ಗೆ ದೂರು ನೀಡುವ ಹಕ್ಕು

ಮಾನಸಿಕ ಆರೋಗ್ಯ ಆರೈಕೆಕಾಯಿದೆ 2017 ರ ಅನ್ವಯ ಮಾನಸಿಕ ಆರೋಗ್ಯ ಸಂಸ್ಥೆಗಳು ಮತ್ತು ಮಾನಸಿಕ ಆರೋಗ್ಯ ವೃತ್ತಿಪರರು ಕಡ್ಡಾಯ ನೋಂದಣಿ ಮಾಡುವ ಬಗ್ಗೆ

☑ ಸೆಕ್ಷನ್ 65 (1) ರ ಪ್ರಕಾರ “ಕರ್ನಾಟಕ ರಾಜ್ಯ ಮಾನಸಿಕ ಆರೋಗ್ಯ ಪ್ರಾಧಿಕಾರದಲ್ಲಿ ನೋಂದಣಿ ಮಾಡಿಸದೇ ಯಾವುದೇ ವ್ಯಕ್ತಿಯೂ/ಸಂಸ್ಥೆಯೂ ಮಾನಸಿಕ ಆರೋಗ್ಯ ಸಂಸ್ಥೆಯನ್ನು ಸ್ಥಾಪಿಸುವಂತಿಲ್ಲ ಅಥವಾ ನಡೆಸುವಂತಿಲ್ಲ” ರಾಜ್ಯದ ಸರ್ಕಾರಿ ಮತ್ತು ಖಾಸಗಿ ಮಾನಸಿಕ ಆರೋಗ್ಯ ಸಂಸ್ಥೆಗಳು /ದುಶ್ಚಟ ನಿವಾರಣಾ ಕೇಂದ್ರಗಳು/ ಪುನರ್ವಸತಿ ಕೇಂದ್ರಗಳು ಮತ್ತು ಮಾನಸಿಕ ಆರೋಗ್ಯ ವೃತ್ತಿಪರರು e-manas ಜಾಲತಾಣದ ಲಿಂಕ್ ಮೂಲಕ ನೋಂದಾಯಿಸುವುದು.
https://e-manas.karnataka.gov.in/mhms_mhd/#/

☑ ಮಾನಸಿಕ ಆರೋಗ್ಯ ಆರೈಕೆ ಕಾಯಿದೆ 2017 ರಡಿ ಸೆಕ್ಷನ್ 107 ರ ಪ್ರಕಾರ ಮಾನಸಿಕ ಆರೋಗ್ಯ ಸಂಸ್ಥೆಗಳು ನೋಂದಣಿ ಮಾಡದಿದ್ದಲ್ಲಿ ದಂಡಗಳು

ಮೊದಲನೆಯ ಉಲ್ಲಂಘನೆಯ ದಂಡ ರೂ.5000/- (ಕನಿಷ್ಠ) ರಿಂದ ರೂ.50,000/-
ಎರಡನೆಯ ಉಲ್ಲಂಘನೆಯ ದಂಡ ರೂ.50,000/- (ಕನಿಷ್ಠ) ರಿಂದ ರೂ.2,00,000/-
ಮೂರನೆಯ ಉಲ್ಲಂಘನೆಯ ದಂಡ ರೂ.2,00,000/- (ಕನಿಷ್ಠ) ರಿಂದ ರೂ.5,00,000/-
ನೋಂದಾಯಿತವಲ್ಲದ ಮಾನಸಿಕ ಆರೋಗ್ಯ ಸಂಸ್ಥೆಯಲ್ಲಿ ಸೇವೆಸಲ್ಲಿಸುತ್ತಿರುವ ಮಾನಸಿಕ ಆರೋಗ್ಯ ವೃತ್ತಿಪರರಿಗೆ ರೂ.25,000/- ವರೆಗಿನ ದಂಡ ವಿಧಿಸ ಬಹುದಾಗಿದೆ.

ಸಾರ್ವಜನಿಕ ಹಿತಕ್ಕಾಗಿ ಪ್ರಕಟಣೆ ಕರ್ನಾಟಕ ರಾಜ್ಯ ಮಾನಸಿಕ ಆರೋಗ್ಯ ಪ್ರಾಧಿಕಾರ

ಮನೋರೋಗಕ್ಕೆ ಮದ್ದಿದೆ. ಯಾವುದೇ ಮಾನಸಿಕ ಸಮಸ್ಯೆಗಳಿಗೆ ಹತ್ತಿರದ ಸರ್ಕಾರಿ ಆಸ್ಪತ್ರೆಗೆ ಭೇಟಿ ನೀಡಿ

ಟೆಲಿ ಮನಸ್
ಶುಲ್ಕ ರಹಿತ ದೂರವಾಣಿ ಸಂಖ್ಯೆ 14416 ಗೆ ಕರೆ ಮಾಡಿ ಸಹಾಯ ಪಡೆಯಿರಿ.

ಶ್ರೀ ದಿನೇಶ್ ಗುಂಡೂರಾವ್
ಮಾನ್ಯ ಆರೋಗ್ಯ ಸಚಿವರು ಸಭೆಯನ್ನು ಉದ್ದೇಶಿಸುತ್ತಿರುವುದು

"ದೇಶದ ಕಾಡು, ವನ್ಯಜೀವಿ, ನದಿಗಳು ಒಳಗೊಂಡಂತೆ ಪರಿಸರ ಉಳಿಸಿ ಬೆಳೆಸುವುದು" – ಪ್ರತಿಯೊಬ್ಬ ಭಾರತೀಯನ ಸಂವಿಧಾನಬದ್ಧ ಮೂಲಭೂತ ಕರ್ತವ್ಯ | ನಿಮ್ಮ ಆರೋಗ್ಯ, ನಮ್ಮ ಆದ್ಯತೆ.

ಕರ್ನಾಟಕದಲ್ಲಿರುವ ಶೋರೂಂಗಳು: ಎಂ.ಜಿ ರೋಡ್ | ಡಿಕೆನ್ಸನ್ ರಸ್ತೆ | ಜಯನಗರ | ರಾಜಾಜಿನಗರ | ಕೋರಮಂಗಲ | ಫಿನಿಕ್ಸ್ ಮಾರ್ಕೆಟ್‌ಸಿಟಿ | ಮಾರತ್ತಹಳ್ಳಿ | ಬನ್ನೇರುಘಟ್ಟ ರಸ್ತೆ | ಕಮ್ಮನಹಳ್ಳಿ | ಮಲ್ಲೇಶ್ವರಂ | ಹೆಚ್ ಎಸ್ ಆರ್ ಲೇಔಟ್ | ಬನಶಂಕರಿ | ಯಲಹಂಕ | ಫೋರಮ್ ಸೌತ್ ಬೆಂಗಳೂರು | ಆರ್‌ಆರ್ ನಗರ | ಫೀನಿಕ್ಸ್ ಮಾಲ್ ಆಫ್ ಏಷ್ಯಾ, ಹೆಬ್ಬಾಳ | ವೈಟ್‌ಫೀಲ್ಡ್ | ಸರ್ಜಾಪುರ ರಸ್ತೆ | ಹೆಸರಘಟ್ಟ ಮುಖ್ಯ ರಸ್ತೆ | ಹೆಣ್ಣೂರು ಮುಖ್ಯ ರಸ್ತೆ | ನಾಗರಭಾವಿ | ನ್ಯೂ ಬೆಲ್ ರಸ್ತೆ | ಮೈಸೂರು | ಮಂಡ್ಯ | ಹಾಸನ | ಚಿಕ್ಕಮಗಳೂರು | ಮಂಗಳೂರು | ಉಡುಪಿ | ಬೆಳಗಾವಿ | ಹುಬ್ಬಳ್ಳಿ | ಧಾರವಾಡ | ವಿಜಯಪುರ | ಕಲಬುರಗಿ | ಬೀದರ್ | ಬಳ್ಳಾರಿ | ದಾವಣಗೆರೆ | ಶಿವಮೊಗ್ಗ | ತುಮಕೂರು | ರಾಯಚೂರು | ಕೋಲಾರ | ಹೊಸಪೇಟೆ | ಚಿತ್ರದುರ್ಗ | ಬಾಗಲಕೋಟೆ
09562 916 916 | BUY ONLINE AT: malabargoldanddiamonds.com | OVER 419 SHOWROOMS ACROSS 14 COUNTRIES

ಮಾಹೆಥಾನ್ ಓಟ: ಉತ್ಸಾಹದ ನೋಟ

‘ಹಸಿರಿಗಾಗಿ ಓಡಿ, ಸ್ವಚ್ಛಂದವಾಗಿ ಉಸಿರಾಡಿ’ ಧ್ಯೇಯದ ಕಾರ್ಯಕ್ರಮ ● 10 ಸಾವಿರಕ್ಕೂ ಹೆಚ್ಚು ಕ್ರೀಡಾಸಕ್ತರು ಭಾಗಿ

ಪ್ರಜಾವಾಣಿ ವಾರ್ತೆ

ಯಲಹಂಕ: ಚುಮು ಚುಮು ಚಳಿಯನ್ನೂ ಲೆಕ್ಕಿಸದೇ ಸಾವಿರಾರು ಜನರು ಉತ್ಸಾಹದಿಂದ ಓಡಿದರು. ವಿದ್ಯಾರ್ಥಿಗಳು, ವೃತ್ತಿಪರ ಕ್ರೀಡಾಪಟುಗಳು, ಕಾರ್ಪೊರೇಟ್ ತಂಡಗಳು, ರಕ್ಷಣಾ ಮತ್ತು ಪೊಲೀಸ್ ಸಿಬ್ಬಂದಿ, ಫಿಟ್‌ನೆಸ್ ಪ್ರಿಯರು, ನಾಲ್ಕು ವರ್ಷದ ಪುಟಾಣಿಗಳಿಂದ ಹಿಡಿದು 94 ವರ್ಷದ ಹಿರಿಯರವರೆಗೆ ವಿವಿಧ ವಯೋಮಾನದವರು ಓಡಿ ಖುಷಿಪಟ್ಟರು.

ಮಣಿಪಾಲ್ ಅಕಾಡೆಮಿ ಆಫ್ ಹೈಯರ್ ಎಜುಕೇಶನ್ (ಮಾಹೆ) ವಿಶ್ವವಿದ್ಯಾಲಯದ ಬೆಂಗಳೂರು ಕ್ಯಾಂಪಸ್‌ನಲ್ಲಿ ‘ಹಸಿರಿಗಾಗಿ ಓಡಿ, ಸ್ವಚ್ಛಂದವಾಗಿ ಉಸಿರಾಡಿ’ ಎಂಬ ಧ್ಯೇಯದೊಂದಿಗೆ ಭಾನುವಾರ ಆಯೋಜಿಸಿದ್ದ ‘ಮಾಹೆಥಾನ್ 2026’ ಓಟದಲ್ಲಿ 10 ಸಾವಿರಕ್ಕೂ ಹೆಚ್ಚು ಕ್ರೀಡಾಸಕ್ತರು ಭಾಗಿಯಾದರು.

ಪೋಷಕರು ಪುಟ್ಟ ಕಂದಮ್ಮಗಳನ್ನೂ ಕರೆದುಕೊಂಡು ಬಂದು ಅವರೊಂದಿಗೆ ಓಡಿ ಸಂಭ್ರಮಿಸಿದರು.

‘ಪ್ರಜಾವಾಣಿ’ ಮತ್ತು ‘ಡೆಕ್ಕನ್ ಹೆರಾಲ್ಡ್’ ಮಾಧ್ಯಮ ಸಹಯೋಗದಲ್ಲಿ ಆಕ್ಸಿಸ್ ಬ್ಯಾಂಕ್ ಸಹಕಾರದೊಂದಿಗೆ ಏರ್ಪಡಿಸಿದ್ದ ಈ ಓಟದಲ್ಲಿ ಆರೋಗ್ಯ, ಸಮುದಾಯದ ಸಹಭಾಗಿತ್ವ ಮತ್ತು ಸುಸ್ಥಿರ ಬದುಕಿನ ಮಹತ್ವವನ್ನು ಸಾರಿದ್ದು ವಿಶೇಷವಾಗಿತ್ತು. ಮಾಹೆ ಬೆಂಗಳೂರು ಕ್ಯಾಂಪಸ್‌ನ ಆವರಣದಿಂದ ಆರಂಭಗೊಂಡ ಓಟ ನಿಗದಿತ ಮಾರ್ಗದಲ್ಲಿ ಮುಂದುವರಿದು ಕ್ಯಾಂಪಸ್‌ನಲ್ಲಿಯೇ ಮುಕ್ತಾಯಗೊಂಡಿತು.

ಕಾರ್ಯಕ್ರಮಕ್ಕೆ ಚಾಲನೆ ನೀಡಿದ ಶಾಸಕ ಎಸ್.ಆರ್.ವಿಶ್ವನಾಥ್ ಮಾತನಾಡಿ, ‘ಗುಣಮಟ್ಟದ ಶಿಕ್ಷಣ ಮತ್ತು ಆರೋಗ್ಯ ಸೇವೆಯನ್ನು ಜನಸಾಮಾನ್ಯರ ಬಳಿಗೆ ಕೊಂಡೊಯ್ಯುವಲ್ಲಿ ಮಣಿಪಾಲ್ ಸಮೂಹ ಸಂಸ್ಥೆಗಳ ಕಾರ್ಯ ಶ್ಲಾಘನೀಯ. ಬೆಂಗಳೂರು ಹಾಗೂ ಇತರೆ ಪ್ರದೇಶಗಳಿಂದ ಸ್ಪರ್ಧಿಗಳು ಬಂದಿರುವುದು ಮಣಿಪಾಲ್ ಸಂಸ್ಥೆಗಳ ಮೇಲೆ ಜನರಿಗಿರುವ ವಿಶ್ವಾಸ ಮತ್ತು ನಂಬಿಕೆಯನ್ನು ಪ್ರತಿಬಿಂಬಿಸುತ್ತದೆ. ಈ ರೀತಿಯ ಕಾರ್ಯಕ್ರಮಗಳು ನಮ್ಮ ಭಾಗದ ಜನರಿಗೆ ಹೊಸ ಅವಕಾಶಗಳನ್ನು ತೆರೆಯುತ್ತವೆ’ ಎಂದು ಹೇಳಿದರು.

ಮಾಹೆ ಬೆಂಗಳೂರು ಕ್ಯಾಂಪಸ್‌ನ ಸಹ ಕುಲಪತಿ ಡಾ.ಮಧು ವೀರರಾಘವನ್ ಮಾತನಾಡಿ, ‘ಮಾಹೆಥಾನ್ ಓಟದಲ್ಲಿ ಪಾಲ್ಗೊಂಡಿರುವ ಪ್ರತಿ ಸ್ಪರ್ಧಿಯಲ್ಲೂ ಕಾಣುತ್ತಿರುವ ಅದಮ್ಯ ಉತ್ಸಾಹ ಕಂಡು ಖುಷಿಯಾಗಿದೆ. ನಾವೆಲ್ಲರೂ ಒಗ್ಗೂಡಿ ಮಾಹೆ ಸಮುದಾಯಕ್ಕಾಗಿ ಒಂದು ಅದ್ಭುತ ಮೈಲಿಗಲ್ಲನ್ನು ನಿರ್ಮಿಸಿದ್ದೇವೆ’ ಎಂದು ತಿಳಿಸಿದರು.

ಹೆಚ್ಚುವರಿ ಕುಲಸಚಿವ ಡಾ. ರಾಘವೇಂದ್ರ ಪ್ರಭು ಮಾತನಾಡಿ, ‘ಪರಿಸರ ಜಾಗೃತಿ ಮತ್ತು ಸಮುದಾಯದ ಅಭಿವೃದ್ಧಿಗೆ ಮಾಹೆ ನೀಡುತ್ತಿರುವ ಕೊಡುಗೆಯನ್ನು ಮುಂದುವರಿಸುವ ನಿಟ್ಟಿನಲ್ಲಿ, ಪ್ರತಿವರ್ಷ ಜನವರಿ ನಾಲ್ಕನೇ ಭಾನುವಾರ ಮಾಹೆಥಾನ್ ಆಯೋಜಿಸಲಾಗುವುದು’ ಎಂದು ಘೋಷಿಸಿದರು.

ಆಕ್ಸಿಸ್ ಬ್ಯಾಂಕ್ ಲಿಮಿಟೆಡ್‌ನ ಉಪಾಧ್ಯಕ್ಷ ರಾಹುಲ್ ಮಾಥೂರ್, ಮಾಹೆ ಸಹ ಕುಲಪತಿ (ಆರೋಗ್ಯ ವಿಜ್ಞಾನ) ಡಾ. ಶರತ್ ಕೆ. ರಾವ್, ಸಿಒಒ ಆನಂದ್ ವೇಣುಗೋಪಾಲ್ ಉಪಸ್ಥಿತರಿದ್ದರು.

₹13.75 ಲಕ್ಷ ಬಹುಮಾನ

ಹಾಫ್ ಮ್ಯಾರಥಾನ್ (21.1ಕೆ), 10ಕೆ, 5ಕೆ ಹಾಗೂ 3ಕೆ ಫನ್ ರನ್ ಎಂಬ ಓಟದ ವಿಭಾಗಗಳನ್ನು ಆಯೋಜಿಸಲಾಗಿತ್ತು. ಸಶಸ್ತ್ರ ಪಡೆ ಸಿಬ್ಬಂದಿ ಅತ್ಯಂತ ಉತ್ಸಾಹದಿಂದ ಪಾಲ್ಗೊಂಡಿದ್ದು ವಿಶೇಷವಾಗಿತ್ತು. ಪ್ರತಿ ವಿಭಾಗದಲ್ಲೂ ಅತ್ಯುತ್ತಮ ಪ್ರದರ್ಶನ ನೀಡಿದ ವೇಗದ ಓಟಗಾರರನ್ನು ಗುರುತಿಸಿ, ಗೌರವಿಸಲಾಯಿತು. ಎಲ್ಲಾ ವಿಭಾಗಗಳ ವಿಜೇತರಿಗೆ ಒಟ್ಟು ₹13.75 ಲಕ್ಷ ಮೊತ್ತದ ನಗದು ಬಹುಮಾನ ವಿತರಿಸಲಾಯಿತು.

ಯಲಹಂಕದ ರಸ್ತೆಗಳ ಸುಧಾರಣೆಗೆ ಈಗಾಗಲೇ ಕ್ರಮ ಕೈಗೊಂಡಿದ್ದರೂ ರಸ್ತೆಗಳ ದುರಸ್ತಿ ಅಗತ್ಯವಿದೆ. ಮಾಹೆಥಾನ್-2027ರ ವೇಳೆಗೆ ಎಲ್ಲಾ ರಸ್ತೆಗಳು ಸುಸ್ಥಿತಿಯಲ್ಲಿರುವಂತೆ ನೋಡಿಕೊಳ್ಳುತ್ತೇನೆ

ಎಸ್.ಆರ್.ವಿಶ್ವನಾಥ್, ಯಲಹಂಕ ಶಾಸಕ

ಬೆಂಗಳೂರಿನಲ್ಲಿ ಭಾನುವಾರ ‘ಪ್ರಜಾವಾಣಿ’ ಮತ್ತು ‘ಡೆಕ್ಕನ್ ಹೆರಾಲ್ಡ್’ ಸಹಯೋಗದಲ್ಲಿ ಮಣಿಪಾಲ್ ಅಕಾಡೆಮಿ ಆಫ್ ಹೈಯರ್ ಎಜುಕೇಷನ್ (ಮಾಹೆ) ಆಯೋಜಿಸಿದ್ದ ಮ್ಯಾರಥಾನ್‌ನಲ್ಲಿ ಸಾವಿರಾರು ಜನರು ಸಂಭ್ರಮದಿಂದ ಓಡಿದರು.

ಪ್ರಜಾವಾಣಿ ಚಿತ್ರಗಳು: ರಂಜು ಪಿ.

ಮ್ಯಾರಥಾನ್‌ನಲ್ಲಿ ಮಕ್ಕಳ ಓಟದ ಸಡಗರ

30ಕ್ಕೆ ಸಂವಿಧಾನ ನಡಿಗೆ

ಪ್ರಜಾವಾಣಿ ವಾರ್ತೆ

ಸಂವಿಧಾನವೇ ಬೆಳಕು

ಬೆಂಗಳೂರು: ‘ಪ್ರಜಾವಾಣಿ’ ಮತ್ತು ‘ಡೆಕ್ಕನ್ ಹೆರಾಲ್ಡ್’ ವತಿಯಿಂದ ರಾಜ್ಯ ಸರ್ಕಾರದ ಸಮಾಜ ಕಲ್ಯಾಣ ಸಚಿವಾಲಯದ ಸಹಯೋಗ, ಬೆಂಗಳೂರು ವಿಶ್ವವಿದ್ಯಾಲಯದ ಸಹಕಾರದೊಂದಿಗೆ ಜ.30ರಂದು ಬೆಳಿಗ್ಗೆ 7ಕ್ಕೆ ‘ಸಂವಿಧಾನವೇ ಬೆಳಕು– ಹೆಜ್ಜೆಯಿಡು ಬೆಂಗಳೂರು’ ಸಂವಿಧಾನ ನಡಿಗೆ ಕಾರ್ಯಕ್ರಮವನ್ನು ಬೆಂಗಳೂರು ವಿಶ್ವವಿದ್ಯಾಲಯದ ಜ್ಞಾನಭಾರತಿಯ ವೆಂಕಟಗಿರಿ ಗೌಡ ಆಡಿಟೋರಿಯಂನಲ್ಲಿ ಹಮ್ಮಿಕೊಳ್ಳಲಾಗಿದೆ.

ಪ್ರಜಾಪ್ರಭುತ್ವದ ಆಶಯಗಳನ್ನು ಎತ್ತಿ ಹಿಡಿಯುವುದರೊಂದಿಗೆ ಮೌಲ್ಯ, ಹಕ್ಕು, ಮತ್ತು ಕರ್ತವ್ಯಗಳನ್ನು ಗೌರವಿಸುವ, ಅರಿವು ಮೂಡಿಸುವ ಉದ್ದೇಶದಿಂದ ಸಂವಿಧಾನ ನಡಿಗೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಸಂವಿಧಾನದ ಬಗ್ಗೆ ಜಾಗೃತಿ ಮೂಡಿಸುವ ವಿಶೇಷ ವಿಚಾರ ಸಂಕಿರಣದೊಂದಿಗೆ ಕಾರ್ಯಕ್ರಮ ಆರಂಭಗೊಳ್ಳಲಿದೆ. ನಂತರ ನಡಿಗೆಗೆ ಚಾಲನೆ ನೀಡಲಾಗುತ್ತದೆ. ಪ್ರವೇಶ ಉಚಿತವಾಗಿದ್ದು, ನೋಂದಣಿ ಕಡ್ಡಾಯವಾಗಿದೆ.

ಬೆಂಗಳೂರು ವಿಶ್ವವಿದ್ಯಾಲಯದೊಂದಿಗೆ ಸಂಯೋಜಿತವಾಗಿರುವ ಎಲ್ಲ ಕಾಲೇಜುಗಳ ಪದವಿ ವಿದ್ಯಾರ್ಥಿಗಳು ಭಾಗವಹಿಸಲು ಮುಕ್ತ ಅವಕಾಶ ಇದೆ. ನೋಂದಣಿ ಮಾಡಿಕೊಂಡವರಿಗೆ ಟಿ ಶರ್ಟ್ ಮತ್ತು ಕ್ಯಾಪ್ ನೀಡಲಾಗುವುದು ಎಂದು ಸಂಘಟಕರು ತಿಳಿಸಿದ್ದಾರೆ. ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡುವ ಮೂಲಕ ನೋಂದಣಿ ಮಾಡಿಕೊಳ್ಳ ಬಹುದು. ಮಾಹಿತಿಗೆ 9901918805 ಸಂಪರ್ಕಿಸಬಹುದು.

‘ತುಳು ಸಿನಿಮಾ ಕಡೆಗಣನೆ’

ಪುತ್ತೂರು (ದಕ್ಷಿಣ ಕನ್ನಡ): ‘ಬೆಂಗಳೂರು ಅಂತರರಾಷ್ಟ್ರೀಯ ಚಿತ್ರೋತ್ಸವದಲ್ಲಿ ತುಳು ಚಿತ್ರಗಳನ್ನು ಕಡೆಗಣಿಸಲಾಗಿದ್ದು ಇತರ ಭಾಷೆಯ ಚಿತ್ರಗಳಿಗೆ ಪ್ರೋತ್ಸಾಹ ನೀಡಲಾಗಿದೆ’ ಎಂದು ಚಲನಚಿತ್ರ ನಿರ್ದೇಶಕ ಎಸ್.ವಿ. ರಾಜೇಂದ್ರ ಸಿಂಗ್ ಬಾಬು ದೂರಿದ್ದಾರೆ. ಈ ಕುರಿತು ಮುಖ್ಯಮಂತ್ರಿಗೆ ಮನವಿ ಸಲ್ಲಿಸಿರುವುದಾಗಿ ಅವರು ತಿಳಿಸಿದ್ದಾರೆ.

ಇಲ್ಲಿ ನಡೆದ ಕೋಟಿ– ಚನ್ನಯ ಕಂಬಳದಲ್ಲಿ ಶನಿವಾರ ರಾತ್ರಿ ಪಾಲ್ಗೊಂಡ ಅವರು ಪುತ್ತೂರು ಶಾಸಕ, ಕಾಂಗ್ರೆಸ್‌ನ ಅಶೋಕ್ ರೈ ಅವರಿಗೂ ಮನವಿ ಸಲ್ಲಿಸಿ, ತುಳುನಾಡಿನ ಚಿತ್ರಗಳನ್ನು ಪ್ರೋತ್ಸಾಹಿಸುವಂತೆ ಸರ್ಕಾರವನ್ನು ಕೋರಲು ವಿನಂತಿಸಿದ್ದಾರೆ.

ಈ ಕುರಿತು ಭಾನುವಾರ ‘ಪ್ರಜಾವಾಣಿ’ ಜೊತೆ ಮಾತನಾಡಿದ ಅವರು ‘ಕಳೆದ ಬಾರಿ ಬೆಂಗಳೂರು ಅಂತರರಾಷ್ಟ್ರೀಯ ಚಿತ್ರೋತ್ಸವದಲ್ಲಿ ಅತ್ಯುತ್ತಮ 2ನೇ ಮತ್ತು 3ನೇ ಪ್ರಶಸ್ತಿಗಳನ್ನು ತುಳು ಚಿತ್ರಗಳು ಪಡೆದುಕೊಂಡಿದ್ದವು. ಈ ಬಾರಿ ಒಂದೇ ಒಂದು ತುಳು ಚಿತ್ರವನ್ನು ಪರಿಗಣಿಸಲಿಲ್ಲ. ತುಳುನಾಡಿನ ಅಸ್ಮಿತೆ ಬಿಂಬಿಸುವ ಕಂಬಳದ ಕುರಿತು ನಾನು ನಿರ್ದೇಶಿಸಿದ ಚಿತ್ರವನ್ನು ಸ್ಪರ್ಧೆಗೆ ಕಳುಹಿಸಿದ್ದೆ. ಅದನ್ನೂ ಕಡೆಗಣಿಸಲಾಗಿದೆ’ ಎಂದರು.

ರಾಜೇಂದ್ರ ಸಿಂಗ್ ಬಾಬು

ಕೆಪಿಎಸ್ ವಿಶೇಷ ಶಿಕ್ಷಕರ ನೇಮಕಕ್ಕೆ ನಿರ್ಧಾರ: ಮಧು ಬಂಗಾರಪ್ಪ

ಪ್ರಜಾವಾಣಿ ವಾರ್ತೆ

ಶಿವಮೊಗ್ಗ: ‘ರಾಜ್ಯದಲ್ಲಿ ಹೊಸದಾಗಿ ಆರಂಭಿಸಲಾಗುತ್ತಿರುವ 800 ಕೆಪಿಎಸ್ ಶಾಲೆಗಳಿಗೆ ವಿಶೇಷ ಶಿಕ್ಷಕರನ್ನು ನೇಮಕ ಮಾಡಿಕೊಳ್ಳಲು ನಿರ್ಧರಿಸಲಾಗಿದೆ. ಬಜೆಟ್‌ನಲ್ಲಿ ಅದಕ್ಕೆ ಅವಕಾಶ ಮಾಡಿಕೊಡುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಮನವಿ ಮಾಡಿರುವೆ’ ಎಂದು ಶಾಲಾ ಶಿಕ್ಷಣ ಹಾಗೂ ಸಾಕ್ಷರತಾ ಇಲಾಖೆ ಸಚಿವ ಮಧು ಬಂಗಾರಪ್ಪ ಹೇಳಿದರು.

ನಗರದಲ್ಲಿ ಭಾನುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕೆಪಿಎಸ್ ಶಾಲೆಗಳಲ್ಲಿ ಸಂಗೀತ, ಚಿತ್ರಕಲೆ, ದೈಹಿಕ ಶಿಕ್ಷಣ ಶಿಕ್ಷಕರು ಸೇರಿ ವಿಶೇಷ ಶಿಕ್ಷಕರನ್ನು ನೇಮಕ ಮಾಡಲಾಗುವುದು. ಹುದ್ದೆಗಳ ಸಂಖ್ಯೆ ಹಾಗೂ ವಿವರವನ್ನು ಶೀಘ್ರವೇ ಅಂತಿಮಗೊಳಿಸಲಾಗುವುದು ಎಂದರು.



ಮಧು ಬಂಗಾರಪ್ಪ

‘ರಾಜ್ಯದಲ್ಲಿ 1995ರಿಂದ 2005ರವರೆಗಿನ ಅನುದಾನರಹಿತ ಕನ್ನಡ ಶಾಲೆಗಳನ್ನು ಅನುದಾನಕ್ಕೆ ಒಳಪಡಿಸಲು ಈಚೆಗೆ ನಡೆದ ಬಜೆಟ್ ಪೂರ್ವಭಾವಿ ಸಭೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಎದುರು ಪ್ರಸ್ತಾವ ಸಲ್ಲಿಸಿದ್ದೇವೆ. ಅದಕ್ಕೆ ಪೂರಕ ಪ್ರತಿಕ್ರಿಯೆ ವ್ಯಕ್ತವಾಗಿದೆ’ ಎಂದು ಸಚಿವರು ಪ್ರತಿಕ್ರಿಯಿಸಿದರು.

ಸಿ.ಎಂ ಕಪ್ ಬ್ಯಾಡ್ಮಿಂಟನ್: ಜೆರ್ಸಿ ಬಿಡುಗಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘9 ಡ್ರೀಮ್ಸ್’ ಸಂಸ್ಥೆಯ ಆಶ್ರಯದಲ್ಲಿ ನಡೆಯುವ ‘ಸಿ.ಎಂ ಕಪ್ 2026’ ಬ್ಯಾಡ್ಮಿಂಟನ್ ಟೂರ್ನಿಯ ತಂಡಗಳ ಜರ್ಸಿಯನ್ನು ರಾಜ್ಯ ಪೊಲೀಸ್ ಮಹಾನಿರ್ದೇಶಕ ಎಂ.ಎ. ಸಲೀಂ ಅವರು ಭಾನುವಾರ ಅರಮನೆ ಮೈದಾನದಲ್ಲಿ ಬಿಡುಗಡೆ ಮಾಡಿದರು.

ಫೆ. 21 ಮತ್ತು 22ರಂದು ವಸಂತನಗರದ ಕರ್ನಾಟಕ ಬ್ಯಾಡ್ಮಿಂಟನ್ ಸಂಸ್ಥೆಯ ಕ್ರೀಡಾಂಗಣದಲ್ಲಿ ಟೂರ್ನಿ ನಡೆಯಲಿದೆ. ಅದಕ್ಕೆ ಪೂರ್ವಭಾವಿಯಾಗಿ ಆಟಗಾರರ ಆಯ್ಕೆ ಪ್ರಕ್ರಿಯೆ ನಡೆಯಿತು. ನಗರ ಪೊಲೀಸ್ ಆಯುಕ್ತ ಸೀಮಾಂತ್ ಕುಮಾರ್ ಸಿಂಗ್ ಮತ್ತು ಐಪಿಎಸ್ ಅಧಿಕಾರಿ ಅಲೋಕ್ ಕುಮಾರ್ ಉಪಸ್ಥಿತರಿದ್ದರು.

ಟೂರ್ನಿಯಲ್ಲಿ ಒಟ್ಟು 8 ಫ್ರ್ಯಾಂಚೈಸಿಗಳ ತಂಡಗಳು ಪ್ರಶಸ್ತಿಗೆ ಪೈಪೋಟಿ ನಡೆಸಲಿವೆ. ದಿ ಎಲೀಟ್ ಬ್ಯಾಡ್ಮಿಂಟನ್, ಆಸ್ಥೆಟಿಕ್ ಆ್ಯಟಕರ್ಸ್, ಟೆಲಿಕಾಂ ಸ್ಕೈ ಸ್ಟ್ರೈಕರ್, ಇನ್‌ಸ್ಪೈರ್ ಚಾಲೆಂಜರ್ಸ್, ಕೆಜಿಎಂ ಸ್ಟ್ರೈಕರ್ಸ್, ಟೀಂ ಕಫೆ ದಿವ್ಯಂ, ಪ್ರೊ ವಿನ್ ಪ್ಯಾಂಚರ್, ಶಾರದಾ ಸ್ಟ್ರೈಕರ್ಸ್ ತಂಡಗಳು ಕಣಕ್ಕಿಳಿಯಲಿವೆ.

ಸಂಭ್ರಮದ ಚನ್ನರಾಯಸ್ವಾಮಿ ರಥೋತ್ಸವ

ವರ್ತೂರು: ಹತ್ತಾರು ಗ್ರಾಮಗಳ ಸಾವಿರಾರು ಭಕ್ತರು ಭಾಗಿ

ಪ್ರಜಾವಾಣಿ ವಾರ್ತೆ

ಕೆ.ಆರ್.ಪುರ: ರಥಸಪ್ತಮಿ ಪ್ರಯುಕ್ತ ವರ್ತೂರಿನಲ್ಲಿ ಶ್ರೀ ಭೂನಿಳಾ ಸಮೇತ ಚನ್ನರಾಯಸ್ವಾಮಿ ರಥೋತ್ಸವ ಭಾನುವಾರ ವಿಜೃಂಭಣೆಯಿಂದ ನಡೆಯಿತು.

ದೇವಾಲಯದಲ್ಲಿ ಚನ್ನರಾಯ ಸ್ವಾಮಿಗೆ ವಿಶೇಷ ಪೂಜೆ ಸಲ್ಲಿಸಿ ನಂತರ ಪ್ರಮುಖ ಬೀದಿಗಳಲ್ಲಿ ಸ್ವಾಮಿಯ ಮೂರ್ತಿಯನ್ನು ಮೆರವಣಿಗೆ ಮಾಡಲಾಯಿತು. ನಂತರ ರಥದಲ್ಲಿ ಕೂರಿಸಿ ಅಲಂಕರಿಸಿ ರಥ ಎಳೆಯಲಾಯಿತು.

ರಥೋತ್ಸವ ಅಂಗವಾಗಿ ಚನ್ನರಾಯಸ್ವಾಮಿಗೆ ವಿಶೇಷ ಹೂವಿನ ಅಲಂಕಾರ, ಪೂಜಾ ಕೈಂಕರ್ಯಗಳು ನಡೆದವು. ವರ್ತೂರಿನ ಪ್ರಮುಖ ಬೀದಿಗಳಲ್ಲಿ ರಥೋತ್ಸವ ಸಾಗಿತು. ಈ ಉತ್ಸವದಲ್ಲಿ ತಮಟೆ, ಪೂಜಾಕುಣಿತ, ನಾದಸ್ವರ, ಚಿಂಗಾರಿ ಮೇಳ, ಚಂಡೆಮೇಳ, ಚಟ್ಟಿಮೇಳ, ವೀರಗಾಸೆ, ಗಾರುಡಿಗೊಂಬೆ, ಡೊಳ್ಳು ಕುಣಿತ ಗಮನಸೆಳೆಯಿತು.

ರಥೋತ್ಸವಕ್ಕೆ ಸುತ್ತಮುತ್ತಲಿನ ವೈಟ್‌ಫೀಲ್ಡ್, ಬಳಗೆರೆ, ಸೊರುಹುಣಸೆ, ಗುಂಜೂರು, ವಾಲೇಪುರ, ಮಧುರನಗರ, ಸುತ್ತಮುತ್ತಲಿನ ಹತ್ತಾರು ಗ್ರಾಮಗಳ ಸಾವಿರಾರು ಭಕ್ತರು ದೇವರ ದರ್ಶನ ಪಡೆದರು.

ಸಾರಿಗೆ ಸಚಿವ ರಾಮಲಿಂಗಾರೆಡ್ಡಿ, ಶಾಸಕಿ ಮಂಜುಳಾ ಲಿಂಬಾವಳಿ, ಮಾಜಿ ಸಚಿವರಾದ ಅರವಿಂದ ಲಿಂಬಾವಳಿ, ಎಚ್.ನಾಗೇಶ್, ಮುಖಂಡರಾದ ಕುಪ್ಪಿ ಮಂಜುನಾಥ್, ವರ್ತೂರು ಶ್ರೀಧರ್, ಮಹೇಂದ್ರ ಮೋದಿ, ಶ್ರೀಧರ್ ರೆಡ್ಡಿ, ಹೂಡಿ ಪಿಳ್ಳಪ್ಪ, ಮನೋಹರ್ ರೆಡ್ಡಿ ಉಪಸ್ಥಿತರಿದ್ದರು.

ವರ್ತೂರಿನಲ್ಲಿ ನಡೆದ ಚನ್ನರಾಯಸ್ವಾಮಿ ಬ್ರಹ್ಮರಥೋತ್ಸವದ ವೇಳೆ ಭಕ್ತರು ಪಾಲ್ಗೊಂಡಿದ್ದರು

ಮುಖ್ಯಾಂಶಗಳು
- ದೇವಾಲಯದಲ್ಲಿ ವಿಶೇಷ ಹೂವಿನ ಅಲಂಕಾರ
- ಪ್ರಮುಖ ಬೀದಿಗಳಲ್ಲಿ ಮೂರ್ತಿ ಮೆರವಣಿಗೆ

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: classifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

JOB OPPORTUNITIES
Teachers / Professors

ST ALOYSIUS (DEEMED TO BE UNIVERSITY)
Mangaluru 575003 - India
Re- accredited by NAAC with 'A++' Grade, 3.67/4 CGPA
Post Box No. 720, Mangaluru 575003
www.staloysius.edu.in
St Aloysius (Deemed to be University) invites applications for both Teaching and Non-Teaching positions for the academic year 2026–2027:
Commerce, Business Administration, Computer applications, Electronics, Social Work, Engineering (Computer Science, Information Science, Artificial Intelligence & Machine Learning, Electronics and Communication), Clinical Psychology, Corporate Psychology, Counsellors, Sports Management, Physical Education, Dean (Law), BA LLB, LLB, System Admin and Lab Instructor (Computer Science), Animation and Multimedia.
Minimum Qualification:
Teaching: A Regular Master's Degree in the respective subjects with 55% marks and above. Applications with qualifications through distance mode will not be accepted. NET/KSET, Ph.D. with teaching experience preferred.
Non-Teaching: Diploma/Bachelors/Masters in the relevant field
*Recruitment as per AICTE/UGC/BCI regulatons
*Only Short listed candidates will be contacted
Applications should reach us on or before 10th February 2026
E-Mail to : careers@staloysius.edu.in

CONNECT
ಪ್ರದರ್ಶನ ಮತ್ತು ಮಾರಾಟ
ಕರ್ನಾಟಕದ ಅತಿ ದೊಡ್ಡ ಮತ್ತು ಬೃಹತ್ ಮೆಗಾ ಸೀರೆ ಉತ್ಸವ
ನೇರ ನೇಕಾರರಿಂದ ಕನಿಷ್ಠ ಬೆಲೆಯ ಖಾತರಿ
ಸೀರೆ ಸಂತೆ
SULAKSHMI SILKS
50,000+ಸೀರೆಗಳು 10,000+ವಿನ್ಯಾಸ 1000+ವಿಧಗಳು
ಶುದ್ಧ ಮೈಸೂರು ಸಿಲ್ಕ್, ಕಾಂಜೀವರಂ, ಪಟೋಲ, ಬನಾರಸ್, ಉಪ್ಪಾಡ ಪೈಠಾನಿ, ಚಂದೇರಿ, ಗದ್ವಾಲ್, ಇಳಕಲ್, ಪೋಚಂಪಲ್ಲಿ, ಭಾಗಲ್ಪುರ್, ಇಕತ್ ಜಮಧಾನಿ, ಮುಗ, ಕ್ರೇಪ್, ಗಜ್ಜಿ ಬಂಧನಿ, ಆರ್ನಿ, ಕಾಟನ್ ಕ್ಲಾಸಿಕ್ಸ್, ಬೆಂಗಳೂರು ಸಿಲ್ಕ್ ಮತ್ತು ಇತರೆ.
ಭಾರತದ ಅತ್ಯುತ್ತಮ ಕೈಯಿಂದ ನೇಯ್ದಿರುವ ಸೀರೆಗಳ ವಿಶೇಷ ಪ್ರದರ್ಶನ
ಗೌರವಾನ್ವಿತ ಮುಖ್ಯ ಅತಿಥಿ ಖುಷಿ ರವಿ
ಗೌರವಾನ್ವಿತ ಮುಖ್ಯ ಅತಿಥಿ ಸೂರಜ್ ಸಿಂಗ್
ಗೌರವಾನ್ವಿತ ಮುಖ್ಯ ಅತಿಥಿ ರಾಶಿಕಾ ಶೆಟ್ಟಿ
ಗೌರವಾನ್ವಿತ ಮುಖ್ಯ ಅತಿಥಿ ನಂಮ್ರತಾ ಗೌಡ
SIGNATURE SILK SAREE COLLECTIONS
24 ರಿಂದ 31ನೇ ಜನವರಿ 2026 | ಸಮಯ: ಬೆಳಗ್ಗೆ 11 ರಿಂದ ರಾತ್ರಿ 9
ಹೋಟೆಲ್ ಲಲಿತ್ ಅಶೋಕ್, ಬೆಂಗಳೂರು
99727 18898 | 96631 27606
93531 38343 | 98863 06643

RENTAL PROPERTIES
Flats
SEMI FURNISHED 3BHK FLAT for RENT at Sumukha Meadows VishnuVardhan Road Channasandra Bengaluru,with CarPark,Lift & 24hrs Water Supply.Ready to Occupy.No Brokers. Call:9533339694 9246369439.
Accommodation Available
Commercial
FOR RENT: PRIME COMMERCIAL BUILDING, Mariappa Rd, off CMR Main Rd, Kalyan Nagar. Ideal for Clinic, Diagnostic, Tuition, Corporate Office, Banks. GF-300 sqft, FF- 1250 sqft, SF-1250 sqft, TF-500 sqft. Ample parking (4 cars & 25 two-wheelers). 24/7 power & water. Ph: 9845123866, 9880016254. Location: Google Maps -13.021880, 77.638321
FURNISHED OFFICE, JPNagar Ring Road (above SBI) 42-workstations, 4-cabins, Conference, Parking. Ph-8310855914, 9448482016
REAL ESTATE SELLING
Residential/ Commercial
Hoskote
SALE 6000SQFT @4000/sqft Hoskote-Malur hwy, 1Km from STRR, DC Converted, Residential area,BMTC route, Call: +918317463442

BUSINESS
Business Offers
Finance
MSME LOAN Available for Any Start-Ups Companies And Existing Running Companies Hotels,Shops Establishments Etc. Contact- 7204995189.
PUBLIC NOTICE
To Place your Classified Ads Contact 9731810277

REPUBLIC SALE 26th Jan- 7th Feb 2026 FLAT 26% OFF
VESTS-BRIEF-BRA-PANTY-SLIPS TOWELS - WALLETS-CLUTCHES & LADIES FANCY BAGS
JOHNSON The entire world of lingerie.. ANAND
MARKWOOD WHOLESALE WINTER WEAR Sweaters | Thermals | Blanket's | Jackets | Kurta Set | 2 & 3 Piece Suit Ladies Kurti | Coat Set | Plazo | Leggings
Shop Online @ www.brightways.in
BRIGHTWAYS WHOLESALERS aap ke andar ka vishwas
AVENUE ROAD, BENGALURU-560 002 97422-02223 OPEN ON SUNDAY

PERSONAL
Change of Name
CHANGE OF NAME
I, CHANDAN JAGADISH SHIGUNDE Residing at #36, 1st Main, 2nd Cross, Ejipura, Viveknagar Post, Bengaluru-560047, have changed my name to CHANDAN JAGADISH SIGUNDEY vide affidavit dated 23/01/2026, before notary S.I.Balaguru, Bengaluru.
CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager The Printers (Mysore) Pvt. Ltd. Bengaluru

ಕುಂದು ಕೊರತೆ ಜನದನಿ

ನಗರದ ಮೂಲಸೌಕರ್ಯ ಸಮಸ್ಯೆಗಳ ಕುರಿತ ನಿಮ್ಮ ಕುಂದು ಕೊರತೆಗಳಿಗೆ ಪ್ರಜಾವಾಣಿ ಧ್ವನಿಯಾಗಲಿದೆ. ಕುಂದು ಕೊರತೆಗಳನ್ನು 150 ಪದಗಳ ಮಿತಿಯಲ್ಲಿ ಬರೆದು ಕಳುಹಿಸಿ. ಸಮಸ್ಯೆಯ ಗಂಭೀರತೆಯನ್ನು ಬಿಂಬಿಸುವ ಚಿತ್ರವೂ ಇರಲಿ. ನಿಮ್ಮ ಕುಂದುಕೊರತೆಗಳನ್ನು ಪತ್ರಿಕೆಯಲ್ಲಿ ಪ್ರಕಟಿಸಲಾಗುತ್ತದೆ...

9606038256

‘ಮರಕ್ಕೆ ಸುತ್ತಿರುವ ಕೇಬಲ್ ತೆರವುಗೊಳಿಸಿ’

ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ತೆರಳುವ ಮಾರ್ಗದಲ್ಲಿ ಇರುವ ಕೊಡಿಗೇಹಳ್ಳಿ ವೃತ್ತದ ಸರ್ವೀಸ್ ರಸ್ತೆಯ ಸಿಗ್ನಲ್‌ನ ಎಡ ಭಾಗದಲ್ಲಿರುವ ಮರವೊಂದಕ್ಕೆ ಕೇಬಲ್ ಸುತ್ತಲಾಗಿದೆ. ಬೆಂಗಳೂರು ನಗರದಲ್ಲಿ ಕೇಬಲ್ ಹಾವಳಿ ಹೆಚ್ಚಾಗಿರುವುದಕ್ಕೆ ಇದೇ ಸಾಕ್ಷಿ. ನಿತ್ಯ ಈ ರಸ್ತೆಯ ಮೂಲಕ ಲಕ್ಷಾಂತರ ಜನ ಸಂಚರಿಸುತ್ತಾರೆ. ಮರಕ್ಕೆ ಕೇಬಲ್ ಸುತ್ತಿರುವ ಕಾರಣ ನಗರದ ಸೌಂದರ್ಯಕ್ಕೆ ಧಕ್ಕೆ ಆಗುತ್ತಿದೆ. ಸಂಬಂಧಪಟ್ಟ ಪಾಲಿಕೆ ಅಧಿಕಾರಿಗಳು ಮರಗಳಿಗೆ ಸುತ್ತಿರುವ ಕೇಬಲ್ ತೆರವುಗೊಳಿಸಲು ಕ್ರಮ ಕೈಗೊಳ್ಳಬೇಕು.

ಅಶ್ವಥನಾರಾಯಣ, ಕೊಡಿಗೇಹಳ್ಳಿ ನಿವಾಸಿ

‘ಪಾದಚಾರಿ ಮಾರ್ಗದಲ್ಲಿ ಕಸ’

ಪದ್ಮನಾಭನಗರದ ಜ್ಞಾನ ವಿಜ್ಞಾನ ಶಾಲೆ ಮುಂಭಾಗದ ಪಾದಚಾರಿ ಮಾರ್ಗದಲ್ಲಿ ರಾಶಿಗಟ್ಟಲೇ ಕಸ ಹಾಕಲಾಗಿದೆ. ಇದರಿಂದ ಇಡೀ ಪ್ರದೇಶ ಗಬ್ಬೆದ್ದು ನಾರುತ್ತಿದ್ದು, ಸೊಳ್ಳೆಗಳ ಉತ್ಪತ್ತಿ ತಾಣವಾಗಿದೆ. ಶಾಲೆಗೆ ತೆರಳುವ ಮಕ್ಕಳು ಸೇರಿದಂತೆ ಸಾರ್ವಜನಿಕರು ಮೂಗು ಮುಚ್ಚಿಕೊಂಡು ಓಡಾಡುತ್ತಿದ್ದಾರೆ. ಸ್ಥಳೀಯ ನಿವಾಸಿಗಳು ತಮ್ಮ ಮನೆಯಲ್ಲಿ ಉತ್ಪತ್ತಿ ಆಗುವ ಕಸವನ್ನು ಪ್ಲಾಸ್ಟಿಕ್ ಚೀಲಗಳಲ್ಲಿ ತುಂಬಿಕೊಂಡು ಬಂದು ಇಲ್ಲಿ ಎಸೆದು ಹೋಗುತ್ತಿದ್ದಾರೆ. ಪಾಲಿಕೆಯ ಸಿಬ್ಬಂದಿ ಇಲ್ಲಿ ಬಿದ್ದಿರುವ ಕಸದ ರಾಶಿಯನ್ನು ಕೂಡಲೇ ವಿಲೇವಾರಿ ಮಾಡಬೇಕು.

ಪದ್ಮನಾಭನಗರದ ನಿವಾಸಿಗಳು

‘ಪಾದಚಾರಿ ಮಾರ್ಗದಲ್ಲಿ ಬೃಹತ್ ಕೊಳವೆ’

ಚಾಮರಾಜಪೇಟೆಯ ಐದನೇ ಮುಖ್ಯರಸ್ತೆಯ ಪಾದಚಾರಿ ಮಾರ್ಗದಲ್ಲಿ ಜಲ ಮಂಡಳಿಯವರು ದೊಡ್ಡ ಕೊಳವೆಗಳನ್ನು ಇಟ್ಟಿದ್ದಾರೆ. ಇದರಿಂದ ಸಾರ್ವಜನಿಕರ ಓಡಾಟಕ್ಕೆ ತೊಂದರೆ ಆಗಿದೆ. ಇದರ ಜೊತೆಗೆ ಪಾದಚಾರಿ ಮಾರ್ಗದ ಪಕ್ಕದಲ್ಲಿಯೇ ವಾಹನಗಳನ್ನು ನಿಲುಗಡೆ ಮಾಡಿದ್ದು, ಸಾರ್ವಜನಿಕರು ಮುಖ್ಯರಸ್ತೆಯಲ್ಲಿ ನಡೆದು ಹೋಗುವ ಅಪಾಯ ಎದುರಾಗಿದೆ.

ಪತ್ತಂಗಿ ಎಸ್. ಮುರಳಿ, ಚಾಮರಾಜಪೇಟೆ

‘ಕಸ ವಿಲೇವಾರಿ ಮಾಡಿ’

ನಗರದಲ್ಲಿನ ಅಪಾರ್ಟ್‌ಮೆಂಟ್‌ಗಳಲ್ಲಿ ಉತ್ಪತ್ತಿ ಆಗುವ ಕಸವನ್ನು ವಿಲೇವಾರಿ ಮಾಡಲು ಸರ್ಕಾರವು, ಖಾಸಗಿ ವ್ಯಕ್ತಿಗಳಿಗೆ ಅವಕಾಶ ನೀಡಿದೆ. ಇವರು ಪ್ರತಿ ತಿಂಗಳು ಒಂದು ಮನೆಗೆ ₹100 ನೀಡುವಂತೆ ತಾಕೀತು ಮಾಡುತ್ತಿದ್ದಾರೆ. ಕೆಲ ಐಷಾರಾಮಿ ಅಪಾರ್ಟ್‌ಮೆಂಟ್‌ನ ನಿವಾಸಿಗಳು ಹಣ ನೀಡುತ್ತಾರೆ. ಆದರೆ ಬಿಡಿಎ, ಕೆಎಚ್‌ಬಿಯಿಂದ ಸೂರು ಇಲ್ಲದವರಿಗೆ ಸೂರು ಎಂಬ ತತ್ವದ ಅಡಿಯಲ್ಲಿ ಹಂಚಿಕೆಯಾದ ಮನೆಗಳ ನಿವಾಸಿಗಳಿಂದ ₹100 ನೀಡುವಂತೆ ಒತ್ತಾಯಿಸುತ್ತಿದ್ದಾರೆ. ಹಣ ನೀಡದವರ ಮನೆಯ ಕಸವನ್ನು ವಿಲೇವಾರಿ ಮಾಡುತ್ತಿಲ್ಲ.

ಕೆ.ನಾಗಲಿಂಗಪ್ಪ, ಬಿಡಿಎ ಅಪಾರ್ಟ್‌ಮೆಂಟ್ ಮೈಲಸಂದ್ರ ಗೇಟ್ ಕೆಂಗೇರಿ

‘ಸಿಗ್ನಲ್ ಅಳವಡಿಕೆ: ಹೆಚ್ಚಿದ ದಟ್ಟಣೆ’

ನಗರದಲ್ಲಿ ಸಂಚಾರ ದಟ್ಟಣೆ ಕಡಿಮೆ ಮಾಡಲು ಹಾಗೂ ಸುರಕ್ಷತೆಯ ದೃಷ್ಟಿಯಿಂದ ಸಿಗ್ನಲ್‌ಗಳನ್ನು ಅಳವಡಿಕೆ ಮಾಡಲಾಗಿದೆ. ಇತ್ತೀಚೆಗೆ ನಾಗರಬಾವಿ ವೃತ್ತದಲ್ಲಿ ನೂತನ ಸಿಗ್ನಲ್ ಅಳವಡಿಸಿದ್ದಾರೆ. ಇದರ ಜೊತೆಗೆ ನಾಗರಬಾವಿಯಿಂದ ಚಂದ್ರಾ ಬಡಾವಣೆಗೆ ಸಂಪರ್ಕ ಕಲ್ಪಿಸುವ ಮದ್ದೂರಮ್ಮ ದೇವಸ್ಥಾನದ ಹತ್ತಿರ ಮತ್ತೊಂದು ಸಿಗ್ನಲ್ ಹಾಕಿದ್ದಾರೆ. 100 ರಿಂದ 200 ಮೀಟರ್ ಅಂತರದಲ್ಲಿ ಎರಡು ಸಿಗ್ನಲ್‌ಗಳನ್ನು ಅಳವಡಿಕೆ ಮಾಡಿದ್ದರಿಂದ ಸಂಚಾರ ದಟ್ಟಣೆ ಹೆಚ್ಚಾಗುತ್ತಿದೆ. ಈ ರೀತಿ ಸಿಗ್ನಲ್‌ಗಳನ್ನು ಅಳವಡಿಸಿದರೆ ಸಂಚಾರ ದಟ್ಟಣೆ ಕಡಿಮೆ ಆಗಬೇಕು. ಆದರೆ, ಇಲ್ಲಿ ದಟ್ಟಣೆ ಹೆಚ್ಚುತ್ತಿದ್ದು, ವಾಹನ ಸವಾರರಿಗೆ ಸಮಸ್ಯೆ ಆಗುತ್ತಿದೆ. ಸಂಬಂಧಪಟ್ಟ ಅಧಿಕಾರಿಗಳು ಈ ಸಮಸ್ಯೆಗೆ ಪರಿಹಾರ ಕಲ್ಪಿಸಬೇಕು.

ಪೂಜಾ ಎಸ್., ಚಂದ್ರಾಲೇಔಟ್

IEW INDIA ENERGY WEEK 2026

सत्यमेव जयते
MINISTRY OF PETROLEUM AND NATURAL GAS
Government of India

ಇಂಡಿಯಾ ಎನರ್ಜಿ ವೀಕ್ 2026

ಭಾರತದಿಂದ ವಿಶ್ವಕ್ಕಾಗಿ

ಭವಿಷ್ಯದ ನವ ನಿರ್ಮಾಣ

"ಶುದ್ಧ ಇಂಧನವು ಇಂದಿನ ಅಗತ್ಯವಾಗಿದೆ. ಉತ್ತಮ ಭವಿಷ್ಯಕ್ಕಾಗಿನ ನಮ್ಮ ಬದ್ಧತೆಯು ಸರ್ವಶ್ರೇಷ್ಠವಾಗಿದೆ ಮತ್ತು ಇದು ನಮ್ಮ ಕಾರ್ಯದಲ್ಲಿ ಪ್ರತಿಫಲಿಸುತ್ತಿದೆ."
–ನರೇಂದ್ರ ಮೋದಿ

75,000+	700+	120+	6,500+	120+	550+
ಇಂಧನ ವೃತ್ತಿಪರರು	ಪ್ರದರ್ಶಕ ಕಂಪನಿಗಳು	ದೇಶಗಳ ಪ್ರಾತಿನಿಧ್ಯ	ಪ್ರತಿನಿಧಿಗಳು	ಉಪನ್ಯಾಸಗಳು	ಭಾಷಣಕಾರರು

ಇಂಡಿಯಾ ಎನರ್ಜಿ ವೀಕ್ 2026

ಕಾರ್ಯಕ್ರಮದ ಅದ್ದೂರಿ ಉದ್ಘಾಟನೆ

ಪ್ರಧಾನಮಂತ್ರಿ
ನರೇಂದ್ರ ಮೋದಿ
ಇವರಿಂದ
ವಿಶೇಷ ವಿಡಿಯೋ ಸಂದೇಶ

ಮಂಗಳವಾರ, 27 ಜನವರಿ 2026 । ಬೆಳಗ್ಗೆ 10:00 ಗಂಟೆ   ಕನ್ವೆನ್ಷನ್ ಹಾಲ್, ಒಎನ್‌ಜಿಸಿ ಎಟಿಐ, ಗೋವಾ

ಕಳೆದ ದಶಕದಲ್ಲಿ ಇಂಧನ ಕ್ಷೇತ್ರದಲ್ಲಿ ಗೋಚರಿಸಿದ ಮನ್ವಂತರಗಳು

ಜಾಗತಿಕ ನಾಯಕತ್ವ:
- ವಿಶ್ವದ 4ನೇ ಬೃಹತ್ ರಿಫೈನಿಂಗ್ ಹಬ್, ಅಂದಾಜು 260 ಎಂಎಂಟಿಪಿಎ ಸಾಮರ್ಥ್ಯ
- 6ನೇ ಅತಿದೊಡ್ಡ ನೈಸರ್ಗಿಕ ಇಂಧನ ಪೈಪ್‌ಲೈನ್ ಜಾಲ, ಸುಮಾರು 26,000 ಕಿ.ಮೀ.
- 2050 ರವರೆಗೆ ಹೆಚ್ಚಲಿರುವ ಜಾಗತಿಕ ಇಂಧನ ಬೇಡಿಕೆಗೆ, 35% ಪೂರೈಸಬಲ್ಲ ಕ್ಷಮತೆ

ಸ್ವಚ್ಛ ಅಡುಗೆ ಕ್ರಾಂತಿ:
- ಪಿಎಂ ಉಜ್ವಲಾ ಯೋಜನೆ ಮೂಲಕ, 10.40 ಕೋಟಿಗೂ ಅಧಿಕ ಮನೆಗಳಿಗೆ ಉಚಿತ ಅನಿಲ ಸಂಪರ್ಕ ನೀಡಲಾಗಿದೆ
- 33 ಕೋಟಿ ಕುಟುಂಬಗಳನ್ನು ತಲುಪುವ ಮುಖಾಂತರ, ಸಮತೋಲನ ಸ್ಥಿತಿಗೆ ಸಮೀಪಿಸಿರುವ ಎಲ್‌ಪಿಜಿ ವ್ಯಾಪ್ತಿ
- 1.50 ಕೋಟಿಗೂ ಅಧಿಕ ಮನೆಗಳು, ಪೈಪ್ಡ್ ನ್ಯಾಚುರಲ್ ಗ್ಯಾಸ್ (ಪಿಎನ್‌ಜಿ) ಸಂಪರ್ಕ ಪಡೆದಿವೆ.

ಸುಸ್ಥಿರ ಇಂಧನ ಕ್ಷೇತ್ರದಲ್ಲಿ ಸಾಧನೆಗಳ ಮೈಲುಗಲ್ಲು:
- ಮರು ನವೀಕರಿಸಬಲ್ಲ ಇಂಧನ ಅಳವಡಿಕೆ ಕ್ಷಮತೆಯಲ್ಲಿ, ಜಾಗತಿಕವಾಗಿ 4ನೇ ಸ್ಥಾನದ ಹಿರಿಮೆ
- ಸುಮಾರು 50% ಕ್ಕಿಂತ ಅಧಿಕ, ಅಗೆದು ತೆಗೆಯಲಾರದ ಇಂಧನ ಕ್ಷಮತೆಯನ್ನು ಅಳವಡಿಸಿಕೊಳ್ಳಲಾಗಿದೆ
- ಐದು ವರ್ಷ ಮುಂಚಿತವಾಗಿಯೇ ಸಿಒಪಿ26 ಬದ್ಧತೆಯನ್ನು ಸಾಧಿಸಲಾಗಿದೆ.

ಗ್ರಾಮೀಣ ಸಮೃದ್ಧತೆಗೆ ಪೂರಕ:
- ಪ್ರತಿದಿನ ಸುಮಾರು 1,150 ಟನ್ ಇಂಧನ ಉತ್ಪಾದಿಸಬಲ್ಲ, 170 ಕಂಪ್ರೆಸ್ಡ್ ಜೈವಿಕ ಇಂಧನ ಘಟಕಗಳು
- ಕೃಷಿಕರಿಗೆ ಸುಮಾರು ರೂ.1.40 ಲಕ್ಷ ಕೋಟಿ ಪಾವತಿಸಲಾಗಿದೆ.
- ಪೆಟ್ರೋಲ್‌ನಲ್ಲಿ 20% ಎಥನಾಲ್ ಮಿಶ್ರಣ ಸಾಧನೆ

ನಮ್ಮನ್ನು ಅನುಸರಿಸಿರಿ:
#IndiaEnergyWeek | www.indiaenergyweek.com

ಡಿಡಿ ನ್ಯೂಸ್ ಯೂಟ್ಯೂಬ್ ವಾಹಿನಿಯಲ್ಲಿ ಕಾರ್ಯಕ್ರಮದ ನೇರಪ್ರಸಾರ ವೀಕ್ಷಿಸಿರಿ DD NEWS

ಹೆಚ್ಚಿನ ಮಾಹಿತಿಗಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿರಿ

‘ಎಲ್ಲ ನಗರಗಳಲ್ಲಿ ಸಂಚಾರ ಗ್ರಿಡ್ ಚಿಂತನೆ’

ದಾವೋಸ್‌ನಲ್ಲಿ 45ಕ್ಕೂ ಹೆಚ್ಚು ಕಂಪನಿಗಳ ಜೊತೆ ದ್ವಿಪಕ್ಷೀಯ ಮಾತುಕತೆ– ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್

ಪ್ರಜಾವಾಣಿ ವಾರ್ತೆ

ಶಿವಕುಮಾರ್

ಬೆಂಗಳೂರು: ‘ಮುಂದಿನ 25 ವರ್ಷಗಳ ಅಭಿವೃದ್ಧಿಯನ್ನು ದೃಷ್ಟಿಯಲ್ಲಿ ಇಟ್ಟುಕೊಂಡು ರಾಜ್ಯದ ಎಲ್ಲ ನಗರಗಳಲ್ಲಿ ಸಂಚಾರ ಗ್ರಿಡ್ ರೂಪಿಸಲು ಚಿಂತನೆ ನಡೆಸಲಾಗಿದೆ’ ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಿಳಿಸಿದರು.

ದಾವೋಸ್ ವಿಶ್ವ ಆರ್ಥಿಕ ವೇದಿಕೆ ಕಾರ್ಯಕ್ರಮದಲ್ಲಿ ಭಾಗವಹಿಸಿ ಹಿಂದಿರುಗಿದ ಬಳಿಕ ಸುದ್ದಿಗೋಷ್ಠಿಯಲ್ಲಿ ಭಾನುವಾರ ಮಾತನಾಡಿದ ಅವರು, ‘ದತ್ತಾಂಶ ಕೇಂದ್ರ, ಜಾಗತಿಕ ಸಾಮರ್ಥ್ಯ ಕೇಂದ್ರ, ಆಹಾರ ಮತ್ತು ಪಾನೀಯ, ವಿಮಾನಯಾನ, ನವೀಕೃತ ಇಂಧನ, ಎಲೆಕ್ಟ್ರಿಕ್ ವಾಹನ, ಎಲೆಕ್ಟ್ರಾನಿಕ್ಸ್, ಸುಧಾರಿತ ಉತ್ಪಾದನಾ ಕ್ಷೇತ್ರಕ್ಕೆ ಸಂಬಂಧಿಸಿದಂತೆ 45ಕ್ಕೂ ಹೆಚ್ಚು ಕಂಪನಿಗಳ ಜೊತೆ ದಾವೋಸ್‌ನಲ್ಲಿ ದ್ವಿಪಕ್ಷೀಯ ಮಾತುಕತೆ ನಡೆಸಲಾಗಿದೆ’ ಎಂದರು.

‘ಕೆಲವು ಕಂಪನಿಗಳು ಕರ್ನಾಟಕದ 2-3ನೇ ಹಂತದ ನಗರಗಳ ಬಗ್ಗೆಯೂ ಆಸಕ್ತಿ ಹೊಂದಿವೆ. ಅದಕ್ಕೆ ಪೂರಕವಾಗಿ ನಗರಗಳು ಯುವ ಪ್ರತಿಭೆಗಳನ್ನು ಹೊಂದಿರಬೇಕು. ಸಂಚಾರ ಮಾರ್ಗ, ವರ್ತುಲ ರಸ್ತೆಗಳಿಗೆ ಯೋಜನೆ ರೂಪಿಸಬೇಕೆಂದು ಅಧಿಕಾರಿಗಳ ಜೊತೆ ಚರ್ಚೆ ನಡೆಸಲಾಗಿದೆ. ನಗರ ಯೋಜನೆಗೆ ಹೆಚ್ಚಿನ ಆದ್ಯತೆ ನೀಡಲು ನಗರಾಭಿವೃದ್ಧಿ, ಗ್ರಾಮೀಣಾಭಿವೃದ್ಧಿ, ಪೌರಾಡಳಿತ ಸಚಿವರ ಜೊತೆ ನಡೆಸಲಾಗುವುದು’ ಎಂದರು.

‘ರಾಜ್ಯದಲ್ಲಿ ನೀರಿನ ಲಭ್ಯತೆ, ವಿದ್ಯುತ್ ಪ್ರಮಾಣ ಸೇರಿದಂತೆ ಅಗತ್ಯ ಮಾಹಿತಿಗಳನ್ನು ಕಂಪನಿಗಳು ಪಡೆದಿವೆ. ಮುಂದಿನ 25 ವರ್ಷಗಳಲ್ಲಿ ಕರ್ನಾಟಕದ ಜನಸಂಖ್ಯೆಯಲ್ಲಿ ಸುಮಾರು ಶೇ 70ರಷ್ಟು ನಗರ ಪ್ರದೇಶಕ್ಕೆ ವರ್ಗಾವಣೆ ಆಗಬಹುದೆಂದು ಕೆಲವು ಕಂಪನಿಗಳು ಅಂದಾಜಿಸಿದ್ದು, ಅದಕ್ಕೆ ಯಾವ ತಯಾರಿ ನಡೆಸಿದ್ದೀರೆಂದು ಪ್ರಶ್ನಿಸಿದರು. ಕಂಪನಿಗಳ ಮುಖ್ಯಸ್ಥರು, ಅನಿವಾಸಿ ಭಾರತೀಯ ಉದ್ಯಮಿಗಳು ಕೈಗಾರಿಕಾ ಸಚಿವ ಎಂ.ಬಿ. ಪಾಟೀಲರನ್ನು ಭೇಟಿ ಮಾಡಿದ್ದಾರೆ. ರಾಜ್ಯದಲ್ಲಿ ಹೂಡಿಕೆ ಮಾಡುವ ಕಂಪನಿಗಳ ಜೊತೆ ದಾವೋಸ್‌ನಲ್ಲಿ ಒಪ್ಪಂದಕ್ಕೆ ಸಹಿ ಹಾಕದೇ, ಇಲ್ಲೇ ಸಹಿ ಹಾಕಲು ತೀರ್ಮಾನಿಸಿದ್ದೇವೆ’ ಎಂದು ತಿಳಿಸಿದರು.

‘ವಿಶ್ವ ಬ್ಯಾಂಕಿನ ಮುಖ್ಯಸ್ಥ ಅಜಯ್ ಬಂಗಾ, ನ್ಯಾಟೊ ಪ್ರಧಾನ ಕಾರ್ಯದರ್ಶಿ ಮಾರ್ಕ್ ರುಟ್ಟೆ ಹಾಗೂ ಹಲವು ದೇಶಗಳ ಸಚಿವರನ್ನು ದಾವೋಸ್‌ನಲ್ಲಿ ನಾನು ಭೇಟಿ ಮಾಡಿದ್ದೆ. ಕೇಂದ್ರ ಸಚಿವರಾದ ಅಶ್ವಿನಿ ವೈಷ್ಣವ್, ಪ್ರಲ್ಹಾದ ಜೋಷಿ, ರಾಮ್ ಮೋಹನ್ ನಾಯ್ಡು ಕೂಡಾ ಅಲ್ಲಿಗೆ ಬಂದಿದ್ದರು. ಚೀನಾ ಹೊರತುಪಡಿಸಿದರೆ, ಭಾರತದ ದಕ್ಷಿಣದ ರಾಜ್ಯಗಳಲ್ಲಿ ಕೆಲಸ ಮಾಡಲು ಉತ್ತಮ ವಾತಾವರಣವಿದೆ ಎಂದು ಅನೇಕ ಉದ್ಯಮಿಗಳು ಅಭಿಪ್ರಾಯ ವ್ಯಕ್ತಪಡಿಸಿದರು’ ಎಂದೂ ಹೇಳಿದರು.

‘ಬೆಂಗಳೂರನ್ನು ಜಾಗತಿಕ ನಗರ ಎಂದ ಮೋದಿ’

‘ಭಾರತವನ್ನು ಬೆಂಗಳೂರು ಮೂಲಕ ನೋಡಲಾಗುತ್ತಿದೆ. ಅಟಲ್ ಬಿಹಾರಿ ವಾಜಪೇಯಿ, ನರೇಂದ್ರ ಮೋದಿ ಅವರು ಬೆಂಗಳೂರನ್ನು ಜಾಗತಿಕ ನಗರ ಎಂದು ಬಣ್ಣಿಸಿದ್ದಾರೆ. ಕರ್ನಾಟಕ ಭಾರತಕ್ಕೆ ಹೆಮ್ಮೆ ತರುತ್ತಿದೆ ಎಂದು ನಾನು ಈ ಹಿಂದೆಯೂ ಹೇಳಿದ್ದೆ. ವಿದೇಶದಲ್ಲೂ ಹೇಳಿದ್ದೇನೆ, ಈಗಲೂ ಹೇಳುತ್ತಿದ್ದೇನೆ’ ಎಂದೂ ಶಿವಕುಮಾರ್ ಹೇಳಿದರು.

‘ಸುರಂಗ ರಸ್ತೆ – ಜೈಕಾ ಜೊತೆ ಚರ್ಚೆ

‘ನಮ್ಮ ಸುರಂಗ ರಸ್ತೆ ಆಧುನಿಕವಾಗಿದೆ. ನಮ್ಮ ಮಾದರಿಯಲ್ಲೇ ಮಹಾರಾಷ್ಟ್ರದವರು ಜಪಾನ್ ಇಂಟರ್ ನ್ಯಾಷನಲ್ ಕೋಆಪರೇಷನ್ ಏಜೆನ್ಸಿ (ಜೈಕಾ) ಜೊತೆ ಒಪ್ಪಂದ ಮಾಡಿಕೊಂಡಿದ್ದಾರಂತೆ. ನಾನು ಕೂಡ ಜಪಾನ್‌ಗೆ ತೆರಳಿ ನೋಡುತ್ತೇನೆ. ಎರಡನೇ ಸುರಂಗ ರಸ್ತೆಗೆ ಸಹಾಯ ಪಡೆಯುವ ಬಗ್ಗೆ ಜೈಕಾ ಜೊತೆ ಚರ್ಚೆ ಮಾಡಲಾಗುವುದು’ ಎಂದು ಶಿವಕುಮಾರ್ ಹೇಳಿದರು.

‘ಬಂಡವಾಳ ಆಕರ್ಷಿಸಲು ಉತ್ತಮ ವೇದಿಕೆ’

‘ಇಡೀ ದಾವೋಸ್ ನಮ್ಮ ಸದಾಶಿವನಗರ, ಅರಮನೆ ಮೈದಾನದಷ್ಟು ವ್ಯಾಪ್ತಿಯಲ್ಲಿರಬಹುದು. ಅಷ್ಟು ಸಣ್ಣ ಪ್ರದೇಶದಲ್ಲಿ ಎಲ್ಲ ಪ್ರಮುಖ ನಾಯಕರು ರಸ್ತೆ ಮಾರ್ಗದಲ್ಲೇ ಸಂಚಾರ ಮಾಡಿದರು. ನಾನು ಜ್ಯೂರಿಚ್ ಕಡೆ 200 ಕಿ.ಮೀ ಪ್ರಯಾಣ ಮಾಡುವಾಗ ಸುಮಾರು 30-40 ಸುರಂಗ ರಸ್ತೆಗಳ ಮೂಲಕ ಹೋದೆ. 60 ವರ್ಷಗಳ ಹಿಂದೆಯೇ ಸುರಂಗ ರಸ್ತೆ ನಿರ್ಮಿಸಿದ್ದಾರೆ. ಅಲ್ಲಿ ಶಿಸ್ತು, ಸಂಚಾರ ಪ್ರಜ್ಞೆ, ಕಾನೂನು ಪಾಲನೆ ಬಗ್ಗೆ ಗಮನಿಸಿದೆ. ಈ ಪ್ರವಾಸ ರಾಜ್ಯಕ್ಕೆ ಫಲಪ್ರದ ಕಾರ್ಯಕ್ರಮವಾಗಿತ್ತು. ನಮ್ಮಲ್ಲಿಗೆ ಬಂಡವಾಳ ಆಕರ್ಷಿಸಿ, ಯುವಕರಿಗೆ ಉದ್ಯೋಗ ಸೃಷ್ಟಿಸಲು ಉತ್ತಮ ವೇದಿಕೆಯಾಗಿತ್ತು’ ಎಂದು ಶಿವಕುಮಾರ್ ಅಭಿಪ್ರಾಯಪಟ್ಟರು.

ಸುದ್ದಿ 2 ನಿಮಿಷ

ರಾಜ್ಯಪಾಲರ ವಿರುದ್ಧ ಕ್ರಮ ಖಂಡನೀಯ: ಬೊಮ್ಮಾಯಿ

ಬೆಂಗಳೂರು: ‘ರಾಜ್ಯಪಾಲರ ವಿರುದ್ಧ ರಾಜ್ಯ ಸರ್ಕಾರವು ಕಾನೂನು ಕ್ರಮಕ್ಕೆ ಮುಂದಾಗಿರುವುದು ಖಂಡನೀಯ’ ಎಂದು ಬಿಜೆಪಿ ಸಂಸದ ಬಸವರಾಜ ಬೊಮ್ಮಾಯಿ ಹೇಳಿದ್ದಾರೆ.

ಭಾನುವಾರ ‘ಎಕ್ಸ್’ನಲ್ಲಿ ಪೋಸ್ಟ್ ಮಾಡಿರುವ ಅವರು, ‘ಸರ್ಕಾರವು ತನ್ನ ವೈಫಲ್ಯಗಳನ್ನು ಮುಚ್ಚಿಕೊಳ್ಳುವುದಕ್ಕೆ ಕೇಂದ್ರ ಸರ್ಕಾರದ ವಿರುದ್ಧ ಆರೋಪ ಮಾಡುತ್ತಿದೆ. ಈ ವಿಚಾರದಲ್ಲಿ ರಾಜ್ಯಪಾಲರನ್ನು ಸಿಲುಕಿಸಿರುವುದು ಅವರಿಗೆ ಮಾಡುತ್ತಿರುವ ಅವಮಾನವಾಗಿದೆ’ ಎಂದು ಅವರು ಹೇಳಿದ್ದಾರೆ.

‘ಸರ್ಕಾರ ಸಿದ್ಧಪಡಿಸಿಕೊಟ್ಟ ಭಾಷಣದ ಮೊದಲ ಮತ್ತು ಕೊನೆಯ ಪುಟಗಳನ್ನು ರಾಜ್ಯಪಾಲರು ಓದದೇ ಇರುವ ಹಲವು ನಿದರ್ಶನಗಳು ನಮ್ಮೆದುರು ಇವೆ. ಆದರೆ, ಆ ಕಾರಣಕ್ಕೆ ಅವರನ್ನು ಗೂಂಡಾಗಿರಿಗೆ ಗುರಿ ಮಾಡುವುದು ಸರಿಯಲ್ಲ. ಈ ಹಿಂದೆ ರಾಜ್ಯಪಾಲರಾಗಿದ್ದ ಎಚ್.ಆರ್.ಭಾರಧ್ವಾಜ್ ಅವರು ಹಲವು ಬಾರಿ ಮಿತಿಮೀರಿ ವರ್ತಿಸಿದ್ದಾರೆ. ಆಗ ರಾಜಭವನವು, ಕಾಂಗ್ರೆಸ್ ಭವನ ಆಗಿತ್ತು ಎಂಬುದನ್ನು ಸಿದ್ದರಾಮಯ್ಯ ಅವರು ಮರೆಯುತ್ತಿದ್ದಾರೆಯೇ’ ಎಂದು ಪ್ರಶ್ನಿಸಿದ್ದಾರೆ.



‘ಸರ್ಕಾರವು ಕ್ರಮ ತೆಗೆದುಕೊಳ್ಳಲೇಬೇಕು ಎಂದಿದ್ದರೆ, ವಿಧಾನ ಪರಿಷತ್ ಸದಸ್ಯ ಬಿ.ಕೆ.ಹರಿಪ್ರಸಾದ್ ವಿರುದ್ಧ ತೆಗೆದುಕೊಳ್ಳಬೇಕು. ಅದನ್ನು ತಕ್ಷಣವೇ ವಜಾ ಮಾಡಬೇಕು’ ಎಂದು ಒತ್ತಾಯಿಸಿದ್ದಾರೆ.

ಯುವ ಕಾಂಗ್ರೆಸ್‌ನಿಂದ ‘ಎನ್‌ಒಬಿ’ ಕಾರ್ಯಕ್ರಮ

ಬೆಂಗಳೂರು: ‘ಯುವ ರಾಜಕೀಯ ಕಾರ್ಯಕರ್ತರಲ್ಲಿ ನಾಯಕತ್ವ ಗುಣಗಳನ್ನು ಬೆಳೆಸುವ ಉದ್ದೇಶದಿಂದ ಯುವ ಕಾಂಗ್ರೆಸ್ ‘ರಾಷ್ಟ್ರೀಯ ಪದಾಧಿಕಾರಿಗಳು’ (ಎನ್‌ಒಬಿ) ಕಾರ್ಯಕ್ರಮವನ್ನು ಆಯೋಜಿಸಲಿದೆ’ ಎಂದು ಯುವ ಕಾಂಗ್ರೆಸ್ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ನಿಗಮ್ ಬಂಡಾರಿ ತಿಳಿಸಿದರು.

ಕೆಪಿಸಿಸಿ ಕಚೇರಿಯಲ್ಲಿ ಸುದ್ದಿಗೋಷ್ಠಿಯಲ್ಲಿ ಭಾನುವಾರ ಮಾತನಾಡಿ, ‘ಸಂವಿಧಾನ ಅಪಾಯದಲ್ಲಿದೆ. ಅದನ್ನು ಗಮನದಲ್ಲಿ ಇಟ್ಟುಕೊಂಡು ನಮ್ಮ ಹಕ್ಕುಗಳು, ಘನತೆಯ ರಕ್ಷಣೆ, ಸಂವಿಧಾನದ ಆಶಯಗಳು, ಮೌಲ್ಯಗಳ ಪ್ರತಿಪಾದನೆಗೆ ಯುವ ವರ್ಗವನ್ನು ಸಜ್ಜುಗೊಳಿಸುವುದು ಈ ಕಾರ್ಯಕ್ರಮದ ಮುಖ್ಯ ಉದ್ದೇಶ’ ಎಂದರು.

‘ಎಂಟು ತಿಂಗಳ ಈ ಕಾರ್ಯಕ್ರಮದ ಅವಧಿಯಲ್ಲಿ ಸಂಘಟನೆ, ಚಳವಳಿ, ಸಿದ್ಧಾಂತಗಳು, ನಾಯಕತ್ವ ಕುರಿತು ತರಬೇತಿ ನೀಡಲಾಗುವುದು’ ಎಂದರು.

‘35 ವರ್ಷಕ್ಕಿಂತ ಕಡಿಮೆ ವಯಸ್ಸಿನ ಯುವಕರು ಈ ಕಾರ್ಯಕ್ರಮದಲ್ಲಿ ಭಾಗವಹಿಸಲು ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಬೇಕು. ಸಾಮಾಜಿಕ ಅಥವಾ ರಾಜಕೀಯ ಕ್ಷೇತ್ರದಲ್ಲಿ ಕನಿಷ್ಠ ಮೂರು ವರ್ಷ ಕೆಲಸ ಮಾಡಿದ ಅನುಭವ ಇರಬೇಕು. ಯುವ ಕಾಂಗ್ರೆಸ್ ಪದಾಧಿಕಾರಿಗಳು, ಚುನಾಯಿತ ಜನಪ್ರತಿನಿಧಿಗಳು ಈ ತರಬೇತಿಯಲ್ಲಿ ಭಾಗವಹಿಸಬಹುದು’ ಎಂದೂ ಅವರು ತಿಳಿಸಿದರು.

‘ಆಸಕ್ತ ಯುವ ನಾಯಕರು www.iyc.in/nob-introduction ನಲ್ಲಿ ಅರ್ಜಿ ಸಲ್ಲಿಸಬಹುದು’ ಎಂದೂ ತಿಳಿಸಿದರು.

ಎತ್ತಿನ ಗಾಡಿ ಓಟ

ಚಿತ್ರ: ಬಿ.ಎಂ.ಕೇದಾರನಾಥ

ಧಾರವಾಡದಲ್ಲಿ ಮುರುಘಾ ಮಠದ ಮದಥಣಿ ಮುರುಘೇಂದ್ರ ಶಿವಯೋಗಿಯವರ 96ನೇ ಜಾತ್ರಾ ಮಹೋತ್ಸವ ಅಂಗವಾಗಿ ಭಾನುವಾರ ನಡೆದ ಖಾಲಿ ಎತ್ತಿನ ಗಾಡಿ ಓಟದ ಸ್ಪರ್ಧೆಯಲ್ಲಿ ಗುರಿ ಕಡೆಗೆ ಎತ್ತುಗಳು ಮುನ್ನುಗ್ಗಿದ ಪರಿ

ರಾಷ್ಟ್ರಪತಿಗೆ ರಾಜ್ಯಪಾಲರಿಂದ ವರದಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ವಿಧಾನಸಭೆಯಲ್ಲಿ ವಿಧಾನಮಂಡಲದ ಜಂಟಿ ಅಧಿವೇಶನ ಉದ್ದೇಶಿಸಿ ಭಾಷಣ ಮಾಡಿದ ಸಂದರ್ಭದಲ್ಲಿ ನಡೆದಿದ್ದ ಘಟನೆಗಳಿಗೆ ಸಂಬಂಧಿಸಿದಂತೆ ವಾಸ್ತವ ಅಂಶಗಳ ಪ್ರತ್ಯೇಕ ವರದಿಯೊಂದನ್ನು ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರು ರಾಷ್ಟ್ರಪತಿ ದ್ರೌಪದಿ ಮುರ್ಮು ಅವರಿಗೆ ಸಲ್ಲಿಸಿದ್ದಾರೆ.

ರಾಜ್ಯದಲ್ಲಿನ ರಾಜಕೀಯ, ಸಾಮಾಜಿಕ, ಅಭಿವೃದ್ಧಿ ಚಟುವಟಿಕೆ ಸೇರಿದಂತೆ ಎಲ್ಲ ಬೆಳವಣಿಗೆಗಳ ಕುರಿತು ಲೋಕಭವನದಿಂದ ರಾಷ್ಟ್ರಪತಿಗೆ ಪ್ರತಿ ತಿಂಗಳು ವರದಿ ಸಲ್ಲಿಸಲಾಗುತ್ತದೆ. ಜಂಟಿ ಅಧಿವೇಶನ ಸಂದರ್ಭದಲ್ಲಿ ವಿಧಾನಸಭೆಯಲ್ಲಿ ನಡೆದಿದ್ದ ಘಟನೆ ಮತ್ತು ಆ ನಂತರದ ಬೆಳವಣಿಗೆಗಳ ಕುರಿತು ಪ್ರತ್ಯೇಕವಾದ ವರದಿಯನ್ನು ಸಲ್ಲಿಸಲಾಗಿದೆ ಎಂದು ಲೋಕಭವನದ ಮೂಲಗಳು ತಿಳಿಸಿವೆ.

ಜಂಟಿ ಅಧಿವೇಶನದ ಹಿಂದಿನ ದಿನ (ಜ. 21) ಮತ್ತು ಮರುದಿನ ನಡೆದ ವಿದ್ಯಮಾನಗಳನ್ನು ತಮ್ಮ ವರದಿಯಲ್ಲಿ ರಾಜ್ಯಪಾಲರು ಉಲ್ಲೇಖಿಸಿದ್ದಾರೆ. ರಾಜ್ಯ ಸರ್ಕಾರ ಕಳುಹಿಸಿದ್ದ ಭಾಷಣದಲ್ಲಿ ವಿಬಿ ಜಿ ರಾಮ್ ಜಿ ಕಾಯ್ದೆಯೂ ಸೇರಿದಂತೆ ಕೇಂದ್ರ ಸರ್ಕಾರವನ್ನು ಟೀಕಿಸಲಾಗಿತ್ತು. ಈ ಭಾಗವನ್ನು ಪರಿಷ್ಕರಿಸುವಂತೆ ರಾಜ್ಯ ಸರ್ಕಾರಕ್ಕೆ ಸೂಚಿಸಲಾಗಿತ್ತು. ಬಳಿಕ ವಿಧಾನಸಭಾಧ್ಯಕ್ಷ, ವಿಧಾನ ಪರಿಷತ್ ಸಭಾಪತಿ, ಕಾನೂನು ಮತ್ತು ಸಂಸದೀಯ ವ್ಯವಹಾರ ಸಚಿವರು, ಮುಖ್ಯಮಂತ್ರಿಯವರ ಕಾನೂನು ಸಲಹೆಗಾರರ ಜತೆಗೆ ನಡೆದ ಚರ್ಚೆಯ ಬಗ್ಗೆಯೂ ವರದಿಯಲ್ಲಿ ಪ್ರಸ್ತಾಪಿಸಿದ್ದಾರೆ. ‘ಜಂಟಿ ಅಧಿವೇಶನವನ್ನು ಉದ್ದೇಶಿಸಿ ಭಾಷಣ ಮಾಡಬೇಕಾದ ಸಂವಿಧಾನಬದ್ಧ ಕರ್ತವ್ಯ ನಿಭಾಯಿಸಿದ್ದೇನೆ’ ಎಂದೂ ವರದಿಯಲ್ಲಿ ತಿಳಿಸಿದ್ದಾರೆ ಎಂದು ಮೂಲಗಳು ಹೇಳಿವೆ.

ಥಾವರಚಂದ್ ಗೆಹಲೋತ್

ಭಾಷಣ ವಿವಾದ

ಭಾಷಣ ಮುಗಿಸಿ ವಿಧಾನಸಭೆಯಿಂದ ಹೊರ ಹೋಗುವಾಗ ರಾಜ್ಯಪಾಲರ ವಿರುದ್ಧ ಘೋಷಣೆ ಕೂಗಿ ಒತ್ತಡ ಹೇರಲು ಪ್ರಯತ್ನಿಸಿದ ಕಾಂಗ್ರೆಸ್ ಸದಸ್ಯರ ವರ್ತನೆ ಬಗ್ಗೆಯೂ ವರದಿಯಲ್ಲಿ ಉಲ್ಲೇಖವಿದೆ. ಘಟನೆಯ ನಂತರ ಸದನದಲ್ಲಿ ಕಾಂಗ್ರೆಸ್, ಬಿಜೆಪಿ ನಾಯಕರು ವ್ಯಕ್ತಪಡಿಸಿದ ಅಭಿಪ್ರಾಯಗಳನ್ನೂ ಉಲ್ಲೇಖಿಸಲಾಗಿದೆ. ಈ ಘಟನಾವಳಿಗಳ ಕುರಿತು ರಾಜ್ಯಪಾಲರು ತಮ್ಮ ವೈಯಕ್ತಿಕ ಅಭಿಪ್ರಾಯವನ್ನು ಈ ವರದಿಯಲ್ಲಿ ವ್ಯಕ್ತಪಡಿಸಿಲ್ಲ ಎಂದೂ ಮೂಲಗಳು ತಿಳಿಸಿವೆ.

ಕೇಂದ್ರ ಸರ್ಕಾರದ ಕುರಿತು ಆಕ್ಷೇಪಾರ್ಹ ಸಾಲುಗಳಿವೆ ಎಂಬ ಕಾರಣ ಮುಂದಿಟ್ಟು ಜಂಟಿ ಅಧಿವೇಶನದಲ್ಲಿ ಪೂರ್ಣ ಭಾಷಣ ಓದದ ರಾಜ್ಯಪಾಲರ ನಡೆಯ ವಿರುದ್ಧ ಸಿಡಿದ ಕಾಂಗ್ರೆಸ್ ಸದಸ್ಯರು, ಅವರ ವಿರುದ್ಧ ಸದನದಲ್ಲೇ ಧಿಕ್ಕಾರ ಕೂಗಿದ್ದರು. ರಾಜ್ಯಪಾಲರ ಧೋರಣೆಯನ್ನು ಬಿಜೆಪಿ ಸದಸ್ಯರು ಬಲವಾಗಿ ಸಮರ್ಥಿಸಿಕೊಂಡಿದ್ದಾರೆ.

ಚಟಾಕಿ ಸುದ್ದಿ

ರಾಜ್ಯದಲ್ಲಿ ಪೊಲೀಸ್ ಆಡಳಿತ: ಅಶೋಕ

ಬೆಂಗಳೂರು: ‘ರಾಜ್ಯದಲ್ಲಿ ಪ್ರಜಾಪ್ರಭುತ್ವ ಇದೆಯಾ ಅಥವಾ ಪೊಲೀಸ್ ರಾಜ್ಯದ ಆಡಳಿತ ಇದೆಯಾ’ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್. ಅಶೋಕ ಅವರು ಪ್ರಶ್ನಿಸಿದ್ದಾರೆ.

‘ಎಕ್ಸ್’ನಲ್ಲಿ ಪೋಸ್ಟ್ ಮಾಡಿರುವ ಅವರು, ‘ಇನ್ನೂ ಜಾರಿಯೇ ಆಗದ ಒಂದು ಮಸೂದೆಯನ್ನು ಉಲ್ಲೇಖಿಸಿ ಪೊಲೀಸರು ವಿರೋಧ ಪಕ್ಷಗಳ ಕಾರ್ಯಕರ್ತರಿಗೆ ಬೆದರಿಕೆ ಹಾಕಿದ್ದಾರೆ. ರಾಜ್ಯದಲ್ಲಿ ಪೊಲೀಸ್ ಠಾಣೆಗಳು ಕಾಂಗ್ರೆಸ್ ಕಚೇರಿಗಳಾಗಿ ಬದಲಾಗಿವೆ ಎಂಬುದಕ್ಕೆ ಇದು ಸ್ಪಷ್ಟ ನಿದರ್ಶನ’ ಎಂದು ಆರೋಪಿಸಿದ್ದಾರೆ.

‘ರಾಜ್ಯಪಾಲರ ಅಂಕಿತ ಬೀಳದೆ, ರಾಜ್ಯಪತ್ರದಲ್ಲಿ ಪ್ರಕಟವಾಗದೆ ಯಾವೊಂದು ಮಸೂದೆಯೂ ಕಾಯ್ದೆಯಾಗುವುದಿಲ್ಲ ಎಂಬ ಕನಿಷ್ಠ ಜ್ಞಾನವೂ ಸ್ವಯಂಘೋಷಿತ ಸಂವಿಧಾನ ತಜ್ಞರು ಮತ್ತು ವಕೀಲರೂ ಆಗಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಇಲ್ಲವೇ’ ಎಂದು ಪ್ರಶ್ನಿಸಿದ್ದಾರೆ.

ನೋಟಿಸ್ ನೀಡಿದ್ದು ತಪ್ಪು: ಗೃಹ ಸಚಿವ

ಬೆಂಗಳೂರು: ‘ದ್ವೇಷ ಭಾಷಣ ಮಸೂದೆಯ ಅಡಿ ಬಿಜೆಪಿ ಮುಖಂಡ ವಿಕಾಸ್ ಪುತ್ತೂರು ಅವರಿಗೆ ಪೊಲೀಸರು ನೋಟಿಸ್ ನೀಡಿದ್ದು ತಪ್ಪು’ ಎಂದು ಗೃಹ ಸಚಿವ ಪರಮೇಶ್ವರ ಹೇಳಿದರು.

ಸುದ್ದಿಗಾರರ ಜೊತೆ ಭಾನುವಾರ ಮಾತನಾಡಿದ ಅವರು, ‘ಈ ವಿಚಾರವಾಗಿ ಮಾಹಿತಿ ಪಡೆದು ಪರಿಶೀಲಿಸುತ್ತೇನೆ’ ಎಂದರು.

‘ಇನ್ನೂ ಕಾಯ್ದೆಯಾಗಿ ಜಾರಿಯಾಗದ ಕಾರಣ ಈ ಮಸೂದೆಯ ಅಡಿ ನೋಟಿಸ್ ನೀಡಿರುವುದು ತಪ್ಪು. ಪೊಲೀಸರು ಯಾಕೆ ಈ ರೀತಿ ಮಾಡಿದ್ದಾರೆ ಎನ್ನುವುದನ್ನು ನೋಡಬೇಕು’ ಎಂದೂ ಹೇಳಿದರು.

‘ಗ್ಯಾರಂಟಿ’ ಪ್ರಚಾರಕ್ಕೆ ‘ರಂಗೋಲಿ’

ಬೆಂಗಳೂರು: ಬೆಂಗಳೂರು ದಕ್ಷಿಣ ಜಿಲ್ಲೆಯಲ್ಲಿ ಸರ್ಕಾರದ ಪಂಚ ಗ್ಯಾರಂಟಿ ಯೋಜನೆಗಳಿಗೆ ವ್ಯಾಪಕವಾಗಿ ಪ್ರಚಾರ ನೀಡುವ ಉದ್ದೇಶದಿಂದ ‘ಪ್ರತಿ ಮನೆಗೆ ಐದು ಗ್ಯಾರಂಟಿಗಳು. ಮನೆ ಮುಂದೆ ರಂಗೋಲಿ’ ಎಂಬ ಶೀರ್ಷಿಕೆಯಡಿ ರಂಗೋಲಿ ಹಾಕುವ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ತಿಳಿಸಿದ್ದಾರೆ.

ಇದೇ 28 ರಂದು ಬೆಳಿಗ್ಗೆ 15 ಸಾವಿರ ರಂಗೋಲಿಗಳನ್ನು ಹಾಕುವ ಕಾರ್ಯಕ್ರಮವನ್ನು ಕನಕಪುರ ನಗರದಲ್ಲಿ ಏರ್ಪಡಿಸಲಾಗಿದೆ. ಗ್ಯಾರಂಟಿ ಯೋಜನೆಯ ಅನುಷ್ಠಾನ ಸಮಿತಿಯ ಅಧ್ಯಕ್ಷರು ಮತ್ತು ಸದಸ್ಯರು ಈ ಕಾರ್ಯಕ್ರಮದಲ್ಲಿ ಭಾಗವಹಿಸಬೇಕು ಎಂದೂ ಅವರು ತಿಳಿಸಿದ್ದಾರೆ.

ರಾಜ್ಯದ 8 ಸಾಧಕರಿಗೆ ‘ಪದ್ಮ’ ಪ್ರಶಸ್ತಿ

ಒಂದನೇ ಪುಟದಿಂದ...

ಧರ್ಮೇಂದ್ರ

ಕೇರಳದ ಮಾಜಿ ಮುಖ್ಯಮಂತ್ರಿ ವಿ.ಎಸ್. ಅಚ್ಯುತಾನಂದನ್ ಹಾಗೂ ಬಾಲಿವುಡ್ ನಟ ಧರ್ಮೇಂದ್ರ ಅವರಿಗೆ ಮರಣೋತ್ತರವಾಗಿ ‘ಪದ್ಮವಿಭೂಷಣ’ ನೀಡಿ ಗೌರವಿಸಲಾಗಿದೆ. ಮಲಯಾಳ ನಟ ಮಮ್ಮುಟ್ಟಿ, ಗಾಯಕಿ ಅಲ್ಕಾ ಯಾಜ್ಞಿಕ್, ಉತ್ತರ ಪ್ರದೇಶದ ಮಾಜಿ ಮುಖ್ಯಮಂತ್ರಿ ಭಗತ್ ಸಿಂಗ್ ಕೋಶ್ಯಾರಿ, ಕೋಟಕ್ ಮಹೀಂದ್ರ ಬ್ಯಾಂಕ್‌ನ ಸಂಸ್ಥಾಪಕ ಉದಯ್ ಕೋಟಕ್ ಅವರು ‘ಪದ್ಮಭೂಷಣ’ಕ್ಕೆ ಆಯ್ಕೆಯಾಗಿದ್ದಾರೆ.

ಟೆನಿಸ್ ದಂತಕಥೆ ವಿಜಯ್ ಅಮೃತ್‌ರಾಜ್ ಮತ್ತು ಕ್ರಿಕೆಟಿಗ ರೋಹಿತ್ ಶರ್ಮಾ ಸೇರಿದಂತೆ ಎಂಟು ಕ್ರೀಡಾಪಟುಗಳು ಈ ಬಾರಿ ‘ಪದ್ಮ’ ಪುರಸ್ಕೃತರಲ್ಲಿ ಸೇರಿದ್ದಾರೆ.

ಬಿಜೆಪಿ ಹಿರಿಯ ನಾಯಕ ವಿ.ಕೆ. ಮಲ್ಹೋತ್ರ, ಜೆಎಂಎಂ ಸ್ಥಾಪಕ ಮತ್ತು ಜಾರ್ಖಂಡ್‌ನ ಮಾಜಿ ಮುಖ್ಯಮಂತ್ರಿ ಶಿಬು ಸೊರೇನ್, ದೇಶದ ಜಾಹೀರಾತು ಲೋಕಕ್ಕೆ ವಿಶೇಷ ಮೆರುಗು ತುಂಬಿದ್ದ ಪೀಯೂಷ್ ಪಾಂಡೆ ಅವರಿಗೆ ಮರಣೋತ್ತರವಾಗಿ ‘ಪದ್ಮಭೂಷಣ’ ಗೌರವ ನೀಡಲಾಗಿದೆ.

ಪ್ರಶಸ್ತಿ ಪುರಸ್ಕೃತರಲ್ಲಿ 19 ಮಹಿಳೆಯರು ಮತ್ತು ಆರು ಮಂದಿ ಅನಿವಾಸಿ ಭಾರತೀಯರು ಸೇರಿದ್ದಾರೆ. 16 ಮಂದಿಗೆ ಮರಣೋತ್ತರವಾಗಿ ಪ್ರಶಸ್ತಿ ನೀಡಲಾಗಿದೆ. ಹಲವಾರು ಬುಡಕಟ್ಟು ಜನಾಂಗದವರು, ಸಾಂಪ್ರದಾಯಿಕ ಔಷಧಿ ನೀಡುವವರು, ಕಲಾ ಸಾಧಕರು ಪ್ರಶಸ್ತಿ ಪುರಸ್ಕೃತರಲ್ಲಿ ಸೇರಿದ್ದಾರೆ.

ಕೇರಳ ಚುನಾವಣೆಯತ್ತ ಚಿತ್ತ

ಅಚ್ಯುತಾನಂದನ್

ಮಮ್ಮುಟ್ಟಿ

ನವದೆಹಲಿ: ಕೇಂದ್ರ ಸರ್ಕಾರವು ಈ ಬಾರಿಯ ‘ಪದ್ಮ’ ಪ್ರಶಸ್ತಿಗೆ ಸಾಧಕರನ್ನು ಆಯ್ಕೆ ಮಾಡುವಾಗ ಕೇರಳ ವಿಧಾನಸಭಾ ಚುನಾವಣೆಯನ್ನು ಗಮನದಲ್ಲಿಟ್ಟುಕೊಂಡಿದೆ ಎಂದು ವಿಶ್ಲೇಷಿಸಲಾಗಿದೆ.

ಕೇರಳದ ಮಾಜಿ ಮುಖ್ಯಮಂತ್ರಿ ವಿ.ಎಸ್. ಅಚ್ಯುತಾನಂದನ್, ಬಿಜೆಪಿಯ ಮುಖವಾಣಿ ಎನಿಸಿರುವ ಮಲಯಾಳ ಪತ್ರಿಕೆ ‘ಜನ್ಮಭೂಮಿ’ಯ ಸಹ ಸ್ಥಾಪಕ ಮತ್ತು ಪ್ರಧಾನ ಸಂಪಾದಕ ಪಿ.ನಾರಾಯಣನ್, ಒಬಿಸಿ ನಾಯಕ ವೆಲ್ಲಪ್ಪಳ್ಳಿ ನಟೇಶನ್ ಮತ್ತು ನಟ ಮಮ್ಮುಟ್ಟಿ ಅವರು ಪ್ರಶಸ್ತಿ ಪುರಸ್ಕೃತರಲ್ಲಿ ಸೇರಿದ್ದಾರೆ.

ಸಂಘ ಪರಿವಾರದ ಪ್ರಮುಖ ಟೀಕಾಕಾರರಲ್ಲಿ ಒಬ್ಬರಾಗಿದ್ದ ಅಚ್ಯುತಾನಂದನ್ (ಮರಣೋತ್ತರವಾಗಿ) ಅವರನ್ನು ಪ್ರಶಸ್ತಿಗೆ ಆಯ್ಕೆ ಮಾಡಿರುವುದು ಸಿಪಿಎಂ ಅನ್ನು ಇಕ್ಕಟ್ಟಿಗೆ ಸಿಲುಕಿಸಿದೆ. ಅಚ್ಯುತಾನಂದನ್ ಅವರ ಕುಟುಂಬವು ಕೇಂದ್ರ ಸರ್ಕಾರದ ನಿರ್ಧಾರವನ್ನು ಸ್ವಾಗತಿಸಿದೆ. 2022ರಲ್ಲಿ ಪಶ್ಚಿಮ ಬಂಗಾಳದ ಮಾಜಿ ಮುಖ್ಯಮಂತ್ರಿ ಬುದ್ಧದೇವ್ ಭಟ್ಟಾಚಾರ್ಯ ಅವರು ‘ಪದ್ಮ’ ಪ್ರಶಸ್ತಿಯನ್ನು ನಿರಾಕರಿಸಿದ್ದರು.

ಶ್ರೀ ನಾರಾಯಣ ಧರ್ಮ ಪರಿಪಾಲನ ಯೋಗಂ (ಎಸ್‌ಎನ್‌ಡಿಪಿ) ಪ್ರಧಾನ ಕಾರ್ಯದರ್ಶಿ ವೆಲ್ಲಪ್ಪಳ್ಳಿ ನಟೇಶನ್ ಅವರ ಆಯ್ಕೆಯು ಚುನಾವಣೆ ನಡೆಯಲಿರುವ ಕೇರಳದಲ್ಲಿ ರಾಜಕೀಯ ಮಹತ್ವವನ್ನು ಪಡೆದುಕೊಂಡಿದೆ.

ಎಸ್‌ಎನ್‌ಡಿಪಿಯು ಕೇರಳದ ಅತಿದೊಡ್ಡ ಹಿಂದೂ ಸಮುದಾಯ ಎನಿಸಿರುವ ‘ಹಿಂದೂ ಈಳವ’ರನ್ನು ಪ್ರತಿನಿಧಿಸುವ ವೇದಿಕೆಯಾಗಿದೆ. ಕಳೆದ ಕೆಲವು ಚುನಾವಣೆಗಳಲ್ಲಿ ಹಿಂದೂ ಈಳವ ಮತಗಳು ಬಿಜೆಪಿಗೆ ಹೋಗುತ್ತಿರುವ ಬಗ್ಗೆ ಸಿಪಿಎಂ ಕಳವಳ ವ್ಯಕ್ತಪಡಿಸಿತ್ತು.

ನಟೇಶನ್ ಅವರ ಪುತ್ರ ತುಷಾರ್ ವೆಲ್ಲಪ್ಪಳ್ಳಿ ಅವರು ಕೇರಳದಲ್ಲಿ ಬಿಜೆಪಿಯ ಪ್ರಮುಖ ಮಿತ್ರಪಕ್ಷವಾಗಿರುವ ಭಾರತ್ ಧರ್ಮ ಜನ ಸೇನಾದ ಅಧ್ಯಕ್ಷರಾಗಿದ್ದಾರೆ.

ಗ್ರೇಟರ್ ಬೆಂಗಳೂರು ಸಮಗ್ರ ಉಪನಗರ ಯೋಜನೆ ಬಹಿರಂಗ ಚರ್ಚೆ

ಕುಮಾರಸ್ವಾಮಿ ಪಂಥಾಹ್ವಾನ

ಪ್ರಜಾವಾಣಿ ವಾರ್ತೆ

ಬಿಡದಿ: ‘ರೈತರ ಒಂದಿಂಚೂ ಭೂಮಿ ವಶಪಡಿಸಿಕೊಳ್ಳಲೂ ಬಿಡುವುದಿಲ್ಲ. ನಿಮ್ಮ ಭೂಮಿ ಉಳಿಸುವುದು ನನ್ನ ಜವಾಬ್ದಾರಿ. ಯಾರು ಏನೇ ಒತ್ತಡ ಹಾಕಿದರೂ ಬಾಗಬೇಡಿ. ಸಾಯುವವರೆಗೆ ನಿಮ್ಮ ಜೊತೆಗಿದ್ದು ಹೋರಾಡುವೆ’ ಎಂದು ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ರೈತರಿಗೆ ಅಭಯ ನೀಡಿದ್ದಾರೆ.

ಗ್ರೇಟರ್ ಬೆಂಗಳೂರು ಸಮಗ್ರ ಉಪನಗರ (ಜಿಬಿಐಟಿ) ಯೋಜನೆ ವಿರೋಧಿಸಿ ಭೈರಮಂಗಲದಲ್ಲಿ ನಡೆಯುತ್ತಿರುವ ಅನಿರ್ದಿಷ್ಟಾವಧಿ ಧರಣಿಯಲ್ಲಿ ಭಾನುವಾರ ಪಾಲ್ಗೊಂಡು ಮಾತನಾಡಿದರು.

‘ಅಧಿಕಾರಿಗಳು ಮತ್ತು ಪೊಲೀಸರನ್ನು ಮುಂದಿಟ್ಟುಕೊಂಡು ದಬ್ಬಾಳಿಕೆ ಮಾಡುವುದು ಡಿಕೆ ಸಹೋದರರ ಹುಟ್ಟುಗುಣ. ಅಧಿಕಾರ ಯಾರಿಗೂ ಶಾಶ್ವತವಲ್ಲ. 2028ರಲ್ಲಿ ನಮ್ಮ ಸರ್ಕಾರ ಬರಲಿದೆ. ಆಗ ಜನರನ್ನು ಕಣ್ಣೀರು ಹಾಕಿಸಿದವರಿಗೆ ಏನು ಮಾಡಬೇಕೆಂಬುದು ಗೊತ್ತಿದೆ’ ಎಂದು ಎಚ್ಚರಿಕೆ ನೀಡಿದರು.

‘ಯೋಜನೆಗೆ ಸರ್ಕಾರದ ಬಳಿ ಹಣವಿಲ್ಲ. ರೈತರಿಂದ ವಶಪಡಿಸಿಕೊಳ್ಳುವ ಜಮೀನು ಮಾರಿ ಹಣ ತರುವ ಆಲೋಚನೆ ಇವರದ್ದು. ಡಿಕೆ ಸಹೋದರರಿಗೆ ಲೂಟಿ ಹೊಡೆಯುವ ಚಪಲ’ ಎಂದು ವಾಗ್ದಾಳಿ ನಡೆಸಿದರು.

‘ಉಪನಗರ ಯೋಜನೆ ತಮ್ಮ ಕೂಸು ಎಂದು ಡಿಕೆ ಸಹೋದರರು ಹೇಳುತ್ತಿದ್ದಾರೆ. ಯೋಜನೆ ರೂಪಿಸಿದ್ದು ನಾನು. ಆದರೆ, ರೈತರು ಬೇಡ ಎಂದು ಮನವಿ ಮಾಡಿದ್ದಕ್ಕೆ ಕೈ ಬಿಟ್ಟೆ. ಈ ಬಗ್ಗೆ ಚರ್ಚಿಸಲು ಅಣ್ಣ–ತಮ್ಮ ಇಬ್ಬರೂ ಇದೇ ಜಾಗಕ್ಕೆ ಚರ್ಚೆಗೆ ಬರಲಿ’ ಎಂದು ಕುಮಾರಸ್ವಾಮಿ, ಡಿಕೆ ಸಹೋದರರಿಗೆ ಸವಾಲು ಹಾಕಿದರು.

ರಾಮನಗರ ತಾಲ್ಲೂಕಿನ ಬಿಡದಿ ಹೋಬಳಿಯಲ್ಲಿ ಗ್ರೇಟರ್ ಬೆಂಗಳೂರು ಸಮಗ್ರ ಉಪನಗರ ಯೋಜನೆ ವಿರೋಧಿಸಿ, ಭೈರಮಂಗಲದಲ್ಲಿ ರೈತರು ನಡೆಸುತ್ತಿರುವ ಅನಿರ್ದಿಷ್ಟಾವಧಿ ಧರಣಿಯಲ್ಲಿ ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಭಾನುವಾರ ಪಾಲ್ಗೊಂಡು, ರೈತ ಮಹಿಳೆಯರ ಅಹವಾಲು ಆಲಿಸಿದರು. ಮಾಜಿ ಶಾಸಕ ಎ. ಮಂಜುನಾಥ್ ಇದ್ದರು

> **ರಾಜ್ಯದಲ್ಲಿ ಜೆಡಿಎಸ್–ಬಿಜೆಪಿ ಮೈತ್ರಿಕೂಟದ ನೇತೃತ್ವದಲ್ಲಿ 2028ರಲ್ಲಿ ನಿಜವಾದ ರಾಮರಾಜ್ಯದ ಸರ್ಕಾರ ತರಬೇಕು ಎಂದೇ ಆ ದೇವರು ಐದು ಸಲ ನನ್ನ ಉಳಿಸಿದ್ದಾನೆ**
> **ಎಚ್.ಡಿ. ಕುಮಾರಸ್ವಾಮಿ,** ಕೇಂದ್ರ ಸಚಿವ

ಚರ್ಚೆಗೆ ನಾನೂ ಬರುವೆ: ಡಿಕೆಶಿ

ಎಚ್‌ಡಿಕೆ ಪಂಥಾಹ್ವಾನಕ್ಕೆ ಕನಕಪುರ ತಾಲ್ಲೂಕಿನ ದೊಡ್ಡ ಆಲಹಳ್ಳಿಯಲ್ಲಿ ಮಾಧ್ಯಮಗಳಿಗೆ ಪ್ರತಿಕ್ರಿಯಿಸಿದ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ‘ಕುಮಾರಸ್ವಾಮಿ ಅವರು ಚರ್ಚೆಗೆ ದಿನ ನಿಗದಿಪಡಿಸಿದರೆ ನಾನು ಬರುವೆ. ಅವರು ಸಿ.ಎಂ ಆಗಿದ್ದಾಗಲೇ ಇಂತಹ ಸವಾಲು ಸ್ವೀಕರಿಸಿದವನು ನಾನು. ಅವರು ಮೂರು ದಿನ ಮುಂಚೆ ನನಗೆ ತಿಳಿಸಲಿ. ಅವರ ಎಲ್ಲಾ ಪ್ರಶ್ನೆಗಳಿಗೆ ಉತ್ತರಿಸುವೆ’ ಎಂದು ಪ್ರತಿ ಸವಾಲು ಹಾಕಿದರು.

ಮೂಲಹಂತದ ಸಮೀಕ್ಷಾ ವರದಿಯಲ್ಲಿ ಉಲ್ಲೇಖ ● ಶಾಲೆಗಳಲ್ಲಿ ಜಾಗೃತಿಗೆ ಶಿಫಾರಸು

ಲಿಂಗತ್ವ ಅಲ್ಪಸಂಖ್ಯಾತರ ಶಿಕ್ಷಣ: ದೌರ್ಜನ್ಯವೇ ಅಡ್ಡಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ 10,365 ಲಿಂಗತ್ವ ಅಲ್ಪಸಂಖ್ಯಾತರನ್ನು ‘ಲಿಂಗತ್ವ ಅಲ್ಪಸಂಖ್ಯಾತರ ಮೂಲಹಂತದ ಸಮೀಕ್ಷೆ’ಯು ಗುರುತಿಸಿದ್ದು, ಆ ಪೈಕಿ 9,701 ಮಂದಿಯು ಶಾಲೆಗಳಲ್ಲಿ ತಮ್ಮ ಮೇಲೆ ದೌರ್ಜನ್ಯ ನಡೆದಿದೆ ಹಾಗೂ ಶಾಲೆಗಳಲ್ಲಿ ತಮ್ಮನ್ನು ತಾರತಮ್ಯದಿಂದ ನೋಡಿಕೊಳ್ಳಲಾಗಿದೆ ಎಂದು ಹೇಳಿಕೊಂಡಿದ್ದಾರೆ.

ದೌರ್ಜನ್ಯ ಮತ್ತು ತಾರತಮ್ಯದ ಕಾರಣದಿಂದಲೇ 2,589 ಮಂದಿ ಶಾಲೆ ಬಿಟ್ಟಿರುವುದಾಗಿ ಹೇಳಿಕೊಂಡಿದ್ದಾರೆ ಎಂಬ ಮಾಹಿತಿ ಸಮೀಕ್ಷಾ ವರದಿಯಲ್ಲಿದೆ.

ಸಮೀಕ್ಷೆಯು ಗುರುತಿಸಿದ 10,365 ಮಂದಿಯ ಪೈಕಿ 10,250 ಜನರ ಶೈಕ್ಷಣಿಕ ವಿವರಗಳು ಲಭ್ಯವಾಗಿವೆ. 1,769 ಮಂದಿ ಅನಕ್ಷರಸ್ಥರು. 1,472 ಮಂದಿ ಪ್ರಾಥಮಿಕ ಹಂತದಲ್ಲೇ ಶಾಲೆ ಬಿಟ್ಟಿದ್ದರೆ, 1,327 ಮಂದಿ ಹಿರಿಯ ಪ್ರಾಥಮಿಕ ಹಂತದಲ್ಲಿ ಶಿಕ್ಷಣ ತೊರೆದಿದ್ದಾರೆ. 1,603 ಮಂದಿ ಪ್ರೌಢಶಿಕ್ಷಣ ಹಂತದಲ್ಲಿ ಶಾಲೆಯಿಂದ ಹೊರಬಂದರೆ, ಎಸ್‌ಎಸ್‌ಎಲ್‌ಸಿ ಪೂರ್ಣಗೊಳಿಸಿದ್ದು 1,123 ಲಿಂಗತ್ವ ಅಲ್ಪಸಂಖ್ಯಾತರು ಮಾತ್ರ.

1,142 ಮಂದಿ ಪಿಯುಸಿ ಅಥವಾ ಡಿಪ್ಲೊಮಾ, 34 ಮಂದಿ ವೃತ್ತಿಪರ ಕೋರ್ಸ್, ಏಳು ಮಂದಿ ಕಾನೂನು ಪದವಿ, ಐವರು ಎಂಬಿಬಿಎಸ್, 350 ಜನರು ವಿವಿಧ ಪದವಿ ಪಡೆದಿದ್ದಾರೆ. ಸ್ನಾತಕೋತ್ತರ ಪದವಿ ಪಡೆದವರು 120 ಜನರಾದರೆ, ಡಾಕ್ಟರೇಟ್ ಪದವೀಧರರ ಸಂಖ್ಯೆ 3ರಷ್ಟಿದೆ. ಉಳಿದವರು ವಿವಿಧ ಅಸಂಪ್ರದಾಯಿಕ ಶಿಕ್ಷಣ–ಇತರ ಕೋರ್ಸ್‌ಗಳನ್ನು ಪೂರೈಸಿದ್ದಾರೆ.

ಇವರಲ್ಲಿ 48 ಜನರು ರಾಜ್ಯ ಸರ್ಕಾರಿ ನೌಕರಿ, 13 ಮಂದಿ ಕೇಂದ್ರ ಸರ್ಕಾರಿ ನೌಕರಿ ಮತ್ತು 1,373 ಮಂದಿ ಖಾಸಗಿ ಉದ್ಯೋಗದಲ್ಲಿ ಇದ್ದಾರೆ. 689 ಮಂದಿ ಸ್ವಯಂ ಉದ್ಯೋಗಿಗಳಾಗಿದ್ದರೆ, 278 ಜನರು ವಿವಿಧ ಸ್ವಯಂಸೇವಾ ಸಂಸ್ಥೆಗಳಲ್ಲಿ ದುಡಿಯುತ್ತಿದ್ದಾರೆ. 7,849 ಮಂದಿಗೆ ನಿರ್ದಿಷ್ಟ ಉದ್ಯೋಗವಿಲ್ಲ ಮತ್ತು ತಾವು ಮಾಡುತ್ತಿರುವ ಉದ್ಯೋಗದ ಸ್ವರೂಪ ವಿವರಿಸಲು ಅವರು ಮುಂದೆ ಬಂದಿಲ್ಲ.

ಈ ಸಮುದಾಯದಲ್ಲಿ ಶಿಕ್ಷಣದ ಪ್ರಮಾಣ ಕಡಿಮೆ ಇರುವ ಕಾರಣಕ್ಕೆ ಔದ್ಯೋಗಿಕ ಭದ್ರತೆಯೂ ಇಲ್ಲ. ಜತೆಗೆ ದೌರ್ಜನ್ಯ ಅಥವಾ ತಾರತಮ್ಯದ ಭಯವೂ ಅವರನ್ನು ಉದ್ಯೋಗದಿಂದ ದೂರ ಇರಿಸಿವೆ ಎಂಬ ಮಾಹಿತಿ ವರದಿಯಲ್ಲಿದೆ.

ಈ ಸಮುದಾಯಕ್ಕೆ ಶಿಕ್ಷಣ ಮತ್ತು ಆ ಮೂಲಕ ಔದ್ಯೋಗಿಕ ಭದ್ರತೆ ಒದಗಿಸುವುದು ಅವಶ್ಯ. ಅದಕ್ಕಾಗಿ ಸಾಮಾನ್ಯ ಮಕ್ಕಳಲ್ಲಿ, ಶಿಕ್ಷಕರಲ್ಲಿ ಲಿಂಗತ್ವ ಅಲ್ಪಸಂಖ್ಯಾತತ್ವದ ಬಗ್ಗೆ ಅರಿವು ಮೂಡಿಸಬೇಕು. ದೌರ್ಜನ್ಯ ಮತ್ತು ತಾರತಮ್ಯಕ್ಕೆ ಅವಕಾಶ ಇಲ್ಲದಂತಹ ವಾತಾವರಣವನ್ನು ಶಾಲೆಗಳಲ್ಲಿ ರೂಪಿಸಬೇಕು. ಇದಕ್ಕಾಗಿ ಪರಿಣಾಮಕಾರಿ ಕಾರ್ಯಕ್ರಮ ರೂಪಿಸಬೇಕು ಎಂದು ವರದಿಯು ಸರ್ಕಾರಕ್ಕೆ ಶಿಫಾರಸು ಮಾಡಿದೆ.





ಮಹಾರಾಷ್ಟ್ರದಲ್ಲಿ ಕನ್ನಡ ಶಾಲೆಗಳ ನಿಟ್ಟುಸಿರು

ಪ್ರಜಾವಾಣಿ ವಾರ್ತೆ

ಸೊಲ್ಲಾಪುರ: ಮಹಾರಾಷ್ಟ್ರದ ಕನ್ನಡ ಹಾಗೂ ಉರ್ದು ಮಾಧ್ಯಮ ಶಾಲೆಗಳಲ್ಲಿ ಶಿಕ್ಷಕರ ನೇಮಕಾತಿಗೆ ಸಂಬಂಧಿಸಿದಂತೆ ಕಳೆದ ಕೆಲವು ವರ್ಷಗಳಿಂದ ಉಂಟಾಗಿದ್ದ ಗೊಂದಲಕ್ಕೆ ತೆರೆ ಬಿದ್ದಿದೆ.

ಮಹಾರಾಷ್ಟ್ರ ಶಿಕ್ಷಣ ಇಲಾಖೆಯ ‘ಪವಿತ್ರ ಪೋರ್ಟಲ್’ ತಂತ್ರಾಂಶದಲ್ಲಿ ಮಹತ್ವದ ಬದಲಾವಣೆಗಳನ್ನು ಮಾಡಿದ್ದು, ಇನ್ಮುಂದೆ ಶಾಲೆಗಳ ಬೋಧನಾ ಮಾಧ್ಯಮಕ್ಕೆ ಅನುಗುಣವಾಗಿಯೇ ಶಿಕ್ಷಕರ ನೇಮಕಾತಿ ನಡೆಸಲು ತೀರ್ಮಾನಿಸಿದೆ.

ಹಳೆಯ ತಪ್ಪಿಗೆ ತಿದ್ದುಪಡಿ: ಹಿಂದಿನ ನೇಮಕಾತಿ ಪ್ರಕ್ರಿಯೆಯಲ್ಲಿ ‘ಪವಿತ್ರ’ ಪೋರ್ಟಲ್ ಮೂಲಕ ಕನ್ನಡ ಹಾಗೂ ಉರ್ದು ಮಾಧ್ಯಮ ಶಾಲೆಗಳಿಗೆ ಮರಾಠಿ ಮಾಧ್ಯಮದ ಶಿಕ್ಷಕರನ್ನು ನಿಯೋಜಿಸಲಾಗಿತ್ತು. ಇದರಿಂದ ಗಡಿಭಾಗದ ಕನ್ನಡಿಗರು ಹಾಗೂ ಭಾಷಾ ಹೋರಾಟಗಾರರಲ್ಲಿ ಆಕ್ರೋಶ ವ್ಯಕ್ತವಾಗಿತ್ತು.

ಮರಾಠಿ ಮಾತ್ರ ಬಲ್ಲ ಶಿಕ್ಷಕರು ಕನ್ನಡ ಶಾಲೆಗಳಲ್ಲಿ ಪರಿಣಾಮಕಾರಿಯಾಗಿ ಬೋಧನೆ ನಡೆಸಲು ಸಾಧ್ಯವಿಲ್ಲ ಎಂಬ ಆಕ್ಷೇಪ ಕೇಳಿಬಂದಿತ್ತು.

ಮುಖ್ಯಾಂಶಗಳು

- ಮಾಧ್ಯಮ ಆಧಾರಿತ ಶಿಕ್ಷಕರ ನೇಮಕ– ತೀರ್ಮಾನ
- ‘ಪವಿತ್ರ ಪೋರ್ಟಲ್’ ತಂತ್ರಾಂಶದಲ್ಲಿ ಬದಲಾವಣೆ

ಈ ಬಗ್ಗೆ ಜತ್ತ ತಾಲ್ಲೂಕಿನ ಮಾಜಿ ಶಾಸಕ ವಿಕ್ರಮಸಿಂಹ ಸಾವಂತ ನೇತೃತ್ವದಲ್ಲಿ ಆದರ್ಶ ಕನ್ನಡ ಬಳಗ ಮಹಾರಾಷ್ಟ್ರವು ಹೋರಾಟ ನಡೆಸಿತ್ತು. ಈ ಹಿನ್ನೆಲೆಯಲ್ಲಿ ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ ಅಧ್ಯಕ್ಷ ಸೋಮಣ್ಣ ಬೇವಿನಮರದ ಅವರು ಮಹಾರಾಷ್ಟ್ರದ ಕನ್ನಡ ಶಾಲೆಗಳಿಗೆ ಭೇಟಿ ನೀಡಿ, ಮಹಾರಾಷ್ಟ್ರ ಸರ್ಕಾರದ ಗಮನಕ್ಕೆ ವಿಷಯ ತಂದಿದ್ದರು.

‘ಮಹಾರಾಷ್ಟ್ರದ ನಿರ್ಧಾರವನ್ನು ಸ್ವಾಗತಿಸುತ್ತೇವೆ. ಭಾಷಾ ಅಲ್ಪಸಂಖ್ಯಾತರಿಗೆ ಸಂವಿಧಾನಾತ್ಮಕ ಹಕ್ಕುಗಳನ್ನು ಒದಗಿಸುವುದು ಆಯಾ ರಾಜ್ಯ ಸರ್ಕಾರಗಳ ಜವಾಬ್ದಾರಿ’ ಎಂದು ಸೋಮಣ್ಣ ಬೇವಿನಮರದ ಪ್ರತಿಕ್ರಿಯಿಸಿದ್ದಾರೆ.

ಚಿಟಿಕೆ ಸುದ್ದಿ

ಪುನೀತ್ ಕೆರೆಹಳ್ಳಿ ವಿರುದ್ಧ ಎಫ್‌ಐಆರ್

ಬೆಂಗಳೂರು: ಬಾಂಗ್ಲಾದೇಶದ ಅಕ್ರಮ ವಲಸಿಗರ ಕುರಿತು ಸಾಮಾಜಿಕ ಜಾಲತಾಣದಲ್ಲಿ ಸುಳ್ಳು ಸುದ್ದಿ ಹರಡುವ ಮೂಲಕ ಸಮಾಜದಲ್ಲಿ ಶಾಂತಿ ಸುವ್ಯವಸ್ಥೆಗೆ ಹಾಗೂ ಕೋಮು ಸೌಹಾರ್ದಕ್ಕೆ ಧಕ್ಕೆ ತಂದ ಆರೋಪದಡಿ ರಾಷ್ಟ್ರ ರಕ್ಷಣಾ ಪಡೆ ಮುಖಂಡ ಪುನೀತ್ ಕೆರೆಹಳ್ಳಿ ವಿರುದ್ಧ ನಗರದ ಸೈಬರ್ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

ಜನವರಿ 22ರಂದು ಪುನೀತ್ ಕೆರೆಹಳ್ಳಿ ಮತ್ತು ಸಹಚರರು ಸೋಲದೇವನಹಳ್ಳಿ ಬಳಿಯ ಕೆಂಪಾಪುರದ ಶ್ವೇತಾ ಫಾರಂ ರಸ್ತೆಯಲ್ಲಿನ ಸಕೀನಾ ತಸ್ನೀಮ್ ಎಂಬುವರಿಗೆ ಸೇರಿದ ಜಾಗಕ್ಕೆ ಹೋಗಿ ಗಲಾಟೆ ಮಾಡಿದ್ದರು. ಬಾಂಗ್ಲಾದೇಶದವರನ್ನು ಮಾನವ ಕಳ್ಳ ಸಾಗಾಣಿಕೆ ಮೂಲಕ ಕರೆತಂದು ಅಕ್ರಮ ವಾಸ್ತವ್ಯಕ್ಕೆ ಅವಕಾಶ ಕಲ್ಪಿಸಲಾಗಿದೆ ಎಂದು ವಾಗ್ವಾದ ನಡೆಸಿದ್ದರು ಎಂದು ಪೊಲೀಸರು ತಿಳಿಸಿದ್ದಾರೆ.

ಶ್ವೇತಾ ಫಾರಂ ರಸ್ತೆಯ ಜಾಗವು ರಾಜ್ಯ ಪೊಲೀಸ್ ಮಹಾ ನಿರ್ದೇಶಕ ಎಂ.ಎ.ಸಲೀಂ ಅವರ ಬೇನಾಮಿ ಆಸ್ತಿ ಎಂದು ಪುನೀತ್ ಮತ್ತು ಸಹಚರರು ಸುಳ್ಳು ಆರೋಪ ಮಾಡಿ ಸ್ಥಳದಲ್ಲಿ ವಿಡಿಯೊ ಮಾಡಿದ್ದರು. ಅಲ್ಲದೆ, ಆ ಜಾಗದಲ್ಲಿ ಬಾಂಗ್ಲಾ ಪ್ರಜೆಗಳು ಅಕ್ರಮವಾಗಿ ನೆಲಸಿದ್ದಾರೆ ಎಂದು ವಿಡಿಯೊ ಚಿತ್ರೀಕರಿಸಿ ಫೇಸ್‌ಬುಕ್ ಮತ್ತು ಇತರೆ ಸಾಮಾಜಿಕ ಜಾಲತಾಣಗಳಲ್ಲಿ ಹಾಕಿದ್ದರು ಎಂದು ಪೊಲೀಸರು ಹೇಳಿದ್ದಾರೆ.

ಯುವತಿ ಫೋಟೊ ಕಳುಹಿಸಿ ಹಣ ವಸೂಲಿ

ಸಾಮಾಜಿಕ ಜಾಲತಾಣದಲ್ಲಿ ಬಹಿರಂಗ ಪಡಿಸುವ ಬೆದರಿಕೆ ಹಾಕಿದ ಅಪರಿಚಿತ ವ್ಯಕ್ತಿ • ₹1 ಲಕ್ಷಕ್ಕೆ ಬೇಡಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದುಷ್ಕರ್ಮಿಗಳು ಯುವತಿಯ ಖಾಸಗಿ ಫೋಟೊಗಳನ್ನು ಸಾಮಾಜಿಕ ಜಾಲತಾಣದಲ್ಲಿ ಬಹಿರಂಗಪಡಿಸುವುದಾಗಿ ಬೆದರಿಸಿ ಹಣ ವಸೂಲು ಮಾಡಿರುವ ಘಟನೆ ನಡೆದಿದೆ.

19 ವರ್ಷದ ಯುವತಿಯ ದೂರು ಆಧರಿಸಿ, ಕೇಂದ್ರ ವಿಭಾಗದ ಸೈಬರ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ತನಿಖೆ ನಡೆಯುತ್ತಿದೆ.

‘ನಗರದ ಖಾಸಗಿ ಕಾಲೇಜಿನಲ್ಲಿ ಓದುತ್ತಿರುವ ಯುವತಿ, ತನ್ನ ಪ್ರಿಯಕರನಿಗೆ ಖಾಸಗಿ ಫೋಟೊಗಳನ್ನು ಕಳುಹಿಸಿದ್ದಳು. ಬಳಿಕ ಅಪರಿಚಿತ ಮೊಬೈಲ್ ಸಂಖ್ಯೆಯಿಂದ ಯುವತಿಗೆ ಕರೆ ಮಾಡಿದ ವ್ಯಕ್ತಿಯು, ಆಕೆಯ ಖಾಸಗಿ ಫೋಟೊಗಳನ್ನು ಕಳುಹಿಸಿದ್ದಾನೆ. ಅಲ್ಲದೆ, ₹1 ಲಕ್ಷ ಕೊಡದಿದ್ದರೆ ಆ ಖಾಸಗಿ ಫೋಟೊಗಳನ್ನು ಸಾಮಾಜಿಕ ಜಾಲತಾಣದಲ್ಲಿ ಹಾಕುವುದಾಗಿ ಹೆದರಿಸಿದ್ದಾನೆ.

ಇದರಿಂದ ಕಂಗಾಲಾದ ಯುವತಿ, ಅಪರಿಚಿತ ವ್ಯಕ್ತಿ ಬೆದರಿಕೆ ಹಾಕಿದ ಬಗ್ಗೆ ಪ್ರಿಯಕರನ ಜತೆ ಚರ್ಚಿಸಿದ್ದಾಳೆ. ನಂತರ ಕರೆ ಮಾಡಿದ್ದ ವ್ಯಕ್ತಿಗೆ ಪ್ರಿಯಕರನಿಂದ ₹1 ಲಕ್ಷ ನಗದು ಕೊಡಿಸಿದ್ದಾಳೆ. ಆ ನಂತರವೂ ಅಪರಿಚಿತ ವ್ಯಕ್ತಿ ಯುವತಿಗೆ ಕರೆ ಮಾಡಿ ಹೆಚ್ಚಿನ ಹಣ ಕೊಡುವಂತೆ ಬೆದರಿಕೆ ಹಾಕಿದ್ದಾನೆ’ ಎಂದು ಪೊಲೀಸರು ತಿಳಿಸಿದ್ದಾರೆ.

‘ತನ್ನ ಖಾಸಗಿ ಫೋಟೊಗಳು ಅಪರಿಚಿತ ವ್ಯಕ್ತಿಗೆ ಹೇಗೆ ದೊರೆಯಿತು ಎಂದು ಆತಂಕಗೊಂಡ ಯುವತಿ, ಮೊದಲು ಪ್ರಿಯಕರನ ಮೇಲೆ ಅನುಮಾನ ವ್ಯಕ್ತಪಡಿಸಿದ್ದಳು. ತನಿಖೆ ಮಾಡಿದಾಗ ಆತನಿಂದ ಬಹಿರಂಗವಾಗಿಲ್ಲ ಎಂಬುದು ಗೊತ್ತಾಗಿದೆ. ಅಪರಿಚಿತನಿಗೆ ಫೋಟೊ ಹೇಗೆ ಸಿಕ್ಕಿದವು ಎಂಬುದರ ಬಗ್ಗೆ ತನಿಖೆ ನಡೆಸಲಾಗುತ್ತಿದೆ’ ಎಂದಿದ್ದಾರೆ.

ಬೋಗ್ಯಕ್ಕೆ ಮನೆ: ₹5 ಲಕ್ಷ ವಂಚನೆ

ಬೆಂಗಳೂರು: ಬೋಗ್ಯಕ್ಕೆ ಮನೆ ಕೊಡಿಸುವುದಾಗಿ ಹೇಳಿ ಮಹಿಳೆಗೆ ₹5 ಲಕ್ಷ ವಂಚಿಸಿದ ಆರೋಪಿಯನ್ನು ಡಿ.ಜೆ. ಹಳ್ಳಿ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಶಾಂಪುರ ನಿವಾಸಿ ಅಬ್ದುಲ್ ಹಸನ್ (30) ಬಂಧಿತ ಆರೋಪಿ. ಹೆಗಡೆ ನಗರ ಸಮೀಪ ಬಾಲಾಜಿ ಲೇಔಟ್ ನಿವಾಸಿ ನೂರಿ ಅವರ ದೂರಿನ ಮೇರೆಗೆ ಪ್ರಕರಣ ದಾಖಲಿಸಿಕೊಂಡು ಆರೋಪಿಯನ್ನು ಬಂಧಿಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಅಬ್ದುಲ್ ಹಸನ್ ಶಾಂಪುರ ಮುಖ್ಯರಸ್ತೆಯಲ್ಲಿನ ಇಂಡಿಯನ್ ಆಯಿಲ್ ಪೆಟ್ರೋಲ್ ಬಂಕ್ ಎದುರು ಇರುವ ತಮ್ಮ ಮನೆ ಖಾಲಿ ಆಗಲಿದ್ದು, ಅದನ್ನು ಬೋಗ್ಯಕ್ಕೆ ಕೊಡುತ್ತೇನೆ ಎಂದು ದೂರುದಾರ ಮಹಿಳೆಯನ್ನು ನಂಬಿಸಿ ₹5 ಲಕ್ಷ ನಗದು ಪಡೆದು ವಂಚಿಸಿದ್ದ. ಹಣವನ್ನು ವಾಪಸ್ ಕೊಡುವಂತೆ ಕೇಳಿದಾಗ ಮಹಿಳೆಯನ್ನು ನಿಂದಿಸಿದ್ದ. ನೊಂದ ಮಹಿಳೆ ಪೊಲೀಸ್ ಠಾಣೆ ಮೆಟ್ಟಿಲೇರಿದ್ದರು. ನಂತರ ಡಿ.ಜೆ ಹಳ್ಳಿ ಪೊಲೀಸರು ಎಫ್‌ಐಆರ್ ದಾಖಲಿಸುತ್ತಿಲ್ಲ ಎಂದು ಆರೋಪಿಸಿ ಪೊಲೀಸ್ ಕಮಿಷನರ್ ಕಚೇರಿಗೆ ದೂರು ನೀಡಿದ್ದರು. ಬಳಿಕ ಪ್ರಕರಣ ದಾಖಲಿಸಿಕೊಂಡ ಪೊಲೀಸರು, ಆರೋಪಿಯನ್ನು ಬಂಧಿಸಿದ್ದಾರೆ.

ಶಾಸಕ ಎಸ್. ಸುರೇಶ್ ಕುಮಾರ್ ವಿರುದ್ಧ ದೂರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಧಾನಸಭೆ ಕಲಾಪದ ವೇಳೆ ಸಚಿವ ಬೈರತಿ ಸುರೇಶ್ ವಿರುದ್ಧ ಶಾಸಕ ಎಸ್. ಸುರೇಶ್ ಕುಮಾರ್ ಅವಹೇಳನಕಾರಿ ಹೇಳಿಕೆ ನೀಡಿದ್ದಾರೆ ಎಂದು ಆರೋಪಿಸಿ ಬೆಂಗಳೂರು ಕೇಂದ್ರ ಜಿಲ್ಲಾ ಕಾಂಗ್ರೆಸ್ ಪ್ರಚಾರ ಸಮಿತಿಯ ಮುಖ್ಯಸ್ಥರಾದ ಜಿ.ಪ್ರಕಾಶ್ ಮತ್ತು ಮನೋಹರ್ ನೇತೃತ್ವದ ನಿಯೋಗ ವಿಧಾನಸೌಧ ಠಾಣೆಯಲ್ಲಿ ದೂರು ನೀಡಿದೆ.

‘ಮಹಿಳೆಯರಿಗೆ ಅವಮಾನ ಮಾಡಿದ ಶಾಸಕರು ಕ್ಷಮೆಯಾಚಿಸಲಿ’ ಎಂಬ ಘೋಷಣೆವುಳ್ಳ ಪೋಸ್ಟರ್‌ಗಳನ್ನು ಅವರ ನಿವಾಸಕ್ಕೆ ಅಂಟಿಸುವ ಮೂಲಕ ಕಾಂಗ್ರೆಸ್ ಕಾರ್ಯಕರ್ತರು ಶನಿವಾರ ಪ್ರತಿಭಟನೆ ನಡೆಸಿದ್ದರು.

ಬಳಿಕ ಈ ಸಂಬಂಧ ಬಸವೇಶ್ವರನಗರ ಠಾಣೆಗೆ ದೂರು ಕೊಡಲು ಹೋಗಿದ್ದರು. ಆದರೆ, ಈ ಘಟನೆ ವಿಧಾನಸೌಧ ಠಾಣಾ ವ್ಯಾಪ್ತಿಯಲ್ಲಿ ನಡೆದಿದ್ದು, ಅಲ್ಲಿಯೇ ದೂರು ನೀಡಲು ಅಧಿಕಾರಿಗಳು ಸೂಚನೆ ನೀಡಿದ್ದರು. ಹಾಗಾಗಿ ಭಾನುವಾರ ಕಾಂಗ್ರೆಸ್ ನಿಯೋಗ ವಿಧಾನಸೌಧ ಪೊಲೀಸ್ ಠಾಣೆಯಲ್ಲಿ ದೂರು ನೀಡಿದ್ದು, ಮಹಿಳೆಯರ ಗೌರವಕ್ಕೆ ಧಕ್ಕೆ ತರುವಂತಹ ಹೇಳಿಕೆ ನೀಡಿರುವ ಸುರೇಶ್ ಕುಮಾರ್ ವಿರುದ್ಧ ಕಾನೂನು ಕ್ರಮ ಕೈಗೊಳ್ಳುವಂತೆ ಮನವಿ ಮಾಡಿದ್ದಾರೆ.

ದೂರು ಸ್ವೀಕರಿಸಲಾಗಿದ್ದು, ಕಾನೂನು ತಜ್ಞರ ಅಭಿಪ್ರಾಯ ಪಡೆಯಲಾಗುತ್ತಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಕಾರು ಡಿಕ್ಕಿ: ಸ್ಥಳದಲ್ಲೇ ಮಹಿಳೆ ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ದ್ವಿಚಕ್ರ ವಾಹನದಲ್ಲಿ ತಾಯಿ-ಮಗಳು ಹೋಗುತ್ತಿದ್ದ ವೇಳೆ ಹಿಂದಿನಿಂದ ವೇಗವಾಗಿ ಬಂದ ಕಾರು ಡಿಕ್ಕಿ ಹೊಡೆದ ಪರಿಣಾಮ ತಾಯಿ ಸ್ಥಳದಲ್ಲೇ ಮೃತಪಟ್ಟ ಘಟನೆ ಬಾಣಸವಾಡಿ ಸಂಚಾರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ನಡೆದಿದೆ.

ಬಾಬೂಸಾಬ್ ಪಾಳ್ಯದ ನಿವಾಸಿ ಅರುಣಾ (42) ಮೃತ ಮಹಿಳೆ. ಮಗಳು ನಂದಿನಿಗೆ ಸಣ್ಣ ಗಾಯವಾಗಿದ್ದು, ಸ್ಥಳೀಯ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದು ತೆರಳಿದ್ದಾರೆ.

ಖಾಸಗಿ ಕಂಪನಿಯಲ್ಲಿ ನಂದಿನಿ ಸಾಫ್ಟ್‌ವೇರ್ ಎಂಜಿನಿಯರ್ ಆಗಿದ್ದಾರೆ. ಜನವರಿ 24ರಂದು ಸಂಜೆ ನಂದಿನಿ ಅವರು ತಾಯಿಯನ್ನು ದ್ವಿಚಕ್ರ ವಾಹನದಲ್ಲಿ ಕರೆದುಕೊಂಡು ಹೆಬ್ಬಾಳದ ಕಡೆ ಹೋಗುತ್ತಿದ್ದರು. ರಿಂಗ್ ರಸ್ತೆಯ ಹೆಣ್ಣೂರು ಜಂಕ್ಷನ್ ಅಂಡರ್ ಪಾಸ್‌ನಲ್ಲಿ ಹೋಗುತ್ತಿದ್ದಾಗ ವೇಗವಾಗಿ ಬಂದ ಕಾರು ಡಿಕ್ಕಿ ಹೊಡೆದಿದೆ. ನಿಯಂತ್ರಣ ತಪ್ಪಿ ದ್ವಿಚಕ್ರ ವಾಹನದಿಂದ ಇಬ್ಬರೂ ಕೆಳಗೆ ಬಿದ್ದಿದ್ದಾರೆ. ಆ ಸಂದರ್ಭದಲ್ಲಿ ಕಾರು ಅರುಣಾ ಅವರ ಮೇಲೆ ಹರಿದ ಪರಿಣಾಮ ಗಂಭೀರವಾಗಿ ಗಾಯಗೊಂಡು, ಮೃತಪಟ್ಟರು.

ಕೇರಳದ ವಾಹನ ಚಾಲಕ ಅನಾಸ್ ನಗರದಲ್ಲಿ ಬಾಡಿಗೆ ವಾಹನ ಓಡಿಸುತ್ತಿದ್ದರು. ಅತಿ ವೇಗದ ಚಾಲನೆಯಿಂದಾಗಿ ಈ ದುರ್ಘಟನೆ ನಡೆದಿದೆ. ಚಾಲಕನನ್ನು ಬಂಧಿಸಿ, ವಾಹನವನ್ನು ವಶಕ್ಕೆ ಪಡೆಯಲಾಗಿದೆ. ಈ ಬಗ್ಗೆ ಪ್ರಕರಣ ದಾಖಲಿಸಿಕೊಂಡು ಮುಂದಿನ ಕ್ರಮ ಕೈಗೊಳ್ಳಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಅಪರಾಧ ಸುದ್ದಿ

ಯುವಕ, ಯುವತಿ ಮೇಲೆ ಹಲ್ಲೆ: ನಾಲ್ವರ ಸೆರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಸ್ತೆಬದಿ ನಿಂತಿದ್ದ ಯುವತಿ ಹಾಗೂ ಆಕೆಯ ಸ್ನೇಹಿತನ ಮೇಲೆ ಹಲ್ಲೆ ನಡೆಸಿದ ಆರೋಪದ ಮೇಲೆ ನಾಲ್ವರು ಆರೋಪಿಗಳನ್ನು ಮಡಿವಾಳ ಠಾಣೆ ಪೊಲೀಸರು ಬಂಧಿಸಿದ್ದಾರೆ.

ವಿಜಯ್ ಕುಮಾರ್, ಡೇವಿಡ್, ತೇಜಸ್ವಿ ಹಾಗೂ ಮೋಹಿತ್ ಬಂಧಿತ ಆರೋಪಿಗಳು. ಆರೋಪಿಗಳ ಪೈಕಿ ಕೆಲವರು ಮಡಿಕೇರಿ, ಚಿಕ್ಕಮಗಳೂರು, ಬೆಂಗಳೂರಿನವರಾಗಿದ್ದು, ಖಾಸಗಿ ಆಸ್ಪತ್ರೆ ಹಾಗೂ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದಾರೆ ಎಂದು ಪೊಲೀಸರು ತಿಳಿಸಿದರು.

ಮೂರು ದಿನಗಳ ಹಿಂದೆ ಮಾರುತಿನಗರ ರಸ್ತೆಯಲ್ಲಿ ಯುವತಿ ಮತ್ತು ಆಕೆಯ ಸ್ನೇಹಿತ ನಿಂತಿದ್ದರು. ಆಗ ಸಮೀಪದಲ್ಲೇ ಪಾರ್ಟಿ ಮುಗಿಸಿಕೊಂಡು ಬಂದ ಆರೋಪಿಗಳು, ಯುವತಿ ಜತೆ ಅಸಭ್ಯವಾಗಿ ವರ್ತಿಸಲು ಯತ್ನಿಸಿದ್ದಾರೆ. ಆಗ ಯುವತಿ ಮತ್ತು ಆಕೆಯ ಸ್ನೇಹಿತ ಪ್ರಶ್ನಿಸಿದಾಗ ಇಬ್ಬರ ಮೇಲೂ ಹಲ್ಲೆ ನಡೆಸಿದ್ದಾರೆ ಎಂದು ಪೊಲೀಸರು ಹೇಳಿದ್ದಾರೆ. ಈ ಸಂಬಂಧ ಆಕೆ ನೀಡಿದ ದೂರಿನ ಮೇಲೆ ಪ್ರಕರಣ ದಾಖಲಿಸಿಕೊಂಡು ಆರೋಪಿಗಳನ್ನು ಬಂಧಿಸಲಾಗಿದೆ.

‘ಕೈ’ ಕಾರ್ಯಕರ್ತರ ಬಂಧನ, ಬಿಡುಗಡೆ

ಬೆಂಗಳೂರು: ಬಿಜೆಪಿ ಶಾಸಕ ಎಸ್. ಸುರೇಶ್ ಕುಮಾರ್ ನಿವಾಸಕ್ಕೆ ‘ಸಂಸ್ಕೃತಿ ಇಲ್ಲದ ಶಾಸಕ’ಎಂದು ಪೋಸ್ಟರ್ ಅಂಟಿಸಿದ್ದ ನಾಲ್ವರು ಕಾಂಗ್ರೆಸ್ ಕಾರ್ಯಕರ್ತರನ್ನು ಬಸವೇಶ್ವರ ನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಸುರೇಶ್ ಕುಮಾರ್ ಅವರ ಕಾರು ಚಾಲಕ ಪುನೀತ್ ನೀಡಿದ ದೂರಿನ ಮೇಲೆ ಬಸವೇಶ್ವರ ನಗರದ ಶಂಕರ್, ಮಂಜು, ನವೀನ್ ಹಾಗೂ ಸಾಯಿ ಎಂಬುವರನ್ನು ಬಂಧಿಸಿ, ಠಾಣಾ ಜಾಮೀನಿನ ಮೇಲೆ ಬಿಡುಗಡೆ ಮಾಡಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ವಿಧಾನ ಮಂಡಲದ ಅಧಿವೇಶನದಲ್ಲಿ ರಾಜ್ಯಪಾಲರ ಭಾಷಣದ ಮೇಲಿನ ಚರ್ಚೆ ಸಂದರ್ಭದಲ್ಲಿ ನಗರಾಭಿವೃದ್ಧಿ ಸಚಿವ ಬೈರತಿ ಸುರೇಶ್ ಕುರಿತು ಸುರೇಶ್ ಕುಮಾರ್ ಅವಹೇಳನಕಾರಿ ಹೇಳಿಕೆ ನೀಡಿದ್ದಾರೆ ಎಂದು ಆರೋಪಿಸಲಾಗಿತ್ತು. ಈ ಕುರಿತು ಸದನದಲ್ಲಿ ಸುರೇಶ್ ಕುಮಾರ್ ಕ್ಷಮೆಯಾಚಿಸಿದ್ದರು.

ಈ ಘಟನೆ ಬೆನ್ನಲ್ಲೇ ಕಾಂಗ್ರೆಸ್ ಕಾರ್ಯಕರ್ತರು ಸುರೇಶ್ ಕುಮಾರ್ ಅವರ ಮನೆ ಆವರಣದಲ್ಲಿ ಪೋಸ್ಟರ್ ಅಂಟಿಸಿದ್ದರು.

ನಗರದಲ್ಲಿ ಇಂದು

ಗಣರಾಜ್ಯೋತ್ಸವ ವಿಶೇಷ

ಧ್ವಜಾರೋಹಣ: ರಾಧಾ ಕೇಶವ್ ಹಬ್ಬಾರ್, ಅಧ್ಯಕ್ಷತೆ: ಜಗದೀಶ ರೆಡ್ಡಿ, ಆಯೋಜನೆ ಮತ್ತು ಸ್ಥಳ: ಕನ್ನಡ ಯುವಜನ ಸಂಘ, ಹೊಂಬೇಗೌಡನಗರ, ಬೆಳಿಗ್ಗೆ 7.30

ಗಣರಾಜ್ಯೋತ್ಸವ: ಧ್ವಜಾರೋಹಣ: ಥಾವರಚಂದ್ ಗೆಹಲೋತ್, ಸ್ಥಳ: ಫೀಲ್ಡ್ ಮಾರ್ಷಲ್ ಮಾಣೆಕ್ ಷಾ ಪರೇಡ್ ಮೈದಾನ, ಬೆಳಿಗ್ಗೆ 9

ಆಯೋಜನೆ ಮತ್ತು ಸ್ಥಳ: ಡಾ. ಮನಮೋಹನ್‌ಸಿಂಗ್ ಬೆಂಗಳೂರು ನಗರ ವಿ.ವಿ. ಗಡಿಯಾರ ಗೋಪುರ, ಅತಿಥಿಗಳು: ಎಸ್.ಎ. ಅಹಮದ್, ಅಧ್ಯಕ್ಷತೆ: ಬಿ. ರಮೇಶ್, ಉಪಸ್ಥಿತಿ: ಎ. ನವೀನ್ ಜೋಸೆಫ್, ರಮೇಶ್ ಬಿ. ಕುಡೇನಟ್ಟಿ, ಎಂ.ವಿ. ವಿಜಯಲಕ್ಷ್ಮಿ, ಬೆಳಿಗ್ಗೆ 9

ಅರಿವು ಕಾರ್ಯಕ್ರಮ: ಆಯೋಜನೆ: ಗೌರಿಶಂಕರ ಅಕಾಡೆಮಿ ಫಾರ್ ಕಲ್ಚರ್ ಆ್ಯಂಡ್ ಸ್ಪೋರ್ಟ್ಸ್ ಟ್ರಸ್ಟ್, ಸ್ಥಳ: ಕೆ.ಆರ್. ಪುರ, ಬೆಳಿಗ್ಗೆ 9

ಧ್ವಜಾರೋಹಣ: ಶ್ರೀರಾಮೇಗೌಡ, ಆಯೋಜನೆ ಮತ್ತು ಸ್ಥಳ: ಉದಯಭಾನು ಕಲಾಸಂಘ, ಕೆಂಪೇಗೌಡನಗರ, ಬೆಳಿಗ್ಗೆ 9

ಧ್ವಜಾರೋಹಣ: ಎಸ್.ವಿ. ಸುರೇಶ, ಆಯೋಜನೆ ಮತ್ತು ಸ್ಥಳ: ಬೆಂಗಳೂರು ಕೃಷಿ ವಿಶ್ವವಿದ್ಯಾಲಯ, ಜಿಕೆವಿಕೆ ಬೆಳಿಗ್ಗೆ 9

ಧ್ವಜಾರೋಹಣ: ಕೊಂಡಜ್ಜಿ ಬ. ಷಣ್ಮುಖಪ್ಪ, ಅಧ್ಯಕ್ಷತೆ: ಗೀತಾ ನಟರಾಜ್, ಆಯೋಜನೆ ಮತ್ತು ಸ್ಥಳ: ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್‌ನ ರಾಜ್ಯ ಕೇಂದ್ರ ಕಚೇರಿ, ಶಾಂತಿಗೃಹ, ಅರಮನೆ ರಸ್ತೆ, ಬೆಳಿಗ್ಗೆ 9

ಧ್ವಜಾರೋಹಣ: ಸಿ. ಸೋಮಶೇಖರ್, ಅಧ್ಯಕ್ಷತೆ: ಎಚ್. ಶರತ್‌ಚಂದ್ರ, ಅತಿಥಿ: ಜಗದೀಶ ರೆಡ್ಡಿ, ಆಯೋಜನೆ , ಸ್ಥಳ: ವಿಲ್ಸನ್ ಗಾರ್ಡನ್ ವಿದ್ಯಾಸಂಸ್ಥೆ, ಹೊಂಬೇಗೌಡನಗರ, ಬೆಳಿಗ್ಗೆ 9.30

ಧ್ವಜಾರೋಹಣ: ರಾಜಶೇಖರ್, ಗಣರಾಜ್ಯೋತ್ಸವ ಪ್ರಶಸ್ತಿ ಪ್ರದಾನ: ಎನ್.ಎಸ್. ಮುಕುಂದ, ಪ್ರಶಸ್ತಿ ಸ್ವೀಕರಿಸುವವರು: ಎಚ್.ಆರ್. ಶ್ರೀಶ, ಅಧ್ಯಕ್ಷತೆ: ಎಂ. ನರಸಿಂಹ, ಅತಿಥಿ: ಎಂ.ಬಿ. ಶಿವನಂಜಪ್ಪ, ಆಯೋಜನೆ ಮತ್ತು ಸ್ಥಳ: ಶ್ರೀ.ವಿ.ಎಸ್. ಕೃಷ್ಣ ಅಯ್ಯರ್ ಸಂಯುಕ್ತ ಪದವಿಪೂರ್ವ ಕಾಲೇಜು, ಶ್ರೀ ವಿನಾಯಕ ಕನ್ನಡ ಮತ್ತು ಆಂಗ್ಲ ಮಾಧ್ಯಮ ಶಾಲೆ, ಶ್ರೀನಿವಾಸನಗರ, ಬೆಳಿಗ್ಗೆ 9.30

ಧ್ವಜಾರೋಹಣ: ವಿಭು ಬಖ್ರು, ಆಯೋಜನೆ ಮತ್ತು ಸ್ಥಳ: ಹೈಕೋರ್ಟ್, ಬೆಳಿಗ್ಗೆ 9.30

ವಿಭು ಬಖ್ರು

ಧ್ವಜಾರೋಹಣ: ಸ್ಥಳ: ಸಜ್ಜನರಾವ್ ವೃತ್ತ, ವಿಶ್ವೇಶ್ವರಪುರ, ಬೆಳಿಗ್ಗೆ 10

ಸಂವಿಧಾನ ಜಾಗೃತಿ ಸಮಾವೇಶ: ಉದ್ಘಾಟನೆ: ಸಿ.ಎಂ. ಇಬ್ರಾಹಿಂ, ಅಧ್ಯಕ್ಷತೆ: ಆರ್. ಮೋಹನ್‌ರಾಜ್, ಅತಿಥಿಗಳು: ಕೋಡಿಹಳ್ಳಿ ಚಂದ್ರಶೇಖರ್, ಎಂ. ಗೋಪಿನಾಥ್, ರಾಜು ಎಂ. ತಳವಾರ್, ಶೇಖರ್ ಹಾವಂಜೆ, ಸ್ವಪ್ನ ಮೋಹನ್, ಆಯೋಜನೆ: ರಿಪಬ್ಲಿಕನ್ ಪಾರ್ಟಿ ಆಫ್ ಇಂಡಿಯಾ, ಸ್ಥಳ: ಕೃಷಿ ತಂತ್ರಜ್ಞರ ಸಂಸ್ಥೆ, ಕ್ವೀನ್ಸ್ ರಸ್ತೆ, ಬೆಳಿಗ್ಗೆ 11

ಸಾಂಸ್ಕೃತಿಕ ಕಾರ್ಯಕ್ರಮಗಳು: ಉಪಸ್ಥಿತಿ: ಸಿದ್ದರಾಮಯ್ಯ, ಡಿ.ಕೆ. ಶಿವಕುಮಾರ್, ಆಯೋಜನೆ: ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಸಂಜೆ 6

ಇತರೆ ಕಾರ್ಯಕ್ರಮಗಳು

44ನೇ ವರ್ಷದ ಸಂಕ್ರಾಂತಿ ಸಮ್ಮಿಲನ: ಉದ್ಘಾಟನೆ: ಎ. ರಾಜೇಶ್, ಅತಿಥಿಗಳು: ಸಿ. ಸುಜ್ಞಾನ ಮೂರ್ತಿ, ಅಧ್ಯಕ್ಷತೆ: ನಾಗೇಂದ್ರ ಜಿ. ಕಮ್ಮಾರ, ಆಯೋಜನೆ ಮತ್ತು ಸ್ಥಳ: ಉತ್ತರ ಕರ್ನಾಟಕ ವಿಶ್ವಕರ್ಮ ಕ್ಷೇಮಾಭಿವೃದ್ಧಿ ಸಂಘ, ಮಾಗಡಿ ರಸ್ತೆ, ಗೊಲ್ಲರಹಟ್ಟಿ, ಬೆಳಿಗ್ಗೆ 10ರಿಂದ

‘ಶ್ರೀದೇವಿ ಮಹಾತ್ಮೆ’ ಪೌರಾಣಿಕ ಯಕ್ಷಗಾನ ಪ್ರದರ್ಶನ: ಹಿಮ್ಮೇಳದ ಭಾಗವತರು: ಪ್ರಸನ್ನ ಹೆಗಡೆ, ಮದ್ದಳೆ: ನರಸಿಂಹ ಆಚಾರಿ, ಚಂಡೆ: ಸುಬ್ರಮಣ್ಯ ಸಾಸ್ತಾನ, ಮುಮ್ಮೇಳ: ಪ್ರಶಾಂತ ಹೆಗಡೆ, ಮಂಜು ಹವ್ಯಕ, ಶಿಥಿಲ ಶೆಟ್ಟಿ, ಮಹೇಶ ನಾಡ, ಶಂಕರ ಹೊಸೂರು, ಕೌಸ್ತುಭ ಉಡುಪ, ಗುರುಪ್ರಸಾದ್ ಶೆಟ್ಟಿ, ಸಾನ್ವಿ, ಆಯೋಜನೆ: ಬ್ರಹ್ಮಶ್ರೀ ಕಲಾವೇದಿಕೆ, ಸ್ಥಳ: ಕೃಷ್ಣ ವಾದಿರಾಜ ಕಲ್ಯಾಣ ಮಂಟಪ, ಚಾಮರಾಜಪೇಟೆ, ಬೆಳಿಗ್ಗೆ 10

ಕ್ರಾಂತಿವೀರ ಸಂಗೊಳ್ಳಿ ರಾಯಣ್ಣನವರ 195 ಸ್ಮರಣೋತ್ಸವ: ಸಂಗೊಳ್ಳಿ ರಾಯಣ್ಣ ಪುತ್ಥಳಿಗೆ ಮಾಲಾರ್ಪಣೆ: ಸಿದ್ದರಾಮಯ್ಯ, ಡಿ.ಕೆ. ಶಿವಕುಮಾರ್, ಉಪಸ್ಥಿತಿ: ತುಷಾರ್ ಗಿರಿನಾಥ್, ಅಧ್ಯಕ್ಷತೆ: ದಿನೇಶ್ ಗುಂಡೂರಾವ್, ಅತಿಥಿಗಳು: ನಾರಾಯಣ ಗೌಡ, ಎಚ್.ಎಂ. ರೇವಣ್ಣ, ಡಾ. ನಾಗಲಕ್ಷ್ಮೀ ಚೌಧರಿ, ಜೆ. ಹುಚ್ಚಪ್ಪ, ಎಂ. ಶಿವರಾಜು, ದಲ್ಜೀತ್ ಕುಮಾರ್, ಹೇಮಂತ್ ಶರಣ್, ಆಯೋಜನೆ: ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಪ್ರತಿಷ್ಠಾನ, ಸ್ಥಳ: ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಪುತ್ಥಳಿ ಆವರಣ, ದೇವರಾಜ ಅರಸು ವೃತ್ತ, ಬೆಳಿಗ್ಗೆ 11

39ನೇ ವಾರ್ಷಿಕೋತ್ಸವ ಹಾಗೂ ಮಹಾಕವಿ ರತ್ನಾಕರವರ್ಣಿ ಪ್ರಶಸ್ತಿ ಪ್ರದಾನ: ಚಕ್ರವರ್ತಿ ಸೂಲಿಬೆಲೆ, ಪ್ರಶಸ್ತಿ ಸ್ವೀಕರಿಸುವವರು: ಎಂ. ದುಗ್ಗಣ್ಣ ಸಾವಂತ, ಅಧ್ಯಕ್ಷತೆ: ಡಿ. ಸುರೇಂದ್ರ ಕುಮಾರ್, ಆಯೋಜನೆ: ದಕ್ಷಿಣ ಕನ್ನಡ ಜೈನ ಮೈತ್ರಿಕೂಟ, ಸ್ಥಳ: ಶ್ರೀ ಧರ್ಮಸ್ಥಳ ಮಂಜುನಾಥ ಸ್ವಾಮಿ ಕಲ್ಯಾಣ ಮಂಟಪ, ಬಸವನಗುಡಿ, ಮಧ್ಯಾಹ್ನ 3.30

46ನೇ ವರ್ಷದ ಸಂಗೀತೋತ್ಸವ, ಶ್ರೀ ತ್ಯಾಗರಾಜ ಮತ್ತು ಪುರಂದರದಾಸರ ಆರಾಧನ ಮಹೋತ್ಸವ: ಆಯೋಜನೆ: ಪದ್ಮಾವತಿ ಕಲಾನಿಕೇತನ, ಸ್ಥಳ: ಶ್ರೀಕೃಷ್ಣ ದೇವರಾಯ ಕಲಾ ಮಂದಿರಂ, ವೈಯಾಲಿ ಕಾವಲ್, ಮಧ್ಯಾಹ್ನ 3.30

‘ಆರೋಹಣ-2026’ ವಾರ್ಷಿಕ ಸಾಂಸ್ಕೃತಿ ಉತ್ಸವ: ಅತಿಥಿಗಳು: ಕೆ. ಶ್ರೀನಾಥ್, ಪಾರ್ಶ್ವನಾಥ್ ಉಪಾಧ್ಯಾಯ, ಉಪಸ್ಥಿತಿ: ಹಯಗ್ರೀವಾಚಾರ್ಯ, ಸುದರ್ಶನ್ ಎಚ್. ನಾಯಕ್, ಆಯೋಜನೆ, ಸ್ಥಳ: ಮೀನಾಕ್ಷಿ ರಂಗಮಂಚ, ಪೂರ್ಣ ಪ್ರಜ್ಞ ಸ್ಪೋರ್ಟ್ಸ್ ಆ್ಯಂಡ್ ಕಲ್ಚರಲ್ ಅಸೋಸಿಯೇಷನ್, ವಿಷ್ಣುವರ್ಧನ್ ರಸ್ತೆ, ಸಂಜೆ 5

ಬಹುಳ ನೃತ್ಯೋತ್ಸವ-2026: ಸನ್ಮಾನ ಸ್ವೀಕರಿಸುವವರು: ಡಾ. ಜಯಪ್ರಕಾಶ್ ನಾರಾಯಣ್, ಶಕುಂತಲಾ ಪ್ರಭಾತ್, ರಾಘವೇಂದ್ರ ಪ್ರಭಾತ್, ಆಯೋಜನೆ: ಸಾಧನ ಸಂಗಮ ಟ್ರಸ್ಟ್, ಸ್ಥಳ: ಎಡಿಎ ರಂಗಮಂದಿರ, ಜೆ.ಸಿ. ರಸ್ತೆ, ಸಂಜೆ 5

ಪಾವಗಡ ಪ್ರಕಾಶರಾವ್ ಅವರಿಂದ ಕವಿ ಲಕ್ಷ್ಮೀಶರ ‘ಜೈಮಿನಿ ಭಾರತ’ ಉಪನ್ಯಾಸ ಮಾಲಿಕೆ: ಸಾನ್ನಿಧ್ಯ: ನಿರ್ಮಲಾನಂದನಾಥ ಸ್ವಾಮೀಜಿ, ಭಾಗವಹಿಸುವವರು: ಶ್ರೀಧರ್, ಗೌರಿ ಸುಬ್ರಮಣ್ಯ, ಆಯೋಜನೆ: ಡಾ.ಪಾವಗಡ ಪ್ರಕಾಶರಾಯರ ಅಮೃತ ಮಹೋತ್ಸವ ಸಮಿತಿ, ಸ್ಥಳ: ಪತ್ತಿ ಸಭಾಂಗಣ, ಶ್ರೀರಾಮಮಂದಿರ, ಎನ್.ಆರ್. ಕಾಲೊನಿ, ಸಂಜೆ 5.45

‘ಸೈನ್ಸ್, ಸ್ಟೆವಾರ್ಡ್‌ಶಿಪ್ ಆ್ಯಂಡ್ ಸಾಲಿಡಾರಿಟಿ’ ಮಾಧವ ಗಾಡ್ಗೀಳ ಅವರ ಜೀವನ ಮತ್ತು ಪರಂಪರೆಯ ಸ್ಮರಣೆ: ಭಾಷಣಕಾರರು: ಹರಿಣಿ ನಾಗೇಂದ್ರ, ಗುರುದಾಸ್ ನುಲ್ಕರ್, ಜಾನ್ ಕುರಿಯನ್, ನಾಗೇಶ ಹೆಗಡೆ, ಉಮಾ ರಾಮಕೃಷ್ಣನ್, ರಾಮಚಂದ್ರ ಗುಹಾ, ಸ್ಥಳ: ಬೆಂಗಳೂರು ಅಂತರರಾಷ್ಟ್ರೀಯ ಕೇಂದ್ರ (ಬಿಐಸಿ), ದೊಮ್ಮಲೂರು, ಸಂಜೆ 6.30ರಿಂದ

ಮಾಧವ ಗಾಡ್ಗೀಳ್



ವೈದ್ಯಕೀಯ ಶಿಕ್ಷಣ

ವೈದ್ಯಕೀಯ ಶಿಕ್ಷಣಕ್ಕೆ ಸಂಬಂಧಿಸಿದಂತೆ ಡಾ. ಬಿ.ಸಿ.ಭಗವಾನ್ ಹಾಗೂ ಪ್ರೊ. ಮಾದಾಪುರ ಶಶಿಧರ ಅವರು ಅಂತರರಾಷ್ಟ್ರೀಯ ಒಪ್ಪಂದ ಮಾಡಿಕೊಂಡ ಕ್ಷಣ.

ಜಾಗತಿಕ ಒಪ್ಪಂದ, ವೃತ್ತಿಪರ ಸಂಬಂಧ

• ಚಂದ್ರಹಾಸ ಹಿರೇಮಳಲಿ

13,000 ಕರ್ನಾಟಕದಲ್ಲಿ ಪ್ರತಿವರ್ಷ ವೈದ್ಯಕೀಯ ಪದವಿ ಪಡೆಯುವವರು

1,08,988 ಭಾರತದಲ್ಲಿ ಪ್ರತಿವರ್ಷ ವೈದ್ಯಕೀಯ ಪದವಿ ಪಡೆಯುವವರು

ಆರ್ಥಿಕವಾಗಿ ಸಬಲರಾದವರ ಮಕ್ಕಳು, ವೈದ್ಯ ವೃತ್ತಿಯಲ್ಲಿ ಇರುವವರ ಮಕ್ಕಳು ಮಾತ್ರ ವೈದ್ಯಕೀಯ ಶಿಕ್ಷಣ ಪಡೆಯಲು ಸಾಧ್ಯ; ಆರ್ಥಿಕವಾಗಿ ಹಿಂದುಳಿದವರು, ಗ್ರಾಮೀಣ ಪ್ರದೇಶದ ಮಕ್ಕಳು ವೈದ್ಯರಾಗುವುದು ಗಗನಕುಸುಮ ಎನ್ನುವಂತಹ ವಾತಾವರಣ ಕೆಲ ವರ್ಷಗಳ ಹಿಂದೆ ಇತ್ತು. ಸರ್ಕಾರಿ ವೈದ್ಯಕೀಯ ಕಾಲೇಜುಗಳ ಕೊರತೆ, ಖಾಸಗಿ ಕಾಲೇಜುಗಳ ದುಬಾರಿ ಶುಲ್ಕದಂತಹ ಕಾರಣಗಳಿಂದ, ಇಂಟರ್ನ್‌ಷಿಪ್ ಸೇರಿ ಐದೂವರೆ ವರ್ಷಗಳ ದುಬಾರಿ ಕೋರ್ಸ್ ಇದು ಎಂಬ ಭಾವನೆ ಸಹಜವಾಗಿಯೇ ಸಮಾಜದಲ್ಲಿ ಮನೆಮಾಡಿತ್ತು.

ಆದರೆ ಪರಿಸ್ಥಿತಿ ಈಗ ಭಿನ್ನವಾಗಿದೆ. ಕೇಂದ್ರ ಸರ್ಕಾರವು ವೈದ್ಯಕೀಯ ಕೋರ್ಸ್ ಪ್ರವೇಶಕ್ಕೆ ರಾಷ್ಟ್ರೀಯ ಅರ್ಹತಾ ಪ್ರವೇಶ ಪರೀಕ್ಷೆಯನ್ನು (ನೀಟ್) ಪರಿಚಯಿಸಿದ ನಂತರ ಬಡ, ಮಧ್ಯಮ ವರ್ಗದ ಪ್ರತಿಭಾವಂತ ಮಕ್ಕಳು ಸಹ ವೈದ್ಯಕೀಯ ಶಿಕ್ಷಣ ಪಡೆಯುವಂತಾಗಿದೆ. ಇನ್ನೊಂದೆಡೆ, ಜಿಲ್ಲೆಗೊಂದರಂತೆ ಸರ್ಕಾರಿ ವೈದ್ಯಕೀಯ ಕಾಲೇಜು ಸ್ಥಾಪನೆ ಮಾಡಲಾಗುತ್ತಿದೆ. ಮೂರ್ನಾಲ್ಕು ಸಾವಿರದಷ್ಟಿದ್ದ ರಾಜ್ಯದ ವೈದ್ಯಕೀಯ ಸೀಟುಗಳ ಸಂಖ್ಯೆ 2026–27ನೇ ಸಾಲಿಗೆ 10 ಸಾವಿರ ದಾಟಿದೆ. ಖಾಸಗಿ ಕಾಲೇಜುಗಳೂ ಸೇರಿ ಸರ್ಕಾರಿ ಕೋಟಾದ ಸೀಟುಗಳ ಸಂಖ್ಯೆ 6 ಸಾವಿರದಷ್ಟಿದೆ.

ವೈದ್ಯಕೀಯ ಪದವಿ ಪಡೆದವರೂ ಈಚೆಗೆ ಉದ್ಯೋಗ ಪಡೆಯಲು ಹಲವು ಸವಾಲುಗಳನ್ನು ಎದುರಿಸುವಂತಾಗಿದೆ. ಇಂತಹ ಸಮಯದಲ್ಲಿ ಕರ್ನಾಟಕದ ವಿದ್ಯಾರ್ಥಿಗಳನ್ನು ಅಂತರ-ರಾಷ್ಟ್ರೀಯ ಗುಣಮಟ್ಟಕ್ಕೆ ಅನುಗುಣವಾಗಿ ಸಜ್ಜಾಗಿಸಲು, ವಿದೇಶಗಳಲ್ಲಿ ಉತ್ತಮ ಸಂಭಾವನೆಯ ಅವಕಾಶಗಳನ್ನು ಪಡೆಯುವಂತಾಗಲು ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯವು ಬ್ರಿಟನ್‌ನ ಸಹಕಾರ ಪಡೆಯುತ್ತಿದೆ. ಇಂಗ್ಲೆಂಡ್‌ನ ರೈಟಿಂಗ್ಟನ್, ವಿಗಾನ್ ಮತ್ತು ಲೀ ಟೀಚಿಂಗ್ ಹಾಸ್ಪಿಟಲ್ಸ್‌ನ ಜಾಗತಿಕ ತರಬೇತಿ ಮತ್ತು ಶಿಕ್ಷಣ ಕೇಂದ್ರ 'ಜಿಟೆಕ್' ಜತೆಗೆ ಒಪ್ಪಂದ ಮಾಡಿಕೊಂಡಿದೆ.

ಗುಣಮಟ್ಟದ ಚಿಕಿತ್ಸೆ, ಆರೈಕೆ, ವೈದ್ಯಕೀಯ ಪ್ರಯೋಗಗಳಿಗೆ ಬ್ರಿಟನ್‌ನ ರಾಷ್ಟ್ರೀಯ ಆರೋಗ್ಯ ಸೇವೆ (ಎನ್‌ಎಚ್‌ಎಸ್) ವಿಶ್ವದಲ್ಲೇ ಪ್ರಸಿದ್ಧಿ ಪಡೆದಿದೆ. ಅಲ್ಲಿನ ಜನರಿಗೆ ಆರೋಗ್ಯ ಸೇವೆ ಸಂಪೂರ್ಣ ಉಚಿತವಾಗಿದೆ. ದೇಶ–ವಿದೇಶಗಳ ವೈದ್ಯರು ಬ್ರಿಟನ್‌ನ ಆರೋಗ್ಯ ಕ್ಷೇತ್ರದಲ್ಲಿ ಉದ್ಯೋಗ ಪಡೆಯುವ ಕನಸು ಕಾಣುತ್ತಾರೆ. ಭಾರತ ಸೇರಿದಂತೆ ವಿವಿಧ ದೇಶಗಳ ಬಹಳಷ್ಟು ವೈದ್ಯರು ಅಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ.

ಹೊಸ ಒಪ್ಪಂದದ ಫಲವಾಗಿ ಕರ್ನಾಟಕದ ವೈದ್ಯಕೀಯ ಶಿಕ್ಷಣ, ತರಬೇತಿ, ಸಂಶೋಧನೆ ಮತ್ತು ವೃತ್ತಿಪರ ಅಭಿವೃದ್ಧಿಗೆ ಜಾಗತಿಕ ವೇದಿಕೆ ನಿರ್ಮಾಣವಾಗುತ್ತಿದ್ದು, ಪರಸ್ಪರ ಸಹಕಾರ ಸಿಗಲಿದೆ. 'ಕಲಿಕೆ, ಗಳಿಕೆ, ಮರಳಿಸುವಿಕೆ, ಶ್ರೇಷ್ಠತೆ' ಆಧಾರದಲ್ಲಿ ಯೋಜನೆ ರೂಪಿಸಲಾಗಿದೆ. ರಾಜ್ಯದ ವೈದ್ಯಕೀಯ ವಿದ್ಯಾರ್ಥಿಗಳು ವರ್ಷದಲ್ಲಿ ಎರಡರಿಂದ ಆರು ವಾರ ಬ್ರಿಟನ್‌ಗೆ ತೆರಳಿ ಅಲ್ಲಿನ ರಾಷ್ಟ್ರೀಯ ಆರೋಗ್ಯ ಸೇವೆಯ ಭಾಗವಾಗಿ ಅಧ್ಯಯನ ನಡೆಸಲಿದ್ದಾರೆ, ಸೂಕ್ತ ತರಬೇತಿ ಪಡೆಯಲಿದ್ದಾರೆ. ಆನ್‌ಲೈನ್ ಮೂಲಕವೂ 18 ತಿಂಗಳು ಮಾಹಿತಿ ವಿನಿಮಯ ಕಾರ್ಯ ನಡೆಯಲಿದೆ.

ಬಾಲ್ಯದ ಗೆಳೆಯರ ಜಾಗತಿಕ ಬೆಸುಗೆ

ಬ್ರಿಟನ್–ಕರ್ನಾಟಕ ಆರೋಗ್ಯ ಸೇವಾ ಅಧ್ಯಯನದಂತಹ ಮಹತ್ವದ ಒಪ್ಪಂದಕ್ಕೆ ಕಾರಣರಾದವರು ಇಬ್ಬರು ಬಾಲ್ಯ ಗೆಳೆಯರು ಎನ್ನುವುದು ವಿಶೇಷ.

ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ ಕುಲಪತಿ ಡಾ. ಬಿ.ಸಿ.ಭಗವಾನ್ ಹಾಗೂ ಟೀಚಿಂಗ್ ಹಾಸ್ಪಿಟಲ್ಸ್ ರಾಷ್ಟ್ರೀಯ ಆರೋಗ್ಯ ಸೇವೆ ಫೌಂಡೇಷನ್ ಸಂಸ್ಥೆಯ ಜಾಗತಿಕ ಕಾರ್ಯಕ್ರಮಗಳ ಮುಖ್ಯಸ್ಥ ಪ್ರೊ. ಮಾದಾಪುರ ಶಶಿಧರ ಅವರು ಮೂಲತಃ ಹಾಸನ ಜಿಲ್ಲೆಯ ಚನ್ನರಾಯಪಟ್ಟಣದವರು. ಅಲ್ಲಿನ ನರ್ಸರಿ ಶಾಲೆಯಲ್ಲಿ ಒಟ್ಟಿಗೆ ಓದಿದ್ದ ಅವರು ಆಯ್ದುಕೊಂಡಿದ್ದು ವೈದ್ಯಕೀಯ ಕೋರ್ಸ್. ಪ್ರಸ್ತುತ ಭಿನ್ನ ದೇಶಗಳ ಆರೋಗ್ಯ ಕ್ಷೇತ್ರದಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ.

ಇಬ್ಬರೂ ತಮ್ಮ ಸ್ಥಾನದ ಪ್ರಭಾವ ಬಳಸಿಕೊಂಡು ಎರಡೂ ದೇಶಗಳ ಮಧ್ಯೆ ಆರೋಗ್ಯ, ಶಿಕ್ಷಣ ಮತ್ತು ವೃತ್ತಿಪರ ಅಭಿವೃದ್ಧಿಗೆ ಜಾಗತಿಕ ವೇದಿಕೆ ನಿರ್ಮಿಸಲು ರಾಜೀವ್ ಗಾಂಧಿ ವಿಶ್ವವಿದ್ಯಾಲಯ ಮತ್ತು ಇಂಗ್ಲೆಂಡ್‌ನ ಜಿಟೆಕ್ ನಡುವೆ ಒಪ್ಪಂದಕ್ಕೆ ಸಹಿ ಹಾಕಿದ್ದಾರೆ. ತಮ್ಮ ಗೆಳೆತನದ ಲಾಭವನ್ನು ವೈದ್ಯಕೀಯ ಕ್ಷೇತ್ರಕ್ಕೆ ಹಂಚಿದ್ದಾರೆ.

ಒಪ್ಪಂದದ ಪ್ರಯೋಜನ

- ವೈದ್ಯಕೀಯ ವಿದ್ಯಾರ್ಥಿಗಳು, ವೈದ್ಯರು ಮತ್ತು ಆರೋಗ್ಯ ವೃತ್ತಿಪರರು ಬ್ರಿಟನ್ ಆರೋಗ್ಯ ಕ್ಷೇತ್ರದ ವೃತ್ತಿಪರ ಅನುಭವ ಪಡೆಯುವುದು
- ಇಂತಹ ಅನುಭವವು ಕರ್ನಾಟಕ ಆರೋಗ್ಯ ವ್ಯವಸ್ಥೆಯ ಕ್ರಾಂತಿಕಾರಕ ಸುಧಾರಣೆಗೆ ದಾರಿ ಮಾಡಿಕೊಡುವ ನಿರೀಕ್ಷೆ ಇದೆ
- ವೈದ್ಯಕೀಯ, ನರ್ಸಿಂಗ್ ಮತ್ತು ಸಮಗ್ರ ಆರೋಗ್ಯ ವಿಜ್ಞಾನಗಳು ಸೇರಿದಂತೆ ಆರೋಗ್ಯ ಕ್ಷೇತ್ರದ ವಿವಿಧ ವಲಯಗಳ ವಿದ್ಯಾರ್ಥಿಗಳು, ಪ್ರಾಧ್ಯಾಪಕರು ಹಾಗೂ ಆರೋಗ್ಯ ವೃತ್ತಿಪರರ ನಡುವೆ ಮಾಹಿತಿ ವಿನಿಮಯ ಕಾರ್ಯಕ್ರಮ
- ಎರಡು ದೇಶಗಳ ನಡುವಿನ ಕ್ಷಮತೆ ಅಭಿವೃದ್ಧಿ, ಸಂಶೋಧನಾ ಸಹಕಾರ ಮತ್ತು ತಂತ್ರಜ್ಞಾನ ಆಧಾರಿತ ಶಿಕ್ಷಣವನ್ನು ಬಲಪಡಿಸುವುದು
- ನಿರಂತರ ವೈದ್ಯಕೀಯ ಶಿಕ್ಷಣ (ಸಿಎಂಇ) ಮತ್ತು ಜೀವನ-ಬೆಂಬಲ ತರಬೇತಿ ಕಾರ್ಯಕ್ರಮಗಳನ್ನು ಇಂಗ್ಲೆಂಡ್ ಪ್ರಾಧ್ಯಾಪಕರೊಂದಿಗೆ ಸೇರಿ ಅಭಿವೃದ್ಧಿಗೊಳಿಸುವುದು
- ಅಂತರರಾಷ್ಟ್ರೀಯ ಫೆಲೋಷಿಪ್ ಪ್ರೋಗ್ರಾಂನಲ್ಲಿ ಸಂದರ್ಶನದ ಅವಕಾಶಗಳನ್ನು ಖಚಿತಪಡಿಸುವುದು
- ಜಾಗತಿಕ ಕ್ಲಿನಿಕಲ್ ಅನುಭವ ಮತ್ತು ವೃತ್ತಿ ಅಭಿವೃದ್ಧಿಗೆ ಹೊಸ ದಾರಿ ಕಂಡುಕೊಳ್ಳುವುದು

> ಜಾಗತಿಕ ಮಟ್ಟದ ಆರೋಗ್ಯ ವೃತ್ತಿಪರರನ್ನು ಬೆಳೆಸಲು ಹೊಸ ಒಪ್ಪಂದ ಮಹತ್ವದ ಹೆಜ್ಜೆಯಾಗಿದೆ. ಇಂತಹ ಅಂತರರಾಷ್ಟ್ರೀಯ ಸಹಭಾಗಿತ್ವಗಳು ಶೈಕ್ಷಣಿಕ ಗುಣಮಟ್ಟವನ್ನು ಹೆಚ್ಚಿಸುತ್ತವೆ. ವಿಶ್ವದಾದ್ಯಂತ ಆರೋಗ್ಯ ಸೇವೆಯ ಗುಣಮಟ್ಟವನ್ನು ಸುಧಾರಿಸಲು ಸಹಕಾರಿಯಾಗುತ್ತವೆ.
>
> **ಡಾ. ಬಿ.ಸಿ.ಭಗವಾನ್**
> ಕುಲಪತಿ, ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ

> ಬ್ರಿಟನ್–ಕರ್ನಾಟಕ ಆರೋಗ್ಯ ಶಿಕ್ಷಣದ ಗುಣಮಟ್ಟ ಹೆಚ್ಚಿಸಲು, ವೈದ್ಯಕೀಯ ವಿದ್ಯಾರ್ಥಿಗಳು, ಸಂಶೋಧಕರು, ಅಧ್ಯಾಪಕರಿಗೆ ಜಾಗತಿಕ ಕಲಿಕಾ ಅವಕಾಶಗಳು, ಉದ್ಯೋಗ ಒದಗಿಸಲು ಈ ಒಪ್ಪಂದ ಮುನ್ನುಡಿ ಬರೆದಿದೆ.
>
> **ಪ್ರೊ. ಮಾದಾಪುರ ಶಶಿಧರ**
> ಜಾಗತಿಕ ಕಾರ್ಯಕ್ರಮಗಳ ಮುಖ್ಯಸ್ಥ, ಲೀ ಟೀಚಿಂಗ್ ಹಾಸ್ಪಿಟಲ್ಸ್ ಎನ್‌ಎಚ್‌ಎಸ್ ಫೌಂಡೇಷನ್, ಬ್ರಿಟನ್

ಅಜೀಂ ಪ್ರೇಮ್‌ಜಿ ವಿದ್ಯಾರ್ಥಿವೇತನ

ವಿದ್ಯಾರ್ಥಿ ವೇತನ ಕೈಪಿಡಿ

ಅಜೀಂ ಪ್ರೇಮ್‌ಜಿ ಫೌಂಡೇಷನ್ ಶೈಕ್ಷಣಿಕ ಕ್ಷೇತ್ರದಲ್ಲಿ ಗುಣಮಟ್ಟ ಮತ್ತು ಸಮಾನತೆಯನ್ನು ಕಾಯ್ದುಕೊಳ್ಳುವ ಉದ್ದೇಶದಿಂದ ಪ್ರತಿಭಾವಂತ ವಿದ್ಯಾರ್ಥಿನಿಯರಿಗೆ ವಿದ್ಯಾರ್ಥಿ ವೇತನ ನೀಡುತ್ತದೆ.

ಆರ್ಥಿಕವಾಗಿ ಹಿಂದುಳಿದಿರುವ ವಿದ್ಯಾರ್ಥಿನಿಯರು ಅರ್ಜಿ ಸಲ್ಲಿಸಬಹುದು. ಸರ್ಕಾರಿ ಶಾಲೆ/ಕಾಲೇಜಿನಲ್ಲಿ 10 ಮತ್ತು 12ನೇ ತರಗತಿಯನ್ನು ಓದಿದವರಾಗಿರಬೇಕು. ಸರ್ಕಾರಿ ಅಥವಾ ಖಾಸಗಿ ವಿಶ್ವವಿದ್ಯಾಲಯದಲ್ಲಿ ಪದವಿ ಅಥವಾ ಡಿಪ್ಲೊಮಾ ಕೋರ್ಸ್‌ಗೆ ದಾಖಲಾಗಿರಬೇಕು.

ಆರ್ಥಿಕ ನೆರವು: ವಾರ್ಷಿಕ ₹ 30,000 ವಿದ್ಯಾರ್ಥಿವೇತನ ನೀಡಲಾಗುತ್ತದೆ.

ಅರ್ಜಿ ಸಲ್ಲಿಸಲು ಕೊನೇ ದಿನ: 31-01-2026

ಅರ್ಜಿ ಸಲ್ಲಿಸುವ ವಿಧಾನ: ಆನ್‌ಲೈನ್

ಮಾಹಿತಿಗೆ: Short Url: www.b4s.in/praja/AZPS1

ಉದ್ಯೋಗ ಕಿರಣ

ವರ್ಕ್ ಫ್ರಂ ಹೋಮ್ ಇಂಟರ್ನ್‌ಷಿಪ್

ವೆಬ್‌ಟೂನ್ ಪ್ರೊಡಕ್ಷನ್ ಆರ್ಟಿಸ್ಟ್: ಇಂಟಿಗ್ರಲ್ ಸಲ್ಯೂಷನ್ ಸಂಸ್ಥೆಯು ವೆಬ್‌ಟೂನ್ ಪ್ರೊಡಕ್ಷನ್ ಆರ್ಟಿಸ್ಟ್ ಇಂಟರ್ನಿಯ ನೇಮಕಕ್ಕೆ ಅರ್ಜಿ ಆಹ್ವಾನಿಸಿದೆ. ಕ್ಯಾನ್ವಾ ಮತ್ತು ಎಐ ಟೂಲ್ಸ್ ಬಗ್ಗೆ ಜ್ಞಾನ ಇರುವ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಬಹುದು. ಅರ್ಜಿ ಸಲ್ಲಿಕೆಗೆ ಫೆಬ್ರುವರಿ 20 ಕೊನೇ ದಿನ. ಸ್ಟೈಪೆಂಡ್– ತಿಂಗಳಿಗೆ ₹ 10,000–₹ 12,000. ಸಂಪರ್ಕ: https://tinyurl.com/y9uymz6s.

ಇ–ಕಾಮರ್ಸ್ ಮಾರ್ಕೆಟಿಂಗ್: ಕಲಾ ಅಸೋಸಿಯೇಟ್ಸ್ ಸಂಸ್ಥೆಯು ಇ–ಕಾಮರ್ಸ್ ಮಾರ್ಕೆಟಿಂಗ್ ಇಂಟರ್ನಿಗಳನ್ನು ಆಹ್ವಾನಿಸಿದೆ. ಕಾನ್‌ಫ್ಲಿಕ್ಟ್ ಮ್ಯಾನೇಜ್‌ಮೆಂಟ್, ಕ್ರಿಯೇಟಿವ್ ಥಿಂಕಿಂಗ್, ಇಂಟರ್‌ಪರ್ಸನಲ್ ಸ್ಕಿಲ್ಸ್ ಇರುವ, ಪರಿಣಾಮಕಾರಿ ಸಂವಹನ ನಡೆಸಬಲ್ಲ ವಿದ್ಯಾರ್ಥಿಗಳು ಫೆಬ್ರುವರಿ 20ರ ಒಳಗೆ ಅರ್ಜಿ ಸಲ್ಲಿಸಬಹುದು. ಸ್ಟೈಪೆಂಡ್– ತಿಂಗಳಿಗೆ ₹ 10,000–₹ 15,000. ಸಂಪರ್ಕ: https://tinyurl.com/bdeywyhr.

ಬೆಂಗಳೂರು ಕೇಂದ್ರಿತ ಇಂಟರ್ನ್‌ಷಿಪ್

ಫುಲ್–ಸ್ಟ್ಯಾಕ್ ಡೆವಲಪ್‌ಮೆಂಟ್: ಜೆನ್‌ಸ್ಪಾರ್ಕ್ ಇಂಡಿಯಾ ಸಂಸ್ಥೆಯು ಫುಲ್–ಸ್ಟ್ಯಾಕ್ ಡೆವಲಪ್‌ಮೆಂಟ್ ಇಂಟರ್ನಿಗಳನ್ನು ನೇಮಿಸಿಕೊಳ್ಳಲಿದೆ. MERN, MongoDB, Node.js, React ವಿಷಯಗಳ ಬಗ್ಗೆ ಜ್ಞಾನ ಉಳ್ಳವರು ಫೆಬ್ರುವರಿ 20ರ ಒಳಗೆ ಅರ್ಜಿ ಸಲ್ಲಿಸಬಹುದು. ಸ್ಟೈಪೆಂಡ್– ₹ 15,000– ₹ 20,000. ಸಂಪರ್ಕ: https://shorturl.at/00oCU

ಅನ್ಯರನ್ನು ತಿದ್ದುವ ಉಸಾಬರಿ ನಿಮಗ್ಯಾಕೆ?

ಸಮಾಧಾನ

ಡಾ. ಡಿ.ಎಂ.ಹೆಗಡೆ, ಆಪ್ತಸಮಾಲೋಚಕ

• ನಾನು ಕಾಲೇಜಿನಲ್ಲಿ ಎಲ್ಲರಿಗಿಂತ ಭಿನ್ನ. ನಾನು ತಪ್ಪು ಮಾಡುವುದಿಲ್ಲ. ಯಾರಿಗೂ ತೊಂದರೆ ಕೊಡುವುದಿಲ್ಲ. ನನ್ನ ಸಹಪಾಠಿಗಳು ಇರುವ ಹಾಗೆ ನಾನು ಇರುವುದಿಲ್ಲ. ಅವರೊಂದಿಗೆ ಸೇರುವುದಿಲ್ಲ. ಕೆಟ್ಟ ಕೆಲಸ ಮಾಡುವವರನ್ನು ಕಂಡರೆ ನನಗೆ ಇಷ್ಟವಿಲ್ಲ. ಅವರನ್ನು ತಿದ್ದಲು ಪ್ರಯತ್ನಿಸುತ್ತೇನೆ. ಅವರೆಲ್ಲರ ತಪ್ಪು ಹಾಗೂ ಉಡಾಳತನದಿಂದ ನನಗೆ ತಡೆಯಲಾಗದಷ್ಟು ಕೋಪ ಬರುತ್ತದೆ. ಇದು ಎನ್‌ಸಿಸಿಯಲ್ಲಿ ಕಲಿತ ಶಿಸ್ತು. ಇದರಿಂದ ಅವರು ನನ್ನನ್ನು ಆಡಿಕೊಳ್ಳುತ್ತಾರೆ. ನಾನು ಅವರೊಂದಿಗೆ ಹೋರಾಡುವುದು ಸರಿಯೇ? ನನಗೆ ಅವರೆಲ್ಲರ ವರ್ತನೆಯಿಂದ ನೋವಾಗುತ್ತದೆ. ಸಮಾಜದಲ್ಲಿ ಎಲ್ಲರೂ ನೆಮ್ಮದಿಯಿಂದ ಬದುಕುವಂತೆ ಹೇಗೆ ಮಾಡುವುದು ಎಂದು ನನಗೆ ಚಿಂತೆಯಾಗುತ್ತದೆ. ಕೆಲವು ಸಲ ದುಃಖವಾಗುತ್ತದೆ. ನಾನೇನು ಮಾಡಬೇಕು?

ಮಾಲತೇಶ ಬಸವಪುರ, ದಾವಣಗೆರೆ

ನಿಮಗಿರುವ ಶಿಸ್ತು, ನಿಷ್ಠೆ ಹಾಗೂ ಸಮಾಜದ ಬಗೆಗಿನ ಕಾಳಜಿ ನಿಮ್ಮ ಮಾತಿನಲ್ಲಿ ಕಾಣಿಸುತ್ತದೆ. ನಿಮ್ಮ ಉದಾತ್ತ ಮನಸ್ಸಿಗೆ ಹಾಗೂ ಒಳ್ಳೆಯ ಕೆಲಸಗಳಿಗೆ ನನ್ನ ಹೃತ್ಪೂರ್ವಕ ಅಭಿನಂದನೆಗಳು. ಇಂದಿನ ಸಮಾಜದಲ್ಲಿ ನಿಮ್ಮಂಥವರು ತೀರಾ ಅಪರೂಪ. ಎಲ್ಲ ಕಡೆಯೂ ನಿಮ್ಮಂಥವರು ಇರಬೇಕು. ಅವರ ಸಂಖ್ಯೆ ಹೆಚ್ಚಾಗಬೇಕು. ಅದರಿಂದ ಎಲ್ಲರಿಗೂ ಒಳಿತಾಗುತ್ತದೆ.

ನಿಮ್ಮ ವಿಚಾರ, ಆಚಾರ ಹಾಗೂ ಜೀವನ ಮೌಲ್ಯಗಳು ಸರಿಯಾಗಿವೆ. 'ವ್ಯಕ್ತಿ ವೀರಭದ್ರನಾದರೆ, ಸಮಾಜ ಸುಭದ್ರ' ಎನ್ನುವ ಮಾತಿಗೆ ನೀವು ಒಂದು ಉದಾಹರಣೆಯಾಗುವ ಅವಕಾಶವಿದೆ. ನೀವು ತಪ್ಪು ಮಾಡುವುದಿಲ್ಲ ಎನ್ನುವುದು ಸರಿ. ಅದರಿಂದ ಖಂಡಿತವಾಗಿಯೂ ನಿಮ್ಮ ಆತ್ಮಸ್ಥೈರ್ಯ ಹೆಚ್ಚಾಗುತ್ತದೆ. ಆ ಮೂಲಕ ನಿಮಗೆ ಸಾಕಷ್ಟು ಒಳ್ಳೆಯದಾಗುತ್ತದೆ. ಇದೇ ಸಂದರ್ಭದಲ್ಲಿ, ಉಳಿದವರು ಮಾಡುವ ತಪ್ಪಿಗಾಗಿ ವ್ಯಥೆಪಡುವುದು, ಅವರನ್ನು ತಿದ್ದುವುದಕ್ಕೆ ಶ್ರಮಿಸುವುದು ಅಷ್ಟು ಸರಿಯಲ್ಲ. ಅದು ನಿಮ್ಮ ಕೆಲಸವಲ್ಲ. ನಿಮ್ಮ ಬದುಕನ್ನು ನಿಮ್ಮ ಇಷ್ಟದಂತೆ, ಸತ್ಯ ಹಾಗೂ ನಿಷ್ಠೆಯ ಮಾರ್ಗದಲ್ಲಿ ಸಶಕ್ತವಾಗಿ ಮುನ್ನಡೆಸುವುದಕ್ಕೆ ಏನೇನು ಮಾಡಬೇಕೋ ಅದನ್ನು ಮಾಡುವುದು ಮಾತ್ರ ನಿಮ್ಮ ಕೆಲಸ.

ಈ ಜಗತ್ತು ವೈವಿಧ್ಯಗಳ ಆಗರ. ನಮ್ಮ ಅನುಭವದ ಹಿನ್ನೆಲೆಯಲ್ಲಿ ನಾವು ಸರಿ ಹಾಗೂ ತಪ್ಪುಗಳನ್ನು ನಿರ್ಧರಿಸುತ್ತೇವೆ. ಅವು ನಮ್ಮ ಪ್ರಕಾರ ಸರಿ, ಅಷ್ಟೇ!

ಎಲ್ಲರ ಹುಟ್ಟು ಹಾಗೂ ಬೆಳವಣಿಗೆ ಬೇರೆ ಬೇರೆ ಪರಿಸ್ಥಿತಿಯಲ್ಲಿ ಹಾಗೂ ಪರಿಸರಗಳಲ್ಲಿ ಆಗಿರುತ್ತವೆ. ಹಾಗಾಗಿ, ಅವರವರ ಬದುಕಿನ ರೀತಿ, ನೀತಿಗಳೂ ಬೇರೆ ಬೇರೆಯಾಗಿರುತ್ತವೆ. ಅಷ್ಟು ಮಾತ್ರಕ್ಕೇ ಅವರ ಆಚಾರಗಳು ತಪ್ಪು ಹಾಗೂ ನಮ್ಮ ವಿಚಾರಗಳೇ ಸರಿ ಎನ್ನುವುದು ನಮ್ಮ ಸಂಕುಚಿತ ಆಲೋಚನೆಯಾಗುತ್ತದೆ. ನಿಮ್ಮ ಮಾತಿನಿಂದಾಗಲೀ ನಿಮ್ಮ ಭಯದಿಂದಾಗಲೀ ಅವರ‍್ಯಾರೂ ಬದಲಾಗುವುದಿಲ್ಲ. ಅವರವರ ಜೀವನದ ಗುರಿ, ದಾರಿ ಬದಲಾಗುವುದಿಲ್ಲ.

ಕೆಟ್ಟದ್ದನ್ನು ಮಾಡಬಾರದು, ಯಾರಿಗೂ ತೊಂದರೆ ಕೊಡಬಾರದು ಎನ್ನುವುದು ನೂರಕ್ಕೆ ನೂರರಷ್ಟು ಸರಿ. ಅದನ್ನು ನಾವು ಪಾಲಿಸಬೇಕು. ಹಾಗಂತ, ಕೆಟ್ಟದ್ದು ಮಾಡುತ್ತಿರುವವರನ್ನು ತಿದ್ದಲಿಕ್ಕೆ ನಾವು ಶ್ರಮಿಸುವುದಾಗಲೀ ಅವರಿಗಾಗಿ ಚಿಂತಿಸುವುದಾಗಲೀ ಕೋಪಿಸಿಕೊಳ್ಳುವುದಾಗಲೀ ಹತಾಶರಾಗುವುದಾಗಲೀ ನಮ್ಮ ಕೆಲಸವೇನಲ್ಲ. ಅವರನ್ನು ಸರಿದಾರಿಗೆ ತರಲು ನೀವು ಹೋರಾಟ ಮಾಡುವುದೂ ಬೇಕಾಗಿಲ್ಲ. ಹೋರಾಟವೇ ಎಲ್ಲಾ ಸಮಸ್ಯೆಗಳಿಗೆ ಪರಿಹಾರವೂ ಅಲ್ಲ.

ಸಾವಿರಾರು ವರ್ಷಗಳ ಹಿಂದಿನಿಂದಲೂ ಅನೇಕಾನೇಕ ದೈವಾಂಶಸಂಭೂತರು ಎಲ್ಲರ ಒಳಿತಿಗಾಗಿ ಏನು ಮಾಡಬೇಕು, ಯಾರ‍್ಯಾರು ಏನೇನನ್ನು ಮಾಡಿದರೆ ಸರ್ವರೂ ಸಂತೋಷದಿಂದ ಬದುಕುವುದಕ್ಕೆ ಸಾಧ್ಯವಿದೆ ಎನ್ನುವುದನ್ನೆಲ್ಲ ಹೇಳಿಕೊಟ್ಟಿದ್ದಾರೆ. ಆದರೆ ಅವನ್ನೆಲ್ಲ ತಿಳಿದುಕೊಂಡು, ಬದುಕಿನಲ್ಲಿ ಅಳವಡಿಸಿಕೊಂಡು ಸಂತೋಷದಿಂದ ಬದುಕಿದವರು ಹಾಗೂ ಬದುಕನ್ನು ಸಾರ್ಥಕಗೊಳಿಸಿಕೊಂಡವರು ಅಪರೂಪ. ಬೇರೆಯವರ ಬಗ್ಗೆ ಬಹಳ ಚಿಂತೆ ಮಾಡುವುದನ್ನು ಬಿಟ್ಟು, ನಿಮ್ಮ ಮನಸ್ಸು ಶಾಂತವಾಗಿರುವಂತೆ ನೋಡಿಕೊಳ್ಳಿ.

ನೀವು ಮೊದಲು ಸಮಾಜದಲ್ಲಿ ಒಂದು ಒಳ್ಳೆಯ ಸ್ಥಾನವನ್ನು ಗಳಿಸಿಕೊಂಡರೆ, ಅಲ್ಲಿಂದ ಮುಂದೆ ನಿಮ್ಮ ಆಲೋಚನೆಗಳನ್ನು ಅನುಷ್ಠಾನಗೊಳಿಸುವುದು ಸುಲಭವಾಗುತ್ತದೆ. ಲಾಗಾಯ್ತಿನಿಂದಲೂ ರಾಜನ (ಆಳುವವರ) ಮಾತಿಗೆ ಮರ್ಯಾದೆ ಜಾಸ್ತಿ. ಹಾಗಾಗಿ, ನಿಮ್ಮನ್ನು ನೀವು ಸಶಕ್ತರನ್ನಾಗಿ ಮಾಡಿಕೊಳ್ಳುವತ್ತ ಶ್ರದ್ಧೆಯಿಂದ ಗಮನಹರಿಸಿ. ಅದರಿಂದ ಬಹಳಷ್ಟು ಜನರಿಗೆ ಒಳ್ಳೆಯದಾಗುತ್ತದೆ.

ಎಸ್ಸೆಸ್ಸೆಲ್ಸಿ ಪರೀಕ್ಷೆ ದಿಕ್ಸೂಚಿ — ಸಮಾಜವಿಜ್ಞಾನ

ಎಸ್ಸೆಸ್ಸೆಲ್ಸಿ–ಪಿಯುಸಿ ಪರೀಕ್ಷೆ ದಿಕ್ಸೂಚಿ

ಪುನರಾವರ್ತನೆ ಮತ್ತು ಮಾದರಿ ಪ್ರಶ್ನೆಗಳು

21) ಚಂಡಮಾರುತಗಳು ಉಂಟಾಗಲು ಕಾರಣಗಳೇನು? ಇದರ ಪರಿಣಾಮಗಳೇನು?

ಉತ್ತರ: ಚಂಡಮಾರುತಗಳು ಉಂಟಾಗಲು ಕಾರಣಗಳು: ಚಂಡಮಾರುತಗಳು ಬಂಗಾಳಕೊಲ್ಲಿಯಲ್ಲಿ ಉಗಮಗೊಳ್ಳುತ್ತವೆ. ಮೂರು ಕಡೆಗಳಲ್ಲಿ ಭೂಭಾಗವಿದ್ದು ಭೂಮಿ ಸಾಗರ ಭಾಗಗಳ ನಡುವೆ ಉಷ್ಣಾಂಶ ಹಾಗೂ ಒತ್ತಡದಲ್ಲಿ ತೀವ್ರ ವ್ಯತ್ಯಾಸವಿದ್ದು ಬಂಗಾಳಕೊಲ್ಲಿಯಲ್ಲಿ ಚಂಡಮಾರುತ ಉಂಟಾಗಲು ಕಾರಣವಾಗಿವೆ.

ಸಾಮಾನ್ಯವಾಗಿ ಇವು ಬಂಗಾಳ ಉಪಸಾಗರದಲ್ಲಿ ಉಗಮಗೊಂಡು ಪಶ್ಚಿಮದ ಕಡೆಗೆ ಚಲಿಸಿ ತಮಿಳುನಾಡು ಅಥವಾ ಆಂಧ್ರಪ್ರದೇಶದ ತೀರಕ್ಕೆ ಅಪ್ಪಳಿಸುತ್ತದೆ. ಕೆಲವೊಮ್ಮೆ ವಾಯವ್ಯಕ್ಕೆ ಚಲಿಸಿ ಒಡಿಶಾ ತೀರವನ್ನು ಅಪ್ಪಳಿಸುತ್ತವೆ. ಭಾರತದಲ್ಲಿ ಚಂಡಮಾರುತಗಳು ಎರಡು ಅವಧಿಯಲ್ಲಿ ಹೆಚ್ಚು ಸಂಭವಿಸುತ್ತದೆ. ಇವುಗಳು ಅಕ್ಟೋಬರ್–ನವೆಂಬರ್ ತಿಂಗಳಲ್ಲಿ ಹೆಚ್ಚು ಸಂಭವಿಸುತ್ತದೆ. ಮೇ–ಜೂನ್ ತಿಂಗಳಲ್ಲಿಯೂ ಸಂಭವಿಸುತ್ತದೆ.

ಚಂಡಮಾರುತದ ಪರಿಣಾಮಗಳು :

1. ಕೆಲವು ವೇಳೆ ಚಂಡಮಾರುತ ಅಪ್ಪಳಿಸಿದ ಪ್ರದೇಶದ ಜನ ಜೀವನವೇ ಸಂಪೂರ್ಣ ಮಾರ್ಪಾಡು ಹೊಂದುವುದು.
2. ಇವುಗಳಿಂದ ಅಪಾರ ಸಾವು ನೋವು ಉಂಟಾಗುತ್ತದೆ.
3. ಸಾಗರದ ಅಲೆಗಳು ಒಳನಾಡಿಗೆ ಚಾಚಿ ಜಲ ರಾಶಿಗಳು ಲವಣಯುಕ್ತವಾಗುತ್ತವೆ.
4. ಬೆಳೆಗಳು ಸಂಪೂರ್ಣ ನಾಶವಾಗುತ್ತವೆ.

22) ಅಸ್ಪೃಶ್ಯತಾ ನಿವಾರಣೆಯಲ್ಲಿ ಪಾತ್ರವಹಿಸಿದ ಸಮಾಜ ಸುಧಾರಕರನ್ನು ಹೆಸರಿಸಿ

ಉತ್ತರ:– ಸುಧಾರಣಾವಾದಿಗಳು, ಧಾರ್ಮಿಕ ನೇತಾರರು, ಬರಹಗಾರರು ಮತ್ತು ವಿಚಾರವಾದಿಗಳು ಅಸ್ಪೃಶ್ಯತೆಯ ವಿರುದ್ಧ ಹೋರಾಡುತ್ತಲೇ ಬಂದಿದ್ದಾರೆ. ಸ್ವಾಮಿ ವಿವೇಕಾನಂದ, ಡಾ॥ ಬಿ.ಆರ್. ಅಂಬೇಡ್ಕರ್, ಜ್ಯೋತಿ ಬಾಪುಲೆ, ಗಾಂಧೀಜಿ, ಮೊದಲಾದವರು ಅಸ್ಪೃಶ್ಯತೆ ಹಾಗೂ ಅಸಮಾನತೆಯ ವಿರುದ್ಧ ಹೋರಾಟ ನಡೆಸಿದರು.

23) ಪೀಲ್ ಎಂಬುವವರ ನೇತೃತ್ವದಲ್ಲಿ ಸಮಿತಿಯೊಂದನ್ನು ಯಾವ ಸಂದರ್ಭದಲ್ಲಿ ಬ್ರಿಟಿಷ್ ಸರ್ಕಾರ ರಚಿಸಿತು. ಅದರ ಶಿಫಾರಸ್ಸುಗಳ ಆಧಾರದ ಮೇಲೆ ಯಾವುದನ್ನು ಮರು ವಿನ್ಯಾಸಗೊಳಿಸಲಾಯಿತು?

ಉತ್ತರ:– 1857ರ ಘಟನೆಯ ನಂತರ ಪೀಲ್ ಎಂಬುವವರ ನೇತೃತ್ವದಲ್ಲಿ ಸಮಿತಿಯೊಂದನ್ನು ರಚಿಸಿ, ಶಿಫಾರಸ್ಸುಗಳನ್ನು ಬ್ರಿಟಿಷ್ ಸರಕಾರ ಪಡೆಯಿತು. ಈ ಶಿಫಾರಸ್ಸುಗಳ ಆಧಾರದ ಮೇಲೆ ಸೈನಿಕ ವ್ಯವಸ್ಥೆಯನ್ನು ಮರು ವಿನ್ಯಾಸಗೊಳಿಸಲಾಯಿತು

24) ಎಂ.ಜಿ ರಾನಡೆಯವರ ನೇತೃತ್ವದಲ್ಲಿ ಪ್ರಾರ್ಥನಾ ಸಮಾಜದಿಂದ ಆದ ಬದಲಾವಣೆಗಳೇನು?

ಉತ್ತರ:– ಎಂ.ಜಿ ರಾನಡೆಯವರ ನೇತೃತ್ವದಲ್ಲಿ ಪ್ರಾರ್ಥನಾ ಸಮಾಜದ ಸುಧಾರಣಾ ವ್ಯಾಪ್ತಿಯು ಮತ್ತಷ್ಟು ಹೆಚ್ಚಾಯಿತು. ಇವರು ಸಮಾಜವನ್ನು ಸುಧಾರಿಸದೆ ರಾಜಕೀಯ ಮತ್ತು ಆರ್ಥಿಕ ಕ್ಷೇತ್ರಗಳಲ್ಲಿ ಪ್ರಗತಿಯನ್ನು ಸಾಧಿಸುವುದು ಅಸಾಧ್ಯವೆಂದು ಸಾರಿದರು.. ಹಿಂದೂ–ಮುಸ್ಲಿಂ ಏಕತೆಯ ಪ್ರತಿಪಾದಕರಾಗಿದ್ದ ರಾನಡೆಯವರು ರಾಷ್ಟ್ರೀಯ ಕಾಂಗ್ರೆಸ್‌ನಲ್ಲಿ ಸಕ್ರಿಯರಾಗಿದ್ದರು. ಇವರು ಹೆಣ್ಣು ಮಕ್ಕಳ ಶಿಕ್ಷಣಕ್ಕಾಗಿ ಪ್ರೌಢಶಾಲೆಯನ್ನು ತೆರೆದರು

25) ಅನಕ್ಷರತೆಯನ್ನು ನಿವಾರಿಸಲು ಭಾರತ ಸರ್ಕಾರ ಕೈಗೊಂಡಿರುವ ಕ್ರಮಗಳಾವುವು?

ಉತ್ತರ: (1) ಸರ್ವೋನ್ನತ ನ್ಯಾಯಾಲಯವು ತನ್ನ ತೀರ್ಪಿನಲ್ಲಿ "ಶಿಕ್ಷಣದ ಹಕ್ಕು 21 (ಎ)ನೇ ವಿಧಿಯನ್ವಯ ಮೂಲಭೂತ ಹಕ್ಕು ಎನಿಸಿದ್ದು, ಅದು ಜೀವಿಸುವ ಹಕ್ಕಿನಿಂದ ನೇರವಾಗಿ ಹರಿದು ಬರುವಂತಹುದು" ಎಂದು ಘೋಷಿಸಿದೆ.

(2) 2009ನೇ ಮಕ್ಕಳ ಉಚಿತ ಹಾಗೂ ಕಡ್ಡಾಯ ಶಿಕ್ಷಣ ಕಾನೂನು 2010ನೇ ಏಪ್ರಿಲ್ 1ರಿಂದ ಜಾರಿಗೆ ಬಂದಿದೆ. ಇದು ಭಾರತದ ಅನಕ್ಷರತೆಯನ್ನು ಹೋಗಲಾಡಿಸುವಲ್ಲಿ ಒಂದು ಪ್ರಮುಖ ಹೆಜ್ಜೆ ಎನಿಸಿದೆ. ಈಗ ಶಿಕ್ಷಣ ನೀಡುವುದು ಮಕ್ಕಳ ಹೆತ್ತವರಿಗೆ ಹಾಗೂ ಸರ್ಕಾರಕ್ಕೆ ಸಂಯುಕ್ತ ಜವಾಬ್ದಾರಿಯಾಗಿದೆ.

26) ಬಬರ್ ಮಣ್ಣು ಎಲ್ಲಿ ನೋಡಬಹುದಾದಿದೆ?

ಉತ್ತರ:– ಹಿಮಾಲಯದ ತಪ್ಪಲಿನಲ್ಲಿ ನದಿಗಳು ಮೈದಾನವನ್ನು ಪ್ರವೇಶಿಸುವ ಕಡೆ ಅವುಗಳು ಹೊತ್ತು ತಂದ ದಪ್ಪ ಶಿಲಾ ಚೂರುಗಳನ್ನು ಸಂಚಯಿಸಿದೆ. ಇದನ್ನೆ ಬಬರ್ ಎಂದು ಕರೆಯುವರು. ಹೀಗಾಗಿ ಇಲ್ಲಿಯೇ ಬಬರ್ ಮಣ್ಣನ್ನು ನೋಡಬಹುದಾಗಿದೆ.

27) ಪ್ಲಾಸಿ ಕದನದ ಕುರಿತು ಸಂಕ್ಷಿಪ್ತವಾಗಿ ಬರೆಯಿರಿ

ಉತ್ತರ:– ಬಂಗಾಳದ ನವಾಬನಾದ ಅಲಿವರ್ದಿ ಖಾನನು 1756ರಲ್ಲಿ ನಿಧನನಾದನು. ನಂತರ ಅವನ ಮೊಮ್ಮಗನಾದ ಸಿರಾಜ್–ಉದ್–ದೌಲನು ಅಧಿಕಾರಕ್ಕೆ ಬಂದನು. ಯುವ ನವಾಬನಾದ ಸಿರಾಜ್–ಉದ್–ದೌಲನಿಗೂ ಮತ್ತು ಬ್ರಿಟಿಷರಿಗೂ 1757ರಲ್ಲಿ ಇತಿಹಾಸ ಪ್ರಸಿದ್ಧ ಪ್ಲಾಸಿ ಕದನ ನಡೆಯಿತು.

ಮೊದಲು ನವಾಬನ ವಿರೋಧಿಗಳಾದ ಮಾಣಿಕ್‌ಚಂದ್, ನೇಮಿಚಂದ್, ಜಗತ್‌ಸೇಠ್ (ಬಂಗಾಳದ ಲೇವಾದೇವಿಗಾರ) ಮೊದಲಾದ ಶ್ರೀಮಂತರನ್ನು ತನ್ನತ್ತ ಸೆಳೆದುಕೊಂಡನು. ನಂತರ ಸಿರಾಜನ ಸೇನಾಪತಿಯಾದ ಮೀರ್ ಜಾಫರನಿಗೆ ನವಾಬನನ್ನಾಗಿ ಮಾಡುವ ಆಮಿಷವೊಡ್ಡಿ ಯುದ್ಧದಲ್ಲಿ ತಟಸ್ಥವಾಗಿರಲು ರಾಜ್ಯವನ್ನು ಒಪ್ಪಿಸಿದನು. ಇದರಿಂದ ಧೈರ್ಯಗೊಂಡ ರಾಬರ್ಟ್ ಕ್ಲೈವನು 1757 ಜೂನ್ 23ರಂದು ಸಿರಾಜ್–ಉದ್–ದೌಲನ ಮೇಲೆ ಕದನ ಸಾರಿದನು. ಪ್ಲಾಸಿ ಎಂಬಲ್ಲಿ ನಡೆದ ಕದನದಲ್ಲಿ ಕ್ಲೈವನು ಯೋಜಿಸಿದಂತೆಯೇ ಎಲ್ಲವೂ ನಡೆಯಿತು. ಯುದ್ಧ ಭೂಮಿಯಿಂದ ತಪ್ಪಿಸಿಕೊಂಡ ಸಿರಾಜ್–ಉದ್–ದೌಲನನ್ನು ಸೆರೆಹಿಡಿದು ಕೊಲ್ಲಲಾಯಿತು.

28) ಅರಣ್ಯಗಳ ಸಂರಕ್ಷಣೆಯ ವಿಧಾನಗಳನ್ನು ತಿಳಿಸಿ.

ಉತ್ತರ: ಅರಣ್ಯ ಸಂರಕ್ಷಣಾ ವಿಧಾನಗಳು:

(1) ಕಾಡ್ಗಿಚ್ಚು ಉಂಟು ಮಾಡುವ ಘರ್ಷಿತ ಮರಗಳನ್ನು ತೆಗೆಯುವುದು.
(2) ಅರಣ್ಯದ ಮರಗಳಿಗೆ ತಗಲುವ ರೋಗಗಳನ್ನು ನಿಯಂತ್ರಿಸುವುದು.
(3) ಅರಣ್ಯಗಳಲ್ಲಿ ಸಾಕು ಪ್ರಾಣಿಗಳ ಮೇಯಿಸುವಿಕೆಯನ್ನು ನಿಯಂತ್ರಿಸುವುದು
(4) ಸಾರ್ವಜನಿಕರನ್ನು ಮರ ನೆಡಲು ಪ್ರೋತ್ಸಾಹಿಸುವುದು ಮತ್ತು ಅವುಗಳ ಪ್ರಾಮುಖ್ಯತೆಯ ಬಗ್ಗೆ ತಿಳುವಳಿಕೆ ನೀಡಿ ರಕ್ಷಣೆಗೆ ಪ್ರೇರೇಪಿಸುವುದು.
(5) ಸಾಮಾಜಿಕ ಅರಣ್ಯ ಯೋಜನೆಯನ್ನು ತ್ವರಿತವಾಗಿ ಯಶಸ್ವಿಯಾಗಿ ಕಾರ್ಯಗತಗೊಳಿಸುವುದು. ಇತ್ಯಾದಿ

29) ಅಸ್ಪೃಶ್ಯತೆ ಆಚರಣೆಯಂತಹ ಸಾಮಾಜಿಕ ಪಿಡುಗನ್ನು ನಿವಾರಿಸಲು ನಿಮ್ಮ ಸಲಹೆಗಳೇನು?

ಉತ್ತರ:. ಅಸ್ಪೃಶ್ಯತೆ ಹಿಂದು ಧರ್ಮಕ್ಕಂಟಿದ ಒಂದು ಶಾಪ ಇದನ್ನು ತೊಲಗಿಸಲು ಪ್ರತಿಯೊಬ್ಬರೂ ಮುಂದಾಗಬೇಕು. ದೇವಾಲಯ, ಅಂಗಡಿ ಮತ್ತು ಸಾರ್ವಜನಿಕ ಸ್ಥಳಗಳಲ್ಲಿ ಮುಕ್ತ ಪ್ರವೇಶಕ್ಕೆ ಅವಕಾಶ ಮಾಡಿಕೊಡಬೇಕು. ಜಾತ್ರೆ, ಉತ್ಸವ, ರಾಷ್ಟ್ರೀಯ ಹಬ್ಬ, ಧಾರ್ಮಿಕ ಆಚರಣೆಗಳಲ್ಲಿ ಪಾಲ್ಗೊಳ್ಳಲು ಅವಕಾಶ ಮಾಡಿಕೊಡಬೇಕು. ಸಹಪಂಕ್ತಿ ಭೋಜನಕ್ಕೆ ಅವಕಾಶ ಮಾಡಿಕೊಡಬೇಕು. ವ್ಯಕ್ತಿಯನ್ನು ಅವನ ಜಾತಿಯಿಂದ ಅಳೆಯಬಾರದು. ರಾಜಕೀಯ, ಸಾಮಾಜಿಕ, ಆರ್ಥಿಕ ಮತ್ತು ಶೈಕ್ಷಣಿಕ ಕ್ಷೇತ್ರದಲ್ಲಿ ಸಮಾನವಾದ ಅವಕಾಶಗಳನ್ನು ಒದಗಿಸಿಕೊಡಬೇಕು.

30) ನಿಮಗೆ ಒದಗಿಸಿರುವ ಭಾರತದ ನಕ್ಷೆಯಲ್ಲಿ ಯಾವುದಾದರೂ ಐದನ್ನು ಗುರುತಿಸಿ

ಉತ್ತರ:

A. ಮಲಬಾರ್ ತೀರ
B. 82° 30' ಪೂರ್ವ ರೇಖಾಂಶ
C. ಬಂಗಾಳಕೊಲ್ಲಿ
D. ದಾಮೋದರ್ ಯೋಜನೆ
E. ನರೋರ
F. ಕಾಂಡ್ಲ
G. ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ
H: ನವಮಂಗಳೂರು
I. ಬರ್ನ್‌ಪುರ್
J. ಕೊಚ್ಚಿ



(ಮುಂದುವರಿಯುವುದು)

ಪಿಯುಸಿ ಪರೀಕ್ಷೆ ದಿಕ್ಸೂಚಿ — PHYSICS

ಎಸ್ಸೆಸ್ಸೆಲ್ಸಿ ಸಮಾಜ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ

REVISION: MODEL QUESTIONS

17. Define the terms 'Declination' and 'Inclination' at a place.

Ans:- 'Declination':- The magnetic declination at a place is defined as the angle between geographic Meridian and magnetic meridian at that place.

Inclination:- The magnetic inclination or dip at a place is the angle between the direction of the total intensity of magnetic field of the earth and a horizontal line in the magnetic meridian.

18. What is the nature of force between two long straight parallel conductors, when they carry currents in the –
(i) Same direction and
(ii) Opposite direction?

Ans:- The nature of force between two long straight parallel conductors, when they carry currents in the
(i) Same direction – they attract each other
(ii) Opposite direction – they repel each other

19. What is transformer? Give the principle of a transformer.

Ans:- A transformer is an electrical device that transfers energy between two or more circuits through electromagnetic induction.

It works on the principle of a transformer of Faradays law of electromagnetic induction.

20. Name any two types of electron emission.

Ans:- Two types of electron emission are -
a) Thermionic emission
b) Photoelectric emission

21. Obtain an expression for de Broglie wavelength of a photon.

Ans:- An expression for de Broglie wavelength of a photon.

$$\lambda = \frac{h}{mv}$$

22. What are liquid crystals? Give one of its applications.

Ans: Liquid crystals (LCs) are matter in a state that has properties between those of conventional liquid and those of solid crystal.

Application - It is used in Optical Imaging.

23. Mention any two basic properties of electric charges.

Ans:- The basic properties of electric charges are as follows:
*Charges are additive in nature.
*Charge is a conserved quantity.
*Quantization of charge.

24. State and explain Gauss's law in magnetism.

Ans:- The net magnetic flux through any closed surface is always zero

Consider a Gaussian surface enclosed in a magnetic field. Since the total magnetic field flux entering the Gaussian surface is equal to total flux leaving, total flux through the Gaussian surface is always zero.

25. Mention any two factors on which self inductance of a long solenoid depends.

Ans:- self inductance of a Coil depends.
1.Number of turns per unit length of the coil
2. Permeability of the medium inside the coil

26. The amount of work done in bringing a point charge of 3 mC from infinity to a point P is 0.06 J. Find the electric potential at the point P.

Ans:-Electric Potential at the Point P is 20 volts.

Given: Work Done (W) = 0.06 J (joules)
Charge (q) = 3 mC (milliCoulombs)

TO FIND- Electric Potential at the Point P

SOLUTION -The electric potential (V) at a point is defined as the electric potential energy (U) per unit charge (q) at that point. Mathematically, it's represented as: **V= q/U**

First, let's convert the charge from milliCoulombs (mC) to Coulombs (C):

1 mC = 0.001 C

So, 3 mC = 3 * 0.001 C = 0.003 C

Now, we can calculate the electric potential (V) at point P using the given work done and the charge:

V= 0.003C /0.06J =20V

Therefore, the electric potential at point P is 20 volts.

27. Draw the Wheatstone's bridge circuit and write the condition for its balance.

Ans:- Wheatstone's bridge is said to be balanced when

$$I_g = 0 \text{ (or) } \frac{R_1}{R_2} = \frac{R_3}{R_4} \text{ (or) } \frac{P}{Q} = \frac{R}{S}$$

(or) Voltage across the galvanometer = 0



28. What is interference of light? Give an example.

Ans:- Interference of light is the phenomenon of redistribution of light energy due to the superposition of light waves from two coherent sources. Eg:- The Soap bubbles appear coloured in sunlight due to the interference of light reflected from the soap bubble.

29. Give two differences between Fresnel diffraction and Fraunhofer diffraction.

Ans:- Two differences between Fresnel diffraction and Fraunhofer diffraction are -

Fresnel's diffraction: (1) The source of light and screen are at finite distance from the obstacle. (2) In this case no lenses are used for making rays parallel. The wavefront is either spherical or cylindrical.

Fraunhofer diffraction: (1) the source of light and screen are placed at infinite distance from obstacle. (2) In this case parallel rays and plane wavefronts are produced using lens

STORES OPEN
9AM - 11PM
ಗಿರಿಯಾಸ್
ಗೃಹಬಳಕೆ ವಸ್ತುಗಳ ವ್ಯಾಪಾರಿಗಳು
1971 ರಿಂದ
ಸಾರೇ ಜಹಾಂ ಸೇ ಸಸ್ತಾ
UPTO
70% OFF
ಅತ್ಯಧಿಕ ರಿಯಾಯಿತಿ.
ಅತ್ಯಧಿಕ ಬ್ರ್ಯಾಂಡುಗಳು
ಅತಿ ದೊಡ್ಡ ಗಣರಾಜ್ಯೋತ್ಸವ ಆಚರಣೆ
ಇಂದು ಕೊನೆಯ ದಿನ
CASH BACK
Upto 20%
ಕ್ರೆಡಿಟ್ ಕಾರ್ಡ್‌ಗಳ ಮೇಲೆ
HDFC BANK
We understand your world
10% OFF
INSTANT CASH BACK ON CC & DC EMI*
MIN TXN ₹17,000
MAX CAP ₹2,500
*T&C
ಫೈನಾನ್ಸ್ ಬೊನಾಂಜಾ
1 ಇ.ಎಮ್.ಐ ಉಚಿತ*
UPTO ₹15,000* ಕ್ಯಾಶ್ ಬ್ಯಾಕ್*
BAJAJ FINANCE
IDFC FIRST Bank
ಮೆಗಾ ಎಕ್ಸ್‌ಚೇಂಜ್ ಕೊಡುಗೆ ಅಪ್ಡೇಟ್
UPTO ₹25,000
ಎಕ್ಸ್‌ಚೇಂಜ್ ಮೇಲೆ*
SAMSUNG 65 4K ULTRA HD SMART ಎಲ್ಇಡಿ 65DU8300
10% CASH BACK
32% ಕಡಿತ
SPECIAL PRICE:₹66,690
MRP: ₹98,500
SONY 65 4K ULTRA HD SMART ಎಲ್ಇಡಿ K-65S25
10% CASH BACK
53% ಕಡಿತ
SPECIAL PRICE:₹65,690
MRP: ₹1,39,990
LG 55 QNED AI ಎಲ್ಇಡಿ 55QNED82T6A
20% CASH BACK
52% ಕಡಿತ
SPECIAL PRICE:₹55,390
MRP: ₹1,16,090
Haier 55 QLED GOOGLE ಎಲ್ಇಡಿ
10% CASH BACK
54% ಕಡಿತ
SPECIAL PRICE:₹55,090
MRP: ₹1,20,990
Panasonic 43 4K UHD SMART ಎಲ್ಇಡಿ
10% CASH BACK
39% ಕಡಿತ
SPECIAL PRICE:₹32,990
MRP: ₹53,990
vivo V60 5G 12+256
10% CASH BACK
SPECIAL PRICE ₹39,230*
ಇ.ಎಮ್.ಐ ₹3,269
Redmi NOTE 15 5G 8+128
₹3000 CASH BACK
STARTS FROM ₹22,999*
ಇ.ಎಮ್.ಐ ₹1,917
SAMSUNG A56 8+256
₹41,999*
EFFECTIVE PRICE (PRICE AFTER CASHBACK)
ಇ.ಎಮ್.ಐ ₹3,667
iPhone 17 PRO/17 PRO MAX
₹3000 CASH BACK
SPECIAL PRICE ₹1,31,410*
Onwards
ಇ.ಎಮ್.ಐ ₹10,951
realme 15X 5G 8+128
10% CASH BACK
SPECIAL PRICE ₹39,230*
ಇ.ಎಮ್.ಐ ₹3,269
oppo F31 5G 8+128
10% CASH BACK
SPECIAL PRICE ₹25,800*
ಇ.ಎಮ್.ಐ ₹2,150
hp INS15
10% CASH BACK
RYZEN 3-7320U
8GB, 512GB SSD
WIN 11 MSO 21
EMI ₹2,999
OFFER PRICE ₹35,990
ಉಚಿತ: NAUTICA 25LTR TRAVEL BAG + COMPANY BAG PACK WORTH ₹6,999
Lenovo SLIM 3
10% CASH BACK
RYZEN 7 5825U
16GB,512GB SSD
WIN 11 MSO 24
EMI ₹4,166
OFFER PRICE ₹49,990
ಉಚಿತ: NAUTICA 25LTR TRAVEL BAG + COMPANY BAG PACK WORTH ₹6,999
DELL 3530
10% CASH BACK
13TH GEN i5
16GB RAM
512GB SSD
15.6 FHD
WIN 11 MSO 24
EMI ₹4,499
OFFER PRICE ₹53,990
ಉಚಿತ: NAUTICA 25LTR TRAVEL BAG + COMPANY BAG PACK WORTH ₹6,999
hp VICTUS
10% CASH BACK
13th GEN i5
16GB, 512GB SSD
4GB GFX 3050A
WIN 11 MSO 24
EMI ₹5,791
OFFER PRICE ₹69,490
ಉಚಿತ: NAUTICA 25LTR TRAVEL BAG + COMPANY BAG PACK WORTH ₹6,999
Lenovo LOQ
10% CASH BACK
RYZEN 5 7235HS
24GB, 512GB SSD
RTX 3050 6GB
15.6 FHD
WIN 11 MSO 24
EMI ₹5,833
OFFER PRICE ₹69,990
ಉಚಿತ: NAUTICA 25LTR TRAVEL BAG + COMPANY BAG PACK WORTH ₹6,999
10% CASH BACK
LG 506 LTRS Double Door Refrigerator, Smart Inverter Compressor GN-H702HLHM
37% ಕಡಿತ
SPECIAL PRICE:₹63,349
MRP: ₹1,00,999
10% CASH BACK
Whirlpool 231 ಲೀ ಫ್ರಾಸ್ಟ್ ಫ್ರೀ ರೆಫ್ರಿಜರೇಟರ್
32% ಕಡಿತ
SPECIAL PRICE:₹25,175
MRP: ₹37,100
DAIKIN 1.8 TON 1 STAR SPLIT AC
10% CASH BACK
35% ಕಡಿತ
SPECIAL PRICE:₹36,890
MRP: ₹56,780
10% CASH BACK
BOSCH 10 ಕೆಜಿ FULLY AUTOMATIC ಫ್ರಂಟ್ ಲೋಡಿಂಗ್ WASHING MACHINE
30% ಕಡಿತ
SPECIAL PRICE:₹42,890
MRP: ₹61,590
10% CASH BACK
Godrej 7 ಕೆಜಿ ಫ್ರಂಟ್ ಲೋಡಿಂಗ್
43% ಕಡಿತ
SPECIAL PRICE:₹26,999
MRP: ₹48,000
20% CASH BACK
LG 14 PLACE SETTIN FREESTANDING DISHWASHER DFB512FP
26% ಕಡಿತ
SPECIAL PRICE:₹40,790
MRP: ₹55,499
IFB 25ಲೀ ಕನ್ವೆಕ್ಷನ್ ಮೈಕ್ರೋವೇವ್
36% ಕಡಿತ
SPECIAL PRICE:₹12,630
MRP: ₹19,890
OFFER VALID TILL STOCK LAST | OFFER VALID TILL STOCK LAST
GEYSER 60% ಕಡಿತ
MIXER GRINDER 63% ಕಡಿತ
CHIMNEY 50% ಕಡಿತ
WATER PURIFIER 53% ಕಡಿತ
SONY HT-S40R REAL 5.1CH, 600W, DOLBY AUDIO, WIRELESS REAR SPEAKERS
₹2000 CASH BACK
37% ಕಡಿತ
SPECIAL PRICE:₹22,190
MRP: ₹34,990
GIRIAS THE CONSUMER DURABLE PEOPLE Since 1971
STORE LOCATOR
180 ಮೆಗಾ ಸ್ಟೋರ್ಸ್, ದಕ್ಷಿಣ ಭಾರತದ ನಂ.1 ಗೃಹೋಪಯೋಗಿ ವಸ್ತುಗಳ ಮಾರಾಟಗಾರರು.
SHOP ONLINE @ www.giriasindia.com
facebook
WE SUPPORT ROUND TABLE INDIA LADIES CIRCLE INDIA

ಅಭಿಮತದ ವಿಳಾಸ: ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75 ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-01 editpage@prajavani.co.in

ಅಭಿಮತ

ಸಂಪಾದಕೀಯ

ಒಕ್ಕೂಟ ವ್ಯವಸ್ಥೆಯು ಬಲಗೊಳ್ಳಲಿ 'ಕೇಂದ್ರ'ದ ಧೋರಣೆ ಬದಲಾಗಲಿ

ಒಕ್ಕೂಟ ವ್ಯವಸ್ಥೆಯು ತನ್ನ ಆಶಯಗಳಿಂದ ದೂರವಾಗುತ್ತಿದೆ ಎನ್ನುವ ಅಸಮಾಧಾನ–ಆತಂಕದ ಸಂದರ್ಭದಲ್ಲಿ, ಸುಮಾರು ನಾಲ್ಕು ದಶಕಗಳ ಹಿಂದೆ ನ್ಯಾಯಮೂರ್ತಿ ಆರ್‌.ಎಸ್‌. ಸರ್ಕಾರಿಯಾ ಆಯೋಗ ನೀಡಿದ ಶಿಫಾರಸುಗಳಿಗೆ ವಿಶೇಷ ಮಹತ್ವವಿದೆ. 1988ರಲ್ಲಿ ವರದಿ ಸಲ್ಲಿಸಿದ್ದ ಆಯೋಗ, ಸಹಕಾರಿ ಒಕ್ಕೂಟ ವ್ಯವಸ್ಥೆಯ ತಾತ್ತ್ವಿಕತೆಯನ್ನು ಪ್ರತಿಪಾದಿಸಿತ್ತು. ಆ ವರದಿಯ ಶಿಫಾರಸುಗಳು ನಾಲ್ಕು ದಶಕಗಳ ನಂತರವೂ ಅನುಷ್ಠಾನಗೊಳ್ಳದೆ, ಒತ್ತಾಯಪೂರ್ವಕ ಕೇಂದ್ರೀಕೃತ ಆಡಳಿತದತ್ತ ದೇಶ ಸಾಗುತ್ತಿದೆ ಎನ್ನುವ ಆತಂಕ ದಟ್ಟವಾಗುತ್ತಿದೆ. ಈ ಕಳವಳವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಇತ್ತೀಚೆಗೆ ನಡೆದ ದಕ್ಷಿಣ ಭಾರತ ಸಮಾಜವಾದಿಗಳ ಸಮ್ಮೇಳನದಲ್ಲಿ ವ್ಯಕ್ತಪಡಿಸಿದ್ದಾರೆ. 'ಅಪಾಯಕಾರಿ ಬದಲಾವಣೆ'ಯ ಬಗ್ಗೆ ಅವರು ವ್ಯಕ್ತಪಡಿಸಿರುವ ತೀವ್ರ ಆತಂಕ, ಅಧಿಕಾರದ ಅಸಮತೋಲನದ ಬಗ್ಗೆ ಗಂಭೀರವಾದ ಸಾಂವಿಧಾನಿಕ ಪ್ರಶ್ನೆಗಳನ್ನು ಎತ್ತುವಂತಹದ್ದಾಗಿದೆ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ನಡುವಣ ಸಂವಹನ ಮತ್ತು ಸಮಾಲೋಚನೆಯ ಸಂಬಂಧ ಸವಕಳಿಯಾಗುತ್ತಿರುವ ಆತಂಕ ಸಿದ್ದರಾಮಯ್ಯನವರ ಟೀಕೆ ಟಿಪ್ಪಣಿಯ ಕೇಂದ್ರದಲ್ಲಿದೆ. ಜನಸಂಖ್ಯಾ ನಿಯಂತ್ರಣದಲ್ಲಿ ದಕ್ಷಿಣ ಭಾರತದ ರಾಜ್ಯಗಳು ಯಶಸ್ವಿಯಾಗಿವೆ; ಆದರೆ, ಈ ಗುರಿಸಾಧನೆಯು ಅನುಕೂಲ ಆಗುವುದರ ಬದಲು, ಅವುಗಳ ರಾಜಕೀಯ ಧ್ವನಿಯನ್ನು ಕ್ಷೀಣಗೊಳಿಸುತ್ತಿರುವುದು ಆತಂಕಕ್ಕೆ ಕಾರಣವಾಗಿದೆ. ಇದರ ಜೊತೆಗೆ ಆರ್ಥಿಕ ಅಸಮಾನತೆಯೂ ಸೇರಿಕೊಂಡಿದೆ. ತೆರಿಗೆಯ ರೂಪದಲ್ಲಿ ಕರ್ನಾಟಕದಿಂದ ಕೇಂದ್ರಕ್ಕೆ ಸಂದಾಯವಾಗುತ್ತಿರುವ ಪ್ರತಿ ರೂಪಾಯಿಯಲ್ಲಿ, 13 ಪೈಸೆಯಷ್ಟೇ ರಾಜ್ಯಕ್ಕೆ ದೊರೆಯುತ್ತಿದೆ. ಅಗತ್ಯ ಇರುವಷ್ಟು ಅನುದಾನ ಇಲ್ಲದಿರುವುದು, ನಮ್ಯತೆಯ ಸಮಸ್ಯೆ ಮತ್ತು ಸಮಾಲೋಚನೆಯ ಕೊರತೆಯ ನಡುವೆಯೂ ಕೇಂದ್ರ ಸರ್ಕಾರದ ಯೋಜನೆಗಳನ್ನು ರಾಜ್ಯಗಳು ಅನುಷ್ಠಾನಕ್ಕೆ ತರಬೇಕೆಂದು ನಿರೀಕ್ಷಿಸಲಾಗುತ್ತಿದೆ ಎಂದೂ ಸಿದ್ದರಾಮಯ್ಯ ಹೇಳಿದ್ದಾರೆ. ಈ ಧೋರಣೆ, ಒಕ್ಕೂಟ ತತ್ತ್ವವನ್ನು ಮತ್ತು ಸಂವಿಧಾನದಲ್ಲಿನ ಸಮಾಜವಾದಿ ಚೈತನ್ಯವನ್ನು ಉಲ್ಲಂಘಿಸುವಂತಹದ್ದಾಗಿದೆ.

ರಾಜ್ಯಗಳನ್ನು ವಿಶ್ವಾಸಕ್ಕೆ ತೆಗೆದುಕೊಳ್ಳದೆ ಹಾಗೂ ಅವುಗಳೊಂದಿಗೆ ಅರ್ಥಪೂರ್ಣ ಸಮಾಲೋಚನೆ ನಡೆಸದೆ ಕೇಂದ್ರ ಸರ್ಕಾರ ತೆಗೆದುಕೊಳ್ಳುವ ಏಕಪಕ್ಷೀಯ ತೀರ್ಮಾನಗಳು ಒಕ್ಕೂಟ ವ್ಯವಸ್ಥೆಗೆ ಹಾನಿಕರ.

ರಾಜ್ಯಗಳೊಂದಿಗೆ ಕೇಂದ್ರ ಸರ್ಕಾರದ ಸಮಾಲೋಚನೆ ಕೊರತೆಯ ನೇರ ಪರಿಣಾಮವನ್ನು ಕೃಷಿ ವಲಯಕ್ಕೆ ಸಂಬಂಧಿಸಿದ ಇತ್ತೀಚಿನ ತೀರ್ಮಾನಗಳಲ್ಲಿ ಗಮನಿಸಬಹುದು. ದೇಶದಲ್ಲಿ ಉತ್ಪನ್ನಗಳ ಲಭ್ಯತೆ ಸಾಕಷ್ಟು ಇರುವಾಗಲೂ ಆಮದು ಮಾಡಿಕೊಳ್ಳಲು ಅನುಮತಿ ನೀಡಿದ ಕೇಂದ್ರದ ಏಕಪಕ್ಷೀಯ ವಾಣಿಜ್ಯನೀತಿಗಳು ಕೃಷಿ ಆರ್ಥಿಕತೆಯನ್ನು ಮತ್ತೆ ಮತ್ತೆ ಗಾಸಿಗೊಳಿಸಿವೆ. ಮೆಕ್ಕೆಜೋಳದ ಆಮದಿನಿಂದಾಗಿ ಸ್ಥಳೀಯ ಮಾರುಕಟ್ಟೆಯಲ್ಲಿ ಜೋಳದ ಬೆಲೆ ಕುಸಿತಗೊಂಡರೆ, ಬೇಳೆಕಾಳುಗಳ ಸುಂಕರಹಿತ ಆಮದು ರೈತರ ಸುಗ್ಗಿ ಸಂಭ್ರಮವನ್ನು ಹಾಳುಮಾಡಿತು. ಅಗ್ಗದ ಮೆಣಸಿನ ಆಮದಿನಿಂದ ಪಶ್ಚಿಮಘಟ್ಟ ಪ್ರದೇಶಗಳ ರೈತರು ಸಂಕಷ್ಟ ಎದುರಿಸುವಂತಾಯಿತು. ರಾಜ್ಯಗಳೊಂದಿಗೆ ಸಮಾಲೋಚನೆ ನಡೆಸದೆ ತೆಗೆದುಕೊಂಡ ಈ ನಿರ್ಧಾರಗಳು ಗ್ರಾಮೀಣ ಆರ್ಥಿಕತೆಗೆ ಬಲವಾದ ಪೆಟ್ಟು ನೀಡಿದವು. ಈ ಬಿಕ್ಕಟ್ಟನ್ನು ನಿಭಾಯಿಸಲು ರಾಜ್ಯಗಳು ತಮ್ಮ ಸೀಮಿತ ಹಣಕಾಸಿನ ಸಾಧನಗಳೊಂದಿಗೆ ಪರದಾಡಬೇಕಾದ ಸನ್ನಿವೇಶ ಸೃಷ್ಟಿಯಾಯಿತು.

ರಾಜ್ಯ ಮತ್ತು ಕೇಂದ್ರ ಸರ್ಕಾರದ ನಡುವಣ ಬಿಕ್ಕಟ್ಟುಗಳನ್ನು ಊಹಿಸಿ, ಅವುಗಳಿಗೆ ಪರಿಹಾರ ರೂಪದಲ್ಲಿ ನೀಡಲಾಗಿದ್ದ 247 ಶಿಫಾರಸುಗಳು ಸರ್ಕಾರಿಯಾ ಆಯೋಗದ ವರದಿಯಲ್ಲಿದ್ದವು. ಸಂವಾದ ಮತ್ತು ಸಮಾಲೋಚನೆಗೆ ಅನುಕೂಲವಾಗುವಂತೆ ಪ್ರಧಾನಿ ಅಧ್ಯಕ್ಷತೆಯಲ್ಲಿ ಶಾಶ್ವತ ಅಂತರರಾಜ್ಯ ಮಂಡಳಿಯನ್ನು ಸ್ಥಾಪಿಸುವ ಶಿಫಾರಸೂ ವರದಿಯಲ್ಲಿತ್ತು. ಈ ಮಂಡಳಿ 1990ರಲ್ಲಿ ರೂಪುಗೊಂಡಿತಾದರೂ, ಅದನ್ನು ವ್ಯವಸ್ಥಿತವಾಗಿ ಮೂಲೆಗುಂಪು ಮಾಡಲಾಗಿದೆ. ವರ್ಷಕ್ಕೆ ಕನಿಷ್ಠ ಮೂರು ಬಾರಿ ಸಭೆ ನಡೆಸುವುದು ಕಡ್ಡಾಯವಾಗಿದ್ದರೂ, ಮಂಡಳಿಯ ಪೂರ್ಣ ಪ್ರಮಾಣದ ಸಭೆ ಕೊನೆಯದಾಗಿ ನಡೆದದ್ದು 2016ರಲ್ಲಿ. ಈ ಸಾಂವಿಧಾನಿಕ ವೇದಿಕೆಯ ನಿಷ್ಕ್ರಿಯತೆಯಿಂದಾಗಿ, ನೀತಿನಿರೂಪಣೆ ಮತ್ತು ಒಕ್ಕೂಟ ಸಮತೋಲನದಲ್ಲಿನ ಬಿಕ್ಕಟ್ಟುಗಳು ಪರಿಹಾರವಾಗದೆ ಉಳಿದಿವೆ. ಈ ಸಮಸ್ಯೆಗಳನ್ನು, ಬಿಜೆಪಿಯ ವಿರೋಧ ಪಕ್ಷಗಳು ಆಡಳಿತದಲ್ಲಿರುವ ರಾಜ್ಯಗಳಲ್ಲಿನ ರಾಜ್ಯಪಾಲರ ಅಸಹಕಾರವು ಇನ್ನಷ್ಟು ತೀವ್ರಗೊಳಿಸುತ್ತಿದೆ. ಸಾಂವಿಧಾನಿಕ ಸೇತುವೆಗಳಾಗಿ ಕಾರ್ಯ ನಿರ್ವಹಿಸಬೇಕಾದ ಲೋಕಭವನಗಳು ರಾಜಕೀಯ ತಡೆಗಳಾಗಿ ಕಾಣಿಸಿಕೊಳ್ಳುತ್ತಿವೆ. ಸಹಕಾರ ಒಕ್ಕೂಟವು ಘೋಷಣೆಯಷ್ಟೇ ಆಗಿರದೆ, ಸುರಕ್ಷತಾ ಕವಚವಾಗಿದೆ. ಇದು, ಪ್ರಾದೇಶಿಕ ಆಶೋತ್ತರಗಳ ಅತಿಕ್ರಮಣಕ್ಕೆ ಅವಕಾಶ ಕಲ್ಪಿಸದಿರುವುದರ ಜೊತೆಗೆ, ಅವುಗಳ ಈಡೇರಿಕೆಗೆ ಸಂವಿಧಾನದ ಚೌಕಟ್ಟಿನಲ್ಲಿ ಸಮಾಲೋಚಿಸಲು ಅವಕಾಶ ಕಲ್ಪಿಸುತ್ತದೆ. 'ಅಂತರರಾಜ್ಯ ಮಂಡಳಿ'ಯಂಥ ಸಂಸ್ಥೆಗಳನ್ನು ಪುನರುಜ್ಜೀವನಗೊಳಿಸುವ ಮೂಲಕ, ನೈಜ 'ಟೀಮ್‌ ಇಂಡಿಯಾ' ವಿಧಾನವನ್ನು ಅಳವಡಿಸಿಕೊಳ್ಳುವುದು ಸದ್ಯದ ತುರ್ತು. ಆದೇಶಗಳನ್ನು ನೀಡುವುದರ ಬದಲಿಗೆ ಅಗತ್ಯ ಸಂಪನ್ಮೂಲಗಳನ್ನು ಒದಗಿಸುವ ಮೂಲಕ, ಸಂವಿಧಾನದಲ್ಲಿ ಅಂತರ್ಗತವಾದ ಒಕ್ಕೂಟ ತತ್ತ್ವವನ್ನು ಕೇಂದ್ರ ಸರ್ಕಾರ ಬಲಪಡಿಸಬೇಕಾಗಿದೆ.

ಚಾಟಿ

ಹಾಡು–ಪಾಡು

ಅಲೋಕ ಎಂಬ ಬೀದಿನಾಯಿ ಭಿಕ್ಕುಗಳ ಜತೆ ವಿಶ್ವಶಾಂತಿಗಾಗಿ ಕಾಲ್ನಡಿಗೆಯಲ್ಲಿ ಲೋಕ ಸುತ್ತುತ್ತಿದೆ. ಇಲ್ಲಿ ಒಂಬೈನೂರು ಬೀದಿನಾಯಿಗಳನ್ನು ವಿಷದ ಚುಚ್ಚುಮದ್ದು ನೀಡಿ ಪರಲೋಕಕ್ಕೆ ಅಟ್ಟಲಾಗಿದೆ. ಅದು ಹಾಡಾದರೆ, ಇದು ಪಾಡು. ಬದುಕೆಂದರೆ ಇಷ್ಟೇ!

ಸವಿತಾ ನಾಗಭೂಷಣ, ಕವಯಿತ್ರಿ, 'ಫೇಸ್‌ಬುಕ್‌'ನಿಂದ

ಕಿಡಿನುಡಿ

ಸಂಸತ್ತಿನಲ್ಲಿ 'ವಂದೇ ಮಾತರಂ' ಬಗ್ಗೆ ಮೂರು ದಿನಗಳ ಚರ್ಚೆ ನಡೆಸುವ ಬಿಜೆಪಿಗೆ 'ಜನ ಗಣ ಮನ'ದ ಬಗ್ಗೆ ಮೂರು ನಿಮಿಷವೂ ಚರ್ಚಿಸದಷ್ಟು ಅಸಹನೆ ಏಕೆ? ರಾಷ್ಟ್ರ ಗೀತೆಯನ್ನು ವಿರೋಧಿಸುವ ಸಂಘದ ಪಾಠವನ್ನು ಪಾಲಿಸುತ್ತಿದ್ದಾರೆಯೆ? ಬಿಜೆಪಿಯವರಲ್ಲಿ ಎಳ್ಳುಕಾಳಷ್ಟು ದೇಶಭಕ್ತಿ ಇದ್ದಿದ್ದೇ ಆದರೆ– ರಾಷ್ಟ್ರ ಗೀತೆಗೆ, ಸಂವಿಧಾನಕ್ಕೆ ರಾಜ್ಯಪಾಲರಿಂದ ಆಗಿರುವ ಅವಮಾನವನ್ನು ಖಂಡಿಸಲಿ.

ಪ್ರಿಯಾಂಕ್ ಖರ್ಗೆ, ಐಟಿ–ಬಿಟಿ ಸಚಿವ

25 ವರ್ಷಗಳ ಹಿಂದೆ

ಶುಕ್ರವಾರ, 26-1-2001

• **ಲತಾ, ಬಿಸ್ಮಿಲ್ಲಾ 'ಭಾರತರತ್ನ'**

ಬೆಂಗಳೂರು, ಜ. 25– 'ಹಿಂದಿನ ವರ್ಷಗಳ ಕಲಾವಿದರನ್ನು ಗುರ್ತಿಸಲು ಸರ್ಕಾರ ಹೊರಟಿರುವುದು ನಿಜಕ್ಕೂ ಒಂದು ಸಾಧನೆಯೇ' ಎಂದು 'ಭಾರತರತ್ನ' ಪ್ರಶಸ್ತಿಗೆ ಭಾಜನರಾದ ಶಹನಾಯಿ ವಾದಕ ಬಿಸ್ಮಿಲ್ಲಾ ಖಾನ್ (86) ಅವರು ಪ್ರತಿಕ್ರಿಯಿಸಿದ್ದಾರೆ. ದೇವರ ದಯೆಯಿಂದ ಈ ಪ್ರಶಸ್ತಿ ಲಭಿಸಿದೆ ಎಂದು ಹರ್ಷ ಸೂಚಿಸಿದ್ದಾರೆ.

ತಮ್ಮೊಂದಿಗೆ ಸಂಗೀತ ಸಾಮ್ರಾಜ್ಞಿ ಲತಾ ಮಂಗೇಶ್ಕರ್ ಅವರೂ ಪ್ರಶಸ್ತಿ ಹಂಚಿಕೊಂಡಿರುವುದಕ್ಕೆ ತಮಗೆ ಅತೀವ ಹರ್ಷವಾಗಿದೆ ಎಂದು ಶಹನಾಯಿ ಮಾಂತ್ರಿಕ ಖಾನ್ ಅವರು ಹೇಳಿದ್ದಾರೆ.

75 ವರ್ಷಗಳ ಹಿಂದೆ

ಶುಕ್ರವಾರ, 26-1-1951

• **'ಒಳ-ಹೊರ ವಿಪತ್ತು ಎದುರಿಸಲು ಟೊಂಕ ಕಟ್ಟಿ ನಿಲ್ಲಿ'**

ನವದೆಹಲಿ, ಜ. 25– ರಾಷ್ಟ್ರಕ್ಕೆ ಒದಗಿರುವ ಆಂತರಿಕ ಹಾಗೂ ಬಾಹ್ಯ ವಿಪತ್ತುಗಳನ್ನು ಎದುರಿಸಲು ಟೊಂಕ ಕಟ್ಟಿ ನಿಲ್ಲಿ ಎಂಬುದಾಗಿ ರಾಷ್ಟ್ರಾಧ್ಯಕ್ಷ ರಾಜೇಂದ್ರ ಪ್ರಸಾದರು ಇಂದು ಭಾರತದ ಜನತೆಯನ್ನು ಕೋರಿದರು.

ಭಾರತಪ್ರಜಾ ರಾಜ್ಯೋದಯದ ವಾರ್ಷಿಕೋತ್ಸವದ ದಿನ ಮುನ್ನ ರಾಜೇಂದ್ರ ಪ್ರಸಾದರು ದೆಹಲಿ ರೇಡಿಯೊ ನಿಲಯದಿಂದ ಪ್ರಸಾರ ಭಾಷಣ ಮಾಡುತ್ತ, ವರ್ಷದ 'ಸಿದ್ಧಿ-ಸೋಲು'ಗಳ ಅಳತೆ ಮಾಡಿದರು. ರಾಷ್ಟ್ರೀಯ ಮನೋ ನಿರ್ಧಾರ, ಉತ್ಪನ್ನಶಕ್ತಿ ಮತ್ತು ಸ್ಥೈರ್ಯಗಳು ಮಾತ್ರವೇ ಆಹಾರದ ಬಿಕ್ಕಟ್ಟಿನಿಂದ ರಾಷ್ಟ್ರವನ್ನು ಪಾರುಗಾಣಿಸಬಲ್ಲಂಥವು ಎಂದು ಅನ್ನ ಸಮಸ್ಯೆಯ ಕುರಿತು ಅಭಿಪ್ರಾಯಪಟ್ಟರು.

ನಿರೀಕ್ಷೆ–ಆತಂಕಗಳ ನಡುವೆ

ಜನರಾಜಕಾರಣ

ಸಂದೀಪ್ ಶಾಸ್ತ್ರಿ

> ಭಾರತದ ಗಣತಂತ್ರ ವ್ಯವಸ್ಥೆಯು ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ನಡುವಣ ಅನನ್ಯ ಸಂಬಂಧವನ್ನು ಮನಗಾಣಿಸುತ್ತದೆ. ಮಹತ್ವಾಕಾಂಕ್ಷೆಯ ಈ ಗಣತಂತ್ರ ವ್ಯವಸ್ಥೆ ವರ್ತಮಾನದಲ್ಲಿ ಅನೇಕ ಸವಾಲುಗಳನ್ನು ಎದುರಿಸುತ್ತಿದ್ದು, ನಾಗರಿಕರ ನಿರೀಕ್ಷೆ ಮತ್ತು ಆತಂಕಗಳಿಗೆ ಸ್ಪಂದಿಸಬೇಕಾಗಿದೆ.

ಭಾರತವು ಗಣರಾಜ್ಯವಾಗಿ ಪರಿವರ್ತನೆ ಕಂಡ 77ನೇ ವರ್ಷದ ಆಚರಣೆಯನ್ನು ನಾವು ಆಚರಿಸುತ್ತಿರುವ ಈ ಹೊತ್ತು, ನಮ್ಮ ಯಶಸ್ಸುಗಳನ್ನು ಮೆಲುಕು ಹಾಕಲು ಹಾಗೂ ಮುಂದಿನ ದಿನಗಳಲ್ಲಿ ಎದುರಾಗಲಿರುವ ಸವಾಲುಗಳನ್ನು ಗಮನಿಸಲು ಸೂಕ್ತ ಸಮಯವೂ ಹೌದು. ದೇಶದಲ್ಲಿ ಈಗ ಇರುವವರ ಪೈಕಿ ಶೇ 2ರಿಂದ 3ರಷ್ಟು ಜನ ಮಾತ್ರ ನಾವು ಗಣರಾಜ್ಯವಾಗುವುದಕ್ಕಿಂತ ಹಿಂದಿನ ದಿನಗಳನ್ನು ಕಂಡವರು. 77 ವರ್ಷಕ್ಕಿಂತ ಕಡಿಮೆ ವಯಸ್ಸಿನವರೇ ಭಾರತದ ಇಂದಿನ ಜನಸಮೂಹದಲ್ಲಿ ಬಹುಸಂಖ್ಯಾತರು. ಇವರೆಲ್ಲ ನಾವು ಗಣರಾಜ್ಯವಾಗಿ ಬದಲಾದ ನಂತರದಲ್ಲಿ ಜನಿಸಿದರು. ದೇಶದ ಪ್ರಜೆಗಳಲ್ಲಿ ಹತ್ತರಲ್ಲಿ ನಾಲ್ಕರಷ್ಟು ಮಂದಿ ನಾವು ಗಣರಾಜ್ಯವಾಗಿ ಬದಲಾದ ಐವತ್ತು ವರ್ಷಗಳ ನಂತರ ಜನಿಸಿದವರು.

1950ನೇ ಇಸವಿಯ ಜನವರಿ 26ರ ಮಹತ್ವವನ್ನು ನಾವು ನೆನಪು ಮಾಡಿಕೊಳ್ಳುವ ಈ ಸಂದರ್ಭದಲ್ಲಿ ಇಂಥ ಕಿರುಮಾಹಿತಿಗಳು ಮುಖ್ಯವಾಗುತ್ತವೆ. ದೇಶದ ಶಿಕ್ಷಣ ವ್ಯವಸ್ಥೆಯಲ್ಲಿ ಸ್ಥಾನವೊಂದನ್ನು ಹೊಂದಿರುವ ನನಗೆ, ಗಣರಾಜ್ಯವಾಗಿರುವುದರ ಮಹತ್ವದ ಬಗ್ಗೆ ಹಲವು ಬಾರಿ ಪ್ರಶ್ನೆಗಳು ಎದುರಾಗಿವೆ. ಇದಕ್ಕೆ ನಾನು ಪರಸ್ಪರ ಸಂಬಂಧವಿರುವ ಎರಡು ರೀತಿಗಳಲ್ಲಿ ಉತ್ತರಿಸುತ್ತೇನೆ. ಮೊದಲನೆಯದು, ನಮ್ಮ ಪ್ರಜಾತಂತ್ರದ ಪಯಣದಲ್ಲಿ ಗಣರಾಜ್ಯವಾಗಿ ಪರಿವರ್ತನೆ ಕಂಡಿದ್ದುದು ಮುಖ್ಯವಾದ ಹಂತ. ಏಕೆಂದರೆ, ಈ ಮೂಲಕ ನಾವು ದೇಶದ ಮೊದಲ ಪ್ರಜೆಯಾಗಿ ಚುನಾಯಿತ ವ್ಯಕ್ತಿಯನ್ನು ಹೊಂದಿದೆವು; ವಂಶಪಾರಂಪರ್ಯವಾಗಿ ಅಥವಾ ನಾಮನಿರ್ದೇಶನದ ಮೂಲಕ ಆ ಸ್ಥಾನ ಯಾರಿಗೂ ಸಿಗುವುದಿಲ್ಲ. ನಮ್ಮನ್ನು ನಾವು ಗಣತಂತ್ರವೆಂದು ಘೋಷಿಸಿಕೊಳ್ಳುವ ಮೂಲಕ ಗವರ್ನರ್ ಜನರಲ್ ಹುದ್ದೆಯನ್ನು ರದ್ದುಗೊಳಿಸಿದೆವು. ನಮಗೆ ಸ್ವಾತಂತ್ರ್ಯ ದೊರೆತ ನಂತರದಲ್ಲಿ ಈ ಹುದ್ದೆಗೆ ಬ್ರಿಟನ್ನಿನ ರಾಣಿಯಿಂದ ನೇಮಕ ನಡೆಯುತ್ತಿತ್ತು.

ನಾವು ಗಣರಾಜ್ಯವಾಗಿ ಬದಲಾಗುವ ಒಂದು ವರ್ಷ ಮೊದಲು 'ಬ್ರಿಟಿಷ್ ಕಾಮನ್‌ವೆಲ್ತ್ ಆಫ್ ನೇಷನ್ಸ್' ಎಂಬ ಹೆಸರನ್ನು 'ಕಾಮನ್‌ವೆಲ್ತ್ ಆಫ್ ನೇಷನ್ಸ್' ಎಂದು ಬದಲಾಯಿಸಲಾಯಿತು (1949ರ ಏಪ್ರಿಲ್‌ನಲ್ಲಿ) ಎಂಬುದು ಇಲ್ಲಿ ಉಲ್ಲೇಖಾರ್ಹ.

ಎರಡನೆಯದು, ನಿರ್ದಿಷ್ಟವಾಗಿ ಭಾರತದ ಸಂದರ್ಭದಲ್ಲಿ ಹೇಳುವುದಾದರೆ, ಸ್ವತಂತ್ರ ಭಾರತಕ್ಕೆ ಒಂದು ಸಂವಿಧಾನವನ್ನು ಅಳವಡಿಸಿಕೊಳ್ಳುವ ಕೆಲಸವೂ ಗಣರಾಜ್ಯದ ಘೋಷಣೆಯ ಮೂಲಕ ನಡೆಯಿತು. ಗಣರಾಜ್ಯದ ಚೌಕಟ್ಟಿನಲ್ಲಿ ನಾವು ಸಂಸದೀಯ ಆಡಳಿತ ವ್ಯವಸ್ಥೆಯನ್ನು ನಡೆಸಿಕೊಂಡು ಬಂದಿದ್ದೇವೆ. ರಾಷ್ಟ್ರಪತಿಯವರು ಪ್ರಭುತ್ವದ ಮುಖ್ಯಸ್ಥರಾಗಿರುತ್ತಾರೆ, ಪ್ರಧಾನಿ ನೇತೃತ್ವದ ಮಂತ್ರಿಪರಿಷತ್ತು ಕಾರ್ಯಾಂಗದ ನಾಯಕನ ಸ್ಥಾನದಲ್ಲಿರುತ್ತದೆ. ಇದು ಸಂಸತ್ತಿನ ಕೆಳಮನೆಗೆ ಉತ್ತರದಾಯಿ ಆಗಿರುತ್ತದೆ. ನಮ್ಮ ಆಡಳಿತ ವ್ಯವಸ್ಥೆಯ ಮುಖ್ಯ ಅಂಶ ಇದು.

ರಾಷ್ಟ್ರಪತಿಯವರ ಹುದ್ದೆಯು ತುರ್ತು ಸಂದರ್ಭದಲ್ಲಿ ಬಳಕೆಗೆ ಬರುವ ದೀಪ ಎಂದು ಬಣ್ಣಿಸುವ ಮೂಲಕ ಮಾಜಿ ರಾಷ್ಟ್ರಪತಿ ಆರ್. ವೆಂಕಟರಾಮನ್ ಅವರು ಈ ಹುದ್ದೆಯನ್ನು ಬಹಳ ಸಂಕ್ಷಿಪ್ತವಾಗಿ ವಿವರಿಸಿದ್ದಾರೆ. ತುರ್ತು ಸಂದರ್ಭಗಳಲ್ಲಿ ಬಳಕೆಯಾಗುವ ದೀಪವು ಯಾವಾಗಲೂ ದೊಡ್ಡದಾಗಿ ಕಾಣಿಸಿಕೊಳ್ಳುವುದಿಲ್ಲ. ಆದರೆ ಅದು ವಿಶೇಷವಾದ ಸಂದರ್ಭಗಳಲ್ಲಿ ಮುಖ್ಯವಾಗುತ್ತದೆ. ಇಂತಹ ಸಂದರ್ಭಗಳು 1980ರ ದಶಕದ ಕೊನೆಯಲ್ಲಿ, 1990ರ ದಶಕದಲ್ಲಿ ಮತ್ತೆ ಮತ್ತೆ ಎದುರಾಗುತ್ತಿದ್ದವು. ಆಗ ಯಾವ ಪಕ್ಷಕ್ಕೆ ಅಥವಾ ಯಾವ ಮೈತ್ರಿಕೂಟಕ್ಕೆ ಲೋಕಸಭೆಯಲ್ಲಿ ನಿಜವಾಗಿಯೂ ಬಹುಮತ ಇದೆ ಎಂಬುದು ಸ್ಪಷ್ಟವಾಗುತ್ತಿರಲಿಲ್ಲ. ಆಗೆಲ್ಲ, ರಾಷ್ಟ್ರಪತಿಯವರು ತಮ್ಮ ವಿವೇಚನಾ ಅಧಿಕಾರ ಬಳಸಿ ಸರ್ಕಾರ ರಚಿಸಲು ಯಾರಿಗೆ ಆಹ್ವಾನ ನೀಡಬೇಕು ಎಂಬುದನ್ನು ನಿರ್ಧರಿಸಬೇಕಿತ್ತು. ವೆಂಕಟರಾಮನ್, ಶಂಕರ್ ದಯಾಳ್ ಶರ್ಮಾ ಮತ್ತು ಕೆ.ಆರ್. ನಾರಾಯಣನ್ ಅವರು ತಮ್ಮ ವಿವೇಚನಾ ಅಧಿಕಾರವನ್ನು ಭಿನ್ನ ಬಗೆಗಳಲ್ಲಿ ಬಳಸಿಕೊಂಡರು. ಪಕ್ಷ ಅಥವಾ ಮೈತ್ರಿಕೂಟ ಸ್ಪಷ್ಟವಾದ ಬಹುಮತ ಪಡೆದಾಗ ಪ್ರಧಾನಿ ನೇತೃತ್ವದ ಮಂತ್ರಿಪರಿಷತ್ತು ದೇಶದ ಸಮಾಜ–ರಾಜಕಾರಣವನ್ನು ಮುಂದಕ್ಕೆ ಒಯ್ಯುವ ಕೆಲಸ ಮಾಡಿದೆ.

ನಮ್ಮದು 28 ರಾಜ್ಯಗಳು ಹಾಗೂ ಎಂಟು ಕೇಂದ್ರಾಡಳಿತ ಪ್ರದೇಶಗಳು ಇರುವ ಒಕ್ಕೂಟ ವ್ಯವಸ್ಥೆ ಎಂಬುದು ಗಣತಂತ್ರದ ಚೌಕಟ್ಟಿನಲ್ಲಿ ಮಹತ್ವ ಪಡೆದುಕೊಳ್ಳುವ ಇನ್ನೊಂದು ಅಂಶ. ಗಣತಂತ್ರವಾಗಿ ಪರಿವರ್ತನೆ ಕಂಡ ನಂತರದಲ್ಲಿ, ಕಳೆದ ಕೆಲವು ವರ್ಷಗಳಲ್ಲಿ ಈ ಅಂಶಕ್ಕೆ ಮಹತ್ವ ಹೆಚ್ಚಾಗಿದೆ. ಇಲ್ಲಿ ಒಂದಕ್ಕೊಂದು ಸಂಬಂಧವಿರುವ ಮೂರು ಬೆಳವಣಿಗೆಗಳನ್ನು ವಿವರಿಸಬೇಕಾಗುತ್ತದೆ. ಆಡಳಿತಾತ್ಮಕ ಸಹಕಾರದ ಗತಿ, ಸರ್ಕಾರಗಳ ನಡುವಿನ ಪರಸ್ಪರ ಸಹಕಾರದ ವಾಸ್ತವಗಳು, ರಾಜಕೀಯ ಸ್ಪರ್ಧೆಯ ಒತ್ತಡಗಳು, ಆ ಮೂರು ಅಂಶಗಳು. ಭಾರತವೆಂಬ ಗಣರಾಜ್ಯದ ಮುಂದಿನ ಹಾದಿಯನ್ನು ಈ ಮೂರು ಪ್ರಮುಖ ತಂತುಗಳು ರೂಪಿಸುವಂತೆ ಕಾಣುತ್ತಿವೆ.

ಮೊದಲನೆಯದು, ಸರ್ಕಾರಗಳ ನಡುವಿನ ಸಹಕಾರಕ್ಕೆ ಸಂಬಂಧಿಸಿದ್ದು. 24X7 ಮಾಧ್ಯಮಗಳ ದೃಷ್ಟಿಯಿಂದ ದೂರದಲ್ಲಿ, ರಾಜ್ಯ ಹಾಗೂ ಕೇಂದ್ರದ ಸಚಿವಾಲಯಗಳ ಗೋಡೆಗಳ ನಡುವಿನಲ್ಲಿ ಎರಡು ಅಖಿಲ ಭಾರತ ಸೇವೆಗಳು– ಐಎಎಸ್ ಮತ್ತು ಐಪಿಎಸ್– ಪ್ರಮುಖ ಪಾತ್ರವೊಂದನ್ನು ನಿರ್ವಹಿಸಿವೆ. ತಮ್ಮ ಸಂಪರ್ಕಜಾಲದ ಮೂಲಕ ಅವು ಸರ್ಕಾರಗಳ ನಡುವೆ ಸಹಕಾರವನ್ನು ಖಾತರಿಪಡಿಸಿವೆ. ಜಿಎಸ್‌ಟಿ ವ್ಯವಸ್ಥೆಗೆ ಸಂಬಂಧಿಸಿದ ಹಲವು ಬಿಕ್ಕಟ್ಟುಗಳನ್ನು ರಾಜ್ಯ ಹಾಗೂ ಕೇಂದ್ರ ಸರ್ಕಾರದ ಹಂತಗಳಲ್ಲಿ ಅಧಿಕಾರಿಗಳ ನಡುವಿನ ಮಾತುಕತೆ ಮೂಲಕ ಬಗೆಹರಿಸಲಾಯಿತು ಎಂದು ಹೇಳಲಾಗಿದೆ. ರಾಜಕೀಯದ ಲೆಕ್ಕಾಚಾರದ ತೋರುಗಾಣಿಕೆಯ ಮಾತುಗಳು ಒಂದೆಡೆ ನಡೆದರೂ, ಕೇಂದ್ರ ಹಾಗೂ ರಾಜ್ಯಗಳ ಮಟ್ಟದ ರಾಜಕೀಯ ನಾಯಕತ್ವವು ಭಿನ್ನಾಭಿಪ್ರಾಯಗಳನ್ನು ಸದ್ದುಗದ್ದಲ ಇಲ್ಲದೆ ಬಗೆಹರಿಸಿಕೊಳ್ಳಲು ಅಧಿಕಾರಿಶಾಹಿ ವ್ಯವಸ್ಥೆಯನ್ನು ನೆಚ್ಚಿಕೊಂಡಿದೆ ಎಂಬ ವರದಿಗಳು ಇವೆ.

ಎರಡನೆಯದಾಗಿ, ಕೋವಿಡ್ ಸಾಂಕ್ರಾಮಿಕದ ಸಂದರ್ಭ ಹಾಗೂ ಕೋವಿಡ್ ನಂತರದ ಅವಧಿಯಲ್ಲಿ ಸರ್ಕಾರಗಳ ನಡುವಿನ ಸಹಕಾರವು ಗೋಚರಿಸುವುದು ಹೆಚ್ಚಾಗಿದೆ. ಇಂದು ಸರ್ಕಾರಗಳ ಬಹುತೇಕ ಕೆಲಸಗಳು ವಿವಿಧ ಹಂತಗಳ ನಡುವಿನ ಸಂಕೀರ್ಣ ಸಮನ್ವಯವನ್ನು ಬಯಸುತ್ತವೆ. ದೇಶದಲ್ಲಿ ಲಾಕ್‌ಡೌನ್ ಜಾರಿಯಾದ ನಂತರದಲ್ಲಿ ಪ್ರಧಾನಿ ಹಾಗೂ ಮುಖ್ಯಮಂತ್ರಿಗಳ ನಡುವೆ ಆಗಾಗ ನಡೆಯುತ್ತಿದ್ದ ವಿಡಿಯೊ ಮಾತುಕತೆಗಳು ಸರ್ಕಾರಗಳ ನಡುವಿನ ನಿರಂತರ ಸಂವಹನವನ್ನು ಸೂಚಿಸುತ್ತಿದ್ದವು ಎಂಬುದನ್ನು ಭಾರತದಲ್ಲಿ ಕೋವಿಡ್ ಸಾಂಕ್ರಾಮಿಕದ ಅವಧಿಯ ಆಡಳಿತದ ಕುರಿತ ಅಧ್ಯಯನಗಳು ಹೇಳಿವೆ. ಸರ್ಕಾರದ ಬೇರೆ ಬೇರೆ ಹಂತಗಳ ನಡುವೆ ಸಹಕಾರ ಮತ್ತು ಸಮನ್ವಯ ಇಲ್ಲದೆ ಸಾಂಕ್ರಾಮಿಕವನ್ನು ತಡೆಯುವುದು ಕಷ್ಟವಾಗುತ್ತಿತ್ತು ಎಂದು ಪ್ರಧಾನಿಯವರು ಅಧಿಕೃತವಾಗಿ ಹೇಳಿದ್ದಾರೆ. ಪ್ರಧಾನಿಯವರು ಲಿಂಕ್ಡ್‌ಇನ್‌ನಲ್ಲಿ ಬರೆದ ಒಂದು ಬರಹದಲ್ಲಿ ಕೇಂದ್ರ ಮತ್ತು ರಾಜ್ಯಗಳ ನಡುವಿನ ಭಾಗೀದಾರಿಕೆಯ ಬಗ್ಗೆ ಉಲ್ಲೇಖಿಸಿರುವುದು, ಸರ್ಕಾರಗಳ ನಡುವಿನ ಸಹಕಾರದ ಅನಿವಾರ್ಯತೆಯನ್ನು ಸೂಚಿಸುತ್ತದೆ.

ಮೂರನೆಯದಾಗಿ, ಭಾರತದ ಗಣರಾಜ್ಯ ವ್ಯವಸ್ಥೆಯು ತನ್ನ ಹಾದಿಯಲ್ಲಿ ಮುಂದಕ್ಕೆ ಸಾಗಿದಂತೆಲ್ಲ, ರಾಜಕೀಯದ ಸ್ಪರ್ಧೆಗಳು ಸೃಷ್ಟಿಸುವ ಅನಿವಾರ್ಯತೆಯನ್ನು ಉಲ್ಲೇಖಿಸಲೇಬೇಕಾಗುತ್ತದೆ. ಇದು ಸಾಮಾನ್ಯವಾಗಿ ಮಾಧ್ಯಮಗಳ ಗಮನವನ್ನು ಸೆಳೆಯುತ್ತದೆ. ಭಾರತದಲ್ಲಿ ಕೇಂದ್ರ ಮತ್ತು ರಾಜ್ಯಗಳ ನಡುವಿನ ಸಂಬಂಧವು ಸ್ಪರ್ಧಾತ್ಮಕ ರಾಜಕಾರಣ ಸೃಷ್ಟಿಸಿದ ಗೊಂದಲದಲ್ಲಿ ಸಿಲುಕಿದೆ. ಇಲ್ಲಿ ಮೂರು ಬೆಳವಣಿಗೆಗಳನ್ನು ಉಲ್ಲೇಖಿಸಬೇಕು. ಮೊದಲನೆಯದು: ಭಾರತದಲ್ಲಿ ಲೋಕಸಭೆ ಹಾಗೂ ವಿಧಾನಸಭೆಗಳಿಗೆ ಚುನಾವಣೆಯು ಒಂದೇ ಬಾರಿಗೆ ನಡೆಯುವುದಿಲ್ಲವಾದ ಕಾರಣದಿಂದಾಗಿ, ದೇಶವು ಯಾವಾಗಲೂ ಒಂದಲ್ಲ ಒಂದು ಕಡೆ ಚುನಾವಣೆಯನ್ನು ಕಾಣುತ್ತಿರುತ್ತದೆ. 2025ನೆಯ ಇಸವಿ ಮುಗಿಯುವ ಹೊತ್ತಿಗೆ ಬಿಹಾರ ವಿಧಾನಸಭೆಗೆ ಚುನಾವಣೆ ಮುಗಿದಿತ್ತು. 2026ನೆಯ ಇಸವಿ ಶುರುವಾಗಿರುವ ಹೊತ್ತಿನಲ್ಲಿ, ಪಶ್ಚಿಮ ಬಂಗಾಳ ಮತ್ತು ತಮಿಳುನಾಡು ವಿಧಾನಸಭೆಗೆ ನಡೆಯುವ ಚುನಾವಣೆಯ ಬಗ್ಗೆ ಮತ್ತೆ ಮತ್ತೆ ಪ್ರಸ್ತಾಪ ಕೇಳಿಬರುತ್ತಿದೆ. ಈ ಚುನಾವಣೆ ಘೋಷಣೆ ಆಗುವುದಕ್ಕೆ ಇನ್ನೂ ಸಮಯ ಇದೆ ಆದರೂ, ಅನಧಿಕೃತ ಪ್ರಚಾರಕಾರ್ಯ ಶುರುವಾಗಿದೆ. ಶಬ್ದಾಡಂಬರದ ಮಾತುಗಳು ಸಾಮಾನ್ಯವಾಗಿ ವಾಸ್ತವವನ್ನು ಮರೆಮಾಚುತ್ತವೆ. ಆರೋಪ ಹಾಗೂ ಪ್ರತ್ಯಾರೋಪಗಳು ನಿತ್ಯದ ಸಂಗತಿ ಆಗುತ್ತವೆ. ಎರಡನೆಯದು: ರಾಜ್ಯ ಹಾಗೂ ಕೇಂದ್ರದಲ್ಲಿನ ಸರ್ಕಾರಗಳ ನಡುವಿನ ಅತಿಯಾದ ಸ್ಪರ್ಧೆಯು (ಅದರಲ್ಲೂ ಮುಖ್ಯವಾಗಿ, ಈ ಎರಡು ಸರ್ಕಾರಗಳ ನೇತೃತ್ವ ವಹಿಸಿದವರು ಬೇರೆ ಬೇರೆ ಪಕ್ಷಗಳಿಗೆ ಸೇರಿದವರಾಗಿದ್ದರೆ) ಪರಿಸ್ಥಿತಿಯನ್ನು ಉದ್ದೇಶಪೂರ್ವಕವಾಗಿ ಇನ್ನಷ್ಟು ಹಾಳು ಮಾಡಿದೆ. ರಾಜ್ಯಪಾಲ ಹುದ್ದೆಯು ಹೆಚ್ಚಿನ ಸಂದರ್ಭಗಳಲ್ಲಿ ರಾಜಕೀಯ ತಿಕ್ಕಾಟದ ನಡುವೆ ಸಿಲುಕಿಕೊಂಡಿರುತ್ತದೆ. ರಾಜ್ಯ ಹಾಗೂ ಕೇಂದ್ರ ಸರ್ಕಾರದ ನಾಯಕತ್ವದ ನಡುವೆ ಮತ್ತೆ ಮತ್ತೆ ಸಂಘರ್ಷ ಉಂಟಾಗುತ್ತಿರುತ್ತದೆ.

ಮೂರನೆಯದು: ರಾಜಕೀಯದ ಸ್ಪರ್ಧೆಯ ಅನಿವಾರ್ಯಗಳು, ರಾಜ್ಯ ಸರ್ಕಾರಗಳು ಕೇಂದ್ರ ಸರ್ಕಾರದ ಬಗ್ಗೆ ಪಕ್ಷಪಾತಿತನದ ಆರೋಪವನ್ನು ಹೊರಿಸುತ್ತಿರುವುದರಲ್ಲಿಯೂ ಕಾಣುತ್ತಿವೆ. ಅದರಲ್ಲೂ ಮುಖ್ಯವಾಗಿ, ಕೇಂದ್ರದಲ್ಲಿ ಆಡಳಿತದ ಚುಕ್ಕಾಣಿ ಹಿಡಿದಿರುವ ಪಕ್ಷವೇ ರಾಜ್ಯದಲ್ಲಿಯೂ ಅಧಿಕಾರ ಹಿಡಿದಿದ್ದರೆ ಅಥವಾ ಆ ಪಕ್ಷದ ಮಿತ್ರಪಕ್ಷವು ರಾಜ್ಯದಲ್ಲಿ ಅಧಿಕಾರ ಹಿಡಿದಿದ್ದರೆ ಈ ರೀತಿ ಆರೋಪ ಎದುರಾಗುತ್ತಿದೆ. ಭಾರತದ ಗಣರಾಜ್ಯವು 2026ನೆಯ ಇಸವಿಯನ್ನು ಹಾದುಹೋಗುವ ಸಂದರ್ಭದಲ್ಲಿ ಇಲ್ಲಿ ಚರ್ಚಿಸಲಾದ ವಿಷಯಗಳು ವಿಶೇಷವಾಗಿ ಗಮನ ಸೆಳೆಯುತ್ತವೆ.

ಮಹತ್ವಾಕಾಂಕ್ಷೆಯ ಭಾರತ ಗಣರಾಜ್ಯವು ಪ್ರಸ್ತುತ ಜನರ ನಿರೀಕ್ಷೆಗಳಿಗೆ, ಆತಂಕಗಳಿಗೆ ಮತ್ತು ಆದ್ಯತೆಗಳಿಗೆ ಸ್ಪಂದಿಸಬೇಕಾಗಿದೆ.

ಸುಭಾಷಿತ



ವೈವಿಧ್ಯ ಹಾಗೂ ಸುವ್ಯವಸ್ಥೆ ಇರುವ, ಸಮಾನತೆ ಇಲ್ಲದವರಿಗೆ ಸಮಾನತೆ ಕೊಡುವ ಪ್ರಜಾಪ್ರಭುತ್ವ ಆಕರ್ಷಕ ವ್ಯವಸ್ಥೆ.

ಪ್ಲೇಟೊ

ವಾಚಕರ ವಾಣಿ

ಸುರಕ್ಷತೆ, ಘನತೆ, ಮಮತೆಯ ನಿರ್ಣಯ

ಲಿಂಗತ್ವ ಅಲ್ಪಸಂಖ್ಯಾತರಿಗಾಗಿ ರಾಜ್ಯ ಸರ್ಕಾರವು ಪ್ರತ್ಯೇಕ ಮಂಡಳಿ ಸ್ಥಾಪಿಸಲು ತೆಗೆದುಕೊಂಡಿರುವ ನಿರ್ಣಯವು ಬರೀ ಆಡಳಿತಾತ್ಮಕ ಬದಲಾವಣೆಯಲ್ಲ; ಇದು ದಶಕಗಳ ನೋವು ಮತ್ತು ಅವಮಾನಗಳನ್ನು ಅನುಭವಿಸಿದ ಸಮುದಾಯಕ್ಕೆ ದೊರೆತ ಗೌರವದ ಸಂಕೇತ. ಸಮಾಜದ ಮುಖ್ಯವಾಹಿನಿಯಿಂದ ದೂರ ತಳ್ಳಲಾದ ಸಾವಿರಾರು ಜೀವಗಳಿಗೆ ಉದ್ದೇಶಿತ ಮಂಡಳಿಯು ಆಶಾಕಿರಣವಾಗಿದೆ. ಸರ್ಕಾರದ ನಿರ್ಧಾರವು ಅವರ ಬದುಕಿನಲ್ಲಿ ಸಮಾನತೆ, ಸುರಕ್ಷತೆ ಮತ್ತು ಘನತೆಯನ್ನು ತರಲಿ; ಪ್ರೀತಿ ಮತ್ತು ಒಳಗೊಳ್ಳುವಿಕೆಯ ಹೊಸ ಯುಗಕ್ಕೆ ನಾಂದಿಯಾಗಲಿ.

ಬಸವಚೇತನ ಎಂ.ಎಚ್., ಬೀದರ್

ಸರ್ಕಾರಿ ಬಸ್ ಜಾಹೀರಾತು ಗೋಡೆಯೆ?

ಕರ್ನಾಟಕದ ಸರ್ಕಾರಿ ಬಸ್‌ಗಳು ಜನರನ್ನು ಸಾಗಿಸುವ ವಾಹನಗಳಾಗುವ ಬದಲು, ಜಾಹೀರಾತು ಫಲಕಗಳಾಗಿ ಪರಿವರ್ತನೆಯಾಗುತ್ತಿವೆ. ಬಸ್‌ಗಳ ಮೇಲೆ ಅಂಟಿಸಿರುವ ಜಾಹೀರಾತುಗಳಲ್ಲಿ ಹುದುಗಿದ ಮಾರ್ಗ ಸಂಖ್ಯೆ, ಊರುಗಳ ಹೆಸರು ಮತ್ತಿತರೆ ಮಾಹಿತಿ ಹುಡುಕುವಂತಾಗಿದೆ. ಹಿರಿಯ ನಾಗರಿಕರು ಮತ್ತು ಗ್ರಾಮೀಣ ಪ್ರಯಾಣಿಕರು ಸರಿಯಾದ ಬಸ್ ಗುರುತಿಸಲು ಸಾಧ್ಯವಾಗದೆ ಪರದಾಡುವ ಸ್ಥಿತಿ ನಿರ್ಮಾಣವಾಗಿದೆ. ಬಸ್ ಕಿಟಕಿ, ಮುಂಭಾಗದ ಬೋರ್ಡ್, ಸೂಚನಾ ಫಲಕಗಳ ಮೇಲೂ ಫ್ಲೆಕ್ಸ್ ಹಾಗೂ ಸ್ಟಿಕ್ಕರ್‌ಗಳನ್ನು ಅಂಟಿಸಲಾಗುತ್ತಿದೆ. ಸಾರಿಗೆ ಇಲಾಖೆ ಆದಾಯದ ಹೆಸರಿನಲ್ಲಿ ಜನರ ಸುಖ, ಸುರಕ್ಷತೆ ಮತ್ತು ಗೌರವವನ್ನು ಮರೆತಂತೆ ವರ್ತಿಸುತ್ತಿರುವುದು ವಿಷಾದನೀಯ. ಬಸ್ ಜಾಹೀರಾತಿನ ಗೋಡೆ ಅಲ್ಲ– ಅದು ಜನರ ಜೀವನಾಡಿ. ಬಸ್‌ಗಳ ಮೇಲಿನ ಜಾಹೀರಾತುಗಳಿಗೆ ಮಿತಿ ಅಗತ್ಯ.

ಹನುಮಂತ ಆರ್.ಸಿ., ಹುನಗುಂದ

ರೋಗಗ್ರಸ್ತ ತ್ಯಾಜ್ಯ ನಿರ್ವಹಣೆ ಘಟಕ

ನಗರ, ಗ್ರಾಮೀಣ ಪ್ರದೇಶಗಳಲ್ಲಿ ತ್ಯಾಜ್ಯ ನಿರ್ವಹಣೆಗೆ ಸ್ಥಾಪಿಸಲಾದ ಅನೇಕ ಘಟಕಗಳು ನಿರ್ವಹಣೆ ಇಲ್ಲದೆ ತುಕ್ಕು ಹಿಡಿಯುತ್ತಿವೆ. ಕೆಲವು ಘಟಕಗಳಲ್ಲಿ ಯಂತ್ರಗಳನ್ನು ಅಳವಡಿಸಿ ವರ್ಷಗಳೇ ಕಳೆದಿದ್ದರೂ, ಅಗತ್ಯ ನಿರ್ವಹಣೆ, ತಾಂತ್ರಿಕ ಸಹಾಯ ಮತ್ತು ವಿದ್ಯುತ್ ಪೂರೈಕೆ ಸಮರ್ಪಕವಾಗಿ ಲಭ್ಯವಾಗಿಲ್ಲ. ತ್ಯಾಜ್ಯ ಸಂಗ್ರಹವಾದರೂ ಸಂಸ್ಕರಿಸಲು ಸಾಧ್ಯವಾಗದೆ ಸುತ್ತಮುತ್ತ ದುರ್ವಾಸನೆ, ಆರೋಗ್ಯ ಸಮಸ್ಯೆಗಳು ಮತ್ತು ಪರಿಸರ ಮಾಲಿನ್ಯ ಹೆಚ್ಚುತ್ತಿದೆ.

ಸ್ಥಳೀಯ ಆಡಳಿತ ಸಂಸ್ಥೆಗಳ ನಿರ್ಲಕ್ಷ್ಯ, ಸಿಬ್ಬಂದಿಯ ಕೊರತೆ ಮತ್ತು ಯೋಜನೆಗಳ ಮೇಲ್ವಿಚಾರಣೆಯ ಅಭಾವ ಈ ದುಃಸ್ಥಿತಿಗೆ ಕಾರಣವಾಗಿದೆ. ತ್ಯಾಜ್ಯ ಘಟಕಗಳು ಉದ್ದೇಶಿತ ರೀತಿಯಲ್ಲಿ ಕಾರ್ಯನಿರ್ವಹಿಸಬೇಕಾದರೆ ಯಂತ್ರಗಳ ನಿಯಮಿತ ನಿರ್ವಹಣೆ, ಸಿಬ್ಬಂದಿಗೆ ತರಬೇತಿ ಹಾಗೂ ಸ್ಪಷ್ಟ ಜವಾಬ್ದಾರಿ ವ್ಯವಸ್ಥೆ ಅಗತ್ಯವಾಗಿದೆ. ಇಲ್ಲದಿದ್ದರೆ ತ್ಯಾಜ್ಯ ಘಟಕಗಳು ಅಭಿವೃದ್ಧಿಯ ಸಂಕೇತವಾಗದೆ, ನಿರ್ಲಕ್ಷ್ಯದ ಪ್ರತೀಕವಾಗುತ್ತವೆ.

ಎನ್. ಮಹಾರಾಜ, ಹೊಸಪೇಟೆ

ಶಿಕ್ಷಕರಿಗೆ ನೋಟಿಸ್: ಅವರ ತಪ್ಪೇನಿದೆ?

ಬೆಂಗಳೂರಿನ ಸರ್ಕಾರಿ ಪ್ರೌಢಶಾಲೆಯೊಂದರ ಬಾಲಕಿಯೊಬ್ಬಳು ಮಗುವಿಗೆ ಜನ್ಮ ನೀಡಿದ ಪ್ರಕರಣದಲ್ಲಿ, ಶಾಲಾ ಶಿಕ್ಷಣ ಇಲಾಖೆಯು ಸಂಬಂಧಿಸಿದ ಶಾಲೆಯ ಮುಖ್ಯ ಶಿಕ್ಷಕ ಹಾಗೂ ಶಿಕ್ಷಕರಿಗೆ ನೋಟಿಸ್ ನೀಡಿದೆ (ಪ್ರ.ವಾ., ಜ. 25). ಇದು ಸರಿಯಲ್ಲ. ಕೆಲವು ಮಕ್ಕಳು ಸಹಜವಾಗಿ ದಪ್ಪ ಇರುತ್ತಾರೆ. ಅಂತಹ ಮಕ್ಕಳ ದೇಹಪ್ರಕೃತಿಯಲ್ಲಿನ ವ್ಯತ್ಯಾಸ ಗೊತ್ತಾಗದು. ಹಾಗಾಗಿ, ದೈಹಿಕ ಬದಲಾವಣೆಗಳನ್ನು ಗುರುತಿಸಲು ವಿಫಲರಾಗಿರುವರೆಂಬ ಕಾರಣಕ್ಕೆ ಶಿಕ್ಷಕರನ್ನು ಹೊಣೆ ಮಾಡುವುದು ವಿವೇಚನಾರಹಿತ ತೀರ್ಮಾನವಾಗಿದೆ. ಇಂಥ ಘಟನೆ ವಸತಿ ಶಾಲೆಯಲ್ಲಿ ಸಂಭವಿಸಿದ್ದರೆ ಸಿಬ್ಬಂದಿಯ ಹೊಣೆಗಾರಿಕೆಯಿರುತ್ತದೆ. ಆದರೆ ಪ್ರಕರಣ ನಡೆದಿರುವುದು ವಸತಿರಹಿತ ಶಾಲೆಯಲ್ಲಿ. ಇಂಥ ಪ್ರಕರಣಗಳು ಮರುಕಳಿಸುತ್ತಿರುವುದರಿಂದ, ತಾಯಂದಿರು ನಿಗಾ ಇಡಬೇಕಾದ ಅವಶ್ಯಕತೆ ಕುರಿತು ಆರೋಗ್ಯ ಇಲಾಖೆಯು ವ್ಯಾಪಕ ಜಾಗೃತಿ ಮೂಡಿಸಬೇಕು. ಶಾಲೆಗಳಿಗೆ ಆರೋಗ್ಯ ಕೇಂದ್ರದ ಸಿಬ್ಬಂದಿಗಳು ಭೇಟಿ ನೀಡಿ ಅರಿವು ಮೂಡಿಸಬೇಕು.

ಪುಟ್ಟದಾಸು, ಮಂಡ್ಯ

ಜನರ ಮೌನ ಸರ್ಕಾರಕ್ಕೆ ಬಂಡವಾಳವಲ್ಲ

ಬಳ್ಳಾರಿಯಲ್ಲಿ ಗಾಳಿಯ ಗುಣಮಟ್ಟ ಸೂಚ್ಯಂಕ ಅಪಾಯಕಾರಿ ಮಟ್ಟ ತಲಪಿದೆ. ಈ ಮಾಲಿನ್ಯಕ್ಕೆ ಸರ್ಕಾರದ ಹೊಣೆಗೇಡಿತನವೇ ಕಾರಣ. ಗಣಿಗಾರಿಕೆ, ಬೃಹತ್ ಕೈಗಾರಿಕೆಗಳಿಂದ ಬರುವ ಕೋಟ್ಯಂತರ ರೂಪಾಯಿ ಹಣವು ಪರಿಸರ ನಿಯಮಗಳಿಗಿಂತ ಸರ್ಕಾರಕ್ಕೆ ಮುಖ್ಯವಾಗಿ ಕಾಣುತ್ತಿದೆ. ಮಾಲಿನ್ಯ ನಿಯಂತ್ರಣ ಮಂಡಳಿಯು 'ನೋಟಿಸ್' ನೀಡುವ ಸಂಸ್ಥೆಯಾಗಿ ಉಳಿದಿದೆಯೇ ಹೊರತು, ಬದಲಾವಣೆ ತರುವ ಶಕ್ತಿಯಾಗಿ ಉಳಿದಿಲ್ಲ. ಅಭಿವೃದ್ಧಿ ಎಂದರೆ ಬರೀ ಕಾರ್ಖಾನೆಗಳ ಸ್ಥಾಪನೆಯಲ್ಲ, ಜನರ ಬದುಕುವ ಹಕ್ಕನ್ನು ಕಾಪಾಡುವುದೂ ಹೌದು. ಗಣಿಗಾರಿಕೆ ಪ್ರದೇಶಗಳಲ್ಲಿ ಕಡ್ಡಾಯವಾಗಿ ಹಸುರು ವಲಯ ನಿರ್ಮಾಣ, ರಸ್ತೆಗಳ ಸುಧಾರಣೆ ಮತ್ತು ಕಾರ್ಖಾನೆಗಳಿಗೆ ಆಧುನಿಕ ಫಿಲ್ಟರ್‌ಗಳನ್ನು ಅಳವಡಿಸುವುದನ್ನು ಸರ್ಕಾರ ಕಡ್ಡಾಯಗೊಳಿಸಬೇಕು. ಜನರ ಮೌನ ಸರ್ಕಾರಕ್ಕೆ ಬಂಡವಾಳ ಆಗಬಾರದು.

ಭೂಮಿಕಾ ವಿ., ಕೋಲಾರ

ಅಂಗವಿಕಲರ ಬಸ್ ಪಾಸ್‌ಗೆ 'ಶಕ್ತಿ' ಬೇಕು!

ಪ್ರಸ್ತುತ ಜಾರಿಯಲ್ಲಿರುವ ಅಂಗವಿಕಲರ ರಿಯಾಯಿತಿ ಬಸ್ ಪಾಸ್ 100 ಕಿ.ಮೀ. ಒಳಗಿನ ಪ್ರಯಾಣದ ವ್ಯಾಪ್ತಿಯನ್ನು ಒಳಗೊಂಡಿದೆ. ಈ ನಿಯಮ ಬದಲಾವಣೆ ಮಾಡಿ, ರಾಜ್ಯದಾದ್ಯಂತ ರಿಯಾಯಿತಿ ಪಾಸ್ ಸಂಚಾರಕ್ಕೆ ಅವಕಾಶ ಕಲ್ಪಿಸಲು ಸರ್ಕಾರವನ್ನು ಕೋರುವೆ. ಸರ್ಕಾರದ 'ಶಕ್ತಿ' ಯೋಜನೆ ಮಹಿಳಾ ಸಬಲೀಕರಣಕ್ಕೆ ಬಹುದೊಡ್ಡ ಕೊಡುಗೆಯನ್ನು ನೀಡಿದೆ. ಅದೇ ರೀತಿಯಾಗಿ ಅಂಗವಿಕಲರ ಸಬಲೀಕರಣಕ್ಕಾಗಿಯೂ ಸರ್ಕಾರ 'ಶಕ್ತಿ' ಯೋಜನೆ ತಂದರೆ, ರಾಜ್ಯದಲ್ಲಿರುವ 35 ಲಕ್ಷಕ್ಕೂ ಹೆಚ್ಚು ಅಂಗವಿಕಲರಿಗೆ ಅನುಕೂಲ ಆಗುವುದು.

ಶಿವನಗೌಡ ಪೊಲೀಸ್ ಪಾಟೀಲ್, ಕೊಪ್ಪಳ

ಚುರುಮುರಿ

ನೋಡಿ ಸ್ವಾಮಿ...

• ಸುಮಂಗಲಾ

'ನೋಡಿ ಸ್ವಾಮಿ ನಾವಿರೋದೆ ಹೀಗೆ' ಬೆಕ್ಕಣ್ಣ ರಾಗವಾಗಿ ಹಾಡುತ್ತಿತ್ತು.

'ಏನಲೇ... ಯಾವುದಾರೆ ರಿಯಾಲಿಟಿ ಶೋಗೆ ಹೋಕ್ಕೀಯೇನು? ಇತ್ತಿತ್ತಲಾಗಿ ಭಾಳ ಹಾಡು ಹಾಡಾಕೆ ಹತ್ತೀ...' ಎಂದೆ ಕುತೂಹಲದಿಂದ.

'ನಾನಷ್ಟೇ ಅಲ್ಲ... ಟ್ರಂಪಣ್ಣನೂ ಇದೇ ಹಾಡು ಹಾಡಿಕೋತ ತಕಥೈ ಅಂತ ಕುಣಿಲಾಕೆ ಹತ್ಯಾನೆ! ಗ್ರೀನ್‌ಲ್ಯಾಂಡ್ ನಮ್ಮದು ಅಂತ ತೊಡೆ ತಟ್ಟುವಾಗ, ವಿಶ್ವಸಂಸ್ಥೆಯ ಅದೆಷ್ಟೋ ಮಂಡಳಿಗಳಿಂದ ಹೊರಗೆ ಹೋಗೂವಾಗ, ಸುಂಕ ಹೆಚ್ಚು ಮಾಡೂವಾಗ, ಹಿಂಗ ಎಲ್ಲಾ ಟೈಮಿನಾಗೂ ಅಂವಾ ಇದೇ ಹಾಡು ಹಾಡಾಕೆ ಹತ್ಯಾನೆ!' ಎಂದು ಮುಸಿಮುಸಿ ನಕ್ಕಿತು.

'ಇಲ್ಲಿ ನಮ್ಮ ರಾಜಕಾರಣಿಗಳು ಏನು ಕಡಿಮಿ? ಅವರೂ ಇದೇ ಹಾಡು ಹಾಡಿಕೋತ, ಅಧಿಕಾರ, ಕುರ್ಚಿ, ರೊಕ್ಕಕ್ಕಾಗಿ ಏನು ಬೇಕಾದರೂ ಮಾಡತಾರೆ. ಅದು ಹೋಗಲಿ ಅಂದ್ರ ರಾಜ್ಯಪಾಲರೂ ಪೂರಾ ಭಾಷಣನೂ ಓದದೇ, ನೋಡಿ ಸ್ವಾಮಿ ನಾನಿರಾದೆ ಹಿಂಗೆ ಅಂತ್ಹೇಳಿ ಸದನದಿಂದ ಹೊರಹೋಗತಾರೆ' ಅಂದೆ ಸಿಟ್ಟಿನಿಂದ.

'ಇವರಷ್ಟೇ ಅಲ್ಲ... ಎಲ್ಲಾ ಕಾರ್ಪೋರೇಟ್ ಕುಳಗಳು, ಗಣಿಧಣಿಗಳು, ಭ್ರಷ್ಟ ಅಧಿಕಾರಿಗಳು ಎಲ್ಲಾರೂ ಇದೇ ಹಾಡು ಹಾಡಿಕೋತ ತಮ್ಮ ಕಾರುಬಾರು ನಡೆಸತಾರೆ. ಯಾರಿಗೂ ಶ್ರೀಸಾಮಾನ್ಯರ ಬಗ್ಗೆ ಒಂದಿಷ್ಟೂ ಚಿಂತಿ ಇಲ್ಲ' ಎಂದು ಬೆಕ್ಕಣ್ಣನೂ ಗುರುಗುಟ್ಟಿತು.

'77ನೇ ಗಣರಾಜ್ಯೋತ್ಸವ ಬಂದರೂ ಶ್ರೀಸಾಮಾನ್ಯನ ಬದುಕು ಉದ್ಧಾರ ಆಗಿಲ್ಲ... ಸಂವಿಧಾನದ ಆಶಯಗಳನ್ನು ಸಾಕಾರ ಮಾಡೂದು ಬಿಡು, ಅದನ್ನೇ ಬದಲಿ ಮಾಡಕ್ಕೆ ಹೊರಟಾರೆ. ನಾವಿರೋದೆ ಹೀಗೆ, ಹಿಂದೆಯೂ, ಇಂದೂ, ಮುಂದೂ ಅಂತ ಹಾಡತಾರೆ' ಎಂದೆ.

'ನೀವು ಶ್ರೀಸಾಮಾನ್ಯರೂ ಅಷ್ಟೇ ಜಡ್ಡುಗಟ್ಟೀರಿ. ನೋಡಿ ಸ್ವಾಮಿ ನಾವಿರೋದೆ ಹೀಗೆ ಅಂತ ಹಾಡಿಕೋತ, ರೊಕ್ಕ ತಗಂಡು ಓಟು ಹಾಕುತೀರಿ. ನಿಮ್ಮದೇ ಬುಡಕ್ಕೆ ಬೆಂಕಿ ಬೀಳೂ ತನಾ ನನಗ್ಯಾಕೆ ಬಿಡು ಅಂತ ತೆಪ್ಪಗೆ ಕುಂದರತೀರಿ' ಎಂದು ಬೆಕ್ಕಣ್ಣ ಹಂಗಿಸಿದಾಗ ನಾನು ಉತ್ತರಿಸಲಾಗದೇ ತೆಪ್ಪಗಾದೆ.

ಸಂಗತ

ಕ್ಷೇತ್ರ ಮರು ವಿಂಗಡಣೆ ಎನ್ನುವ ದುಃಸ್ವಪ್ನ

'ಬಿಮಾರು' ರಾಜ್ಯಗಳಿಗಾಗಿ ಸಾಕಷ್ಟು ತ್ಯಾಗ ಮಾಡುತ್ತಿರುವ ದಕ್ಷಿಣದ ರಾಜ್ಯಗಳು, ಲೋಕಸಭಾ ಕ್ಷೇತ್ರ ಮರುವಿಂಗಡಣೆ ಆದರೆ ಪ್ರಾತಿನಿಧ್ಯದ ನಷ್ಟ ಅನುಭವಿಸಲಿವೆ.

• ರಾ.ನಂ. ಚಂದ್ರಶೇಖರ

ಜನಸಂಖ್ಯೆಯಲ್ಲಿನ ಬದಲಾವಣೆಗೆ ಅನುಗುಣವಾಗಿ ಲೋಕಸಭೆ ಮತ್ತು ವಿಧಾನಸಭಾ ಕ್ಷೇತ್ರಗಳ ನ್ಯಾಯಯುತ ಪ್ರಾತಿನಿಧ್ಯ ಖಚಿತಪಡಿಸಿಕೊಳ್ಳಲು ಗಡಿಗಳನ್ನು ಮರುರೂಪಿಸುವ ಪ್ರಕ್ರಿಯೆಯೇ ಕ್ಷೇತ್ರಗಳ ಮರುವಿಂಗಡಣೆ. ಲೋಕಸಭೆಯ ಸ್ಥಾನಗಳನ್ನು ಹಂಚಿಕೆ ಮಾಡಲು ಜನಸಂಖ್ಯೆಯೇ ಮೂಲ ಆಧಾರ. ಇದೇ ದಕ್ಷಿಣ ಭಾರತದ ಪಾಲಿಗೆ ಶಾಪವಾಗಿ, ಉತ್ತರ ಭಾರತದವರಿಗೆ ವರವಾಗಿದೆ.

ಸಂವಿಧಾನದ 82ನೇ ಅನುಚ್ಛೇದದ ಪ್ರಕಾರ, ಪ್ರತಿಯೊಂದು ಜನಗಣತಿಯ ಬಳಿಕ ಸಂಸತ್ತು ಕಾನೂನಿನ ಮೂಲಕ ಸೀಮಾನಿರ್ಣಯ ಕಾಯ್ದೆಯನ್ನು ಜಾರಿಗೆ ತರುತ್ತದೆ. ಕಾಯ್ದೆಯನ್ನು ಜಾರಿಗೆ ತಂದ ಬಳಿಕ ಕೇಂದ್ರ ಸರ್ಕಾರವು ಸೀಮಾನಿರ್ಣಯ ಆಯೋಗವನ್ನು ರಚಿಸುತ್ತದೆ. ಈ ಸೀಮಾನಿರ್ಣಯ ಆಯೋಗವು, ಲೋಕಸಭಾ ಕ್ಷೇತ್ರಗಳ ಗಡಿಗಳನ್ನು ನಿರ್ಣಯಿಸುತ್ತದೆ. ಈಗಿನ ಕ್ಷೇತ್ರಗಳ ಗಡಿ ನಿರ್ಣಯವನ್ನು 2001ರ ಜನಗಣತಿಯ ಆಧಾರದಲ್ಲಿ, 2002ರ 'ಸೀಮಾ ನಿರ್ಣಯ ಕಾಯ್ದೆ'ಯ ಅವಕಾಶಗಳ ಪ್ರಕಾರ ಮಾಡಲಾಗಿದೆ. ಮೇಲಿನ ಅಂಶಗಳ ಹೊರತಾಗಿಯೂ 2002ರಲ್ಲಿ ಭಾರತದ ಸಂವಿಧಾನದಲ್ಲಿ ವಿಶೇಷ ತಿದ್ದುಪಡಿಯನ್ನು ಮಾಡಿ, 2026ರ ಬಳಿಕ ನಡೆಯುವ ಮೊದಲ ಜನಗಣತಿಯ ತನಕ ಕ್ಷೇತ್ರಗಳ ಸೀಮಾ ನಿರ್ಣಯ ಮಾಡುವುದನ್ನು ನಿರ್ಬಂಧಿಸಿದೆ.

ಭಾರತದಲ್ಲಿ ಸ್ವಾತಂತ್ರ್ಯಾನಂತರ ನಾಲ್ಕು ಬಾರಿ ಲೋಕಸಭಾ ಕ್ಷೇತ್ರಗಳ ಮರುವಿಂಗಡಣೆ ಮಾಡಲಾಗಿದೆ. 1951ರ ಜನಗಣತಿಯನ್ನು ಆಧರಿಸಿ 1952ರಲ್ಲಿ ಮೊದಲ ಮರುವಿಂಗಡಣೆ ನಡೆಯಿತು. ಆಗ ಲೋಕಸಭಾ ಕ್ಷೇತ್ರಗಳ ಸಂಖ್ಯೆ 494. ರಾಜ್ಯಗಳ ಮರುಸಂಘಟನೆಯ (1956) ನಂತರ 1963ರಲ್ಲಿ 1961ರ ಜನಗಣತಿ ಆಧರಿಸಿ ಮರುವಿಂಗಡಣೆ ಪ್ರಕ್ರಿಯೆ ನಡೆದು, ಕ್ಷೇತ್ರಗಳ ಸಂಖ್ಯೆ 522 ಆಯಿತು. 1973ರಲ್ಲಿ ಮರುವಿಂಗಡಣೆ ನಡೆದು ಕ್ಷೇತ್ರಗಳ ಸಂಖ್ಯೆ 543ಕ್ಕೇರಿತು. 2002ರಲ್ಲಿ ಲೋಕಸಭೆ ಸ್ಥಾನಗಳಲ್ಲಿ ಯಾವುದೇ ಬದಲಾವಣೆ ಆಗಲಿಲ್ಲ. ಈಗ 5ನೇ ಬಾರಿಗೆ 2026ರಲ್ಲಿ ನಡೆಯುವ ಜನಗಣತಿಯ ಆಧಾರದ ಮೇಲೆ ಮರುವಿಂಗಡಣೆ ನಡೆಯಲಿದೆ.

ಮರುವಿಂಗಡಣೆ ಮೇಲ್ನೋಟಕ್ಕೆ ಸಹಜ ಪ್ರಕ್ರಿಯೆ ಅನ್ನಿಸುತ್ತದೆ. ಲೋಕಸಭಾ ಕ್ಷೇತ್ರಗಳನ್ನು 753ಕ್ಕೆ ಹೆಚ್ಚಿಸುವ ಸಾಧ್ಯತೆ ಇರುವುದರಿಂದ (ಹೊಸ ಸಂಸತ್ ಭವನದಲ್ಲಿ 888 ಆಸನ ವ್ಯವಸ್ಥೆ ಮಾಡಿದೆ) ಕೇಂದ್ರ ಗೃಹ ಸಚಿವರು ಹೇಳಿರುವಂತೆ, ದಕ್ಷಿಣ ಭಾರತದ ಲೋಕಸಭಾ ಕ್ಷೇತ್ರಗಳು ಕಡಿಮೆ ಆಗುವುದಿಲ್ಲ. ಆದರೆ, ಉದ್ದೇಶಿತ ಕ್ಷೇತ್ರ ಮರುವಿಂಗಡಣೆಯಲ್ಲಿ ಉತ್ತರ ರಾಜ್ಯಗಳಿಗೆ ಹೋಲಿಸಿದರೆ, ಕುಟುಂಬ ಯೋಜನೆಯನ್ನು ಪರಿಣಾಮಕಾರಿಯಾಗಿ ಜಾರಿಗೆ ತಂದು ನಿಧಾನಗತಿಯ ಜನಸಂಖ್ಯಾ ಬೆಳವಣಿಗೆಯಿಂದಾಗಿ ದಕ್ಷಿಣ ರಾಜ್ಯಗಳ ಪ್ರಾತಿನಿಧ್ಯ ಕಡಿಮೆಯಾಗುತ್ತದೆ.

ಪ್ರಸಕ್ತ, ದಕ್ಷಿಣ ರಾಜ್ಯಗಳು 543 ಲೋಕಸಭಾ ಸ್ಥಾನಗಳಲ್ಲಿ 129 ಸ್ಥಾನಗಳನ್ನು ಹೊಂದಿವೆ: ಕರ್ನಾಟಕ, ತಮಿಳುನಾಡು, ಆಂಧ್ರಪ್ರದೇಶ, ಕೇರಳ ಮತ್ತು ತೆಲಂಗಾಣ ಕ್ರಮವಾಗಿ 28, 39, 25, 20 ಮತ್ತು 17 ಸ್ಥಾನ ಹೊಂದಿವೆ. ಉದ್ದೇಶಿತ ಮರುವಿಂಗಡಣೆ ನಡೆದರೆ ಅದು 36, 41, 28, 19 ಮತ್ತು 20 ಆಗುತ್ತದೆ. ಪರಿಣಾಮಕಾರಿಯಾಗಿ ಕುಟುಂಬ ಯೋಜನೆ ಅನುಷ್ಠಾನಗೊಳಿಸಿದ ತಪ್ಪಿಗಾಗಿ ಕೇರಳ 1 ಸ್ಥಾನ ಕಳೆದುಕೊಳ್ಳುತ್ತದೆ.

753 ಲೋಕಸಭಾ ಕ್ಷೇತ್ರಗಳಲ್ಲಿ ದಕ್ಷಿಣದ ಕ್ಷೇತ್ರಗಳು 144 ಆಗುತ್ತದೆ. ಸ್ಥಾನಗಳು ಹೆಚ್ಚಿದರೂ ಪ್ರಾತಿನಿಧ್ಯದಲ್ಲಿ ಶೇ 2ರಷ್ಟು ಕಡಿಮೆ ಆಗುತ್ತದೆ. ಇದಕ್ಕೆ ಪ್ರತಿಯಾಗಿ ಜನಸಂಖ್ಯೆಯನ್ನು ನಿಯಂತ್ರಿಸದ ಉತ್ತರದ ಹಿಂದಿ ರಾಜ್ಯಗಳು 150ಕ್ಕೂ ಅಧಿಕ ಸ್ಥಾನ ಹೆಚ್ಚಿಸಿಕೊಳ್ಳುತ್ತವೆ. ಉತ್ತರ ಪ್ರದೇಶದಲ್ಲಿ ಲೋಕಸಭೆ ಸ್ಥಾನಗಳು 80ರಿಂದ 128 ಆಗಿ ಅತಿ ದೊಡ್ಡ ಏರಿಕೆ ಕಾಣಲಿದೆ ಎಂದು ತಜ್ಞರು ಹೇಳುತ್ತಾರೆ. ಅದೇ ರೀತಿ, ಬಿಹಾರದಲ್ಲಿ ಸ್ಥಾನಗಳು 40ರಿಂದ 70ಕ್ಕೆ ಏರಲಿವೆ ಮಧ್ಯಪ್ರದೇಶದ ಪ್ರಾತಿನಿಧ್ಯ 29ರಿಂದ 47ಕ್ಕೆ ಹೆಚ್ಚಾಗಲಿದೆ. ಮಹಾರಾಷ್ಟ್ರದಲ್ಲಿ 20 ಸ್ಥಾನಗಳು ಹೆಚ್ಚುವ ನಿರೀಕ್ಷೆಯಿದ್ದು, 48ರಿಂದ 68ಕ್ಕೆ ಏರಲಿದೆ. ರಾಜಸ್ಥಾನದಲ್ಲಿ 25ರಿಂದ 44 ಸ್ಥಾನಗಳಿಗೆ ಏರಿಕೆಯಾಗಲಿದೆ. ಚುನಾವಣೆಯ ಗೆಲುವಿಗಾಗಿ ಏನು ಬೇಕಾದರೂ ಮಾಡಲು ಸಿದ್ಧವಿರುವ ರಾಜಕೀಯ ಪಕ್ಷಗಳು ಈ ರಾಜ್ಯಗಳ ಜನರ ಮನವೊಲಿಸಲು ಸಹಜವಾಗಿ ಗಮನಹರಿಸುತ್ತವೆ.

ಜನಸಂಖ್ಯಾ ನಿಯಂತ್ರಣವನ್ನು ಯಶಸ್ವಿಯಾಗಿ ನಿರ್ವಹಿಸಿದ ಹಾಗೂ ಮಾನವ ಅಭಿವೃದ್ಧಿ ಕಾರ್ಯಕ್ರಮಗಳನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸಿದ ರಾಜ್ಯಗಳಿಗೆ ಪ್ರಜಾಪ್ರಭುತ್ವ ಪ್ರಕ್ರಿಯೆ ದಂಡನೆಯಾಗಿ ಪರಿಣಮಿಸಬಾರದು. ಈಗಾಗಲೇ ಬಿಹಾರ, ಮಧ್ಯಪ್ರದೇಶ, ರಾಜಸ್ಥಾನ ಮತ್ತು ಉತ್ತರ ಪ್ರದೇಶ ರಾಜ್ಯಗಳಲ್ಲಿನ ಅವ್ಯವಸ್ಥೆಯನ್ನು ಸೂಚಿಸಲು ಕಳೆದ ಕೆಲವು ದಶಕಗಳಲ್ಲಿ ಸಂಕ್ಷಿಪ್ತ ರೂಪವಾಗಿ 'ಬಿಮಾರು' (ಬಿಐಎಂಎಆರ್‌ಯು) ಪದವನ್ನು ಬಳಸಲಾಗುತ್ತಿದೆ. 'ಬಿಮಾರು' ಎಂದರೆ ಹಿಂದಿಯಲ್ಲಿ 'ಅಸ್ವಸ್ಥ' ಎಂದರ್ಥ. ಈ ರಾಜ್ಯಗಳಿಗೆಗೋಸ್ಕರ ಸಾಕಷ್ಟು (ತೆರಿಗೆ ಹಂಚಿಕೆ, ಕೇಂದ್ರದ ನೆರವು, ಇತ್ಯಾದಿ) ಕಳೆದುಕೊಳ್ಳುತ್ತಿರುವ ದಕ್ಷಿಣದ ರಾಜ್ಯಗಳು ಮರುವಿಂಗಡಣೆಯಿಂದ ಇನ್ನಷ್ಟು ಅನ್ಯಾಯ, ನಿರ್ಲಕ್ಷ್ಯಗಳಿಗೆ ಒಳಗಾಗಲಿವೆ.

ನಾವು ಎಚ್ಚೆತ್ತುಕೊಂಡು ಕ್ಷೇತ್ರಗಳ ಮರುವಿಂಗಡಣೆಯನ್ನು ವಿರೋಧಿಸದಿದ್ದರೆ, ದಕ್ಷಿಣ ಭಾರತವು ದೇಶದ ರಾಜಕಾರಣದಲ್ಲಿ ನಗಣ್ಯವಾಗುತ್ತದೆ. ಇದು ಕನ್ನಡಿಗರ (ದಕ್ಷಿಣ ಭಾರತೀಯರ) ಅಳಿವು–ಉಳಿವಿನ ಪ್ರಶ್ನೆ. ನಮ್ಮ ಅಸ್ತಿತ್ವ, ಅಸ್ಮಿತೆ ಮತ್ತು ಅವಕಾಶಗಳನ್ನು ಉಳಿಸಿಕೊಳ್ಳಲು ದನಿ ಎತ್ತಬೇಕಿದೆ. ದೊಡ್ಡದೊಂದು ಆಂದೋಲನವನ್ನೇ ರೂಪಿಸಬೇಕಾಗಿದೆ.

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಲಕ್ಕುಂಡಿ ವೈಭವದ ಮರುಅನ್ವೇಷಣೆ

ಚಿನ್ನದ ನಿಧಿ ಸಿಗುವುದಕ್ಕೂ ಮುನ್ನವೇ ಉತ್ಖನನಕ್ಕೆ ಸಿಕ್ಕಿತ್ತು ಚಾಲನೆ

• ಕೆ.ಎಂ.ಸತೀಶ್ ಬೆಳ್ಳಕ್ಕಿ

ಗದಗ ನಗರದಿಂದ 11 ಕಿ.ಮೀ. ದೂರದಲ್ಲಿರುವ ಲಕ್ಕುಂಡಿ ಈಗ ರಾಜ್ಯದ ಹೊರಗೂ ಹೆಸರು ಗಳಿಸಿದೆ. ಚಿನ್ನದ ನಿಧಿ ಸಿಕ್ಕ ನಂತರ ಈ ಗ್ರಾಮವು ದೇಶದ ಗಮನ ಸೆಳೆದಿದೆ. ಲಕ್ಕುಂಡಿಯ ಭವ್ಯ ಪರಂಪರೆಯ ಮರು ಅನ್ವೇಷಣೆಗಾಗಿ ಜ.16ರಿಂದ ಉತ್ಖನನ ಆರಂಭಗೊಂಡಿರುವುದು ಸಂಶೋಧಕರು, ಇತಿಹಾಸಕಾರರಲ್ಲಿ ಕುತೂಹಲ ಮೂಡಿಸಿದೆ.

ಗ್ರಾಮದ ಹುಡುಗ ಪ್ರಜ್ವಲ್ ರಿತ್ತಿ, ಮಾವ ಗಂಗವ್ವ ಅವರ ಜೊತೆಗೂಡಿ ಮನೆ ನಿರ್ಮಾಣಕ್ಕಾಗಿ ಜನವರಿ 10ರಂದು ತಳಪಾಯ ತೆಗೆಯುವಾಗ 466 ಗ್ರಾಂ ತೂಕದ ಚಿನ್ನದ ನಿಧಿ ಸಿಕ್ಕಿತ್ತು. ಆಗ ಅವರು ಸಿಕ್ಕ ಚಿನ್ನವನ್ನು ಪ್ರಾಮಾಣಿಕವಾಗಿ ಸರ್ಕಾರಕ್ಕೆ ಒಪ್ಪಿಸಿದ್ದರು. ಅದಾದ ನಂತರ ಬಳಿಕ ರಾಜ್ಯ ಪುರಾತತ್ವ ಇಲಾಖೆ, ಲಕ್ಕುಂಡಿ ಪಾರಂಪರಿಕ ಪ್ರದೇಶಾಭಿವೃದ್ಧಿ ಪ್ರಾಧಿಕಾರ ಹಾಗೂ ಜಿಲ್ಲಾಡಳಿತದ ನೇತೃತ್ವದಲ್ಲಿ ಲಕ್ಕುಂಡಿಯಲ್ಲಿ ಉತ್ಖನನ ಆರಂಭಿಸಿತು.

ಚಿನ್ನದ ನಿಧಿ ಸಿಕ್ಕಿದೆ ಎಂಬ ಕಾರಣಕ್ಕೆ ಲಕ್ಕುಂಡಿಯಲ್ಲಿ ದಿಢೀರ್ ಉತ್ಖನನ ಆರಂಭಿಸಿಲ್ಲ. ಲಕ್ಕುಂಡಿಯ ಕೋಟೆ ವೀರಭದ್ರೇಶ್ವರ ದೇವಸ್ಥಾನದ ಆವರಣದಲ್ಲಿ ಉತ್ಖನನ ನಡೆಸಲು ಕಳೆದ ವರ್ಷವೇ ನಿರ್ಧರಿಸಲಾಗಿತ್ತು. ಅದರಂತೆ, ಕಳೆದ ಜೂನ್ 3ರಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಉತ್ಖನನಕ್ಕೆ ಚಾಲನೆ ನೀಡಿದ್ದರು. ಆದರೆ, ಬಳಿಕ ಮಳೆಗಾಲ ಆರಂಭಗೊಂಡಿದ್ದರಿಂದ ಕೆಲಸ ಪ್ರಾರಂಭವಾಗಿರಲಿಲ್ಲ. ಎರಡೂ ಏಕಕಾಲದಲ್ಲಿ ನಡೆದಿರುವುದು ಕಾಕತಾಳೀಯ ಅಷ್ಟೇ.

ಈವರೆಗೆ ಸಿಕ್ಕಿದ್ದು ಏನೇನು?: ಚಿನ್ನದ ನಿಧಿ ಸಿಕ್ಕ ಪ್ರಜ್ವಲ್ ರಿತ್ತಿ ಕುಟುಂಬದ ನಿವೇಶನ ಹಾಗೂ [illegible] ಇತ್ತು ಎನ್ನಲಾದ ಟಂಕಸಾಲೆಯು ಕೋಟೆ ವೀರಭದ್ರೇಶ್ವರ ದೇವಸ್ಥಾನ ಕೇಂದ್ರ ಸ್ಥಾನದಲ್ಲಿದೆ. ಹಾಗಾಗಿ, ಚಿನ್ನದ ನಿಧಿ ಶೋಧನೆಗಾಗಿ ಈ ಜಾಗ ಗುರುತಿಸಿಲ್ಲ. ದೇವಸ್ಥಾನದಿಂದ ಸಿದ್ದರ ಬಾವಿವರೆಗೆ ನೇರ ಸಂಪರ್ಕ ಇದ್ದು, ಇಲ್ಲಿ ಉತ್ಖನನ ನಡೆಸಿದರೆ ಮಹತ್ವದ ಅವಶೇಷಗಳು ಸಿಗಬಹುದು ಎಂದು ತಜ್ಞರು ಅಂದಾಜಿಸಿ, ಈ ಜಾಗದಿಂದ ಪುರಾತತ್ವ ಇಲಾಖೆಯ ನಿವೃತ್ತ ಅಧೀಕ್ಷಕ ಹಾಗೂ ಉತ್ಖನನದ ನಿರ್ದೇಶಕ ಟಿ.ಎಂ.ಕೇಶವ ಅವರ ನೇತೃತ್ವದಲ್ಲಿ ಉತ್ಖನನ ಆರಂಭಿಸಿದ್ದಾರೆ.

ಮೊದಲ ಹಂತದಲ್ಲಿ ₹25 ಲಕ್ಷ ಖರ್ಚು ಮಾಡಿ ಕೋಟೆ ವೀರಭದ್ರೇಶ್ವರ ದೇವಸ್ಥಾನದಿಂದ ಸಿದ್ದರ ಬಾವಿವರೆಗಿನ 10x10 ಮೀಟರ್ ಜಾಗದಲ್ಲಿ ನಾಲ್ಕು ಬ್ಲಾಕ್‌ಗಳನ್ನು ಮಾಡಿ ಉತ್ಖನನ ನಡೆಸಲಾಗುತ್ತಿದೆ. ಇಲ್ಲಿಯವರೆಗೆ ನಡೆದಿರುವ ಉತ್ಖನನದಲ್ಲಿ ಲಕ್ಕುಂಡಿಯ ವೈಭವ ಗುರುತಿಸಲು ನೆರವಾಗುವಂತಹ ಯಾವುದೇ ಮಹತ್ವದ ಪ್ರಾಚ್ಯ ಅವಶೇಷ ಸಿಕ್ಕಿಲ್ಲ.

ಜ.17ರಂದು ಎರಡೂವರೆ ಅಡಿಗಳಷ್ಟು ಉತ್ಖನನ ನಡೆಸಿದಾಗ ಶಿವಲಿಂಗದ ಪಾಣಿಪೀಠ ಪತ್ತೆಯಾಗಿತ್ತು. ನಂತರದ ದಿನಗಳಲ್ಲಿ ಸರ್ಪದ ಚಿತ್ರವಿರುವ ಪ್ರಾಚ್ಯ ಅವಶೇಷ, ತಾಮ್ರದ ಘಂಟೆ, ಮಣ್ಣಿನ ಧೂಪದಾರತಿ, ಕಲ್ಲಿನ ಕೈಕೊಡಲಿ, ಕಂಬದ ಬೋದಿಗೆ, ಜನ ಚಿತ್ರವಿರುವ ಕಲ್ಲಿನ ಪೀಠ, ನಾಗರಕಲ್ಲು, ಮೂಳೆಯ ತುಂಡುಗಳು, ಮಡಕೆಯ ಚೂರುಗಳು, ಕೆಂಪು ಮಣಿ, ಲೋಹದ ದೀಪದ ತುಣುಕು, ಪಚ್ಚೆ ಕಲ್ಲು, ಕಬ್ಬಿಣದ ಗುಂಡು ಪತ್ತೆಯಾಗಿವೆ. ಇವುಗಳನ್ನೆಲ್ಲಾ ಇತಿಹಾಸ ತಜ್ಞರು ಅಧ್ಯಯನಕ್ಕೆ ಒಳಪಡಿಸಿದ ನಂತರವಷ್ಟೇ ಅವು ಯಾವ ಕಾಲಕ್ಕೆ ಸೇರಿದವು, ಅವುಗಳ ಮಹತ್ವ ಏನು ಎಂಬುದು ಗೊತ್ತಾಗಲಿದೆ.

'ಭಾರತೀಯ ಪುರಾತತ್ವ ಇಲಾಖೆಯು 10x10 ಜಾಗದಲ್ಲಿ ಉತ್ಖನನಕ್ಕೆ ಅನುಮತಿ ನೀಡಿದೆ. ಅದನ್ನು ನಾಲ್ಕು ಭಾಗಗಳಾಗಿ ಮಾಡಿಕೊಳ್ಳಲಾಗಿದೆ. ಆ ಜಾಗದಲ್ಲೆಲ್ಲಾ 10ರಿಂದ 12 ಅಡಿ ಆಳದವರೆಗೆ ಉತ್ಖನನ ನಡೆಸಲಾಗುವುದು. ತರಬೇತಿ ಪಡೆದ ಕುಶಲ ಕಾರ್ಮಿಕರು ಹಂತ ಹಂತವಾಗಿ, ಸೂಕ್ಷ್ಮ ರೀತಿಯಲ್ಲಿ ನಾಲ್ಕು ತಿಂಗಳವರೆಗೆ ಉತ್ಖನನ ನಡೆಸಲಿದ್ದಾರೆ' ಎಂದು ಲಕ್ಕುಂಡಿ ಪಾರಂಪರಿಕ ಪ್ರದೇಶಾಭಿವೃದ್ಧಿ ಪ್ರಾಧಿಕಾರದ ಆಯುಕ್ತ ಶರಣು ಗೋಗೇರಿ ತಿಳಿಸಿದ್ದಾರೆ.



ನಿವೇಶನದಲ್ಲಿ ಸಿಕ್ಕಿರುವ ಚಿನ್ನಾಭರಣಗಳು

ಮನೆಯೊಳಗೆ ದೇವಸ್ಥಾನ: ಲಕ್ಕುಂಡಿ ಗ್ರಾಮದಲ್ಲಿನ ಕೆಲವರು ಪ್ರಾಚೀನ ಕಾಲದ ದೇವಸ್ಥಾನಗಳಿಗೆ ಅಂಟಿಕೊಂಡೇ ಮನೆಯ ಗೋಡೆಗಳನ್ನು ಕಟ್ಟಿಕೊಂಡಿದ್ದಾರೆ. ಇನ್ನು ಕೆಲವರು ದೇವಸ್ಥಾನವನ್ನೇ ಮನೆಯನ್ನಾಗಿ ಮಾಡಿಕೊಂಡಿದ್ದಾರೆ.

ಗದಗ ತಾಲ್ಲೂಕಿನ ಲಕ್ಕುಂಡಿ ಗ್ರಾಮದ ಕೋಟೆ ವೀರಭದ್ರೇಶ್ವರ ದೇವಸ್ಥಾನದ ಆವರಣದಲ್ಲಿ ನಡೆದಿರುವ ಉತ್ಖನನ ಕೆಲಸ ಶನಿವಾರಕ್ಕೆ ಒಂಬತ್ತು ದಿನಗಳನ್ನು ಪೂರೈಸಿದೆ

> ಲಕ್ಕುಂಡಿಯಲ್ಲಿ ಈಗ ನಡೆದಿರುವ ಉತ್ಖನನದ ಕುರಿತಾಗಿ ಸಾಮಾಜಿಕ ಜಾಲತಾಣಗಳಲ್ಲಿ ಹೆಚ್ಚು ಉತ್ಪ್ರೇಕ್ಷೆಯ ಸುದ್ದಿಗಳೇ ಹರಿದಾಡುತ್ತಿವೆ. ಅಲ್ಲಿ ಅತಿ ದೊಡ್ಡ ಚಿನ್ನದ ನಿಕ್ಷೇಪ ಇದೆಯಂತೆ, ಕೂದಲು ಇರುವ ಘಟಸರ್ಪ ಅದನ್ನು ಕಾಯುತ್ತಿದೆಯಂತೆ ಎಂಬ ಮೂಢನಂಬಿಕೆ ಮೂಡಿಸುವ ಸುದ್ದಿಗಳು ಹರಿದಾಡುತ್ತಿರುವುದಕ್ಕೆ ಪ್ರಜ್ಞಾವಂತರು ತೀವ್ರ ಅಸಹನೆ ವ್ಯಕ್ತಪಡಿಸಿದ್ದಾರೆ.

ಚೌಕಿಮಠ, ಕುಂಬಾರ ಓಣಿಯಲ್ಲಿ ಇಂತಹ ದೃಶ್ಯಗಳು ಕಣ್ಣಿಗೆ ಕಾಣಸುತ್ತವೆ. ಅಮೂಲ್ಯವಾದ ಪ್ರಾಚ್ಯ ಅವಶೇಷಗಳು ಕೆಲವರ ಮನೆಯ ಹಿತ್ತಲಿನಲ್ಲಿ, ಕೊಟ್ಟಿಗೆಯಲ್ಲಿ ಮೆಟ್ಟಿಲುಗಳಾಗಿವೆ.

'ಲಕ್ಕುಂಡಿಯಲ್ಲಿ ಉತ್ಖನನ ಪ್ರಾರಂಭಗೊಂಡ ನಂತರ ಪ್ರಾಚೀನ ದೇವಾಲಯಗಳ ಮಹತ್ವ ಸ್ಥಳೀಯರಿಗೂ ಅರ್ಥವಾಗಿದೆ. ತಮಗೆ ಬೇರೆ ಜಾಗ, ವಸತಿ ವ್ಯವಸ್ಥೆ ಮಾಡಿದರೆ ಅವುಗಳನ್ನು ಬಿಟ್ಟುಕೊಡುವುದಾಗಿ ಸ್ವ ಇಚ್ಛೆಯಿಂದ ಹೇಳಿದ್ದಾರೆ. ಈಗ ನಡೆದಿರುವ ಉತ್ಖನನದಿಂದ ಮಹತ್ವದ ಅವಶೇಷಗಳು ಲಭ್ಯವಾದರೆ ಇಡೀ ಊರನ್ನೇ ಸ್ಥಳಾಂತರಿಸಬೇಕಾಗಬಹುದು. ಆಗ, ಅದಕ್ಕೆ ಏನೇನು ಕ್ರಮಗಳಿವೆ ಎಂಬುದು ಸರ್ಕಾರದ ಮಟ್ಟದಲ್ಲಿ ನಿರ್ಧಾರವಾಗುತ್ತದೆ' ಎಂದು ಲಕ್ಕುಂಡಿ ಪಾರಂಪರಿಕ ಪ್ರದೇಶಾಭಿವೃದ್ಧಿ ಪ್ರಾಧಿಕಾರದ ರಾಜ್ಯ ಸದಸ್ಯ ಸಿದ್ದು ಪಾಟೀಲ ತಿಳಿಸಿದ್ದಾರೆ.

ಬಯಲು ವಸ್ತು ಸಂಗ್ರಹಾಲಯ: ರಾಜ್ಯ ಸರ್ಕಾರವು 2025–26ನೇ ಸಾಲಿನ ಬಜೆಟ್‌ನಲ್ಲಿ, 'ಐತಿಹಾಸಿಕ ಲಕ್ಕುಂಡಿಯಲ್ಲಿನ ಪಾರಂಪರಿಕ ದೇವಾಲಯಗಳನ್ನು ವಿಶ್ವ ಪಾರಂಪರಿಕ ತಾಣಗಳ ತಾತ್ಕಾಲಿಕ ಪಟ್ಟಿಗೆ ಸೇರ್ಪಡೆಗೊಳಿಸಲು ಅಗತ್ಯ ಸೌಕರ್ಯಗಳನ್ನು ಒದಗಿಸಲಾಗುವುದು. ಪ್ರಾಚ್ಯ ಅವಶೇಷಗಳ ಸಂರಕ್ಷಣೆಗಾಗಿ ಬಯಲು ವಸ್ತುಸಂಗ್ರಹಾಲಯ ಪ್ರಾರಂಭಿಸಲಾಗುವುದು' ಎಂದು ಘೋಷಿಸಿತ್ತು.

ಅದರಂತೆ, ಲಕ್ಕುಂಡಿಯಲ್ಲಿ ಈವರೆಗೆ ಸಿಕ್ಕಿರುವ ಪ್ರಾಚ್ಯ ಅವಶೇಷಗಳನ್ನು ಜೋಪಾನವಾಗಿ ಕಾಯ್ದಿರಿಸಲು ವಾರಂಗಲ್ ಮಾದರಿಯ ಬಯಲು ವಸ್ತುಸಂಗ್ರಹಾಲಯ ನಿರ್ಮಿಸಲು ಯೋಜನೆ ರೂಪಿಸಲಾಗಿದೆ. ಲಕ್ಕುಂಡಿಯಲ್ಲಿನ ಬ್ರಹ್ಮಜಿನಾಲಯ, ನನ್ನೇಶ್ವರ ದೇವಸ್ಥಾನ, ಕಾಶಿ ವಿಶ್ವನಾಥ ದೇವಸ್ಥಾನ ಮತ್ತು ಕನ್ನರಬಾವಿ ಮಧ್ಯದ ಜಾಗದಲ್ಲಿರುವ ಸ.ನಂ.2ರಲ್ಲಿನ 3 ಎಕರೆ 1 ಗುಂಟೆ ಜಮೀನನ್ನು ಪ್ರತಿ ಎಕರೆಗೆ ₹38 ಲಕ್ಷ ಬೆಲೆ ನಿಗದಿಗೊಳಿಸಿ, ಖರೀದಿಸಲು ಸರ್ಕಾರ ಅನುಮತಿ ನೀಡಿದೆ.

ಪ್ರಾಚ್ಯ ಅವಶೇಷಗಳ ಸಂಗ್ರಹ ಅಭಿಯಾನ: ಲಕ್ಕುಂಡಿ ವೈಭವವನ್ನು ಮರುಸ್ಥಾಪಿಸುವ ಸಂಬಂಧ ಪ್ರವಾಸೋದ್ಯಮ ಸಚಿವ ಎಚ್‌.ಕೆ.ಪಾಟೀಲ ವಿಶೇಷ ಆಸಕ್ತಿ ವಹಿಸಿದ್ದು, ಕಳೆದ ವರ್ಷ ಪ್ರಾಚ್ಯ ಅವಶೇಷಗಳ ಸಂಗ್ರಹ ಅಭಿಯಾನ ನಡೆಸಿದ್ದರು. ಈ ವೇಳೆ ಮೂರು ದಿನಗಳಲ್ಲಿ 1,100ಕ್ಕೂ ಅಧಿಕ ಅಮೂಲ್ಯ ಶಾಸನ, ಶಿಲ್ಪಕಲೆ, ಮುತ್ತು, ರತ್ನ, ಹವಳ, ನಾಣ್ಯ ಸಂಗ್ರಹಿಸಲಾಗಿತ್ತು. ಲಕ್ಕುಂಡಿ ಗ್ರಾಮದ ಜನರು ತಮ್ಮ ಮನೆಗಳಲ್ಲಿ ಇದ್ದ ಪ್ರಾಚ್ಯ ಅವಶೇಷಗಳು, ಮುತ್ತು, ರತ್ನ, ಹವಳ ಸೇರಿದಂತೆ ವಿವಿಧ ಪಾರಂಪರಿಕ ವಸ್ತುಗಳನ್ನು ಸ್ವ ಇಚ್ಛೆಯಿಂದ ಸರ್ಕಾರಕ್ಕೆ ನೀಡಿದ್ದರು.

ಆದಾದ ಬಳಿಕ, ಗದಗ ನಗರದ ಮಹಾತ್ಮಗಾಂಧಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ವಿಶ್ವವಿದ್ಯಾಲಯದಲ್ಲಿ ನಡೆದ ಇತಿಹಾಸ ಅಕಾಡೆಮಿಯ ವಾರ್ಷಿಕ ಸಮ್ಮೇಳನದಲ್ಲಿ ಸಚಿವ ಎಚ್‌.ಕೆ.ಪಾಟೀಲ ಅವರು ಸ್ಥಳೀಯ ಇತಿಹಾಸ ಅಧ್ಯಯನದ ಮಹತ್ವದ ಬಗ್ಗೆ ಇತಿಹಾಸಕಾರರಿಗೆ ಮನವರಿಕೆ ಮಾಡಿಕೊಟ್ಟಿದ್ದರು. ರಾಜ್ಯದಲ್ಲಿನ 238 ತಾಲ್ಲೂಕುಗಳಲ್ಲಿ ಕೂಡ ಸಮೃದ್ಧ ಇತಿಹಾಸವಿದ್ದು, ಅದರ ಸಾಹಿತ್ಯ ಸೃಷ್ಟಿಗೆ ಮುಂದಾದರೆ ಸರ್ಕಾರದಿಂದ ಆರ್ಥಿಕ ನೆರವು ಒದಗಿಸುವ ಭರವಸೆ ನೀಡಿದ್ದರು.

ಹಿಂದೆಯೂ ನಡೆದಿತ್ತು ಉತ್ಖನನ

2003–04ರಲ್ಲಿ ಕೂಡ ಇಲ್ಲಿ ಉತ್ಖನನ ನಡೆದಿತ್ತು. ಗ್ರಾಮದ ಅಲ್ಲಮಪ್ರಭು ಮಠದ ಹಿಂಭಾಗ ನಡೆದ ಉತ್ಖನನದ ವೇಳೆ ಶಿಲಾಯುಗಕ್ಕೆ ಸಂಬಂಧಿಸಿದ ಅವಶೇಷಗಳು ಸಿಕ್ಕಿದ್ದವು.

'ಲಕ್ಕುಂಡಿಯ ಇತಿಹಾಸ ತುಂಬ ಪ್ರಾಚೀನವಾಗಿದೆ. ಇಲ್ಲಿನ 32 ಪ್ರಕಟಿತ ಶಾಸನಗಳ ಪಠ್ಯ ಹಿಡಿದು ಲಕ್ಕುಂಡಿಯಲ್ಲಿ ನೂರಕ್ಕೂ ಹೆಚ್ಚು ಬಾರಿ ಅಡ್ಡಾಡಿದ್ದೇನೆ. ಪ್ರತಿಬಾರಿ ಬಂದಾಗಲೂ ಹೊಸ ಹೊಸ ಶಾಸನಗಳು ಸಿಕ್ಕಿವೆ' ಎನ್ನುತ್ತಾರೆ 'ಲಕ್ಕುಂಡಿಯ ಶಾಸನಗಳು' ಕೃತಿಯ ಲೇಖಕಿ, ಇತಿಹಾಸ ತಜ್ಞೆ ಹನುಮಾಕ್ಷಿ ಗೋಗಿ.

'ಲಕ್ಕುಂಡಿಯಲ್ಲಿ ರಾಷ್ಟ್ರಕೂಟರ ಕಾಲದ ವೀರಗಲ್ಲುಗಳು ಸಿಕ್ಕಿವೆ. ಈ ಪ್ರದೇಶವನ್ನು ಅತಿ ಹೆಚ್ಚು ಸಮಯ ಆಳಿದ ಕಲ್ಯಾಣದ ಚಾಲುಕ್ಯರು, ಕಲಚೂರಿ ಯಾದವರು, ವಿಜಯನಗರ ರಾಜರ ಶಾಸಗಳು ಸಿಕ್ಕಿವೆ. 'ಲಕ್ಕುಂಡಿಯ ಶಾಸನಗಳು' ಕೃತಿಯಲ್ಲಿ 110 ಶಾಸನಗಳ ಬಗ್ಗೆ ಉಲ್ಲೇಖಿಸಲಾಗಿತ್ತು. 2008ರ ನಂತರ ಮತ್ತೆ 45 ಶಾಸನಗಳನ್ನು ಗುರುತಿಸಿದ್ದೇನೆ. ಈ ಕಾರ್ಯಕ್ಕೆ ಸ್ಥಳೀಯರಾದ ಇತಿಹಾಸ ತಜ್ಞ ಅ.ದ.ಕಟ್ಟಿಮನಿ ಅವರ ನೆರವು ಸಾಕಷ್ಟಿದೆ' ಎಂದು ಹೇಳುತ್ತಾರೆ ಅವರು.

ಗ್ರಾಮದ 16 ತಾಣಗಳನ್ನು ಈಗಾಗಲೇ ರಾಜ್ಯ ಸಂರಕ್ಷಿತ ಸ್ಮಾರಕಗಳು ಎಂದು ಘೋಷಿಸಲಾಗಿದೆ. ಇದರ ಜತೆಗೆ ಇನ್ನೂ ಎಂಟು ದೇವಸ್ಥಾನಗಳನ್ನು ಫೆಬ್ರುವರಿ ಅಂತ್ಯದೊಳಗೆ ಸಂರಕ್ಷಿತ ಸ್ಮಾರಕಗಳಾಗಿ ಘೋಷಣೆ ಮಾಡಲಾಗುವುದು ಎಂದು ಸಚಿವ ಎಚ್‌.ಕೆ. ಪಾಟೀಲ ತಿಳಿಸಿದ್ದಾರೆ. ಇಷ್ಟೇ ಅಲ್ಲದೇ, ಇನ್ನೂ 20 ದೇವಸ್ಥಾನಗಳನ್ನು ರಾಜ್ಯ ಸಂರಕ್ಷಿತ ಸ್ಮಾರಕಗಳ ಪಟ್ಟಿಯಲ್ಲಿ ಸೇರ್ಪಡೆ ಮಾಡುವ ಸಂಬಂಧ ಒಂದು ತಿಂಗಳ ಒಳಗಾಗಿ ಸಮಗ್ರ ಪ್ರಸ್ತಾವವನ್ನು ಸರ್ಕಾರಕ್ಕೆ ಸಲ್ಲಿಸುವಂತೆ ಪ್ರಾಧಿಕಾರದ ಆಯುಕ್ತರಿಗೆ ಸೂಚಿಸಿದ್ದಾರೆ.

ಗ್ರಾಮದಲ್ಲಿ 101 ದೇವಸ್ಥಾನ, 101 ಕಲ್ಯಾಣಿಗಳಿದ್ದವು ಎಂಬ ಉಲ್ಲೇಖವಿದೆ. ಇದರಲ್ಲಿ ಬೆರಳೆಣಿಕೆಯಷ್ಟು ದೇವಸ್ಥಾನ ಮತ್ತು ಕಲ್ಯಾಣಿಗಳು ಉಳಿದಿವೆ. ಅದರಲ್ಲಿ ಕೆಲವು ಗ್ರಾಮದಲ್ಲಿನ ಕೃಷಿ ಭೂಮಿ, ವಾಸದ ಮನೆಗಳಲ್ಲಿ ಚದುರಿಹೋಗಿವೆ. ಉಳಿದವು ಭೂಗರ್ಭದಲ್ಲಿ ಸೇರಿಕೊಂಡಿವೆ.

'ಲಕ್ಕುಂಡಿಯ ದೇಗುಲಗಳು ದಾಳಿಯಿಂದ ಹಾಳಾಗಿಲ್ಲ. ಕಾಲನ ಹೊಡೆತ ಮತ್ತು ಜನರ ಅವಗಣಗೆ ಸಿಕ್ಕು ಹಾಳಾಗಿವೆ. ಹಾಗಾಗಿ, ಇಲ್ಲಿ ಉತ್ಖನನ ಕಾರ್ಯ ಸಮಗ್ರವಾಗಿ ನಡೆದರೆ ಮಾತ್ರ ಲಕ್ಕುಂಡಿಯ ವೈಭವ ಮತ್ತೆ ಗೋಚರಿಸಲಿದೆ' ಎಂಬುದು ತಜ್ಞರ ಅಭಿಪ್ರಾಯ.

ಊರಿನ ಐತಿಹಾಸಿಕ ಮಹತ್ವ

9ನೇ ಶತಮಾನದಿಂದ 14ನೇ ಶತಮಾನದವರೆಗೆ ಲಕ್ಕುಂಡಿಗೆ ವಿಶೇಷ ಮಹತ್ವ ಇತ್ತು. ಈ ಊರು ಪ್ರಾಚೀನ ಕಾಲದಲ್ಲಿ ಲೊಕ್ಕಿಗುಂಡಿ ಎಂದು ಪ್ರಸಿದ್ಧವಾಗಿತ್ತು. 11ನೇ ಶತಮಾನದಲ್ಲಿ ಇದು ಬೆಳ್ವೊಲ 300 ಪ್ರಾಂತ್ಯಕ್ಕೆ ಸೇರಿತ್ತು. ಇದು 'ದಾನ ಚಿಂತಾಮಣಿ' ಅತ್ತಿಮಬ್ಬೆಯ ಕರ್ಮಭೂಮಿಯಾಗಿತ್ತು. ಲಕ್ಕುಂಡಿಯು ಬಾದಾಮಿ ಚಾಲುಕ್ಯರು, ಕಲ್ಯಾಣದ ಚಾಲುಕ್ಯರು, ಕಲಚೂರಿಗಳು, ಹೊಯ್ಸಳರು ಮತ್ತು ವಿಜಯನಗರದ ಅರಸರ ಆಳ್ವಿಕೆಗೆ ಒಳಪಟ್ಟಿತ್ತು.

ಸಾವಿರ ವರ್ಷಗಳ ಹಿಂದೆ ಅದರ ಸುವರ್ಣ ಯುಗದಲ್ಲಿ ಲಕ್ಕುಂಡಿ ಎಲ್ಲ ಚಟುವಟಿಕೆಗಳ ಪ್ರಮುಖ ಕೇಂದ್ರವಾಗಿತ್ತು. ಗ್ರಾಮದ ಕೋಟೆ ವೀರಭದ್ರೇಶ್ವರ ದೇವಸ್ಥಾನದ 100 ಮೀಟರ್ ಅಂತರದೊಳಗಿರುವ ಅಚ್ಚಪ್ಪನ ಬಯಲಿನಲ್ಲಿ ಟಂಕ ಶಾಲೆ ಇತ್ತು. ಅಲ್ಲಿ ಟಂಕಿಸುತ್ತಿದ್ದ ಲೊಕ್ಕಿ ಮತ್ತು ಗದ್ಯಾಣ ಎಂಬ ಚಿನ್ನದ ನಾಣ್ಯಗಳು ಅವುಗಳ ಗಾತ್ರ ಮತ್ತು ತೂಕಕ್ಕೆ ಪ್ರಸಿದ್ಧವಾಗಿದ್ದವು. ನಾಡಿನ ವಿವಿಧೆಡೆ ಸಿಕ್ಕ ಶಾಸನಗಳಲ್ಲಿ ಈ ನಾಣ್ಯಗಳ ಬಗ್ಗೆ ಉಲ್ಲೇಖ ಇರುವುದರಿಂದ ಅವು ರಾಜ್ಯದೆಲ್ಲೆಡೆ ಬಳಕೆಯಲ್ಲಿದ್ದವು ಎಂದು ಗೊತ್ತಾಗಿದೆ. ದೇವಸ್ಥಾನ, ಶಿಲ್ಪಕಲೆಯ ಹೊರತಾಗಿ ಲಕ್ಕುಂಡಿಯ ಇತಿಹಾಸ ಚಾಲುಕ್ಯ ಮತ್ತು ಹೊಯ್ಸಳ ಸಂಸ್ಕೃತಿಗಳ ಅದ್ಭುತ ಸಂಗಮವನ್ನು ತೆರೆದಿಡುತ್ತದೆ ಎಂದು ಇತಿಹಾಸ ತಜ್ಞರು ಹೇಳುತ್ತಾರೆ.

ಲಕ್ಕುಂಡಿಯಲ್ಲಿ ದೊರೆತ ಪ್ರಾಚ್ಯ ಅವಶೇಷಗಳನ್ನು ಇಲ್ಲಿನ ನನ್ನೇಶ್ವರ ದೇವಸ್ಥಾನದ ಪಕ್ಕದ ಬಯಲು ಜಾಗದಲ್ಲಿ ಸಂಗ್ರಹಿಸಿಡಲಾಗಿದೆ

ರಾಷ್ಟ್ರೀಯ

ನಕ್ಸಲ್ ಮುಕ್ತ ಗ್ರಾಮಗಳಲ್ಲಿ ಮೊದಲ ಗಣರಾಜ್ಯೋತ್ಸವ

ರಾಯಪುರ (ಪಿಟಿಐ): ಛತ್ತೀಸಗಢದ ಬಸ್ತಾರ್ ಪ್ರದೇಶದಲ್ಲಿ ನಕ್ಸಲರಿಂದ ಮುಕ್ತಗೊಂಡಿರುವ 41 ಹಳ್ಳಿಗಳಲ್ಲಿ ಇದೇ ಮೊದಲ ಬಾರಿಗೆ ಗಣರಾಜ್ಯೋತ್ಸವ ಆಚರಿಸಲಾಗುತ್ತಿದೆ. ಈ ಮೂಲಕ ಮೊದಲ ಬಾರಿಗೆ ಈ ಗ್ರಾಮಗಳಲ್ಲಿ ತ್ರಿವರ್ಣ ಧ್ವಜವನ್ನು ಹಾರಿಸಲಾಗುವುದು ಎಂದು ಬಸ್ತಾರ್ ವಲಯದ ಐಜಿಪಿ ಸುಂದರ್‌ರಾಜ್ ಹೇಳಿದರು.

'ಇದು 'ಕೆಂಪು ಭಯೋತ್ಪಾದನೆ'ಯನ್ನು ಕೊನೆಗೊಳಿಸುವ ಹೋರಾಟದ ಯಶಸ್ಸನ್ನು ಒತ್ತಿ ಹೇಳುತ್ತದೆ ಹಾಗೂ ಶಾಂತಿ ಮತ್ತು ಅಭಿವೃದ್ಧಿಯನ್ನು ಸಾರುತ್ತದೆ. ದಶಕಗಳಿಂದ ಈ ಗ್ರಾಮಗಳಲ್ಲಿ ಯಾವುದೇ ರಾಷ್ಟ್ರೀಯ ಹಬ್ಬಗಳನ್ನು ಆಚರಿಸಲಾಗಿಲ್ಲ. ಇದೀಗ ಇವು ಪ್ರಜಾಪ್ರಭುತ್ವ ಹಾಗೂ ಸಾಂವಿಧಾನಿಕ ಚೌಕಟ್ಟಿನೊಳಗೆ ಸಕ್ರಿಯವಾಗಲಿವೆ' ಎಂದರು.

ಭದ್ರತಾ ಪಡೆಗಳ ನಿರಂತರ ಪ್ರಯತ್ನ ಹಾಗೂ ಸ್ಥಳೀಯರ ಸಹಕಾರದಿಂದ ಸಕಾರಾತ್ಮಕ ಪರಿವರ್ತನೆಯು ಸಾಧ್ಯವಾಗಿದೆ. ಕಳೆದ ವರ್ಷ, 13 ಗ್ರಾಮಗಳಲ್ಲಿ ಆಗಸ್ಟ್ 15ರಂದು ಸ್ವಾತಂತ್ರ್ಯ ದಿನಾಚರಣೆ ಆಚರಿಸಲಾಯಿತು. ಇದರೊಂದಿಗೆ ಒಟ್ಟು 54 ಗ್ರಾಮಗಳಲ್ಲಿ ರಾಷ್ಟ್ರೀಯ ಹಬ್ಬಗಳ ಆಚರಣೆಯನ್ನು ಪ್ರಾರಂಭಿಸಲಾಗಿದೆ.

41 ಗ್ರಾಮಗಳ ಪೈಕಿ, 13 ಬಿಜಾಪುರ, 18 ನಾರಾಯಣಪುರ ಹಾಗೂ 10 ಗ್ರಾಮಗಳು ಸುಕ್ಮಾ ಜಿಲ್ಲೆಯಲ್ಲಿವೆ.

ಪ್ರಧಾನಿ ಮೋದಿ ಅವರ ಮನದ ಮಾತು ರೇಡಿಯೊ ಕಾರ್ಯಕ್ರಮವನ್ನು ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ನಿತಿನ್ ನವೀನ್, ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಅವರು ಉತ್ತರ ಪ್ರದೇಶದ ಮಥುರಾದಲ್ಲಿ ಭಾನುವಾರ ಆಲಿಸಿದರು — ಪಿಟಿಐ ಚಿತ್ರ

'ಮನದ ಮಾತಿನಲ್ಲಿ ಸೋಫಾ ತ್ಯಾಜ್ಯ ನಿರ್ವಹಣೆ'

ಪ್ರಜಾವಾಣಿ ವಾರ್ತೆ

ನವದೆಹಲಿ: ಸೋಫಾ ಮತ್ತು ಹಾಸಿಗೆ ತ್ಯಾಜ್ಯದ ಸಮಸ್ಯೆ ನಿವಾರಣೆಗಾಗಿ ಶ್ರಮಿಸುತ್ತಿರುವ ಬೆಂಗಳೂರಿನ ಕೆಲವು ವೃತ್ತಿಪರರ ಪ್ರಯತ್ನಗಳನ್ನು ಪ್ರಧಾನಿ ನರೇಂದ್ರ ಮೋದಿ ಭಾನುವಾರ ಶ್ಲಾಘಿಸಿದರು.

ತಮ್ಮ 'ಮನದ ಮಾತು' ರೇಡಿಯೊ ಮಾಸಿಕ ಕಾರ್ಯಕ್ರಮದಲ್ಲಿ ಮಾತನಾಡಿದ ಪ್ರಧಾನಿ, ದೇಶದ ವಿವಿಧ ಭಾಗಗಳಲ್ಲಿ ಹಲವು ಗುಂಪುಗಳು ತಮ್ಮ ಪ್ರದೇಶಗಳನ್ನು ಸ್ವಚ್ಛವಾಗಿಟ್ಟುಕೊಳ್ಳಲು ನಡೆಸಿರುವ ಪ್ರಯತ್ನಗಳನ್ನು ಉಲ್ಲೇಖಿಸಿದರು.

'ಬೆಂಗಳೂರಿನಲ್ಲಿ ಸೋಫಾ ತ್ಯಾಜ್ಯ ದೊಡ್ಡ ಸಮಸ್ಯೆ ಆಗಿದೆ. ಕೆಲವು ವೃತ್ತಿಪರರು ಈ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಲು ತಮ್ಮದೇ ಆದ ಹೊಸ ಮಾರ್ಗವೊಂದನ್ನು ಕಂಡುಕೊಂಡಿದ್ದಾರೆ. ಇದಕ್ಕಾಗಿ ಹಲವರು ಒಟ್ಟುಗೂಡಿದ್ದಾರೆ' ಎಂದು ಹೇಳಿದರು.

ಇದೇ ಸಂದರ್ಭ ಅರುಣಾಚಲ ಪ್ರದೇಶದ ಜನರ ಪ್ರಯತ್ನವನ್ನು ಮೋದಿ ಅವರು ಮುಕ್ತಕಂಠದಿಂದ ಶ್ಲಾಘಿಸಿದರು.

ಇಟಾನಗರದ ಕೆಲವು ಪ್ರದೇಶಗಳಲ್ಲಿ ಕಸದ ರಾಶಿಯೇ ಬೀಳುತ್ತಿತ್ತು. ಇದನ್ನು ಗಮನಿಸಿದ ಯುವಕರ ಗುಂಪು ಸ್ವಚ್ಛತೆಗೆ ಮುಂದಾಯಿತು. ಆ ಪ್ರದೇಶ ಸ್ವಚ್ಛವಾದೊಡನೆ ಇಡೀ ನಗರಕ್ಕೆ ತನ್ನ ಅಭಿಯಾನ ವಿಸ್ತರಿಸಿತು. ಇದು ಅಕ್ಕಪಕ್ಕದ ನಗರಗಳಿಗೂ ವಿಸ್ತರಣೆಗೊಂಡಿತು. ಇಟಾನಗರವು ಸೇರಿದಂತೆ ನಹರ್ಲಗುನ್, ದೋಯಿಮುಖ್, ಸೆಪ್ಪಾ, ಪಾಲಿನ್, ಪಾಸಿಘಾಟ್‌ನಲ್ಲೂ ಸ್ವಚ್ಛತೆ ಕೈಗೊಂಡಿದ್ದರಿಂದ 11 ಲಕ್ಷ ಕೆ.ಜಿ ಕಸ ಸಂಗ್ರಹಗೊಂಡಿತು ಎಂದು ಹೇಳಿದರು.

ಅಸ್ಸಾಂನ ನಾಗೋನ್‌ನ ಜನರು ತಮ್ಮೂರಿನ ಹಳೆಯ ಬೀದಿಗಳ ಜೊತೆ ಭಾವನಾತ್ಮಕ ಸಂಬಂಧ ಹೊಂದಿದ್ದಾರೆ. ಬೀದಿಗಳನ್ನು ಇಲ್ಲಿನ ಜನರೇ ಸ್ವಚ್ಛಗೊಳಿಸುತ್ತಿದ್ದಾರೆ. ಈ ಕಾಯಕಕ್ಕೆ ಹಲವರು ಕೈಜೋಡಿಸಿದ್ದು, ಇಲ್ಲಿನ ಬೀದಿಗಳು ಸ್ವಚ್ಛವಾಗಿವೆ ಎಂದು ಮೋದಿ ತಮ್ಮ ಮನದ ಮಾತಿನಲ್ಲಿ ಪ್ರಸ್ತಾಪಿಸಿದರು.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

✗ **ಭಾರತ ಕ್ರಿಕೆಟ್** ತಂಡದ ಸದಸ್ಯ ಮೊಹಮ್ಮದ್ ಸಿರಾಜ್ ಅವರು ರಾಜ್‌ಕೋಟ್ ಕ್ರೀಡಾಂಗಣದಲ್ಲಿ ನಮಾಜ್ ಮಾಡುತ್ತಿರುವುದು ಮತ್ತು ಅವರ ಹಿಂದಿನಿಂದ ತಂಡದ ಇತರ ಸದಸ್ಯರಾದ ರೋಹಿತ್ ಶರ್ಮಾ, ವಿರಾಟ್ ಕೊಹ್ಲಿ, ಜಸ್ಪ್ರೀತ್ ಬೂಮ್ರಾ, ಕೋಚ್ ಗೌತಮ್ ಗಂಭೀರ್ ಹಾಗೂ ಇತರರು ಅದನ್ನು ಮೊಬೈಲ್‌ನಲ್ಲಿ ಸೆರೆ ಹಿಡಿಯುತ್ತಿರುವ ಚಿತ್ರವನ್ನು 'za cricket life' ಎಂಬ ಫೇಸ್‌ಬುಕ್ ಖಾತೆಯಲ್ಲಿ ಜ. 15ರಂದು ಪೋಸ್ಟ್ ಮಾಡಲಾಗಿದೆ. ಆದರೆ, ಇದು ಸುಳ್ಳು.

✓ **ಚಿತ್ರವನ್ನು** ಗೂಗಲ್ ಲೆನ್ಸ್‌ನಲ್ಲಿ ಹಾಕಿದಾಗ, ಹಲವರು ಇದೇ ಪೋಸ್ಟ್ ಅನ್ನು ಹಂಚಿಕೊಂಡಿರುವುದು ಕಂಡು ಬಂತು. ಮುಂದಿನ ಹಂತದಲ್ಲಿ ನಿರ್ದಿಷ್ಟ ಪದಗಳನ್ನು ಬಳಸಿ ಹುಡುಕಾಟ ನಡೆಸಿದಾಗ, ಮೈದಾನದಲ್ಲಿ ಸಿರಾಜ್ ನಮಾಜ್ ಮಾಡಿರುವ ಬಗ್ಗೆ ವಿಶ್ವಾಸಾರ್ಹ ಮಾಹಿತಿ, ವರದಿಗಳು ಸಿಗಲಿಲ್ಲ. ಸಿರಾಜ್ ಮತ್ತು ಬಿಸಿಸಿಐನ ಅಧಿಕೃತ ಸಾಮಾಜಿಕ ಜಾಲತಾಣಗಳ ಖಾತೆಗಳಲ್ಲಿ ಪರಿಶೀಲಿಸಿದಾಗಲೂ ಈ ಬಗ್ಗೆ ಯಾವುದೇ ಪೋಸ್ಟ್ ಕಂಡು ಬರಲಿಲ್ಲ. ಚಿತ್ರವನ್ನು ಕೂಲಂಕಷವಾಗಿ ಪರಿಶೀಲಿಸಿದಾಗ, ಸಿರಾಜ್ ಅವರ ಜರ್ಸಿಯಲ್ಲಿ ಡ್ರೀಮ್11 ಲಾಂಛನ ಇತ್ತು. ಈಗ ಅಪೋಲೊ ಟೈರ್ಸ್ ಭಾರತ ಕ್ರಿಕೆಟ್ ತಂಡದ ಪ್ರಾಯೋಜಕತ್ವ ಹೊಂದಿದೆ. ರಾಜ್‌ಕೋಟ್‌ನಲ್ಲಿ 14ರಂದು ನಡೆದ ಪಂದ್ಯದಲ್ಲಿ ಭಾರತ ತಂಡದಲ್ಲಿ ಜಸ್ಪ್ರೀತ್ ಬೂಮ್ರಾ ಇರಲಿಲ್ಲ. ಅಲ್ಲದೇ ಈ ಚಿತ್ರವು ಡಿಜಿಟಲ್ ತಂತ್ರಜ್ಞಾನದಲ್ಲಿ ಸೃಷ್ಟಿಸಿರುವ ಚಿತ್ರಗಳನ್ನು ಹೋಲುತ್ತಿದೆ. ಹೀಗಾಗಿ ಎಐ ಪತ್ತೆ ಟೂಲ್ ಹೈವ್ ಮಾಡರೇಷನ್ ಮೂಲಕ ಅದನ್ನು ಪರಿಶೀಲನೆಗೆ ಒಳಪಡಿಸಿದಾಗ, ಅದು ಎಐ ಚಿತ್ರ ಎಂಬುದು ದೃಢಪಟ್ಟಿತು ಎಂದು ಪಿಟಿಐ ಫ್ಯಾಕ್ಟ್‌ಚೆಕ್ ವರದಿ ತಿಳಿಸಿದೆ.

ಹೊಂದಿಕೆಯ ಕಷ್ಟ

ನುಡಿ ಬೆಳಗು — ದಾದಾಪೀರ್ ನವಿಲೇಹಾಳ್

'ಎಷ್ಟು ಕಷ್ಟವೋ ಹೊಂದಿಕೆ ಎಂಬುದು ನಾಲ್ಕು ದಿನದ ಈ ಬದುಕಿನಲಿ' ಎಂಬುದು ರಾಜಮಹಾರಾಜರು, ಮಹಾಮಹಾಜ್ಞಾನಿಗಳಿಂದ ಹಿಡಿದು ಶ್ರೀಸಾಮಾನ್ಯನವರೆಗೂ ಒಂದಿಷ್ಟೂ ಬದಲಾಗದ ವಾಸ್ತವ. ಭಟ್ಟಂಗಿಗಳ ಮಾತು ಕೇಳಿದ ಭರತ ತನ್ನನ್ನು 'ಚಕ್ರವರ್ತಿ ಎಂದು ಒಪ್ಪಿಕೊಳ್ಳಿ, ಇಲ್ಲದಿದ್ದರೆ ಸಮರಕ್ಕೆ ಸಿದ್ಧರಾಗಿ' ಎಂದು ತಮ್ಮಂದಿರಿಗೆಲ್ಲಾ ಆದೇಶ ಹೊರಡಿಸಿದ. ಅಣ್ಣನನ್ನು ಗುರು, ತಂದೆಯ ಸಮಾನ ಎಂದು ಭಾವಿಸಿದ್ದ ತಮ್ಮಂದಿರು ತಪಸ್ಸಿಗೆ ತೆರಳುತ್ತಾರೆ. ಬಾಹುಬಲಿ ಮಾತ್ರ ಯುದ್ಧವನ್ನು ಎದುರಿಸಿ ಗೆದ್ದು ನರಳುತ್ತಾನೆ. 'ದುಂಬಿಯಂತೆ ಚಂಚಲೆಯಾದ ಈ ರಾಜ್ಯಲಕ್ಷ್ಮಿ ನಿನ್ನಲ್ಲೇ ಇರಲಿ. ನೀನು ಒಲಿದಿರುವ ಈ ಲತಾಂಗಿಗೆ, ಧರೆಗೆ ನಾನು ಆಸೆಪಟ್ಟರೆ ನನ್ನ ಕೀರ್ತಿಗೆ ಅಪಚಾರವಲ್ಲವೇ?' ಎಂದು ಹೇಳಿ ಅಣ್ಣನಿಗೆ ವಂದಿಸಿ ಹೊರಡುತ್ತಾನೆ. ಯುದ್ಧದ ಸೋಲಿಗಿಂತ ನೈತಿಕವಾಗಿ ಎದುರಾದ ಬಿಕ್ಕಟ್ಟಿನಿಂದ ಚಿತ್ತಕ್ಷೋಭೆಗೆ ಒಳಗಾದ ಭರತ ಕಂಗೆಟ್ಟು ತನ್ನ ಚಕ್ರರತ್ನಕ್ಕೆ ಬಾಹುಬಲಿಯನ್ನು ಕೊಲ್ಲುವಂತೆ ಆದೇಶಿಸುತ್ತಾನೆ. ಮಮತೆಯಿಂದ ಮುಟ್ಟುವ, ಕಂಡು ಕರಗುವ, ಗುಣಗ್ರಾಹಿಯಾದ, ನಿಜವನ್ನು ನುಡಿಯಬೇಕಾದ ನಾಲಗೆಯಿರುವ ಮನುಷ್ಯನಿಗೇ ಅರಿವಾಗದಂತಹ ಇಂದ್ರಿಯಾತೀತ ನ್ಯಾಯಸೂಚಕ ಪ್ರಜ್ಞೆಯೊಂದು ಚಕ್ರರತ್ನದ ಕಕ್ಷೆಯುದ್ದಕ್ಕೂ ಕ್ರಿಯಾಶೀಲವಾಗಿ ಬಾಹುಬಲಿಯ ಕಾಲಬುಡದಲ್ಲಿ ಬಿದ್ದು ವಿರಮಿಸುತ್ತದೆ. ಕವಿಸೃಷ್ಟಿಯ ಅಪೂರ್ವ ನೈತಿಕ ನಿಷ್ಠೆಯ ಈ ವಿವೇಕವನ್ನು ಕಡೆಗಣಿಸುತ್ತಲೇ ಬಂದ ಪರಿಣಾಮವಾಗಿ ಮನುಷ್ಯರ ನಡುವಿನ ಸೋದರ ಸಂಬಂಧ ಹಳಸುತ್ತಲೇ ಸಾಗಿದೆ.

ಡಿಜಿಟಲ್ ಯುಗದ ವರ್ತಮಾನ ಪ್ರಜಾಪ್ರಭುತ್ವದ ಆತ್ಮದಂತಿರುವ ಸ್ವಾತಂತ್ರ್ಯ, ಸಮಾನತೆ ಮತ್ತು ಸಹೋದರತೆಗಳಿಗೆ ಎರವಾಗುತ್ತಿದೆಯೇನೋ ಎಂಬ ಆತಂಕ ಕಾಡುತ್ತಿದೆ. ಗಣರಾಜ್ಯವನ್ನು ರಕ್ಷಿಸಿಕೊಳ್ಳಲು ಉಳಿದೆರಡು ಮೌಲ್ಯಗಳ ಜೊತೆಗೆ ಸ್ವಾತಂತ್ರ್ಯವನ್ನು ಜೀವಂತವಾಗಿಟ್ಟುಕೊಳ್ಳುವುದು ಮುಖ್ಯ. ಸಮಾನತೆಯನ್ನು ಕೇವಲ ಸ್ಕೂಲ್ ಯೂನಿಫಾರ್ಮ್ ಹಂತಕ್ಕೆ ತಂದಿಟ್ಟು ಅದರ ಆಳವನ್ನು ಹಳ್ಳಹಿಡಿಸಲಾಗಿದೆ. ಇನ್ನು ಸಹೋದರತ್ವವು ಮನೋವ್ಯಾಪಾರವಾಗದೆ ವ್ಯವಹಾರವಾಗಿದೆ. ಅಲ್ಲದೆ ಹಳ್ಳಿ–ನಗರಗಳೆಂಬ ವ್ಯತ್ಯಾಸವೇ ಇಲ್ಲದಂತೆ ಯಾವುದು ಸರಿ ಯಾವುದು ತಪ್ಪು ಎನ್ನುವ ನೈತಿಕತೆಗಿಂತ ಯಾವುದು ಲಾಭದಾಯಕ, ಯಾವುದು ಅಲ್ಲ ಎಂಬ ಲೆಕ್ಕಾಚಾರವನ್ನು ಅವಲಂಬಿಸಿದೆ. ಹೆಣ್ಣುಮಕ್ಕಳಿಗೆ ಪಿತ್ರಾರ್ಜಿತ ಆಸ್ತಿ ಕೊಡುವ ಅನಗತ್ಯ ಸಂಕಟದಲ್ಲಿ ಅಣ್ಣತಮ್ಮ-ಅಕ್ಕತಂಗಿಯರ ಸಂಬಂಧಗಳು ಸಡಿಲಗೊಂಡಿವೆ. ನೌಕರಿ ನೆಪದಲ್ಲಿ ಹಳ್ಳಿ ಬಿಟ್ಟು ಹೋದವರು ಅಪ್ಪನ ಆಸ್ತಿಯನ್ನು ಉಳಿದವರ ಜೊತೆ ಸಮಾನವಾಗಿ ಹಂಚಿಕೊಂಡಿದ್ದಾರೆ. ಅಪರೂಪಕ್ಕೊಮ್ಮೆ ತೋಟ ನೋಡಲು ಊರಿಗೆ ಬಂದರೆ ಮುನಿಸಿಕೊಂಡ ಸಹೋದರರಿಗೆ ಮುಖ ತೋರಿಸಲಾಗುವುದಿಲ್ಲ. ನೌಕರಿಯಲ್ಲಿದ್ದ ಅಣ್ಣನೋ ತಮ್ಮನೋ ಊರಿಗೆ ಬಂದು ಮನೆಗೆ ಬರದೇ ಹೋದನಲ್ಲಾ ಅನ್ನುವ ಸಂಕಟ ಅವರಿಗೂ ಕಾಡುವುದಿಲ್ಲ. ಸ್ವಂತ ಊರಿಗೆ ಬಂದರೂ ಬುತ್ತಿ ಕಟ್ಟಿಕೊಂಡು ಬರುವ ಪರಿಸ್ಥಿತಿ. ಒಂದೇ ಕುಟುಂಬದ ಒಳಗಿನ ಸೋದರ ಸಂಬಂಧಗಳು ಹೊಂದಾಣಿಕೆ ಇಲ್ಲದೆ ಅರ್ಥ ಕಳೆದುಕೊಂಡಿವೆ. ಹಾಗೆ ನೋಡಿದರೆ ದೇಶದ ನಾನಾ ಜಾತಿ, ಧರ್ಮ, ಭಾಷೆ, ಬಣ್ಣಗಳ ಜನರ ನಡುವಿನ ಸೋದರ ಸಂಬಂಧಗಳೇ ಹೆಚ್ಚು ಗಟ್ಟಿಯಾಗಿವೆ. ಮಾತುಕತೆ, ವ್ಯವಹಾರವೂ ಸೇರಿದಂತೆ ಧಾರ್ಮಿಕ, ಸಾಂಸ್ಕೃತಿಕ ನಂಬಿಕೆಗಳ ವಿಷಯದಲ್ಲಿ ಭಾವನಾತ್ಮಕ ಹೊಂದಾಣಿಕೆ ನಮ್ಮ ನಡುವಿನ ಐಕ್ಯತೆಗೆ ಸಾಕ್ಷಿ. ಸೋದರಸಂಬಂಧವನ್ನು ಗಟ್ಟಿಗೊಳಿಸುವ ನಿರಂತರ ಕ್ರಿಯೆಗಳ ಮೂಲಕವೇ ಬಹುಸಂಸ್ಕೃತಿಯ ನಮ್ಮ ನಾಡಿನ ಅಸ್ಮಿತೆಯನ್ನು ಕಾಪಿಟ್ಟುಕೊಳ್ಳಬೇಕು. ಹತ್ತಿರವಿದ್ದೂ ದೂರ ನಿಲ್ಲುವ ನಮ್ಮ ಅಹಮ್ಮಿನ ಕೋಟೆಯನ್ನು ನಾವು ನಿತ್ಯವೂ ಕೆಡವುತ್ತಾ ಸ್ನೇಹ ಸಲುಗೆಯ ಸೋದರ ಸೇತುವೆಯನ್ನು ಕಟ್ಟುತ್ತಲೇ ಸಾಗಬೇಕು. ಕೆಡಹುವ ವಿಕೃತಿ ಸೋಲಬೇಕು, ಕಟ್ಟುವ ಸಂಸ್ಕೃತಿ ಗೆಲ್ಲಬೇಕು. ಕೆಡಹುವವರ ಸುಗ್ಗಿ ಕಾಲದಲ್ಲಿ ಕಟ್ಟುವವರ ದನಿ ಕ್ಷೀಣವಾಗಬಾರದು. ❖

ಪದಬಂಧ 6296

ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಮರವನ್ನೂ ಕೊಚ್ಚಿಕೊಂಡು ಹೋದ ದೊಡ್ಡ ಪ್ರವಾಹ (4)
3.ಈತ ಅನುಭವವುಳ್ಳವನು (4)
5.ಕೊನೆಗೆ ಬೆಲೆಯನ್ನಿಟ್ಟಾಗಿನ ಸಲುಗೆ (3)
6.ಭ್ರೂಣವನ್ನು ಆವರಿಸಿರುವ ಪೊರೆ (3)
8.ನಿಕಟ ಸಂಪರ್ಕವಿದು (3)
10.ಒಂದೇ ವಿಷಯದಲ್ಲಿ ಮನಸ್ಸು ನೆಟ್ಟಿರುವಿಕೆ (3)
11.ಕಾಗೆ ಇಲ್ಲಿಗೆ ಹಾರಿ ಬಂದಿದೆ (3)
13.ಅಳುವಿನೊಂದಿಗೆ ಹೆದರಿಕೆಯೂ ಬಂದಿದೆ! (3)
15.ಪೂರ್ವದ ಸ್ಥಿತಿಯಿದು (4)
16.ಯುದ್ಧದ ನಗಾರಿಯಿದು (4)

ಮೇಲಿಂದ ಕೆಳಕ್ಕೆ
1.ಮಜದಲ್ಲಿರುವ ಚಕ್ರವರ್ತಿ (4)
2.ರಸದಲ್ಲಿನ ಜೋರು (3)
3.ಸುರನ ಹತ್ತಿರ ಬಂದಿರುವ ರಾಕ್ಷಸ (3)
4.ಕೊನೆಗೆ ಯೋಗವಿದ್ದದ್ದಕ್ಕೇ ಈ ಹಂಚಿಕೆ (4)
7.ರಜೋಗುಣಕ್ಕೆ ಸಂಬಂಧಪಟ್ಟದ್ದು (3)
9.ಪಾವತಿಯನ್ನು ಹೀಗೆನ್ನಿ (3)
10.ಹುಟ್ಟುವಳಿ ಮತ್ತು ವೆಚ್ಚ (4)
12.ಒಳ್ಳೆಯ ಆಚಾರವುಳ್ಳವನು (4)
13.ದೇವತೆಗಳ ಜನನಿ (3)
14.ಗುಡಿಸಲು ಇಲ್ಲಿದೆ (3)



6295ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಗೊತ್ತುಗುರಿ 3.ಈಹಾಮೃಗ
5.ಗಾನಕಲೆ 7.ವಿನ್ಯಾಸ
8.ಅಂತರ್ದೇಶಿಯ 11.ಬರಲು
12.ರಸಹೀನ 14.ರಿಕ್ತಹಸ್ತ
15.ಅಪಘಾತ

ಮೇಲಿಂದ ಕೆಳಕ್ಕೆ:
1.ಗೋಣಗಾಟ 2.ಗಲಸ
4.ವಿರಸ 6.ಲೆಪ್ಪತ
7.ವಿನಯ 8.ಅಂಗಾಲು
9.ಶೀಕರ 10.ಜನಹಿತ
11.ಬತೇರಿ 13.ಸಲ್ಲಾಪ

ಸುಡೊಕು 6680

ಆಡುವುದು ಹೀಗೆ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

	4		2		9	6		1
9						2	7	4
	7	2	1		4			8
		4		3		1		2
2	8		6	9			4	
		7					6	5
	5							7
		6	8		2			
4	2			5		8		

6679 ಸುಡೊಕು

3	5	1	7	4	2	9	8	6
6	9	2	1	5	8	3	7	4
4	7	8	3	6	9	2	1	5
1	6	4	8	9	5	7	2	3
9	2	5	4	3	7	8	6	1
8	3	7	6	2	1	4	5	9
2	1	3	9	7	6	5	4	8
5	4	6	2	8	3	1	9	7
7	8	9	5	1	4	6	3	2

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ

26 ಜನವರಿ 2026 ಸೋಮವಾರ, ಶ್ರೀ ವಿಶ್ವಾವಸು ನಾಮ ಸಂವತ್ಸರ ಉತ್ತರಾಯಣ ಶಿಶಿರ ಋತು ತಿಥಿ: ಮಾಘ ಶುಕ್ಲ ಅಷ್ಟಮಿ ಗಂ. 21-19 ನಕ್ಷತ್ರ: ಅಶ್ವಿನಿ ಗಂ. 12-33 ಯೋಗ: ಸಾಧ್ಯ ಗಂ. 9-12 ನಂತರ ಶುಭ ಗಂ 30- 20 ಕರಣ: ವಿಷ್ಟಿ ಗಂ. 10-17 ಮಕರ ಮಾಸದ 12 ನೇ ದಿನ. ಮಳೆ ನಕ್ಷತ್ರ : ಶ್ರವಣ 1 ನೇ ಪಾದ. ರಾಹುಕಾಲ : ಬೆಳಿಗ್ಗೆ 07-30 -09-00 ಸೂರ್ಯೋದಯ : 07-01 ಸೂರ್ಯಾಸ್ತ : 06-24, ಮುಸ್ಲಿಂ ದಿನಾಂಕ : 6 ಶಬನ್, ದಿನ ವಿಶೇಷ : ಗಣರಾಜ್ಯೋತ್ಸವ, ಅದೃಷ್ಟ ಸಂಖ್ಯೆ : 1, 3

ಮೇಷ: ಕ್ರೀಡಾಪಟುಗಳು ತಮ್ಮ ಕ್ರೀಡೆಯಲ್ಲಿ ಉತ್ತಮ ಪ್ರದರ್ಶನ ನೀಡಿ ಅಪೇಕ್ಷಿತ ಜಯವನ್ನು ಹೊಂದುವಿರಿ. ಪ್ರಾಧ್ಯಾಪಕರಿಗೆ ಮತ್ತು ತಾಂತ್ರಿಕ ವಿಷಯಗಳ ಸಲಹೆಗಾರರಿಗೆ ಶುಭ ದಿನ. ಧನಲಾಭ ಉಂಟಾಗಲಿದೆ.

ವೃಷಭ: ಮನೆಯ ಹಿರಿಯರ ಮಧ್ಯಸ್ತಿಕೆಯಿಂದ ವಿವಾದಗಳು ಬಗೆಹರಿಯಲಿವೆ. ಇಷ್ಟ ಬಂಧುಗಳಿಂದ ವಿಶೇಷ ವಸ್ತು ಉಡುಗೊರೆಯ ರೂಪದಲ್ಲಿ ದೊರೆಯುವುದು. ಹಸಿರು ಬಣ್ಣ ಶುಭ ತರುವುದು.

ಮಿಥುನ: ಕೆಲಸದ ಗುಣಮಟ್ಟವನ್ನು ಹೆಚ್ಚಿಸಿಕೊಳ್ಳಲಿಕ್ಕಾಗಿ ತರಬೇತಿಗಳನ್ನು ತೆಗೆದುಕೊಳ್ಳಲು ಯೋಚನೆ ನಡೆಸುವಿರಿ. ಭೂ ವ್ಯವಹಾರದಲ್ಲಿ ಉತ್ತಮ ಲಾಭವಿದೆ. ಕಾನೂನು ಸಮಸ್ಯೆಗಳೆಲ್ಲಾ ಬಗೆಹರಿಯಲಿವೆ.

ಕರ್ಕಾಟಕ: ಆರ್ಥಿಕ ಸ್ಥಿತಿಯಲ್ಲಿ ಯಾವುದೇ ತಾಪತ್ರಯಗಳಿಲ್ಲದೆ ವ್ಯಾಪಾರ ಹಂತ ಹಂತವಾಗಿ ಅಭಿವೃದ್ಧಿಯಾಗಲಿದೆ. ಬೆಲೆಬಾಳುವ ವಸ್ತುವಿನ ಖರೀದಿಯಿಂದ ಹಿರಿಯರು ಮುನಿಸಿಕೊಳ್ಳುವರು.

ಸಿಂಹ: ಇಂದಿನ ಅಪರೂಪದ ಮೃದು ಧೋರಣೆ ಸಿಬ್ಬಂದಿ ವರ್ಗಕ್ಕೆ ಸಂತೋಷವೆನಿಸುವುದು. ಜಾಹೀರಾತುಗಳಲ್ಲಿ ತೋರಿಸಿದ್ದನ್ನು ಪರಿಶೀಲಿಸದೇ ನಂಬಿ ಹಣವ್ಯಯ ಮಾಡಿದಲ್ಲಿ ಮೋಸ ಹೋಗಲಿದ್ದೀರಿ.

ಕನ್ಯಾ: ಯಾವುದರಲ್ಲಾದರೂ ನೀವು ಗೆಲುವನ್ನು ಬಯಸುತ್ತಿದ್ದರೆ ಆಲಸ್ಯತನ ಬಿಟ್ಟು ಗುರಿ ತಲುಪಲು ಶ್ರಮಿಸಬೇಕು. ವ್ಯವಹಾರದಲ್ಲಿ ಪರಿಶ್ರಮದಿಂದಾಗಿ ಕಲ್ಪನೆಗೂ ಮೀರಿದ ಲಾಭವನ್ನು ಗಳಿಸುವಿರಿ.

ತುಲಾ: ಹೊಸ ಪ್ರಯತ್ನಗಳಲ್ಲಿ ಯಾರ ಸಹಕಾರವೂ ಸಿಗದೆ ಹಿನ್ನಡೆಯಾಗುವ ಸಾಧ್ಯತೆ ಇದೆ. ಸಂಗೀತಾಭ್ಯಾಸಿಗರಿಗೆ ದೊಡ್ಡ ವೇದಿಕೆಯಲ್ಲಿ ಗಾಯನ ಪ್ರದರ್ಶಿಸುವ ಅವಕಾಶ ದೊರೆಯುತ್ತದೆ.

ವೃಶ್ಚಿಕ: ಆದಾಯ ಎಲ್ಲರ ಕಣ್ಣಿಗೂ ಅಧಿಕವಾಗಿ ಕಂಡರೂ ಅಧಿಕವಾದ ಖರ್ಚು ಇರುವುದರಿಂದ ಉಳಿತಾಯ ಸಾಧ್ಯವಾಗುವುದಿಲ್ಲ. ಮಗನಿಗೆ ಪರಿಶ್ರಮವಿಲ್ಲದೇ ಕೆಲಸ ದೊರೆತಿದ್ದಕ್ಕೆ ಕುಟುಂಬ ಸಂತಸದಲ್ಲಿರುವುದು.

ಧನು: ಆರೋಗ್ಯದಲ್ಲಿ ಏರುಪೇರಾಗುವ ಲಕ್ಷಣ ಇರಲಿದೆ. ಆತಂಕಕ್ಕೆ ಒಳಗಾಗಬೇಡಿ. ವೈದ್ಯರ ಸಹಾಯವಿಲ್ಲದೆಯೂ ಗುಣಮುಖರಾಗುವಿರಿ. ನಟ ನಟಿಯರಿಗೆ ಹೆಚ್ಚಿನ ಅವಕಾಶಗಳು ದೊರೆಯಲಿವೆ.

ಮಕರ: ಉದಯೋನ್ಮುಖ ಸಾಹಿತಿಗಳಿಗೆ ಚಿಂತನಾಶೀಲತೆಯನ್ನು ಅಭಿವೃದ್ಧಿ ಪಡಿಸಿಕೊಳ್ಳಬೇಕೆಂಬ ಸಲಹೆಗಳು ಅಭಿಮಾನಿಗಳ ಕಡೆಯಿಂದ ಬರಬಹುದು. ಪುಸ್ತಕ ಮುದ್ರಕ ಹಾಗೂ ಮಾರಾಟಗಾರರಿಗೆ ಅಧಿಕ ಕೆಲಸ ಇರುತ್ತದೆ.

ಕುಂಭ: ದೊಡ್ಡ ಕಂಪನಿಗಳಲ್ಲಿ ಕೆಲಸ ಹೊಂದಬೇಕೆಂಬ ಆಸೆ ಹೊಂದಿರುವವರು ಸಣ್ಣ ಕಂಪನಿಗಳಲ್ಲಿ ಉದ್ಯೋಗ ಅನುಭವವನ್ನು ಹೊಂದಿದ ನಂತರ ಅಂಥ ಪ್ರಯತ್ನ ಮಾಡಿ.

ಮೀನ: ಇತರರಿಗೆ ಸಹಾಯ ಮಾಡಲೆಂದು ಹೋದ ನಿಮಗೆ ಸಂಕೋಚದ ಸ್ವಭಾವದಿಂದ ಆರ್ಥಿಕವಾಗಿ ನಷ್ಟವಾಗಬಹುದು. ಸತ್ಯ ಮಾರ್ಗದಿಂದ ಕಾರ್ಯ ಪ್ರವೃತ್ತರಾದಲ್ಲಿ ಅಭಿವೃದ್ಧಿ ಅನುಭವಕ್ಕೆ ಬರಲಿದೆ.

ಗುಂಡಣ್ಣ

ರಷ್ಯಾ: ಕಚ್ಚಾ ತೈಲ ಆಮದು ಇಳಿಕೆ

ಇರಾಕ್‌ನಿಂದ 9.04 ಲಕ್ಷ ಬ್ಯಾರಲ್ ಕಚ್ಚಾ ತೈಲ ಆಮದು

ನವದೆಹಲಿ (ಪಿಟಿಐ): ಭಾರತವು ಜನವರಿ ತಿಂಗಳಿನಲ್ಲಿ ಆಮದು ಮಾಡಿಕೊಂಡ ಕಚ್ಚಾ ತೈಲದಲ್ಲಿ ರಷ್ಯಾದ ಪಾಲು ಇಳಿಕೆ ಆಗಿದೆ ಎಂದು ಜಾಗತಿಕ ವ್ಯಾಪಾರ ವಿಶ್ಲೇಷಣಾ ಸಂಸ್ಥೆ ಕೆಪ್ಲರ್ ಸಿದ್ಧಪಡಿಸಿರುವ ವರದಿ ಹೇಳಿದೆ.

2025ರ ಮಧ್ಯಭಾಗದಲ್ಲಿ ರಷ್ಯಾದಿಂದ ಪ್ರತಿದಿನದ ಕಚ್ಚಾ ತೈಲ ಆಮದು 20 ಲಕ್ಷಕ್ಕೂ ಹೆಚ್ಚು ಬ್ಯಾರಲ್ ನಷ್ಟಿತ್ತು. ಇದು ಡಿಸೆಂಬರ್ ತಿಂಗಳಿನಲ್ಲಿ 12.1 ಲಕ್ಷ ಬ್ಯಾರಲ್‌ನಷ್ಟಿದ್ದರೆ, ಜನವರಿ ತಿಂಗಳ ಮೊದಲ ಮೂರು ವಾರಗಳಲ್ಲಿ ಸುಮಾರು 11 ಲಕ್ಷ ಬ್ಯಾರಲ್‌ಗೆ ಇಳಿದಿದೆ ಎಂದು ತಿಳಿಸಿದೆ.

2025ರ ಡಿಸೆಂಬರ್‌ನಲ್ಲಿ ಇರಾಕ್ ಪ್ರತಿದಿನ ಅಂದಾಜು 9.04 ಲಕ್ಷ ಬ್ಯಾರಲ್ ಕಚ್ಚಾ ತೈಲವನ್ನು ಭಾರತಕ್ಕೆ ಪೂರೈಕೆ ಮಾಡಿದೆ. ಜನವರಿಯಲ್ಲಿ ಸೌದಿ ಅರೇಬಿಯಾ 9.24 ಲಕ್ಷ ಬ್ಯಾರಲ್ ಪೂರೈಸಿದೆ. ಇದು ಡಿಸೆಂಬರ್‌ನಲ್ಲಿ 7.10 ಲಕ್ಷ ಬ್ಯಾರಲ್‌ನಷ್ಟಿದ್ದರೆ, ಕಳೆದ ಏಪ್ರಿಲ್‌ನಲ್ಲಿ 2.39 ಲಕ್ಷ ಬ್ಯಾರಲ್‌ನಷ್ಟಿತ್ತು.

2022ರಲ್ಲಿ ಭಾರತಕ್ಕೆ ಕಚ್ಚಾ ತೈಲ ಪೂರೈಕೆ ಮಾಡುವುದರಲ್ಲಿ ಇರಾಕ್ ಅಗ್ರ ಸ್ಥಾನದಲ್ಲಿತ್ತು. ಆದರೆ, ಉಕ್ರೇನ್ ಯುದ್ಧ ಆರಂಭವಾದ ನಂತರದಲ್ಲಿ ರಷ್ಯಾ ಕಚ್ಚಾ ತೈಲಕ್ಕೆ ಹೆಚ್ಚಿನ ರಿಯಾಯಿತಿ ನೀಡಲು ಮುಂದಾಗಿದ್ದರಿಂದ ತೈಲ ಸಂಸ್ಕರಣಾ ಕಂಪನಿಗಳು ರಷ್ಯಾದಿಂದ ಅದನ್ನು ಖರೀದಿಸಲು ಮುಂದಾದವು. ಇದರಿಂದ ರಷ್ಯಾದಿಂದ ಕಚ್ಚಾ ತೈಲ ಖರೀದಿ ಪ್ರಮಾಣವು ದೇಶದ ಒಟ್ಟು ಕಚ್ಚಾ ತೈಲ ಖರೀದಿಯ ಶೇ 40ಕ್ಕೆ ಹೆಚ್ಚಳವಾಯಿತು.

ಆದರೆ, ಈಗ ರಷ್ಯಾದ ತೈಲ ಪೂರೈಕೆದಾರರ ಮೇಲೆ ಅಮೆರಿಕ ಹೇರಿರುವ ನಿರ್ಬಂಧದ ಕಾರಣದಿಂದಾಗಿ ಖರೀದಿ ಪ್ರಮಾಣವು ಇಳಿಕೆಯಾಗಿದೆ ಎಂದು ವರದಿ ತಿಳಿಸಿದೆ.

'ಕಚ್ಚಾ ತೈಲದ ವಿಚಾರವಾಗಿ ಕಡಿಮೆ ಅನಿಶ್ಚಿತತೆ ಹೊಂದಿರುವ ಮತ್ತು ಹೆಚ್ಚು ವಿಶ್ವಾಸಾರ್ಹವಾಗಿರುವ ರಾಷ್ಟ್ರಗಳಿಂದ ಖರೀದಿಸಲು ಭಾರತವು ಮುಂದಾಗಿದೆ. ಪಶ್ಚಿಮ ಏಷ್ಯಾ ರಾಷ್ಟ್ರಗಳಿಂದ ಕಚ್ಚಾ ತೈಲ ಖರೀದಿ ಹೆಚ್ಚಾಗುತ್ತಿದೆ. ಆದರೆ ರಷ್ಯಾದಿಂದ ಕಚ್ಚಾ ತೈಲ ಖರೀದಿಸುವುದು ನಿಂತಿಲ್ಲ' ಎಂದು ಕೆಪ್ಲರ್‌ನ ಪ್ರಮುಖ ಸಂಶೋಧನಾ ವಿಶ್ಲೇಷಕ (ಸಂಸ್ಕರಣೆ ಮತ್ತು ಮಾಡೆಲಿಂಗ್) ಸುಮಿತ್ ರಿಟೋಲಿಯಾ ಹೇಳಿದ್ದಾರೆ.

ಭಾರತವು ಈ ವರ್ಷದ ಆರಂಭದಲ್ಲಿ ರಷ್ಯಾದಿಂದ ಕಚ್ಚಾ ತೈಲವನ್ನು ಖರೀದಿಸುವುದನ್ನು ಮುಂದುವರಿಸುವ ಸಾಧ್ಯತೆಯಿದೆ. ಆದರೆ 2023-2025ರಲ್ಲಿ ಖರೀದಿ ಮಾಡಿದ್ದಕ್ಕಿಂತ ಕಡಿಮೆ ಮಟ್ಟದಲ್ಲಿ ಇರುತ್ತದೆ ಎಂದು ತಿಳಿಸಿದ್ದಾರೆ.

ಜನವರಿ ತಿಂಗಳಿನಲ್ಲಿ ರಷ್ಯಾದಿಂದ ಕಚ್ಚಾ ತೈಲ ಖರೀದಿ ದಿನವೊಂದಕ್ಕೆ ಅಂದಾಜು 12 ಲಕ್ಷ ಬ್ಯಾರಲ್ ಇದೆ. ಇದು ಪ್ರಸಕ್ತ ವರ್ಷದ ಮಾರ್ಚ್ ತ್ರೈಮಾಸಿಕದ ವೇಳೆಗೆ ದಿನವೊಂದಕ್ಕೆ 13 ಲಕ್ಷದಿಂದ 15 ಲಕ್ಷ ಬ್ಯಾರಲ್‌ಗೆ ಹೆಚ್ಚಾಗುವ ನಿರೀಕ್ಷೆಯಿದೆ ಎಂದು ಹೇಳಿದ್ದಾರೆ.

ಅವಧಿ ವಿಮೆ ಅನುಕೂಲ ಪಡೆಯುವುದು ಹೇಗೆ?

ಬಂಡವಾಳ ಮಾರುಕಟ್ಟೆ

ಕಾವ್ಯ ಡಿ.
ಚಾರ್ಟರ್ಡ್ ಅಕೌಂಟೆಂಟ್

ಅವಧಿ ವಿಮೆ (ಟರ್ಮ್ ಇನ್ಶೂರೆನ್ಸ್) ತೆಗೆದುಕೊಳ್ಳುವಾಗ ಬಹುತೇಕರು ಕಂತಿನ ಮೊತ್ತ ಕಡಿಮೆ ಇದೆಯೇ ಎಂಬ ಅಂಶಕ್ಕೆ ಹೆಚ್ಚಿನ ಒತ್ತು ನೀಡುತ್ತಾರೆ. ಆದರೆ ವಾಸ್ತವದಲ್ಲಿ ಈ ವಿಮೆ ಖರೀದಿಸಬೇಕಾದರೆ ಆದ್ಯತೆ ನೀಡಬೇಕಾಗಿರುವುದು ವಿಮೆಯ ಕವರೇಜ್ ಮೊತ್ತಕ್ಕೆ. ಸರಿಯಾದ ಅನುಕೂಲಗಳಿಲ್ಲದ ಅವಧಿ ವಿಮೆಯಿಂದ ಸಿಗುವುದು ಅರೆಬರೆ ರಕ್ಷಣೆ ಮಾತ್ರ. ಹಾಗಾದರೆ ಅವಧಿ ವಿಮೆ ಖರೀದಿಸುವಾಗ ಯಾವೆಲ್ಲ ಅಂಶಗಳನ್ನು ಗಮನಿಸಬೇಕು, ಯಾವ ರೈಡರ್‌ಗಳಿಗೆ ಒತ್ತು ನೀಡಬೇಕು ಮತ್ತು ಯಾವ ರೈಡರ್‌ನಿಂದ ಹೆಚ್ಚಿನ ಅನುಕೂಲವಾಗುತ್ತದೆ ಎಂಬುದನ್ನೆಲ್ಲ ಅರಿತು ವಿಮೆ ತೆಗೆದುಕೊಳ್ಳುವುದು ಅವಶ್ಯಕ.

ವಿಮೆ ಖರೀದಿಸುವಾಗ ಮಾಡಬಾರದ 7 ತಪ್ಪುಗಳು

1. ನಿಮಗೆ ಬೇಕಾದಕ್ಕಿಂತ ಕಡಿಮೆ ಮೊತ್ತದ ವಿಮೆ ಮಾಡುವುದು
2. ಪಾಲಿಸಿಯ ಅವಧಿಯನ್ನು ತುಂಬಾ ಕಡಿಮೆ ಇಟ್ಟುಕೊಳ್ಳುವುದು
3. ಧೂಮಪಾನ ಅಥವಾ ಹಳೆಯ ಕಾಯಿಲೆಗಳ ಬಗ್ಗೆ ಮಾಹಿತಿ ಮುಚ್ಚಿಡುವುದು
4. ಉಪಯುಕ್ತ ರೈಡರ್‌ಗಳನ್ನು ನಿರ್ಲಕ್ಷಿಸುವುದು
5. ಕಂತು ಕಡಿಮೆ ಇದೆ ಎಂಬ ಒಂದೇ ಕಾರಣಕ್ಕೆ ಪಾಲಿಸಿ ಆಯ್ಕೆ ಮಾಡುವುದು
6. ಪಾಲಿಸಿ ತೆಗೆದುಕೊಳ್ಳುವುದನ್ನು ಅನಾವಶ್ಯಕವಾಗಿ ಮುಂದೂಡುವುದು
7. ಜೀವನದಲ್ಲಿ ದೊಡ್ಡ ಬದಲಾವಣೆಗಳಾದಾಗ ಕವರ್ ಮೊತ್ತವನ್ನು ಮರುಪರಿಶೀಲಿಸದೇ ಇರುವುದು

ಅನುಕೂಲಗಳು ಮತ್ತು ರೈಡರ್‌ಗಳು

ಟರ್ಮಿನಲ್ ಇಲ್ನೆಸ್ ಬೆನಿಫಿಟ್: ವ್ಯಕ್ತಿಯ ಜೀವಕ್ಕೆ 6 ತಿಂಗಳೊಳಗೆ ಅಪಾಯ ಇದೆ ಎಂಬುದು ವೈದ್ಯಕೀಯವಾಗಿ ದೃಢಪಟ್ಟರೆ, ವಿಮಾ ಕಂಪನಿಯು ಪಾಲಿಸಿಯ ಕವರ್ ಮೊತ್ತದ ಒಂದು ಭಾಗವನ್ನು ಮುಂಚಿತವಾಗಿಯೇ ನೀಡುತ್ತದೆ. ಇದರಿಂದ ಚಿಕಿತ್ಸೆ ಅಥವಾ ಅಗತ್ಯ ವೆಚ್ಚಗಳನ್ನು ನಿರ್ವಹಿಸಲು ಸಹಾಯವಾಗುತ್ತದೆ.

ಲೈಫ್-ಸ್ಟೇಜ್ ಬೆನಿಫಿಟ್: ಮದುವೆ, ಮಗುವಿನ ಜನನ, ಅಥವಾ ಗೃಹ ಸಾಲ ತೆಗೆದುಕೊಳ್ಳುವಂತಹ ಪ್ರಮುಖ ಸಂದರ್ಭಗಳಲ್ಲಿ, ಹೊಸ ವೈದ್ಯಕೀಯ ಪರೀಕ್ಷೆ ಇಲ್ಲದೆ ನಿಮ್ಮ ವಿಮೆ ಕವರ್ ಮೊತ್ತವನ್ನು ಹೆಚ್ಚಿಸಿಕೊಳ್ಳುವ ಅವಕಾಶ.

ಆಟೊ-ಕವರ್ ಕಂಟಿನ್ಯೂಯೇಷನ್: ಒಂದು ವೇಳೆ ನೀವು ಕಂತು ಕಟ್ಟುವುದನ್ನು ಮರೆತರೆ ಅಥವಾ ತಡವಾದರೆ, ಹೆಚ್ಚುವರಿ ಅವಧಿಯ ಒಳಗೆ ಸ್ವಲ್ಪ ಸಮಯದವರೆಗೆ ನಿಮ್ಮ ವಿಮಾ ರಕ್ಷಣೆ ಮುಂದುವರಿಯುತ್ತದೆ.

ತಕ್ಷಣವೇ ಪಾವತಿ: ಕೆಲವು ಪಾಲಿಸಿಗಳಲ್ಲಿ, ಸಾವಿನ ವರದಿ ನೀಡಿದ ತಕ್ಷಣವೇ ಕುಟುಂಬದ ತುರ್ತು ಖರ್ಚುಗಳಿಗೆ ಬಳಸಲು ಕ್ಲೇಮ್ ಮೊತ್ತದ ಒಂದು ಭಾಗವನ್ನು ಮುಂಗಡವಾಗಿ ನೀಡುವ ವ್ಯವಸ್ಥೆ ಇರುತ್ತದೆ.

ಜೀರೋ-ಕಾಸ್ಟ್ ಎಕ್ಸಿಟ್: ಕೆಲವು ವಿಶೇಷ ಅವಧಿ ವಿಮೆ ಯೋಜನೆಗಳು ಅಥವಾ ರಿಟರ್ನ್ ಆಫ್ ಪ್ರೀಮಿಯಂ (ಆರ್‌ಒಪಿ) ಪಾಲಿಸಿಗಳಲ್ಲಿ, ನಿರ್ದಿಷ್ಟ ಷರತ್ತುಗಳಿಗೆ ಒಳಪಟ್ಟು ಪಾಲಿಸಿಯಿಂದ ಹೊರಬಂದಾಗ ನೀವು ಕಟ್ಟಿದ ಕಂತಿನ ಒಂದು ಭಾಗ ಅಥವಾ ಸಂಪೂರ್ಣ ಮೊತ್ತವನ್ನು ವಾಪಸ್ ಪಡೆಯುವ ಅವಕಾಶ ಇರುತ್ತದೆ.

ನೈಜ ಮೌಲ್ಯ ನೀಡುವ ರೈಡರ್‌ಗಳು

ವೇವರ್ ಆಫ್ ಪ್ರೀಮಿಯಂ ರೈಡರ್ (ಕಂತು ಮನ್ನಾ): ಅಂಗವೈಕಲ್ಯ ಅಥವಾ ಗಂಭೀರ ಕಾಯಿಲೆ ಉಂಟಾದರೆ, ಮುಂದಿನ ಕಂತುಗಳನ್ನು ಕಟ್ಟುವ ಅಗತ್ಯವಿರುವುದಿಲ್ಲ. ಪಾಲಿಸಿ ಮುಂದುವರಿಯುತ್ತದೆ ಮತ್ತು ಕಂತಿನ ಹೊಣೆಯನ್ನು ಕಂಪನಿಯೇ ವಹಿಸಿಕೊಳ್ಳುತ್ತದೆ.

ಗಂಭೀರ ಕಾಯಿಲೆಗಳು ಬಂದಾಗ: ಕ್ಯಾನ್ಸರ್, ಹೃದಯಾಘಾತ, ಕಿಡ್ನಿ ವೈಫಲ್ಯ ಮೊದಲಾದ ಗಂಭೀರ ಕಾಯಿಲೆಗಳು ಪತ್ತೆಯಾದಾಗ, ಚಿಕಿತ್ಸೆಗಾಗಿ ಒಟ್ಟಾರೆ ಒಂದು ನಿಗದಿತ ಮೊತ್ತದ ಹಣ ಸಿಗುತ್ತದೆ.

ಶಾಶ್ವತ ಅಂಗವೈಕಲ್ಯ: ಅಪಘಾತದಿಂದ ಶಾಶ್ವತ ಅಂಗವೈಕಲ್ಯ ಉಂಟಾಗಿ ಕೆಲಸ ಮಾಡಲು ಸಾಧ್ಯವಾಗದ ಸ್ಥಿತಿಯಲ್ಲಿ, ಆದಾಯದ ರಕ್ಷಣೆ ಅಥವಾ ಪರಿಹಾರವನ್ನು ಒದಗಿಸುತ್ತದೆ. ಅಪಘಾತದಿಂದ ಮರಣದ ರೈಡರ್ ಇದ್ದರೆ ಒಳ್ಳೆಯದು. ಆದರೆ ನೆನಪಿಡಿ – ನಿಮ್ಮ ಮೂಲ ಅವಧಿ ವಿಮೆ ಯೋಜನೆಯಲ್ಲೇ ಅಪಘಾತದಿಂದಾಗುವ ಸಾವು ಕವರ್ ಆಗಿರುತ್ತದೆ. ಈ ರೈಡರ್ ಹೆಚ್ಚುವರಿ ಮೊತ್ತವನ್ನು ಮಾತ್ರ ನೀಡುತ್ತದೆ.

ವಿಮೆ ಕ್ಲೇಮ್ ಹಂತಗಳು

ಕ್ಲೇಮ್ ಇಂಟಿಮೇಶನ್: ವಿಮಾ ಕಂಪನಿಗೆ ಸಾವಿನ ಬಗ್ಗೆ ಮಾಹಿತಿ ನೀಡುವುದು

ದಾಖಲೆಗಳ ಸಲ್ಲಿಕೆ: ಮರಣ ಪ್ರಮಾಣ ಪತ್ರ ಮತ್ತು ಅಗತ್ಯ ದಾಖಲೆಗಳನ್ನು ಒದಗಿಸುವುದು

ಪರಿಶೀಲನೆ ಮತ್ತು ಪಾವತಿ: ಕಂಪನಿ ದಾಖಲೆಗಳ ಪರಿಶೀಲನೆ ನಡೆಸಿ, ಕ್ಲೇಮ್ ಮೊತ್ತವನ್ನು ಪಾವತಿಸುತ್ತದೆ. ವಿಮಾ ನಿಯಂತ್ರಣ ಮತ್ತು ಅಭಿವೃದ್ಧಿ ಪ್ರಾಧಿಕಾರದ (ಐಆರ್‌ಡಿಎಐ) ನಿಯಮಗಳ ಪ್ರಕಾರ, ಸಾಮಾನ್ಯ ಕ್ಲೇಮ್‌ಗಳು 30 ದಿನದ ಒಳಗೆ ಇತ್ಯರ್ಥವಾಗಬೇಕು. ತನಿಖೆಯ ಅಗತ್ಯವಿರುವ ಕ್ಲೇಮ್‌ಗಳಿಗೆ ಗರಿಷ್ಠ 120 ದಿನದವರೆಗೆ ಸಮಯ ತೆಗೆದುಕೊಳ್ಳಬಹುದು.

ನೆನಪಿಡಿ: ಅವಧಿ ವಿಮೆ ಒಂದು ಹೂಡಿಕೆ ಅಲ್ಲ. ಇದು ತೆರಿಗೆ ಉಳಿಸುವ ಉಪಾಯವೂ ಅಲ್ಲ. ಇದೊಂದು ವಾಗ್ದಾನ. ಒಂದು ವೇಳೆ ನೀವು ಇಲ್ಲದಿದ್ದರೂ, ನಿಮ್ಮ ಕುಟುಂಬದ ಜೀವನ ಆರ್ಥಿಕವಾಗಿ ಕುಸಿದು ಬೀಳದಂತೆ ನೋಡಿಕೊಳ್ಳುವ ಭರವಸೆ.

ಚಿಟಿಕೆ ಸುದ್ದಿ

'ಕದನ ವಿರಾಮ: ಎರಡನೇ ಹಂತದ ಪ್ರಕ್ರಿಯೆ ಆರಂಭಿಸಿ'

ಕೈರೊ (ಎಪಿ): ಹಮಾಸ್ ಬಂಡುಕೋರರ ವಿರುದ್ಧದ ಯುದ್ಧ ಅಂತ್ಯಗೊಳಿಸಲು ತಾನು ಪ್ರಸ್ತಾಪಿಸಿರುವ ಕದನ ವಿರಾಮದ ಎರಡನೇ ಹಂತದ ಪ್ರಕ್ರಿಯೆಗಳನ್ನು ಆರಂಭಿಸಿ ಎಂದು ಅಮೆರಿಕದ ನಿಯೋಗವು ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ಅವರನ್ನು ಶನಿವಾರ ಆಗ್ರಹಿಸಿದೆ.

ಮಧ್ಯಪ್ರಾಚ್ಯ ದೇಶಗಳ ವ್ಯವಹಾರದ ಸಲಹೆಗಾರರಾದ ಸ್ಟೀವ್ ವೆಟ್ಕಾಫ್ ಮತ್ತು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಅಳಿಯ ಜರೆಡ್ ಕಶ್ನರ್ ಅವರ ನೇತೃತ್ವದ ನಿಯೋಗವು ಶನಿವಾರ ನೆತನ್ಯಾಹು ಅವರನ್ನು ಭೇಟಿ ಮಾಡಿತು.

'ಹಮಾಸ್ ವಶದಲ್ಲಿರುವ ಇಸ್ರೇಲ್‌ನ ಮೃತ ನಾಗರಿಕರ ಅವಶೇಷಗಳನ್ನು ಪಡೆದುಕೊಳ್ಳಬೇಕು ಮತ್ತು ಗಾಜಾದಿಂದ ಸೇನೆಯನ್ನು ವಾಪಾಸು ಕರೆಸಿಕೊಳ್ಳುವುದು ಕದನ ವಿರಾಮದ ಎರಡನೇ ಹಂತದ ಪ್ರಕ್ರಿಯೆಗಳಾಗಿವೆ. ಅಮೆರಿಕದ ನಿಯೋಗವು ನೆತನ್ಯಾಹು ಅವರಲ್ಲಿ ಈ ವಿಷಯಗಳನ್ನು ಪ್ರಸ್ತಾಪಿಸಿತು' ಎಂದು ಹೆಸರು ಬಹಿರಂಗಪಡಿಸಲು ಇಚ್ಛಿಸಿದ ಅಧಿಕಾರಿಗಳು ಮಾಹಿತಿ ನೀಡಿದರು.

ರಾಮನಗರ ರೇಷ್ಮೆಗೂಡು

ಮಿಶ್ರತಳಿ(ಸಿ.ಬಿ)	₹444-761
ದ್ವಿತಳಿ (ಬಿ.ವಿ)	₹258-889

ಮಿನಿಯಾಪೊಲಿಸ್‌ನಲ್ಲಿ ಜನರು ಬೀದಿಗಿಳಿದು ಪ್ರತಿಭಟನೆ ನಡೆಸಿದರು —ಎಎಫ್‌ಪಿ ಚಿತ್ರ

ಅಧಿಕಾರಿಗಳ ಗುಂಡಿಗೆ ವ್ಯಕ್ತಿ ಬಲಿ

ಮಿನಿಯಾಪೊಲಿಸ್ (ಎಪಿ/ ಎಎಫ್‌ಪಿ): ಅಮೆರಿಕದ ವಲಸೆ ಅಧಿಕಾರಿಗಳು ಶನಿವಾರ ಮಿನಿಯಾಪೊಲಿಸ್‌ನಲ್ಲಿ ವ್ಯಕ್ತಿಯೊಬ್ಬರನ್ನು ಗುಂಡಿಟ್ಟು ಕೊಂದಿದ್ದಾರೆ. ಈ ತಿಂಗಳಲ್ಲಿ ಎರಡನೇ ಬಾರಿ ಇಂತಹ ಘಟನೆ ನಡೆದಿದ್ದು, ವಲಸೆ ಅಧಿಕಾರಿಗಳ ಕ್ರಮದ ವಿರುದ್ಧ ಸ್ಥಳೀಯರು ಬೀದಿಗಿಳಿದು ಭಾರಿ ಪ್ರತಿಭಟನೆ ನಡೆಸಿದ್ದಾರೆ.

ಮೃತರನ್ನು ಅಮೆರಿಕದ ಪ್ರಜೆ 37 ವರ್ಷದ ಅಲೆಕ್ಸ್ ಪ್ರೆಟಿ ಎಂದು ಗುರುತಿಸಲಾಗಿದೆ. ಅಕ್ರಮ ವಲಸಿಗರ ವಿರುದ್ಧದ ಕಠಿಣ ಕ್ರಮದ ಭಾಗವಾಗಿ ಅಧಿಕಾರಿಗಳು ಕಳೆದ ಕೆಲ ದಿನಗಳಿಂದ ಮಿನಿಯಾಪೊಲಿಸ್‌ನಲ್ಲಿ ಕಾರ್ಯಾಚರಣೆ ಕೈಗೊಂಡಿದ್ದಾರೆ.

'ವ್ಯಕ್ತಿಯೊಬ್ಬ ಕೈಯಲ್ಲಿ ಹ್ಯಾಂಡ್‌ಗನ್ ಹಿಡಿದು ವಲಸೆ ಅಧಿಕಾರಿಗಳ ಹತ್ತಿರ ಧಾವಿಸಿ ಬಂದಿದ್ದಾನೆ. ಅಧಿಕಾರಿಗಳು ಸ್ವಯಂ ರಕ್ಷಣೆಗಾಗಿ ಗುಂಡು ಹಾರಿಸಿದಾಗ ಆತ ಮೃತಪಟ್ಟಿದ್ದಾನೆ' ಎಂದು ಮಿನಿಯಾಪೊಲಿಸ್ ನಗರದ ಪೊಲೀಸ್ ಮುಖ್ಯಸ್ಥ ಬ್ರಯನ್ ಒ'ಹರಾ ಹೇಳಿದ್ದಾರೆ.

ಈ ಘಟನೆಯ ದೃಶ್ಯಾವಳಿ ಸಾಮಾಜಿಕ ಜಾಲತಾಣದಲ್ಲಿ ಹರಿದಾಡಿದ್ದು, ಅಲೆಕ್ಸ್ ಕೈಯಲ್ಲಿ ಫೋನ್ ಹಿಡಿದುಕೊಂಡಿರುವುದು ವಿಡಿಯೊದಲ್ಲಿದೆ. ಅವರು ಕೈಯಲ್ಲಿ ಹ್ಯಾಂಡ್‌ಗನ್ ಹಿಡಿದುಕೊಂಡಿರಲಿಲ್ಲ.

ವಲಸೆ ಅಧಿಕಾರಿಗಳು ಪ್ರತಿಭಟನಾನಿರತ ಮಹಿಳೆಯೊಬ್ಬರನ್ನು ದೂರಕ್ಕೆ ತಳ್ಳಿದಾಗ ಆಕೆಯ ನೆರವಿಗೆ ಅಲೆಕ್ಸ್ ಧಾವಿಸಿದ್ದಾರೆ. ಅಲ್ಲಿದ್ದ ಅಧಿಕಾರಿಗಳು ಅವರನ್ನು ನೆಲಕ್ಕೆ ಉರುಳಿಸಿ ಸಮೀಪದಿಂದಲೇ ಗುಂಡು ಹಾರಿಸುತ್ತಿರುವುದು ವಿಡಿಯೊದಲ್ಲಿದೆ.

ಈ ಘಟನೆಯ ಬೆನ್ನಲ್ಲೇ ಜನರು ಬೀದಿಗಿಳಿದು ಪ್ರತಿಭಟನೆ ನಡೆಸಿದ್ದಾರೆ. ಪರಿಸ್ಥಿತಿಯನ್ನು ನಿಯಂತ್ರಣಕ್ಕೆ ತರಲು ಮಿನೆಸೊಟಾ ನ್ಯಾಷನಲ್ ಗಾರ್ಡ್ ಸಿಬ್ಬಂದಿಯು ಸ್ಥಳೀಯ ಪೊಲೀಸರಿಗೆ ನೆರವಾಗಿದ್ದಾರೆ.

ನಾಳೆ ವ್ಯಾಪಾರ ಒಪ್ಪಂದ ಘೋಷಣೆ

ಭಾರತ ಮತ್ತು ಐರೋಪ್ಯ ಒಕ್ಕೂಟದ ನಡುವಿನ ಎಫ್‌ಟಿಎ

ನವದೆಹಲಿ (ಪಿಟಿಐ): ಮುಕ್ತ ವ್ಯಾಪಾರ ಒಪ್ಪಂದಕ್ಕೆ ಸಂಬಂಧಿಸಿದ ಮಾತುಕತೆಗಳು ಪೂರ್ಣಗೊಂಡಿರುವುದು ಹಾಗೂ ಒಪ್ಪಂದವು ಅಂತಿಮಗೊಂಡಿರುವುದರ ಬಗ್ಗೆ ಭಾರತ ಮತ್ತು ಐರೋಪ್ಯ ಒಕ್ಕೂಟವು ಮಂಗಳವಾರ ಘೋಷಣೆ ಹೊರಡಿಸುವ ನಿರೀಕ್ಷೆ ಇದೆ.

ಅಮೆರಿಕವು ವಿವಿಧ ದೇಶಗಳ ಮೇಲೆ ವಿವಿಧ ಕಾರಣಕ್ಕೆ ಸುಂಕ ಹೇರಿ, ಜಾಗತಿಕ ಮಟ್ಟದಲ್ಲಿನ ವ್ಯಾಪಾರ ವಹಿವಾಟುಗಳ ಲಯಕ್ಕೆ ಅಡ್ಡಿ ಸೃಷ್ಟಿಸಿರುವ ಸಂದರ್ಭದಲ್ಲಿ ಭಾರತ ಮತ್ತು ಐರೋಪ್ಯ ಒಕ್ಕೂಟವು ತಮ್ಮ ನಡುವಿನ ವ್ಯಾಪಾರ ಹೆಚ್ಚಿಸಿಕೊಳ್ಳಲು ಈ ಕ್ರಮಕ್ಕೆ ಮುಂದಾಗಿವೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಭಾರತ ಮತ್ತು ಐರೋಪ್ಯ ಒಕ್ಕೂಟದ ನಡುವೆ ಮುಕ್ತ ವ್ಯಾಪಾರ ಒಪ್ಪಂದಕ್ಕಾಗಿ (ಎಫ್‌ಟಿಎ) ಮಾತುಕತೆ 2007ರಲ್ಲಿ ಶುರುವಾಗಿತ್ತು. ಭಾರತವು ಇದುವರೆಗೆ ಮಾಡಿಕೊಂಡಿರುವ ಎಲ್ಲ ಒಪ್ಪಂದಗಳ ಪಾಲಿಗೆ ಈ ಒಪ್ಪಂದವು 'ತಾಯಿಯಂತೆ' ಇರಲಿದೆ ಎಂದು ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವ ಪೀಯೂಷ್ ಗೋಯಲ್ ಬಣ್ಣಿಸಿದ್ದಾರೆ.

ಮಾತುಕತೆಯು ಪೂರ್ಣಗೊಂಡಿರುವುದರ ಘೋಷಣೆಯನ್ನು ಭಾರತ – ಐರೋಪ್ಯ ಒಕ್ಕೂಟ ಶೃಂಗದಲ್ಲಿ ಮಾಡಲಾಗುವುದು ಎಂದು ಅಧಿಕಾರಿಯೊಬ್ಬರು ಮಾಹಿತಿ ನೀಡಿದ್ದಾರೆ. ಐರೋಪ್ಯ ಆಯೋಗದ ಅಧ್ಯಕ್ಷೆ ಉರ್ಸುಲಾ ಫಾಂಡರ್ ಲೇಯನ್ ಅವರು ನಾಲ್ಕು ದಿನಗಳ ಭಾರತ ಭೇಟಿಯನ್ನು ಶನಿವಾರ ಆರಂಭಿಸಿದ್ದಾರೆ.

ಐರೋಪ್ಯ ಮಂಡಳಿಯ ಅಧ್ಯಕ್ಷ ಆ್ಯಂಟೊನಿಯೊ ಕೋಸ್ಟಾ ಹಾಗೂ ಫಾಂಡರ್ ಲೇಯನ್ ಅವರು ಪ್ರಧಾನಿ ನರೇಂದ್ರ ಮೋದಿ ಅವರ ಜೊತೆ ಮಂಗಳವಾರ ಶೃಂಗಸಭೆಯಲ್ಲಿ ಭಾಗಿಯಾಗಲಿದ್ದಾರೆ.

ಭಾರತ ಮತ್ತು ಐರೋಪ್ಯ ಒಕ್ಕೂಟದ ಅಧಿಕಾರಿಗಳು ಮುಕ್ತ ವ್ಯಾಪಾರ ಒಪ್ಪಂದದ ಕಡತಗಳಿಗೆ ಸಹಿ ಹಾಕುವ ಮೊದಲು, ಕಡತಗಳಲ್ಲಿನ ವಿವರಗಳ ಕಾನೂನು ಪರಿಶೀಲನೆ ನಡೆಯಲಿದೆ. ಸಹಿ ಹಾಕುವ ದಿನಾಂಕ ಇನ್ನೂ ಅಂತಿಮಗೊಂಡಿಲ್ಲ. ಒಪ್ಪಂದಕ್ಕೆ ಐರೋಪ್ಯ ಒಕ್ಕೂಟದ ಸಂಸತ್ತಿನ ಒಪ್ಪಿಗೆ, ಭಾರತದಲ್ಲಿ ಕೇಂದ್ರ ಸಂಪುಟದ ಒಪ್ಪಿಗೆ ಅಗತ್ಯ.

ಅಭಿವೃದ್ಧಿ ಹೊಂದಿರುವ 27 ದೇಶಗಳ ಐರೋಪ್ಯ ಒಕ್ಕೂಟದ ಜೊತೆ ಭಾರತ ಮಾಡಿಕೊಳ್ಳಲಿರುವ ಒಪ್ಪಂದವು ಅತಿ ದೊಡ್ಡದಾಗಿರಲಿದೆ. ಈ ಒಪ್ಪಂದವು ಚೀನಾ ಮೇಲಿನ ಅವಲಂಬನೆಯನ್ನು ತಗ್ಗಿಸಲು ನೆರವಾಗಲಿದೆ.

ಒಪ್ಪಂದದ ಮಾತುಕತೆ ಸಂದರ್ಭದಲ್ಲಿ ಐರೋಪ್ಯ ಒಕ್ಕೂಟವು ತನ್ನ ಗೋಮಾಂಸ, ಸಕ್ಕರೆ ಮತ್ತು ಅಕ್ಕಿ ಮಾರುಕಟ್ಟೆಯ ಹಿತವನ್ನು ಕಾಪಾಡಿಕೊಂಡಿದೆ. ಭಾರತವು ತನ್ನ ಕೃಷಿ, ಹಾಲು ಮತ್ತು ಹಾಲಿನ ಉತ್ಪನ್ನಗಳ ಮಾರುಕಟ್ಟೆಯ ಹಿತವನ್ನು ಕಾಯ್ದುಕೊಂಡಿದೆ.

ಭಾರತಕ್ಕೆ ಭೇಟಿ ನೀಡಿರುವ ಐರೋಪ್ಯ ಮಂಡಳಿಯ ಅಧ್ಯಕ್ಷ ಆ್ಯಂಟೊನಿಯೊ ಕೋಸ್ಟಾ ಅವರನ್ನು ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಖಾತೆ ರಾಜ್ಯ ಸಚಿವ ಜಿತಿನ್ ಪ್ರಸಾದ (ಬಲತುದಿ) ಅವರು ನವದೆಹಲಿಯಲ್ಲಿ ಸ್ವಾಗತಿಸಿದರು. ಐರೋಪ್ಯ ಆಯೋಗದ ಅಧ್ಯಕ್ಷೆ ಉರ್ಸುಲಾ ಫಾಂಡರ್ ಲೇಯನ್ ಅವರು ಇದ್ದಾರೆ —ಪಿಟಿಐ ಚಿತ್ರ

ಬೆಳ್ಳಿ, ಚಿನ್ನ: ಬೆಲೆ ಇಳಿಕೆ ಸಾಧ್ಯತೆ ಇಲ್ಲ

ನವದೆಹಲಿ (ಪಿಟಿಐ): ಚಿನ್ನ ಮತ್ತು ಬೆಳ್ಳಿಯ ದರವು ಈ ವಾರದ ವಹಿವಾಟಿನಲ್ಲಿ ಕಡಿಮೆ ಆಗುವ ಸಾಧ್ಯತೆಯಂತೂ ಇದ್ದಂತಿಲ್ಲ ಎಂದು ಮಾರುಕಟ್ಟೆ ತಜ್ಞರು ಅಂದಾಜಿಸಿದ್ದಾರೆ.

ವರ್ತಕರು ಹಾಗೂ ಹೂಡಿಕೆದಾರರ ಗಮನವು ಕೇಂದ್ರ ಬಜೆಟ್ ಕಡೆ ಇರಲಿದೆ. ಬಜೆಟ್‌ನಲ್ಲಿ ಘೋಷಣೆಯಾಗುವ ಅಂಶಗಳು ಚಿನ್ನ ಮತ್ತು ಬೆಳ್ಳಿ ಮಾರುಕಟ್ಟೆಯ ಮೇಲೆ ಪರಿಣಾಮ ಬೀರಬಹುದು ಎಂದು ಅವರು ಹೇಳಿದ್ದಾರೆ.

'ಚಿನ್ನ ಹಾಗೂ ಬೆಳ್ಳಿ ದರವು ಏರುಗತಿಯಲ್ಲಿ ಇರಲಿವೆ. ಯಾವುದಾದರೂ ಸಂದರ್ಭದಲ್ಲಿ ಅವುಗಳ ಬೆಲೆಯು ತುಸು ಕಡಿಮೆ ಆದರೆ ಅದನ್ನು ಹೊಸದಾಗಿ ಹೂಡಿಕೆಗೆ ಅವಕಾಶ ಎಂದು ಭಾವಿಸಬೇಕು' ಎಂದು ಜೆಎಂ ಫೈನಾನ್ಶಿಯಲ್ ಸರ್ವಿಸಸ್‌ನ ಪ್ರಣವ್ ಮೆರ್ ಹೇಳಿದ್ದಾರೆ.

ಅಮೆರಿಕ: 10 ಸಾವಿರ ವಿಮಾನಗಳ ಹಾರಾಟ ರದ್ದು

ಲಾಸ್ ವೆಗಾಸ್ (ಎಪಿ): ಅಮೆರಿಕದಲ್ಲಿ ಹಿಮದೊಂದಿಗೆ ಬಿರುಗಾಳಿ ಬೀಸುತ್ತಿರುವುದರಿಂದ ದೇಶದಾದ್ಯಂತ 14,100ಕ್ಕೂ ಹೆಚ್ಚು ವಿಮಾನಗಳ ಹಾರಾಟವನ್ನು ಶನಿವಾರವು ರದ್ದುಗೊಳಿಸಲಾಗಿತ್ತು. ಈ ಪೈಕಿ 10 ಸಾವಿರಕ್ಕೂ ಹೆಚ್ಚು ವಿಮಾನಗಳ ಹಾರಾಟವು ಭಾನುವಾರ ನಿಗದಿಯಾಗಿತ್ತು.

'ದಕ್ಷಿಣ ರಾಕಿ ಪರ್ವತಗಳಿಂದ ನ್ಯೂ ಇಂಗ್ಲೆಂಡ್‌ವರೆಗಿನ ಹಾದಿಯಲ್ಲಿ ವ್ಯಾಪಕವಾದ ಹಿಮ, ಹಿಮಪಾತ ಮತ್ತು ಘನೀಕೃತ ಮಳೆ ಬೀಳುತ್ತಿದ್ದು, ಸುಮಾರು 1.80 ಕೋಟಿ ಜನರ ಮೇಲೆ ಪರಿಣಾಮ ಬೀರಲಿದೆ' ಎಂದು ರಾಷ್ಟ್ರೀಯ ಹವಾಮಾನ ಇಲಾಖೆ ಶನಿವಾರ ರಾತ್ರಿ ತಿಳಿಸಿದೆ.

ಅದಾನಿ–ಎಂಬ್ರೇರ್ ಒಪ್ಪಂದ ನಾಳೆ

ನವದೆಹಲಿ (ಪಿಟಿಐ): ನಾಗರಿಕ ವಿಮಾನಗಳ ಬಿಡಿಭಾಗಗಳನ್ನು ಜೋಡಿಸಿ, ವಿಮಾನ ತಯಾರಿಸುವ ಘಟಕವನ್ನು (ಎಫ್‌ಎಎಲ್) ದೇಶದಲ್ಲಿ ಸ್ಥಾಪಿಸುವ ಕುರಿತು ಅದಾನಿ ಸಮೂಹ ಮತ್ತು ಬ್ರೆಜಿಲ್‌ನ ವಿಮಾನಯಾನ ಕಂಪನಿ ಎಂಬ್ರೇರ್ ಮಂಗಳವಾರ ಘೋಷಣೆ ಮಾಡಲಿವೆ.

ಕೇಂದ್ರ ವಿಮಾನಯಾನ ಸಚಿವ ಕೆ.ರಾಮ್‌ಮೋಹನ್ ನಾಯ್ಡು ಅವರ ಅಧ್ಯಕ್ಷತೆಯಲ್ಲಿ ಅದಾನಿ ಡಿಫೆನ್ಸ್ ಆ್ಯಂಡ್ ಏರೋಸ್ಪೇಸ್ ಮತ್ತು ಎಂಬ್ರೇರ್ ಕಂಪನಿಯ ಪ್ರತಿನಿಧಿಗಳು ಜನವರಿ 27ರಂದು ನವದೆಹಲಿಯಲ್ಲಿ ಒಪ್ಪಂದವನ್ನು ಮಾಡಿಕೊಳ್ಳಲಿದ್ದಾರೆ.

ದೇಶದಲ್ಲಿ ಎಂಬ್ರೇರ್ ಕಂಪನಿಯು ಜೆಟ್ ವಿಮಾನಗಳನ್ನು ತಯಾರಿಸಲು, ಅಂತಿಮ ಜೋಡಣಾ ಘಟಕವನ್ನು ಸ್ಥಾಪಿಸುವ ಯೋಜನೆ ಇದಾಗಿದೆ. ಎಂಬ್ರೇರ್ 150 ಆಸನದವರೆಗಿನ ವಾಣಿಜ್ಯ ವಿಮಾನಗಳನ್ನು ತಯಾರಿಸುತ್ತದೆ.

ಎಫ್‌ಎಎಲ್ ಕಾರ್ಯರೂಪಕ್ಕೆ ಬಂದ ಬಳಿಕ, ಅದಾನಿ ಸಮೂಹವು ವಿಮಾನದ ಬಿಡಿಭಾಗಗಳ ತಯಾರಿಕೆಯನ್ನು ಪ್ರಾರಂಭಿಸುವ ನಿರೀಕ್ಷೆ ಇದೆ ಎಂದು ಮೂಲವೊಂದು ತಿಳಿಸಿದೆ.

ಅಮೆಜಾನ್‌ನಲ್ಲಿ ಖಾದಿ ರಾಷ್ಟ್ರಧ್ವಜ

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: ಇಲ್ಲಿನ ಬೆಂಗೇರಿಯ ಖಾದಿ ಗ್ರಾಮೋದ್ಯೋಗ ಸಂಯುಕ್ತ ಸಂಘದ ರಾಷ್ಟ್ರಧ್ವಜ ಉತ್ಪಾದನಾ ಘಟಕದಿಂದ ಸಿದ್ಧವಾಗುವ ಖಾದಿ ರಾಷ್ಟ್ರಧ್ವಜ ಇ–ಕಾಮರ್ಸ್ ವೇದಿಕೆಯಾದ ಅಮೆಜಾನ್‌ನಲ್ಲಿ ಖರೀದಿಗೆ ಲಭ್ಯವಿದೆ.

ಅಮೆಜಾನ್‌ನಲ್ಲಿ ಜ.24ರಿಂದ ರಾಷ್ಟ್ರಧ್ವಜಗಳನ್ನು ಮಾರಾಟ ಮಾಡಲಾಗುತ್ತಿದೆ. ವಿದೇಶಗಳಲ್ಲಿ ನೆಲಸಿರುವವರು ಕೂಡ ಆನ್‌ಲೈನ್‌ನಲ್ಲಿ ಖಾದಿ ರಾಷ್ಟ್ರಧ್ವಜಗಳನ್ನು ಖರೀದಿಸಬಹುದಾಗಿದೆ.

'ಒಂಬತ್ತು ಭಿನ್ನ ಅಳತೆಯ ರಾಷ್ಟ್ರಧ್ವಜಗಳು ಲಭ್ಯವಿದ್ದು, ಸದ್ಯ ಈಗಿರುವ ದರದಲ್ಲಿಯೇ ಅಮೆಜಾನ್‌ನಲ್ಲಿಯೂ ಮಾರಾಟವಾಗುತ್ತಿದೆ. ಕೊರಿಯರ್ ಶುಲ್ಕವನ್ನು ಗ್ರಾಹಕರು ಭರಿಸಬೇಕು. ಈ ವರ್ಷ ಸುಮಾರು ₹2 ಕೋಟಿ ಮೌಲ್ಯದ ರಾಷ್ಟ್ರಧ್ವಜ ಮಾರಾಟವಾಗದೆ ಹಾಗೆಯೇ ಉಳಿದಿವೆ' ಎಂದು ಖಾದಿ ಗ್ರಾಮೋದ್ಯೋಗ ಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಶಿವಾನಂದ ಮಠಪತಿ ಹೇಳಿದರು.

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

ಉದ್ಯೋಗಾವಕಾಶ

General

ಉದ್ಯೋಗಾವಕಾಶಗ ಳು TVS, ಬ್ರಿಟಾನಿಯಾ,ವಿಡಿಯೋಕಾನ್, ಹಿಮಾಲಯ ಕಂಪನಿಗಳಿಗೆ 7th, PUC, ITI, Degree. ಸಂಬಳ 16,000-86,000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿರುತ್ತದೆ. 9035710381

Part-Time Jobs

ಕರ್ನಾಟಕದಾದ್ಯಂತ ಕಂಪನಿಗಳಿಗೆ ಮನೆಯಿಂದಲೇ ಕೆಲಸಕ್ಕೆ ಮಹಿಳೆಯರಿಗೆ, ವಿದ್ಯಾರ್ಥಿಗಳಿಗೆ,ಪುರುಷರಿಗೆ ಆದ್ಯತೆ. 19,000-25,000 ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ. 9964311522, 9742133993

Wanted

ಗ್ರೆಂಡರ್ (ರುಬ್ಬುವ) ಕೆಲಸಕ್ಕೆ ರೊಟ್ಟಿ ಕಾರ್ಖಾನೆಗೆ 30ವರ್ಷದೊಳಗಿನ ಯುವಕರು ಬೇಕಾಗಿದ್ದಾರೆ. (15,000) ಊಟ– ವಸತಿ ಉಚಿತ. Ph: 9845276452

ಭವಿಷ್ಯ

Astrology

ಶಿವಶಕ್ತಿ ಜ್ಯೋತಿಷ್ಯಂ (ಪ್ರೇಮಭವಿಷ್ಯ) ಪ್ರೀತಿಸಿದವರನ್ನು ಮರಳಿ ಸ್ತ್ರೀಪುರುಷ ವಶೀಕರಣ ಮಾಡಿಕೊಡುತ್ತಾರೆ. ಶತ್ರುನಾಶ ಗಂಡಹೆಂಡತಿ ಪರಿಹಾರಕ್ಕೆ ಮಂಜುನಾಥ್ ಭಟ್ 9663243202

ವೈಯಕ್ತಿಕ

Change of Name

ನಾನು ರಾಕೇಶ್ ವರ್ಮಾ S/o ರವಿ ವರ್ಮಾ ವಯಸ್ಸು 20 ವರ್ಷ, ನಂ. H.12.04, H Tower ಶ್ರೀರಾಮ್ ಬ್ಲೂ ಅಪಾರ್ಟ್ಮೆಂಟ್ಸ್ ಕೆ.ಆರ್.ಪುರ ಬೆಂಗಳೂರು 560049 ನಲ್ಲಿ ವಾಸಿಸುತ್ತಿದೇನೇ. ಅಫಿಡವಿಟ್ನಲ್ಲಿ ಹೇಳಿದಂತೆ ನಾನು ನನ್ನ ಹೆಸರನ್ನು ರಾಕೇಶ್ ವರ್ಮಾ ರವಿ ವರ್ಮಾ ಇಂದ ರಾಕೇಶ್ ವರ್ಮಾ ಎಂದು ಬದಲಾಯಿಸಿದ್ದೇನೆ

ನಾನು ರಾಧಿಕಾ W/o ರವಿ ವರ್ಮಾ ವಯಸ್ಸು 45 ವರ್ಷ, ನಂ. H.12.04, HTower, ಶ್ರೀರಾಮ್ ಬ್ಲೂ ಅಪಾರ್ಟ್ಮೆಂಟ್ಸ್, ಕೆ.ಆರ್.ಪುರ, ಬೆಂಗಳೂರು 560049 ನಲ್ಲಿ ವಾಸಿಸುತ್ತಿದೇನೇ. ಅಫಿಡವಿಟ್ನಲ್ಲಿ ಹೇಳಿದಂತೆ ನಾನು ನನ್ನ ಹೆಸರನ್ನು ರಾಧಿಕಾ ರವಿ ವರ್ಮಾ ಇಂದ ರಾಧಿಕಾ ಎಂದು ಬದಲಾಯಿಸಿದ್ದೇನೆ

ನಾನು ರವಿ ವರ್ಮಾ S/o ಪ್ರಭಾಕರ್ ವಯಸ್ಸು 46 ವರ್ಷ, ನಂ. H.12.04, HTower, ಶ್ರೀರಾಮ್ ಬ್ಲೂ ಅಪಾರ್ಟ್ಮೆಂಟ್ಸ್, ಕೆ.ಆರ್.ಪುರ, ಬೆಂಗಳೂರು– 560049 ನಲ್ಲಿ ವಾಸಿಸುತ್ತಿದೇನೇ. ಅಫಿಡವಿಟ್ನಲ್ಲಿ ಹೇಳಿದಂತೆ ನಾನು ನನ್ನ ಹೆಸರನ್ನು ರವಿ ವರ್ಮಾ ಪ್ರಭಾಕರ್ ಇಂದ ರವಿ ವರ್ಮಾ ಎಂದು ಬದಲಾಯಿಸಿದ್ದೇನೆ

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಭಿತ್ತಿಚಿತ್ರದ ಮೂಲಕ ಅಮೆರಿಕಕ್ಕೆ ಇರಾನ್ ಎಚ್ಚರಿಕೆ

ದುಬೈ(ಎಪಿ): ಇರಾನ್ ಮೇಲೆ ಅಮೆರಿಕವು ಮಿಲಿಟರಿ ದಾಳಿ ನಡೆಸಿದರೆ ಅದಕ್ಕೆ ತಕ್ಕ ತಿರುಗೇಟು ನೀಡಲಾಗುತ್ತದೆ ಎನ್ನುವ ಸ್ಪಷ್ಟ ಸಂದೇಶವನ್ನು ಸಾರುವಂಥ ಭಿತ್ತಿಚಿತ್ರವನ್ನು ಸೆಂಟ್ರಲ್ ಟೆಹರಾನ್ ಸ್ಕ್ವೇರ್‌ನಲ್ಲಿ ಭಾನುವಾರ ಇರಾನ್ ಆಡಳಿತವು ಅನಾವರಣಗೊಳಿಸಿದೆ.

ಭಿತ್ತಿಚಿತ್ರದಲ್ಲಿ ಯುದ್ಧದಿಂದ ಹಾನಿಗೊಳಗಾದ ವಿಮಾನಗಳನ್ನು ಚಿತ್ರಿಸುವುದರ ಜತೆಗೆ 'ನೀವು ಗಾಳಿಯನ್ನು ಬಿತ್ತಿದರೆ, ಸುಂಟರ ಗಾಳಿಯ ಫಸಲನ್ನು ಪಡೆಯಬೇಕಾಗುತ್ತದೆ' ಎಂಬ ಎಚ್ಚರಿಕೆಯ ಸಂದೇಶವನ್ನೂ ಬರೆಯಲಾಗಿದೆ.

ಅಮೆರಿಕದ ಯುದ್ಧ ವಿಮಾನವಾಹಕ ನೌಕೆ ಯುಎಸ್‌ಎಸ್ ಅಬ್ರಹಾಂ ಲಿಂಕನ್ ನೇತೃತ್ವದಲ್ಲಿ ಯುದ್ಧ ನೌಕೆಗಳ ತಂಡವು ಇರಾನ್‌ನತ್ತ ಪ್ರಯಾಣಿಸುತ್ತಿರುವಂತೆಯೇ ಇರಾನ್ ಈ ಭಿತ್ತಿಚಿತ್ರದ ಮೂಲಕ ಎಚ್ಚರಿಕೆ ನೀಡಿದೆ.

'ಇರಾನ್ ವಿರುದ್ಧ ಕ್ರಮ ಕೈಗೊಳ್ಳಬೇಕಾದ ಪರಿಸ್ಥಿತಿ ಬರಬಹುದು ಎಂಬ ಕಾರಣಕ್ಕೆ ಯುದ್ಧನೌಕೆಗಳನ್ನು ಕಳುಹಿಸಲಾಗಿದೆ. ಬಹುಶಃ ಆ ಪರಿಸ್ಥಿತಿ ಬರದೇ ಇರಬಹುದು' ಎಂದು ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಇತ್ತೀಚೆಗಷ್ಟೇ ಹೇಳಿಕೆ ನೀಡಿದ್ದರು.

₹3,522 ಕೋಟಿ ವಂಚನೆ

ಒಂದನೇ ಪುಟದಿಂದ...

ಚಂದಾದಾರರು ತಾವು ಪರಸ್ಪರರ ವಿರುದ್ಧ ಆಟವಾಡುತ್ತಿದ್ದೇವೆ ಎಂದು ಹಣ ತೊಡಗಿಸುತ್ತಿದ್ದರು. ವಾಸ್ತವದಲ್ಲಿ ಎಐ ಅಥವಾ ಬಾಟ್ ಜತೆಗೆ ಆಟವಾಡುತ್ತಿದ್ದರು. ಇದು ವಂಚನೆಯ ಮೊದಲ ಹಂತ. ಈ ರೀತಿ ಎಐ ಅನ್ನು ಬಳಸಿಕೊಂಡೇ ಚಂದಾದಾರರಿಗೆ ₹734 ಕೋಟಿ ವಂಚಿಸಿರುವುದು ಕಂಪನಿಯ ಸೂಪರ್ ಕಂಪ್ಯೂಟರ್‌ಗಳಲ್ಲಿನ ದತ್ತಾಂಶಗಳ ಪರಿಶೀಲನೆಯಿಂದ ಗೊತ್ತಾಗಿದೆ ಎಂದು ಇ.ಡಿ ನ್ಯಾಯಾಲಯಕ್ಕೆ ತಿಳಿಸಿದೆ.

ಆರಂಭದಲ್ಲಿ ಚಂದಾದಾರರಿಗೆ ಸುಲಭವಾಗಿ ಗೆಲುವು ದೊರೆಯುವಂತೆ ಮತ್ತು ಉತ್ತಮ ಮೊತ್ತದ ಬಹುಮಾನ ಬರುವಂತೆ ಗೇಮಿಂಗ್ ಅಲ್ಗಾರಿದಮ್‌ಗಳನ್ನು ಕಂಪನಿಯು ವಿನ್ಯಾಸ ಮಾಡಿತ್ತು. ಚಂದಾದಾರರು ಹೆಚ್ಚು ಹಣ ತೊಡಗಿಸುತ್ತಿದ್ದಂತೆ ಆಟವು ಕಠಿಣವಾಗುತ್ತಿತ್ತು. ಆ ಹಂತದಲ್ಲೂ ಚಂದಾದಾರರು ಗೆದ್ದರೆ, ಅವರ ಖಾತೆಗಳನ್ನು ಬ್ಲಾಕ್ ಮಾಡಲಾಗುತ್ತಿತ್ತು ಇಲ್ಲವೇ ಅವರು ಪೂರ್ತಿ ಹಣ ಪಡೆದುಕೊಳ್ಳುವುದಕ್ಕೆ ನಿರ್ಬಂಧ ಹಾಕಲಾಗುತ್ತಿತ್ತು. ಕಡೆಗೆ ಹಣವನ್ನೂ ನೀಡದೆ, ಠೇವಣಿಯನ್ನೂ ವಾಪಸ್ ಮಾಡದೆ ಖಾತೆಯನ್ನು ರದ್ದು ಮಾಡಲಾಗುತ್ತಿತ್ತು. ಚಂದಾದಾರರ ಹಣ ಕಂಪನಿಯ ಬಳಿಯೇ ಉಳಿಯುತ್ತಿತ್ತು ಎಂದು ವಿವರಿಸಿದೆ.

ಈ ರೀತಿ 2021ರಿಂದ 2025ರ ಆಗಸ್ಟ್‌ವರೆಗೆ ವಿನ್‌ಝೋ ಕಂಪನಿಯು 25 ಕೋಟಿಗೂ ಹೆಚ್ಚು ಚಂದಾದಾರರಿಗೆ ವಂಚಿಸಿ, ಒಟ್ಟು ₹3,522 ಕೋಟಿ ಗಳಿಸಿದೆ. ಕಂಪನಿಯ ಪ್ರವರ್ತಕರು ಈ ಹಣವನ್ನು ವಿವಿಧ ಬ್ಯಾಂಕ್‌ಗಳಲ್ಲಿ ಠೇವಣಿ ಇರಿಸಿದ್ದಾರೆ. ವಿದೇಶಿ ಬ್ಯಾಂಕ್‌ಗಳಲ್ಲಿ ಹೂಡಿಕೆ ಮಾಡಿದ್ದಾರೆ. ತಮ್ಮ ಮಧ್ಯೆಯೇ ₹230 ಕೋಟಿಯನ್ನು ಸಾಲದ ರೂಪದಲ್ಲಿ ಹಂಚಿಕೊಂಡಿದ್ದಾರೆ. ಸಾಲು–ಸಾಲು ಹಣ ಅಕ್ರಮ ವರ್ಗಾವಣೆ ಕೃತ್ಯಗಳನ್ನು ಎಸಗಿದ್ದಾರೆ. ಇದರಲ್ಲಿ ಈಗಾಲೇ ₹690 ಕೋಟಿ ಮೊತ್ತದ ಸ್ವತ್ತುಗಳನ್ನು ಮುಟ್ಟುಗೋಲು ಹಾಕಿಕೊಳ್ಳಲಾಗಿದೆ ಎಂದು ತಿಳಿಸಿದೆ.

ಮಕ್ಕಳಿಗೆ ಆನ್‌ಲೈನ್ ವೇದಿಕೆ ನಿರ್ಬಂಧ ಮಾಡುವ ಆಂಧ್ರಪ್ರದೇಶ ಸರ್ಕಾರದ ಚಿಂತನೆ ಸ್ವಾಗತಾರ್ಹವೇ?

ಹೌದು ಇಲ್ಲ

ಪ್ರತಿಕ್ರಿಯಿಸಲು ಕೋಡ್ ಸ್ಕ್ಯಾನ್ ಮಾಡಿ

ಮೊಟ್ಟೆ ಧಾರಣೆ (ಎನ್‌ಇಸಿಸಿ)

ಬೆಂಗಳೂರು		ಮೈಸೂರು:	
100 ಕ್ಕೆ	₹565	100 ಕ್ಕೆ	₹567
12 ಕ್ಕೆ	₹75		

ಸುದ್ದಿವೈವಿಧ್ಯಕ್ಕೆ prajavani.netಗೆ ಭೇಟಿ ಮಾಡಿ

ಬಾಡಿದ ಬೆಳೆಗಾರರ ಮೊಗ, ಅವಧಿಪೂರ್ವ ಮಳೆಗೆ ನಷ್ಟ

ಕಾಫಿ ಹಣ್ಣಿನ ನಡುವೆ ಅರಳಿದ ಹೂಗಳು

• ಸಿ.ಎಸ್.ಸುರೇಶ್

ನಾಪೋಕ್ಲು (ಕೊಡಗು ಜಿಲ್ಲೆ): ಹತ್ತು ದಿನಗಳ ಹಿಂದೆ ಸುರಿದ ಮಳೆಯು ಸಂತಸದಲ್ಲಿದ್ದ ಕಾಫಿ ಬೆಳೆಗಾರರನ್ನು ಚಿಂತಿತರನ್ನಾಗಿಸಿದೆ. ಹೋಬಳಿ ವ್ಯಾಪ್ತಿಯ ತೋಟಗಳಲ್ಲಿ ಕಾಫಿ ಹೂಗಳು ಅರಳಿದ್ದು ತೋಟವೆಲ್ಲ ಘಮಘಮಿಸುತ್ತಿದ್ದರೂ, ಬೆಳೆಗಾರರ ಮುಖದಲ್ಲಿ ಮಂದಹಾಸ ಕಾಣುತ್ತಿಲ್ಲ.

ಸಾಮಾನ್ಯವಾಗಿ ಫೆಬ್ರುವರಿ ಅಂತ್ಯಕ್ಕೆ ಅಥವಾ ಮಾರ್ಚ್ ತಿಂಗಳ ಮೊದಲ ವಾರದಲ್ಲಿ ಅರಳುತ್ತಿದ್ದ ಹೂಗಳು ತಿಂಗಳ ಮೊದಲೇ ಅರಳಿವೆ. ತೋಟಗಳಲ್ಲಿ ಭಾಗಶಃ ಹೂಗಳು ಅರಳಿದ್ದು, ಮುಂಬರುವ ಬೆಳೆ ಹೇಗೋ ಎಂಬ ಆತಂಕವನ್ನು ತಂದೊಡ್ಡಿದೆ.

ನಾಲ್ಕುನಾಡು ವ್ಯಾಪ್ತಿಯ ಕಕ್ಕಬ್ಬೆ, ಕುಂಜಿಲ, ನೆಲಜಿ, ಬಲ್ಲಮಾವಟಿ, ಚೋನಕೆರೆ ಸೇರಿ ಹಲವು ಗ್ರಾಮಗಳಲ್ಲಿ ಕಾಫಿಕೊಯ್ಲು ಆರಂಭಗೊಂಡಿದೆ. ಇದೇ ವೇಳೆಗೆ ಮಳೆಯ ಸಿಂಚನವಾಗಿ ಹೂಗಳು ಅರಳಿರುವುದರಿಂದ ಕೊಯ್ಲು ಕೆಲಸವನ್ನು ಅನಿವಾರ್ಯವಾಗಿ ಬೆಳೆಗಾರರು ಸ್ಥಗಿತಗೊಳಿಸಿದ್ದಾರೆ.

'ಜನವರಿ ಮತ್ತು ಫೆಬ್ರವರಿ ತಿಂಗಳು ಕಾಫಿ ಕೊಯ್ಲಿನ ಬಿರುಸಿನ ದಿನಗಳು. ಕಾಫಿ ಕೊಯ್ಲಾದ ಬಳಿಕ ಮಳೆ ಸುರಿದರೆ ಕಾಫಿಯ ಮೊಗ್ಗು ಅರಳಿ ಮುಂದಿನ ವರ್ಷದ ಫಸಲು ನಿರ್ಧಾರವಾಗುತ್ತದೆ. ಆದರೆ, ಈ ಬಾರಿ ಇನ್ನೂ ಕಾಫಿ ಕೊಯ್ಲು ಮುಗಿದಿಲ್ಲ. ಆಗಲೇ ಮಳೆಯಾಗಿ, ಹೂ ಅರಳಿರುವುದರಿಂದ ಕೊಯ್ಲು ಸಾಧ್ಯವಾಗುತ್ತಿಲ್ಲ. ಮಳೆಯಿಂದ ಹಣ್ಣಾದ ಕಾಫಿ ಸಹ ನೆಲಕಚ್ಚುತ್ತಿವೆ' ಎಂದು ನೆಲಜಿ ಗ್ರಾಮದ ಬೆಳೆಗಾರ ಕುಶಾಲಪ್ಪ ಅಳಲು ತೋಡಿಕೊಂಡರು. ಸದ್ಯ ಬಿಸಿಲು ಹೆಚ್ಚಿದ್ದು ಕಾಫಿ ಒಣಗಿಸುವ ಕೆಲಸ ಭರದಿಂದ ಸಾಗಿದೆ.

'ಕಾಫಿ ಕೊಯ್ಲಿನೊಂದಿಗೆ ಹೂಗಳನ್ನು ಜತನದಿಂದ ಕಾಯ್ದುಕೊಳ್ಳಬೇಕಾಗಿದೆ. ಫೆಬ್ರುವರಿ ಅಂತ್ಯದಲ್ಲಿ ಮಳೆ ಸುರಿದಿದ್ದರೆ ಹೆಚ್ಚು ಪ್ರಯೋಜನಕಾರಿಯಾಗುತ್ತಿತ್ತು. ತೋಟದ ಎಲ್ಲಾ ಕೆಲಸಗಳಿಗೆ ಅಡಚಣೆಯಾಗಿದೆ' ಎಂದು ಬಲ್ಲಮಾವಟಿ ಗ್ರಾಮದ ಬೆಳೆಗಾರ ಮಾಚಯ್ಯ ಹೇಳಿದರು.

ಕೊಡಗು ಜಿಲ್ಲೆಯ ನಾಪೋಕ್ಲು ವ್ಯಾಪ್ತಿಯ ಕೆಲವು ಗ್ರಾಮಗಳಲ್ಲಿ ಅಕಾಲಿಕ ಮಳೆಯಿಂದ ಕಾಫಿಯ ಗಿಡಗಳಲ್ಲಿ ಹಣ್ಣಿನ ಜೊತೆಗೆ ಹೂಗಳೂ ಅರಳಿವೆ

ಮುಖ್ಯಾಂಶಗಳು

- ಜನವರಿಯಲ್ಲೇ ಹಲವೆಡೆ ಮಳೆ
- ಮಳೆಯಿಂದ ಅರಳಿದ ಕಾಫಿ ಹೂಗಳು
- ಮುಂದಿನ ಬೆಳೆ ಇಳುವರಿ ಮೇಲೆ ಪರಿಣಾಮ

ಕೊಡಗಿನ ಕೆಲವೆಡೆ ಈಚೆಗೆ ಸುರಿದ ಮಳೆಯಿಂದ ರೊಬಸ್ಟಾ ಕಾಫಿ ಹೂ ಅರಳಿದೆ. ಇದು ಮುಂದಿನ ಬೆಳೆಯ ಇಳುವರಿ ಮೇಲೆ ಪರಿಣಾಮ ಬೀರಲಿದೆ

ಚಂದ್ರಶೇಖರ್,
ಕಾಫಿ ಮಂಡಳಿ ಉಪನಿರ್ದೇಶಕ

ಗಿಡದಲ್ಲಿಯೇ ಒಣಗುತ್ತಿದೆ ಕಾಫಿ ಹಣ್ಣು

ಚಿಕ್ಕಮಗಳೂರು: ಹತ್ತು ದಿನಗಳ ಹಿಂದೆ ಸುರಿದ ಮಳೆಯಿಂದ ಕಾಫಿ ಹೂವುಗಳು ಅರಳಿದ್ದು, ಇದು ಬೆಳೆಗಾರರ ಬದುಕನ್ನು ಮಂಕಾಗಿಸಿದೆ.

ಕಾಫಿ ಹಣ್ಣು ಕೊಯ್ಲಿನ ಸಂದರ್ಭದಲ್ಲಿ ಹೂವು ಅರಳಿರುವುದು ಬೆಳೆಗಾರರನ್ನು ಚಿಂತೆಗೀಡು ಮಾಡಿದೆ. ಈಗ ಹೂವು ಅರಳಿದರೆ ಮುಂದಿನ ವರ್ಷದ ಫಸಲಿನ ಮೇಲೆ ಪರಿಣಾಮ ಬೀರಲಿದೆ. ಶೇ 50ರಷ್ಟು ಇಳುವರಿ ಕಡಿಮೆಯಾಗಲಿದೆ ಎಂಬುದು ಬೆಳೆಗಾರರ ಆತಂಕವಾಗಿದೆ.

ಯುಗಾದಿ ನಂತರ ಬರುವ ರೋಹಿಣಿ ಮಳೆಯನ್ನು ಹೂವಿನ ಮಳೆ ಎಂದು ಕಾಫಿ ಬೆಳೆಗಾರರು ಕರೆಯುತ್ತಾರೆ. ಆದರೆ, ಈ ವರ್ಷ ಜನವರಿಯಲ್ಲಿ ಸುರಿದ ಮಳೆಯಿಂದಾಗಿ ಯಾವುದೇ ಕಾಫಿ ತೋಟಕ್ಕೆ ಹೋದರೂ ಹೂವಿನ ಪರಿಮಳ ಹರಡಿದೆ. ಇನ್ನು ನೀರು ಸಿಗದಿದ್ದರೆ ಈಗ ಅರಳಿರುವ ಹೂವು ಉದುರಿ ಹೋಗಲಿದ್ದು, ಮುಂದಿನ ವರ್ಷದ ಫಸಲು ಭಾರಿ ಪ್ರಮಾಣದಲ್ಲಿ ಕಡಿಮೆಯಾಗಲಿದೆ ಎಂದು ಬೆಳೆಗಾರರು ಅಂದಾಜಿಸಿದ್ದಾರೆ.

'ಈ ಮಳೆ ಎರಡು ವರ್ಷಗಳ ಫಸಲನ್ನು ಆಹುತಿ ಪಡೆದಿದೆ. ಹಣ್ಣಿನ ಮೇಲೆ ಮಳೆಯಾಗಿದ್ದರಿಂದ ಕಾಫಿ ಹಣ್ಣು ಗಿಡದಲ್ಲಿಯೇ ಒಣಗುತ್ತಿದ್ದು, ಬೆಳೆಗಾರರು ನಷ್ಟ ಅನುಭವಿಸುವಂತಾಗಿದೆ. ಮಳೆಯಿಂದ ಪೂರ್ಣ ಪ್ರಮಾಣದಲ್ಲಿ ಹೂವಾಗದ ಕಾರಣ ಮುಂದಿನ ಫಸಲಿಗೂ ನಷ್ಟವಾಗಿದೆ' ಎಂದು ಬೆಳೆಗಾರರು ಹೇಳುತ್ತಾರೆ.

ಈ ಅಕಾಲಿಕ ಮಳೆ ಅರೇಬಿಕಾ ಕಾಫಿಗಿಂತ ರೊಬಸ್ಟಾ ಕಾಫಿಗೆ ಹೆಚ್ಚು ಹಾನಿ ಮಾಡಿದೆ ಎಂದು ಕಾಫಿ ಮಂಡಳಿ ಅಧ್ಯಕ್ಷ ಎಂ.ಜೆ. ದಿನೇಶ್ ಹೇಳಿದರು.

ಫೆಬ್ರುವರಿಯಲ್ಲಿ 'ವೀರ ಕಂಬಳ!'

ರಾಜೇಂದ್ರ ಸಿಂಗ್ ಬಾಬು ನಿರ್ದೇಶನದ 'ವೀರ ಕಂಬಳ' ಫೆಬ್ರುವರಿಯಲ್ಲಿ ತೆರೆಗೆ ಬರಲಿದೆ. ತುಳುನಾಡಿನ ಕಂಬಳದ ಕುರಿತಾದ ಕಥೆಯನ್ನು ಹೊಂದಿರುವ ಚಿತ್ರ ಕನ್ನಡ ಹಾಗೂ ತುಳು ಭಾಷೆಗಳಲ್ಲಿ ತೆರೆ ಕಾಣಲಿದೆ.

'ಕಂಬಳ ಎಂಬುದು ತುಳುನಾಡಿನ ನೆಲಮೂಲದ ಸಾಂಸ್ಕೃತಿಕ ಕ್ರೀಡೆ. ಅದಕ್ಕೆ ಎಂಟುನೂರು ವರ್ಷಗಳಿಗೂ ಹೆಚ್ಚಿನ ಇತಿಹಾಸವಿದೆ. ಕಾಲ ಕಳೆದಂತೆ ಒಂದಷ್ಟು ಕಾನೂನು ತೊಡಕುಗಳಿಂದ ಕಂಬಳ ರೂಪಾಂತರಗಳನ್ನು ಹೊಂದಿದೆ. ದಕ್ಷಿಣ ಕನ್ನಡದ ಮೂಡುಬಿದಿರೆಯ ಬಳಿಯಲ್ಲಿ ವಿಶಾಲವಾದ ಕಂಬಳದ ಗದ್ದೆಯನ್ನು ಸಿದ್ಧಪಡಿಸಿ, ಚಿತ್ರೀಕರಿಸಲಾಗಿದೆ. ಪ್ರತಿ ದಿನ ಇಪ್ಪತ್ತು ಜೊತೆ ಕೋಣಗಳು ಹಾಗೂ ಐನೂರಕ್ಕೂ ಅಧಿಕ ಮಂದಿ ಚಿತ್ರೀಕರಣದಲ್ಲಿ ಪಾಲ್ಗೊಂಡಿದ್ದರು. ಕಂಬಳದಲ್ಲಿ ಕೋಣಗಳನ್ನು ಓಡಿಸುವುದರಲ್ಲಿ ದಾಖಲೆ ಬರೆದಿರುವ ಶ್ರೀನಿವಾಸ್ ಗೌಡ ಇಲ್ಲಿಯೂ ಅದೇ ಪಾತ್ರವನ್ನು ನಿರ್ವಹಿಸಿದ್ದಾರೆ. ಸ್ವರಾಜ್ ಶೆಟ್ಟಿ ಅವರಿಗೆ ಜೊತೆಯಾಗಿದ್ದಾರೆ. ದುಬೈನಲ್ಲಿಯೂ ಚಿತ್ರೀಕರಣ ನಡೆಸಲಾಗಿದೆ' ಎಂದರು ರಾಜೇಂದ್ರ ಸಿಂಗ್ ಬಾಬು.

'ಡೆಡ್ಲಿ ಸೋಮ' ಖ್ಯಾತಿಯ ಆದಿತ್ಯ ನಾಯಕನಾಗಿ ನಟಿಸಿದ್ದಾರೆ. ವಿಜಯ್‌ಕುಮಾರ್ ಕೊಡಿಯಾಲ್ ಬೈಲ್ ಚಿತ್ರಕಥೆ ಮತ್ತು ಸಂಭಾಷಣೆ ಬರೆದಿದ್ದಾರೆ. ವಿನಿತ ವಿಜಯ್ ಕುಮಾರ್ ರೆಡ್ಡಿ ಹಾಗೂ ಅರುಣ್ ರೈ ತೊಡಾರ್ ನಿರ್ಮಾಣ ಮಾಡಿದ್ದಾರೆ. ಪ್ರಕಾಶ್ ರಾಜ್, ರವಿಶಂಕರ್ ಪ್ರಮುಖ ಪಾತ್ರಗಳಲ್ಲಿ ನಟಿಸಿದ್ದರೆ, ರಾಧಿಕಾ ಚೇತನ್ ವಿಶೇಷ ಪಾತ್ರಕ್ಕೆ ಜೀವ ತುಂಬಿದ್ದಾರೆ. ನವೀನ್ ಪಡೀಲ್, ಗೋಪಿನಾಥ್ ಭಟ್, ಭೋಜರಾಜ್ ವಾಮಂಜೂರು ಸೇರಿದಂತೆ ಪ್ರಸಿದ್ಧ ತುಳು ರಂಗಭೂಮಿ ನಟರು ನಟಿಸಿದ್ದಾರೆ. ಮಣಿಕಾಂತ್ ಕದ್ರಿ ಸಂಗೀತ ನಿರ್ದೇಶನ, ಆರ್.ಗಿರಿ ಛಾಯಾಚಿತ್ರಗ್ರಹಣ, ಶ್ರೀನಿವಾಸ್ ಎಸ್. ಬಾಬು ಸಂಕಲನ ಚಿತ್ರಕ್ಕಿದೆ.

ಲೈಫ್ ಎಲ್ಲಿಂದ್ ಎಲ್ಲಿಗೆ ಎಂದ ಹೊಸಬರು

ಲೆನಿನ್, ಅನು ಪ್ರೇಮ

ಬಹುತೇಕ ಹೊಸಬರಿಂದಲೇ ಕೂಡಿರುವ 'ಲೈಫ್ ಎಲ್ಲಿಂದ್ ಎಲ್ಲಿಗೆ' ಚಿತ್ರ ತೆರೆಗೆ ಬರಲು ಸಜ್ಜಾಗಿದೆ. ಚಿತ್ರದ ಹಾಡುಗಳು ಇತ್ತೀಚೆಗಷ್ಟೇ ಬಿಡುಗಡೆಗೊಂಡಿವೆ. ಮೂವರು ಪ್ರಾಣ ಸ್ನೇಹಿತರ ಬದುಕಿನ ಪಯಣದ ಕಥೆಯನ್ನು ಹೊಂದಿರುವ ಚಿತ್ರಕ್ಕೆ ಅರ್ಜುನ್ ಶಿವನ್ ಆ್ಯಕ್ಷನ್ ಕಟ್ ಹೇಳಿದ್ದಾರೆ.

'ಸಿನಿಮಾ ಮಾಡೋದಲ್ಲ, ಅದಾಗಿಯೆ ಆಗಬೇಕು. ಲಾಕ್‌ಡೌನ್ ಸಂದರ್ಭದಲ್ಲಿ ಒಂದು ಸಿನಿಮಾ ಮಾಡಿದ್ದೆ. ಇದು ನನ್ನ ಎರಡನೆ ಚಿತ್ರ. ಇದೊಂದು ಸ್ನೇಹಿತರ ಜರ್ನಿ ಸಿನಿಮಾ. 'ಕಿರಿಕ್ ಪಾರ್ಟಿ' ಚಿತ್ರದ ರೀತಿಯಲ್ಲಿ ಹಾಸ್ಯಮಯ ಸನ್ನಿವೇಶಗಳೇ ಹೆಚ್ಚಿವೆ. ಈ ಚಿತ್ರಕ್ಕಾಗಿ ಮೈಸೂರಿನಿಂದ ದೆಹಲಿವರೆಗೆ ಸುತ್ತಾಡಿದ್ದೇವೆ. ಸ್ನೇಹಿತರ ನಡುವೆ ಅಹಂಕಾರ ಇರಬಾರದು ಎಂಬುದನ್ನು ನಮ್ಮ ಚಿತ್ರದಲ್ಲಿ ತೋರಿಸಿದ್ದೇವೆ. ಪೋಸ್ಟ್ ಪ್ರೊಡಕ್ಷನ್ ಕೆಲಸಗಳು ಮುಗಿದಿದ್ದು, ಮಾರ್ಚ್ ವೇಳೆಗೆ ಚಿತ್ರ ಬಿಡುಗಡೆ ಯೋಚನೆಯಿದೆ' ಎಂದರು ನಿರ್ದೇಶಕ.

ಲೆನಿನ್, ಮಂಜುನಾಥ್, ಕ್ರಿಶ್, ಅರ್ಜುನ್ ಶಿವನ್, ಅನು ಪ್ರೇಮ ಪ್ರಮುಖ ಪಾತ್ರಗಳಲ್ಲಿದ್ದಾರೆ. ವಿಪ್ರ ವೆಂಚರ್ಸ್ ಮೂಲಕ ಮುಳ್ಳೂರು ಗುರುಪ್ರಸಾದ್ ಬಂಡವಾಳ ಹೂಡಿದ್ದಾರೆ. ವೈಶಾಖ ಶಶಿಧರನ್, ಕಿರಣ್ ವಸಿಷ್ಠ ಸಂಗೀತ, ಸುಮಂತ್ ಛಾಯಾಚಿತ್ರಗ್ರಹಣ ಈ ಚಿತ್ರಕ್ಕಿದೆ.

ಜೆನ್–ಜಿ ತಲೆಮಾರಿನ ಕಥೆ 'ಇಂದಿರಾ'

ಇಂದಿನ ಜೆನ್–ಜಿ ತಲೆಮಾರಿನ ಕುರಿತಾದ ಕಥೆಯನ್ನು ಹೊಂದಿರುವ 'ಇಂದಿರಾ' ಚಿತ್ರದ ಶೀರ್ಷಿಕೆ ಬಿಡುಗಡೆ ಸಮಾರಂಭ ಇತ್ತೀಚೆಗಷ್ಟೇ ನಡೆಯಿತು. 'ಜೆನ್–ಜಿ' ಎಂಬ ಅಡಿಬರಹ ಹೊಂದಿರುವ ಚಿತ್ರಕ್ಕೆ ವೇದ್ ಆ್ಯಕ್ಷನ್ ಕಟ್ ಹೇಳುತ್ತಿದ್ದಾರೆ.

'ಈಗ ಎಲ್ಲರ ಅಂಗೈಯಲ್ಲಿಯೂ ಸ್ಮಾರ್ಟ್ ಫೋನ್‌ಗಳು, ಇಂಟರ್‌ನೆಟ್ ಸಂಪರ್ಕ ಲಭ್ಯವಿದ್ದರೂ, ಅದನ್ನು ಅತಿಯಾಗಿ ಬಳಸಿಕೊಳ್ಳುತ್ತಿರುವುದು ಮಾತ್ರ ಇಂದಿನ ಯುವ ತಲೆಮಾರು. ತಂತ್ರಜ್ಞಾನವನ್ನು ಹೇಗೆಲ್ಲ ಬಳಸಿಕೊಳ್ಳುತ್ತಿದೆ? ಹೇಗೆಲ್ಲ ಬಳಸಿಕೊಳ್ಳಬಹುದು ಎಂಬ ಕಥೆಯನ್ನು ಹೊಂದಿರುವ ಚಿತ್ರವಿದು. ಇದೊಂದು ಮಹಿಳಾ ಪ್ರಧಾನ ಕಥಾಹಂದರದ ಸಿನಿಮಾವಾಗಿದ್ದು, ಆ ಕಾರಣದಿಂದಲೇ 'ಇಂದಿರಾ' ಎಂದು ಹೆಸರಿಟ್ಟಿದ್ದೇವೆ. ಸಿನಿಮಾದಲ್ಲಿ ಮನರಂಜನೆಯ ಜೊತೆಗೆ ಸಮಾಜಕ್ಕೆ ಒಂದು ಸಂದೇಶ ಕೂಡ ಇರಲಿದೆ' ಎಂದರು ನಿರ್ದೇಶಕ.

ಕಿರಣ್ ಕುಮಾರ್ ಎಂ. ಚಿತ್ರಕ್ಕೆ ಬಂಡವಾಳ ಹೂಡುತ್ತಿದ್ದಾರೆ. ಮಾರ್ಚ್‌ನಿಂದ ಚಿತ್ರೀಕರಣ ಪ್ರಾರಂಭವಾಗಲಿದ್ದು, ಇದೇ ವರ್ಷಾಂತ್ಯಕ್ಕೆ ಸಿನಿಮಾವನ್ನು ತೆರೆಗೆ ತರುವ ಯೋಚನೆಯಲ್ಲಿದೆ ಚಿತ್ರತಂಡ. ಚಿತ್ರಕ್ಕೆ ರವಿವರ್ಮ ಛಾಯಾಚಿತ್ರಗ್ರಹಣ, ಧನುಶ್ ಸಂಕಲನವಿರಲಿದೆ. ಬೆಂಗಳೂರು, ಮೈಸೂರು, ಮಂಗಳೂರು ಸೇರಿದಂತೆ ಕರ್ನಾಟಕ ಪ್ರಮುಖ ತಾಣಗಳು ಮತ್ತು ಹೊರರಾಜ್ಯಗಳಲ್ಲೂ ಚಿತ್ರೀಕರಣ ನಡೆಸಲು ತಂಡ ಯೋಜಿಸಿದೆ.

ನೋಟು ಸಾಗಣೆ: 6 ಮಂದಿ ಬಂಧನ

₹2 ಸಾವಿರ ಮುಖಬೆಲೆಯ ₹400 ಕೋಟಿ ಮೌಲ್ಯದ ನೋಟುಗಳ ನಾಪತ್ತೆ ಪ್ರಕರಣ

ಪ್ರಜಾವಾಣಿ ವಾರ್ತೆ

ಮುಂಬೈ: ಸುಮಾರು ₹400 ಕೋಟಿ ಮೌಲ್ಯದ ₹2 ಸಾವಿರ ಮುಖಬೆಲೆಯ ನೋಟುಗಳ ಸಾಗಣೆ ಹಾಗೂ ವ್ಯಕ್ತಿಯ ಅಪಹರಣ ಆರೋಪಕ್ಕೆ ಸಂಬಂಧಿಸಿದ ಪ್ರಕರಣದ ತನಿಖೆ ನಡೆಸುತ್ತಿರುವ ವಿಶೇಷ ತನಿಖಾ ತಂಡವು (ಎಸ್ಐಟಿ) ಈವರೆಗೆ ಆರು ಮಂದಿಯನ್ನು ಬಂಧಿಸಿದೆ.

ಜಯೇಶ್ ಕದಂ, ವಿಶಾಲ್ ನಾಯ್ಡು, ಸುನಿಲ್ ಧುಮಾಲ್, ವಿರಾಟ್ ಗಾಂಧಿ, ಜನಾರ್ದನ್ ದೈಗುಡೆ ಮತ್ತು ಸಯ್ಯದ್ ಅಜರ್ ಬಂಧಿತರು.

ಮಹಾರಾಷ್ಟ್ರ–ಕರ್ನಾಟಕ ಗಡಿಯ ಬೆಳಗಾವಿ ಜಿಲ್ಲೆಯ ಖಾನಾಪುರ ವ್ಯಾಪ್ತಿಯ ಅರಣ್ಯ ಮತ್ತು ಅಪಘಾತ ವಲಯವಾದ ಚೋರ್ಲಾ ಘಾಟ್ ಪ್ರದೇಶದಲ್ಲಿ ಅಪಾರ ಪ್ರಮಾಣದ ಹಣವನ್ನು ಸಾಗಿಸುತ್ತಿದ್ದ ಎರಡು ಕಂಟೇನರ್‌ಗಳು 2025ರ ಅಕ್ಟೋಬರ್ 16ರಂದು ನಾಪತ್ತೆಯಾಗಿದ್ದವು.

ವರದಿಗಳ ಪ್ರಕಾರ, ಈ ಹಣವನ್ನು ಕರ್ನಾಟಕದಿಂದ ಗುಜರಾತ್‌ಗೆ ಸಾಗಿಸಿ, ನಂತರ ಬೇರೆ ಬೇರೆ ಮುಖಬೆಲೆಯ ನೋಟುಗಳಾಗಿ ಪರಿವರ್ತಿಸಿ ಮಹಾರಾಷ್ಟ್ರಕ್ಕೆ ಸಾಗಿಸಲು ಉದ್ದೇಶಿಸಲಾಗಿತ್ತು.

'ಕಂಟೇನರ್ ದರೋಡೆಗೆ ಕಿಶೋರ್ ಸಾವ್ಲಾ ಯೋಜನೆ ರೂಪಿಸಿದ್ದರು. ಅವರ ಸಹಚರರು ನನಗೆ ಬಂದೂಕು ತೋರಿಸಿ ಅಪಹರಿಸಿದ್ದರು. ಒಂದು ತಿಂಗಳಿಗೂ ಹೆಚ್ಚು ಕಾಲ ವಶದಲ್ಲಿಟ್ಟುಕೊಂಡು ₹400 ಕೋಟಿ ನೀಡುವಂತೆ ಒತ್ತಾಯಿಸಿ ದೈಹಿಕ ಮತ್ತು ಮಾನಸಿಕವಾಗಿ ಹಿಂಸೆ ನೀಡಿದ್ದರು. ಕೊನೆಗೂ ಅಲ್ಲಿಂದ ತಪ್ಪಿಸಿಕೊಂಡು ಬಂದೆ' ಎಂದು ಇಗತಪುರಿ ನಿವಾಸಿ ಸಂದೀಪ್ ಪಾಟೀಲ್ ಅವರು ನಾಸಿಕ್ ಗ್ರಾಮೀಣ ಪೊಲೀಸರಿಗೆ ನೀಡಿರುವ ದೂರಿನಲ್ಲಿ ತಿಳಿಸಿದ್ದಾರೆ.

'ಕರ್ನಾಟಕ ಮತ್ತು ಗೋವಾ ಪೊಲೀಸರ ಸಮನ್ವಯದೊಂದಿಗೆ ತನಿಖೆ ನಡೆಸಲಾಗುತ್ತಿದೆ. ಕಿಶೋರ್ ಸಾವ್ಲಾ ಠಾಣೆಯ ಬಿಲ್ಡರ್ ಆಗಿದ್ದು, ವಿರಾಟ್ ಗಾಂಧಿ ಅಹಮದಾಬಾದ್ ಮೂಲದ ಹವಾಲಾ ಆಪರೇಟರ್ ಆಗಿದ್ದಾರೆ' ಎಂದು ನಾಸಿಕ್ ಗ್ರಾಮೀಣ ಪೊಲೀಸ್ ವರಿಷ್ಠಾಧಿಕಾರಿ ಬಾಳಾಸಾಹೇಬ್ ಪಾಟೀಲ್ ತಿಳಿಸಿದ್ದಾರೆ.

ಎಫ್ಐಆರ್‌ನಲ್ಲಿ ಠಾಣೆಯ ಬಿಲ್ಡರ್ ಒಬ್ಬರ ಹೆಸರಿದ್ದು, ಕಂಟೇನರ್‌ಗಳು ಉದ್ದೇಶಿತ ಸ್ಥಳಗಳಿಗೆ ತಲುಪಿದ್ದರೆ ಆ ಬಿಲ್ಡರ್ ಪ್ರಮುಖ ಫಲಾನುಭವಿ ಆಗುತ್ತಿದ್ದರು ಎನ್ನಲಾಗಿದೆ.

₹2 ಸಾವಿರ ಮುಖಬೆಲೆಯ ನೋಟುಗಳನ್ನು 2023ರ ಮೇ ತಿಂಗಳಿನಲ್ಲಿ ಚಲಾವಣೆಯಿಂದ ಹಿಂಪಡೆಯಲಾಗಿತ್ತು. ಆದರೂ, ಅವು ಕಾನೂನುಬದ್ಧ ಚಲಾವಣೆಯ ಸ್ಥಾನಮಾನ ಹೊಂದಿವೆ.

ಲೂಟಿ ಪ್ರಕರಣ: ಕೇವಲ ವದಂತಿ– ಎಸ್‌ಪಿ ರಾಮರಾಜನ್

ರಾಮರಾಜನ್

ಬೆಳಗಾವಿ: 'ಕರ್ನಾಟಕ-ಮಹಾರಾಷ್ಟ್ರ ಗಡಿಯ ಚೋರ್ಲಾ ಘಾಟ್‌ನಲ್ಲಿ ₹400 ಕೋಟಿ ನಗದು ಹೊತ್ತ ಎರಡು ಕಂಟೇನರ್‌ಗಳ ಲೂಟಿಗೆ ಸಂಬಂಧಿಸಿ ನಾಸಿಕ್‌ನ ಸಂದೀಪ್ ಪಾಟೀಲ್ ನೀಡಿರುವ ದೂರು ವದಂತಿಯಂತೆ ಕಾಣುತ್ತಿದೆ. ಅದರ ಆಧಾರದ ಮೇಲೆ ಪ್ರಕರಣ ದಾಖಲಿಸಲು ಸಾಧ್ಯವಿಲ್ಲ' ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ.ರಾಮರಾಜನ್ ಹೇಳಿದರು.

ಭಾನುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಸಂದೀಪ 2026ರ ಜನವರಿ 9ರಂದು ನಾಸಿಕ್‌ನ ಪೊಲೀಸರಿಗೆ ನೀಡಿದ ದೂರಿನಲ್ಲಿ, '2025ರ ಅಕ್ಟೋಬರ್ 16ರಂದು ವಿರಾಟ್ ಗಾಂಧಿ ಪರವಾಗಿ ವಿಶಾಲ ನಾಯ್ಡು ಇತರರು ನನ್ನನ್ನು ಅಪಹರಿಸಿದ್ದಾರೆ ಎಂದು ಹೇಳಿಕೊಂಡಿದ್ದರು. ನನ್ನನ್ನು ಅಪಹರಿಸಿದವರು ₹400 ಕೋಟಿ ಲೂಟಿ ಮಾಡಿದ್ದಾಗಿ ತಿಳಿಸಿದ್ದಾರೆ ಎಂದು ಹೇಳಿದ್ದಾರೆ. ಆದರೆ, ಹಣ ಇರುವುದನ್ನು ಸಂದೀಪ್ ನೋಡಿಲ್ಲ' ಎಂದು ತಿಳಿಸಿದರು.

'ಪ್ರಕರಣದ ವಿವರ ಪಡೆಯಲು ಪೊಲೀಸ್ ಸಬ್ ಇನ್‌ಸ್ಪೆಕ್ಟರ್ ಮತ್ತು ಮರಾಠಿಯಲ್ಲಿ ಮಾತನಾಡಬಲ್ಲ ಮೂವರು ಪೊಲೀಸರ ತಂಡವನ್ನು ನಾಸಿಕ್‌ಗೆ ಕಳುಹಿಸಿದ್ದೇವೆ' ಎಂದರು.

'ಘಟನೆ ಕರ್ನಾಟಕ ವ್ಯಾಪ್ತಿಯಲ್ಲಿ ನಡೆದಿರುವುದು ಕಂಡುಬಂದರೆ, ಎಫ್ಐಆರ್ ದಾಖಲಿಸಿ ತನಿಖೆ ಆರಂಭಿಸುತ್ತೇವೆ. ಈಗ ತನಿಖೆಗಾಗಿ ಮಹಾರಾಷ್ಟ್ರ ಪೊಲೀಸರೊಂದಿಗೆ ಸಹಕರಿಸಲು ಸಿದ್ಧರಿದ್ದೇವೆ' ಎಂದರು.

'ಈ ಹಣ ಎಲ್ಲಿಂದ ಬಂತು. ಎಲ್ಲಿಗೆ ಹೊರಟಿತ್ತು? ಎಂಬುದು ಸ್ಪಷ್ಟವಾಗಿಲ್ಲ. ಹಳೇ ನೋಟುಗಳಿವೆ ಎಂದು ನಾಸಿಕ್ ಪೊಲೀಸರ ಪತ್ರದಲ್ಲಿ ಉಲ್ಲೇಖವಾಗಿದೆ. ಆದರೆ, ತನಿಖೆಯಾಗಬೇಕಿದೆ' ಎಂದರು.

ಪತ್ರಕರ್ತ ಮಾರ್ಕ್ ಟುಲ್ಲಿ ಇನ್ನಿಲ್ಲ



ಮಾರ್ಕ್ ಟುಲ್ಲಿ

ನವದೆಹಲಿ (ಪಿಟಿಐ): ಪತ್ರಕರ್ತ, ಲೇಖಕ, ಇತಿಹಾಸಕಾರ ಮಾರ್ಕ್ ಟುಲ್ಲಿ(90) ಅವರು ಬಹುಅಂಗಾಂಗ ವೈಫಲ್ಯದಿಂದಾಗಿ ಭಾನುವಾರ ನಿಧನರಾದರು.

ಕೆಲವು ದಿನಗಳಿಂದ ಅನಾರೋಗ್ಯದಿಂದ ಬಳಲುತ್ತಿದ್ದ ಅವರು ಜನವರಿ 21ರಂದು ದೆಹಲಿಯ ಮ್ಯಾಕ್ಸ್ ಆಸ್ಪತ್ರೆಗೆ ದಾಖಲಾಗಿದ್ದರು. ಭಾನುವಾರ ಆಸ್ಪತ್ರೆಯಲ್ಲೆ ಕೊನೆಯುಸಿರೆಳೆದರು ಎಂದು ಆಸ್ಪತ್ರೆಯ ಮೂಲಗಳು ತಿಳಿಸಿವೆ.

1935ರ ಅಕ್ಟೋಬರ್ 24ರಂದು ಕೋಲ್ಕತ್ತದಲ್ಲಿ ಜನಿಸಿದ್ದ ಟುಲ್ಲಿ ಅವರು 22 ವರ್ಷ ಬಿಬಿಸಿ ದೆಹಲಿ ಬ್ಯೂರೊ ಮುಖ್ಯಸ್ಥರಾಗಿ ಕಾರ್ಯನಿರ್ವಹಿಸಿದ್ದರು. 1974ರಲ್ಲಿ ಬಿಬಿಸಿಯನ್ನು ತೊರೆದ ಟುಲ್ಲಿ, ಬಿಬಿಸಿ ರೇಡಿಯೊದಲ್ಲಿ ಪ್ರಸಾರವಾಗುತ್ತಿದ್ದ 'ಸಮ್‌ಥಿಂಗ್ ಅಂಡರ್‌ಸ್ಟುಡ್' ಕಾರ್ಯಕ್ರಮದ ನಿರೂಪಕರಾಗಿದ್ದರು.

ಭಾರತ ಮತ್ತು ಬ್ರಿಟಿಷ್ ರಾಜರ ಸಾಕ್ಷ್ಯಚಿತ್ರದಿಂದ ಆರಂಭಗೊಂಡು ಭಾರತೀಯ ರೈಲ್ವೆ ಕುರಿತ ಸಾಕ್ಷ್ಯಚಿತ್ರಗಳವರೆಗೆ ಹಲವು ಸಾಕ್ಷ್ಯಚಿತ್ರಗಳ ಭಾಗವಾಗಿ ಟುಲ್ಲಿ ಕೆಲಸ ಮಾಡಿದ್ದರು. ಬಾಂಗ್ಲಾದೇಶದ ಜೊತೆಗಿನ 1971ರ ಯುದ್ಧ, ತುರ್ತು ಪರಿಸ್ಥಿತಿ ಹೇರಿಕೆ ಸೇರಿದಂತೆ ಸ್ವಾತಂತ್ರ್ಯೋತ್ತರ ಭಾರತದ ಐತಿಹಾಸಿಕ ಘಟನೆಗಳನ್ನು ಟುಲ್ಲಿ ಬಿಬಿಸಿಯಲ್ಲಿ ವರದಿ ಮಾಡಿದ್ದರು.

ಟುಲ್ಲಿ ಬಿಬಿಸಿಯಿಂದ ಹೊರಬಂದ ಬಳಿಕ ಯಾವುದೇ ಸಂಸ್ಥೆ ಸೇರದೆ ಸ್ವತಂತ್ರವಾಗಿ ಕೆಲಸ ಮಾಡಿದರು. ದೇಶದ ಸಾಮಾಜಿಕ ಮತ್ತು ರಾಜಕೀಯ ಪರಿಸ್ಥಿತಿಗಳನ್ನು ವಿಶ್ಲೇಷಿಸುತ್ತಿದ್ದರು.

'ನೋ ಫುಲ್ ಸ್ಟಾಪ್ಸ್ ಇನ್ ಇಂಡಿಯಾ', 'ಇಂಡಿಯಾ ಇನ್ ಸ್ಲೋ ಮೋಷನ್' ಮತ್ತು 'ದ ಆರ್ಟ್ ಆಫ್ ಇಂಡಿಯಾ' ಸೇರಿದಂತೆ ಭಾರತದ ಬಗ್ಗೆ ಹಲವು ಕೃತಿಗಳನ್ನು ಬರೆದಿದ್ದಾರೆ.

'ಆಪರೇಷನ್ ಬ್ಲೂ ಸ್ಟಾರ್ ಮತ್ತು ಪಂಜಾಬ್ ಸಮಸ್ಯೆಗಳ ಕುರಿತಾಗಿ ಬರೆದ 'ಅಮೃತಸರ: ಮಿ.ಗಾಂಧೀಸ್ ಲಾಸ್ಟ್ ಬ್ಯಾಟಲ್' ಪುಸ್ತಕವು ಮೊದಲ ಕೃತಿ.

ಬ್ರಿಟನ್ ನೀಡುವ ಅತ್ಯುನ್ನತ ನೈಟ್ ಗೌರವವನ್ನು 2002ರಲ್ಲಿ ಪಡೆದ ಟುಲ್ಲಿ, 1992ರಲ್ಲಿ ದೇಶದ ಉನ್ನತ ನಾಗರಿಕ ಪುರಸ್ಕಾರ ಪದ್ಮಶ್ರೀ ಮತ್ತು 2005ರಲ್ಲಿ ಪದ್ಮಭೂಷಣಕ್ಕೆ ಭಾಜನರಾಗಿದ್ದರು.

ರಾಥಾರ್ ವಿರುದ್ಧ ರೆಡ್‌ಕಾರ್ನರ್

ನವದೆಹಲಿ/ಶ್ರೀನಗರ (ಪಿಟಿಐ): ದೆಹಲಿಯ ಕೆಂಪುಕೋಟೆ ಬಳಿ ಸಂಭವಿಸಿದ ಸ್ಫೋಟ ಪ್ರಕರಣದ ಸಹ ಸೂತ್ರಧಾರಿ ಡಾ.ಮುಜಫರ್ ರಾಥಾರ್ ವಿರುದ್ಧ ಇಂಟರ್‌ಪೋಲ್ ಮೂಲಕ ರೆಡ್ ಕಾರ್ನರ್ ನೋಟಿಸ್ ಹೊರಡಿಸಿ, ಬಂಧಿಸಲು ತಯಾರಿ ನಡೆಸಲಾಗಿದೆ ಎಂದು ಅಧಿಕಾರಿಗಳು ಭಾನುವಾರ ತಿಳಿಸಿದ್ದಾರೆ.

ವೈಟ್‌ಕಾಲರ್ ಭಯೋತ್ಪಾದನೆ ಜಾಲದ ಭಾಗವಾಗಿರುವ ರಾಥಾರ್ ನ.10ರಂದು ನಡೆದಿದ್ದ ಸ್ಫೋಟಕ್ಕೆ ಸಹಕಾರ ಮತ್ತು ಅಫ್ಗಾನ್‌ನಿಂದ ಹಣಕಾಸು ನೆರವು ಒದಗಿಸಿದ್ದ ಎನ್ನುವುದು ತನಿಖೆ ವೇಳೆ ಪತ್ತೆಯಾಗಿದೆ.

ಮಕ್ಕಳ ವೈದ್ಯನಾಗಿರುವ ಮುಜಫರ್‌ನನ್ನು ಈಗಾಗಲೇ ಎನ್ಐಎ (ರಾಷ್ಟ್ರೀಯ ತನಿಖಾ ಸಂಸ್ಥೆ) ವಿಶೇಷ ನ್ಯಾಯಾಲಯ ಘೋಷಿತ ಅಪರಾಧಿ ಎಂದು ನಿರ್ಧರಿಸಿದೆ.

ಮಾಜಿ ಪ್ರಿಯಕರನ ಪತ್ನಿಗೆ ಎಚ್‌ಐವಿ ಸೋಂಕು ತಗುಲಿಸಿದ ಮಹಿಳೆ

ಕರ್ನೂಲು (ಆಂಧ್ರಪ್ರದೇಶ): ಮಾಜಿ ಪ್ರಿಯಕರನ ಪತ್ನಿಗೆ ಎಚ್‌ಐವಿ ಸೋಂಕಿತರ ರಕ್ತವಿದ್ದ ಇಂಜೆಕ್ಷನ್ ನೀಡಿದ ಆರೋಪದಡಿ ಮಹಿಳೆ ಸೇರಿದಂತೆ ನಾಲ್ವರನ್ನು ಬಂಧಿಸಲಾಗಿದೆ.

ಕರ್ನೂಲು ನಿವಾಸಿ ಬಿ. ಬೋಯ ವಸುಂಧರಾ (34), ಖಾಸಗಿ ಆಸ್ಪತ್ರೆಯ ನರ್ಸ್ ಕೊಂಗೆ ಜ್ಯೋತಿ(40) ಬಂಧಿತ ಆರೋಪಿಗಳಲ್ಲಿ ಪ್ರಮುಖರು.

ಮಾಜಿ ಪ್ರಿಯಕರನು ವೈದ್ಯೆಯೊಬ್ಬರನ್ನು ಮದುವೆ ಆಗಿದ್ದನ್ನು ಸಹಿಸದ ಆರೋಪಿ ವಸುಂಧರಾ ಎಚ್‌ಐವಿ ಸೋಂಕಿತರ ರಕ್ತವಿದ್ದ ಇಂಜೆಕ್ಷನ್ ನೀಡಿ ಅವರನ್ನು ದೂರ ಮಾಡಲು ಯತ್ನಿಸಿದ್ದಾರೆ.

ಸಂತ್ರಸ್ತೆಯು ಸ್ಕೂಟರ್‌ನಲ್ಲಿ ಹೋಗುತ್ತಿದ್ದಾಗ ಮೋಟಾರು ಬೈಕ್‌ನಲ್ಲಿ ಬಂದ ಇಬ್ಬರು ವ್ಯಕ್ತಿಗಳು ಉದ್ದೇಶಪೂರ್ವಕವಾಗಿ ಗುದ್ದಿದ್ದಾರೆ. ಕೆಳಗೆ ಬಿದ್ದು ಗಾಯಗೊಂಡಿದ್ದ ಅವರಿಗೆ ಸಹಾಯ ಮಾಡುವ ನೆಪದಲ್ಲಿ ಬಂದಿದ್ದ ಆರೋಪಿ ವಸುಂಧರಾ, ಆಟೊ ರಿಕ್ಷಾದಲ್ಲಿ ಕೂರಿಸಲು ಕರೆದುಕೊಂಡು ಹೋಗಿದ್ದಾರೆ. ಈ ವೇಳೆ ಅನುಮಾನಗೊಂಡ ಸಂತ್ರಸ್ತೆ ಕಿರುಚಾಡಿದ್ದಾರೆ. ಸ್ಥಳದಿಂದ ಪರಾರಿಯಾಗುವ ಮೊದಲು ಆರೋಪಿ ವಸುಂಧರಾ ಸಂತ್ರಸ್ತೆಗೆ ಎಚ್‌ಐವಿ ಸೋಂಕಿತ ರಕ್ತವಿದ್ದ ಇಂಜೆಕ್ಷನ್ ಅನ್ನು ಚುಚ್ಚಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ಸರ್ಕಾರಿ ಆಸ್ಪತ್ರೆಗೆ ಚಿಕಿತ್ಸೆಗಾಗಿ ಬರುತ್ತಿದ್ದ ವ್ಯಕ್ತಿಗಳಿಂದ ಆರೋಪಿಗಳು ಎಚ್‌ಐವಿ ಸೋಂಕಿತ ರಕ್ತವನ್ನು ಸಂಗ್ರಹಿಸುತ್ತಿದ್ದರು ಎಂದು ಪೊಲೀಸರು ತಿಳಿಸಿದ್ದಾರೆ.

ಸಂತ್ರಸ್ತೆಯ ಪತಿ ನೀಡಿದ ದೂರಿನ ಆಧಾರದಲ್ಲಿ ಪ್ರಕರಣ ದಾಖಲಾಗಿದೆ.

'ಸಂಘರ್ಷ ಪೀಡಿತ ಜಗತ್ತಿಗೆ ಶಾಂತಿದೂತ'

ಮುರ್ಮು

ನವದೆಹಲಿ (ಪಿಟಿಐ): ಜಾಗತಿಕವಾಗಿ ಭೌಗೋಳಿಕ, ರಾಜಕೀಯ ಸಂಘರ್ಷಗಳು ತೀವ್ರಗೊಳ್ಳುತ್ತಿರುವ ಸಂದರ್ಭದಲ್ಲಿ ಭವಿಷ್ಯದ ಪೀಳಿಗೆ ರಕ್ಷಣೆಗಾಗಿ ಭಾರತವು ಇಡೀ ವಿಶ್ವಕ್ಕೆ ಶಾಂತಿ ಸಂದೇಶವನ್ನು ಸಾರುತ್ತಿದೆ ಎಂದು ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಹೇಳಿದ್ದಾರೆ.

77ನೇ ಗಣರಾಜ್ಯೋತ್ಸವದ ಮುನ್ನಾ ದಿನವಾದ ಭಾನುವಾರ ರಾಷ್ಟ್ರಕ್ಕೆ ಸಂದೇಶ ನೀಡಿದ ಅವರು, ಆಪರೇಷನ್ ಸಿಂಧೂರ, ಮಹಿಳಾ ಸ್ವಾವಲಂಬನೆ, ದೇಶದ ಆರ್ಥಿಕತೆಯ ಬೆಳವಣಿಗೆ ಸೇರಿದಂತೆ ಹಲವು ಪ್ರಮುಖ ವಿಚಾರಗಳನ್ನು ಉಲ್ಲೇಖಿಸಿದರು.

'ಜಗತ್ತಿನಲ್ಲಿ ಶಾಂತಿ ಇದ್ದರೆ ಮಾತ್ರ ಭವಿಷ್ಯದ ಮಾನವ ಪೀಳಿಗೆಯ ಭವಿಷ್ಯ ಸುಭದ್ರವಾಗಿರಲು ಸಾಧ್ಯ. ಜಾಗತಿಕ ಸಾಮರಸ್ಯಕ್ಕಾಗಿ ಭಾರತವು ಪ್ರಾಚೀನ ನಾಗರಿಕತೆಯನ್ನು ಪುನರ್ ಪರಿಚಯಿಸುವ ನಿಟ್ಟಿನಲ್ಲಿ ಶಾಂತಿದೂತನ ಪಾತ್ರವಹಿಸುತ್ತಿದೆ' ಎಂದು ಹೇಳಿದರು.

'ಆಪರೇಷನ್ ಸಿಂಧೂರ'ದ ಯಶಸ್ಸು ರಾಷ್ಟ್ರೀಯ ಸುರಕ್ಷತೆಯ ಬದ್ಧತೆಯನ್ನು ತೋರಿಸುತ್ತದೆ. ಗಡಿಯಾಚೆಗಿನ ಉಗ್ರರ ನೆಲೆಗಳನ್ನು ನಾಶ ಮಾಡಿದ್ದು ರಕ್ಷಣಾ ಕ್ಷೇತ್ರದಲ್ಲಿನ ಸಾಮರ್ಥ್ಯವನ್ನು ಸಾಬೀತು ಮಾಡಿದೆ ಎಂದರು.

ನಾರಿಶಕ್ತಿ ಅಡಿಗಲ್ಲು: 'ನಾರಿ ಶಕ್ತಿ'ಯ ಪ್ರಗತಿಯನ್ನು ಕೊಂಡಾಡಿದ ರಾಷ್ಟ್ರಪತಿ ಮುರ್ಮು ಅವರು, 2047ರ ಒಳಗೆ ಭಾರತವನ್ನು ಅಭಿವೃದ್ಧಿ ಹೊಂದಿದ ರಾಷ್ಟ್ರವನ್ನಾಗಿಸಲು 'ನಾರಿ ಶಕ್ತಿ' ಅಡಿಗಲ್ಲಾಗಿದೆ. ಮಹಿಳೆಯರ ಕ್ರಿಯಾಶೀಲ ಮತ್ತು ಸ್ವಾವಲಂಬಿ ಪಾಲುದಾರಿಕೆ ದೇಶದ ಪ್ರಗತಿಗೆ ಮಹತ್ವದ್ದಾಗಿದೆ. ಮಾದರಿ ಭಾರತದ ಕಥನವು ಅದರ ಹೆಣ್ಣು ಮಕ್ಕಳಿಂದ ಬರೆಯಲ್ಪಡುತ್ತಿದೆ ಎಂದು ಬಣ್ಣಿಸಿದರು.

ಬ್ಯಾಂಡ್...

ಪಿಟಿಐ ಚಿತ್ರ

ಜೈಪುರದ ಜನಪಥ್‌ನಲ್ಲಿ ಸಂಗೀತವಾದ್ಯ ಮತ್ತು ಅಶ್ವದಳದ ಸಿಬ್ಬಂದಿ ಗಣರಾಜ್ಯೋತ್ಸವದ ಮುನ್ನಾ ದಿನ ಭಾನುವಾರ ಪ್ರದರ್ಶನ ನೀಡಿದರು

ನೌಶೀರಾದಿಂದ ಕರ್ತವ್ಯಪಥದತ್ತ...

ರಜೌರಿ/ಜಮ್ಮು (ಪಿಟಿಐ): ಜಮ್ಮು ಮತ್ತು ಕಾಶ್ಮೀರದ ರಜೌರಿ ಜಿಲ್ಲೆಯ ನೌಶೀರಾ ಎಂಬ ಹಳ್ಳಿಯಲ್ಲಿ ಜನಿಸಿದ ಸಿಮ್ರನ್ ಬಾಲಾ ಅವರು, ಗಣರಾಜ್ಯೋತ್ಸದಲ್ಲಿ ಕರ್ತವ್ಯ ಪಥದಲ್ಲಿ ಎಲ್ಲ ಪುರುಷ ಸಿಆರ್‌ಪಿಎಫ್ ಯೋಧರ ತುಕಡಿಯನ್ನು ಮುನ್ನಡೆಸಲಿದ್ದಾರೆ.

ಈ ಹಿಂದೆಯೂ ಮಹಿಳಾ ಅಧಿಕಾರಿಗಳು ಗಣರಾಜ್ಯೋತ್ಸದ ದಿನ ತುಕಡಿಗಳನ್ನು ಮುನ್ನಡೆಸಿದ್ದಾರೆ. ಆದರೆ, ಇದೇ ಮೊದಲ ಬಾರಿಗೆ ಮಹಿಳಾ ಅಧಿಕಾರಿಯೊಬ್ಬರು 140 ಸಿಆರ್‌ಪಿಎಫ್ ಯೋಧರು ಇರುವ ತುಕಡಿಯೊಂದನ್ನು ಮುನ್ನಡೆಸಲಿದ್ದಾರೆ. 26 ವರ್ಷದ ಸಿಮ್ರನ್ ಈ ಸಾಧನೆಗೆ ಪಾತ್ರರಾಗಿದ್ದಾರೆ.

ಕನಿಕರ ಇಲ್ಲದ ಕಾನೂನಿನಿಂದ ದಬ್ಬಾಳಿಕೆ: ಸೂರ್ಯಕಾಂತ್

ಸೂರ್ಯಕಾಂತ್

ಪಣಜಿ (ಪಿಟಿಐ): 'ಕನಿಕರ ಇಲ್ಲದ ಕಾನೂನು ದಬ್ಬಾಳಿಕೆಗೆ ಎಡೆಮಾಡಿ ಕೊಟ್ಟರೆ, ಕಾನೂನಿಲ್ಲದ ಕನಿಕರವು ಅರಾಜಕತೆಗೆ ದಾರಿ ಮಾಡಿ ಕೊಡಲಿದೆ' ಎಂದು ಭಾರತದ ಮುಖ್ಯ ನ್ಯಾಯಮೂರ್ತಿ (ಸಿಜೆಐ) ಸೂರ್ಯಕಾಂತ್ ಭಾನುವಾರ ಇಲ್ಲಿ ಅಭಿಪ್ರಾಯಪಟ್ಟರು.

ಗೋವಾ ಕಾನೂನು ಸೇವಾ ಪ್ರಾಧಿಕಾರವು ಮಾದಕ ವಸ್ತು ಬಳಕೆಯ ಬಗ್ಗೆ ಆಯೋಜಿಸಿದ್ದ 30 ದಿನಗಳ ವಿಶೇಷ ಜಾಗೃತಿ ಅಭಿಯಾನದ ಸಮಾರೋಪದಲ್ಲಿ ಮಾತನಾಡಿದ ಅವರು, 'ಮಾದಕವಸ್ತು ಬಳಕೆಯು ಕ್ರಿಮಿನಲ್ ಸಮಸ್ಯೆಯಷ್ಟೇ ಅಲ್ಲ. ಸಾಮಾಜಿಕ, ಮಾನಸಿಕ ಹಾಗೂ ವೈದ್ಯಕೀಯ ಸಮಸ್ಯೆಯೂ ಆಗಿದ್ದು, ಇದಕ್ಕೆ ಸಮಾಲೋಚನಾ ಕ್ರಮದ ಅಗತ್ಯವಿದೆ' ಎಂದರು.

'ನಾಲ್ಕು ದಶಕಗಳಿಂದಲೂ ನಮ್ಮ ನ್ಯಾಯದಾನದ ವ್ಯವಸ್ಥೆಯಲ್ಲಿನ ವಿಕಾಸವನ್ನು ನಾನು ಗಮನಿಸಿದ್ದು, ಸಹಾನುಭೂತಿ ಇಲ್ಲದ ಕಾನೂನು ನಿರಂಕುಶ ಆಡಳಿತಕ್ಕೆ ಅವಕಾಶ ಕಲ್ಪಿಸಿದರೆ, ಕಾನೂನಿಲ್ಲದ ಸಹಾನುಭೂತಿಯು ಗೊಂದಲಕ್ಕೆ ಆಸ್ಪದ ನೀಡಲಿದೆ' ಎಂದು ಹೇಳಿದರು.

'ಅಭಿಯಾನದಲ್ಲಿ ಪಾಲ್ಗೊಂಡಿದ್ದ ವಿದ್ಯಾರ್ಥಿಗಳೊಂದಿಗೆ ಮಾತನಾಡಿದಾಗ, ಜಾಗೃತಿ ಅಭಿಯಾನವು ಜನರ ಮನಸ್ಸಿನಲ್ಲಿ ಭಯವನ್ನು ಸೃಷ್ಟಿಸದೆ ಸಂವೇದನಾಶೀಲವಾಗಿದೆ' ಎಂಬುದು ಗೊತ್ತಾಯಿತು ಎಂದರು.

'ಮಾದಕವಸ್ತು ಸೇವನೆಯು ವ್ಯಕ್ತಿಗಳನ್ನಷ್ಟೇ ಹಾಳು ಮಾಡಲ್ಲ. ಕುಟುಂಬಗಳು ಹಾಗೂ ಸಮಾಜವನ್ನೇ ನಾಶ ಮಾಡಲಿದೆ' ಎಂದು ಹೇಳಿದರು.

ಗೋವಾ ಮುಖ್ಯಮಂತ್ರಿ ಪ್ರಮೋದ್ ಸಾವಂತ್, ಸುಪ್ರೀಂ ಕೋರ್ಟ್‌ನ ನ್ಯಾಯಮೂರ್ತಿಗಳಾದ ಜೆ.ಕೆ. ಮಾಹೇಶ್ವರಿ, ಮನಮೋಹನ್, ಬಾಂಬೆ ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿ ಚಂದ್ರಶೇಖರ್ ಸಮಾರಂಭದಲ್ಲಿ ಭಾಗಿಯಾಗಿದ್ದರು.

ನೀಟ್: ಮೃತ ಆಕಾಂಕ್ಷಿ ಬಟ್ಟೆಯಲ್ಲಿ ವೀರ್ಯ

ಪಟ್ನಾ (ಪಿಟಿಐ): ನೀಟ್‌ಗೆ ತಯಾರಿ ನಡೆಸುತ್ತಿದ್ದ ಯುವತಿಯೊಬ್ಬರು ಮೃತಪಟ್ಟಿದ್ದ ಪ್ರಕರಣವೀಗ ಹೊಸ ತಿರುವು ಪಡೆದುಕೊಂಡಿದೆ. ಮೃತ ಯುವತಿಯ ಬಟ್ಟೆಯಲ್ಲಿ ವೀರ್ಯದ ಕಲೆಗಳು ಪತ್ತೆಯಾಗಿವೆ ಎಂದು ವಿಧಿವಿಜ್ಞಾನ ಪ್ರಯೋಗಾಲಯದ ವರದಿ ತಿಳಿಸಿದ್ದು, ಯುವತಿ ಮೇಲೆ ಲೈಂಗಿಕ ದೌರ್ಜನ್ಯ ನಡೆದಿರುವ ಬಗ್ಗೆ ಶಂಕೆ ವ್ಯಕ್ತವಾಗಿದೆ.

ಪತ್ತೆಯಾಗಿರುವ ವೀರ್ಯಕ್ಕೆ ಸಂಬಂಧಿಸಿದ ಡಿಎನ್‌ಎ ಮಾಹಿತಿಗಳನ್ನು ಕಲೆಹಾಕಲಾಗುತ್ತಿದೆ. ಅದನ್ನು ಆರೋಪಿಗಳ ಡಿಎನ್‌ಎಯೊಂದಿಗೆ ತಾಳೆ ಮಾಡಲಾಗುತ್ತದೆ ಎಂದು ಪೊಲೀಸರು ತಿಳಿಸಿದ್ದಾರೆ.

ವೈದ್ಯಕೀಯ ಪ್ರವೇಶ ಪರೀಕ್ಷೆಗೆ (ನೀಟ್) ತಯಾರಿ ನಡೆಸುತ್ತಿದ್ದ 18 ವರ್ಷದ ಯುವತಿ ಪಟ್ನಾದ ಶಂಭು ಬಾಲಕಿಯರ ವಸತಿನಿಲಯದ ಕೋಣೆಯೊಂದರಲ್ಲಿ ಪ್ರಜ್ಞಾಹೀನರಾಗಿ ಪತ್ತೆಯಾಗಿದ್ದರು. ಕೆಲ ದಿನಗಳ ಕಾಲ ಕೋಮಾದಲ್ಲಿದ್ದ ಅವರು ಜನವರಿ 11ರಂದು ಮೃತಪಟ್ಟಿದ್ದರು. ಈ ಪ್ರಕರಣದ ಬಗ್ಗೆ ವಿಶೇಷ ತನಿಖಾ ತಂಡ ತನಿಖೆ ನಡೆಸುತ್ತಿದೆ.

ಮೃತ ಯುವತಿಯ ಗುಪ್ತಾಂಗದಲ್ಲಿ ಗಾಯಗಳು ಮತ್ತು ಮೈಮೇಲೆ ಪರಚಿದ ಗಾಯಗಳಿದ್ದವು ಎಂದು ಮರಣೋತ್ತರ ಪರೀಕ್ಷಾ ವರದಿ ತಿಳಿಸಿತ್ತು.

ಪ್ರಶಾಂತ್ ಬೆಂಬಲ

ನೀಟ್ ಆಕಾಂಕ್ಷಿ ಸಾವಿಗೆ ಸಂಬಂಧಿಸಿದ ಕಾನೂನು ಹೋರಾಟಕ್ಕೆ ಅವರ ಕುಟುಂಬಸ್ಥರಿಗೆ ಸಂಪೂರ್ಣ ಬೆಂಬಲ ನೀಡುವುದಾಗಿ ಜನಸುರಾಜ್ ಪಕ್ಷದ ಸಂಸ್ಥಾಪಕ ಪ್ರಶಾಂತ್ ಕಿಶೋರ್ ಭಾನುವಾರ ಭರವಸೆ ನೀಡಿದ್ದಾರೆ.

ಘಟನೆಗೆ ಸಂಬಂಧಿಸಿ ಕರ್ತವ್ಯಲೋಪ ಎಸಗಿದ ಆರೋಪದಡಿ ಇಬ್ಬರು ಪೊಲೀಸ್ ಅಧಿಕಾರಿಗಳನ್ನು ಅಮಾನತುಗೊಳಿಸಲಾಗಿದೆ.

ಆರ್‌ಜೆಡಿ ಕಾರ್ಯಾಧ್ಯಕ್ಷರಾಗಿ ತೇಜಸ್ವಿ

ಪಟ್ನಾ (ಪಿಟಿಐ): ರಾಷ್ಟ್ರೀಯ ಜನತಾದಳದ (ಆರ್‌ಜೆಡಿ) ಕಾರ್ಯಾಧ್ಯಕ್ಷರಾಗಿ ತೇಜಸ್ವಿ ಯಾದವ್ ಭಾನುವಾರ ಆಯ್ಕೆಯಾಗಿದ್ದಾರೆ.

ನಗರದಲ್ಲಿ ನಡೆದ ರಾಷ್ಟ್ರೀಯ ಕಾರ್ಯಕಾರಿಣಿಯಲ್ಲಿ ಆರ್‌ಜೆಡಿ ವರಿಷ್ಠ ಲಾಲೂ ಪ್ರಸಾದ್ ಅವರ ಕಿರಿಯ ಪುತ್ರನನ್ನು ಪಕ್ಷದ ಉತ್ತರಾಧಿಕಾರಿಯನ್ನಾಗಿ ಆಯ್ಕೆ ಮಾಡಿಕೊಳ್ಳಲಾಗಿದೆ.

ಈಚೆಗೆ ನಡೆದ ಬಿಹಾರ ವಿಧಾನಸಭಾ ಚುನಾವಣೆಯಲ್ಲಿ ಆರ್‌ಜೆಡಿ ಹಾಗೂ ತೇಜಸ್ವಿ ಯಾದವ್‌ಗೆ ತೀವ್ರ ಮುಖಭಂಗವಾಗಿತ್ತು. ತೇಜಸ್ವಿ ಮಹಾಘಟಬಂಧನ್‌ನ ಮುಖ್ಯಮಂತ್ರಿ ಅಭ್ಯರ್ಥಿಯೂ ಆಗಿದ್ದರು.

ಲಾಲೂ ಪ್ರಸಾದ್, ತೇಜಸ್ವಿ ಯಾದವ್, ಸಂಸದರಾದ ಮೀಸಾ ಭಾರತಿ ಸೇರಿದಂತೆ ಪಕ್ಷದ ಹಿರಿಯ ನಾಯಕರು ಭಾಗಿಯಾಗಿದ್ದ ರಾಷ್ಟ್ರೀಯ ಕಾರ್ಯಕಾರಿಣಿಯಲ್ಲಿ, ಪಕ್ಷದ ಉತ್ತರಾಧಿಕಾರಿ ಯಾರು ಎಂಬುದನ್ನು ಸ್ಪಷ್ಟಪಡಿಸುವ ನಿರ್ಧಾರ ತೆಗೆದುಕೊಳ್ಳಲಾಗಿದೆ ಎಂದು ಆರ್‌ಜೆಡಿ 'ಎಕ್ಸ್'ನಲ್ಲಿ ತಿಳಿಸಿದೆ.

ತೇಜಸ್ವಿ ಯಾದವ್ ಬಿಹಾರದ ಮಾಜಿ ಉಪಮುಖ್ಯಮಂತ್ರಿ. ಪ್ರಸ್ತುತ ವಿಧಾನಸಭೆಯ ವಿರೋಧ ಪಕ್ಷದ ನಾಯಕರಾಗಿದ್ದಾರೆ.

'ಪಕ್ಷದ ಸಂಘಟನೆಯನ್ನು ಬೂತ್ ಮಟ್ಟದಿಂದ ಪುನರುಜ್ಜೀವನಗೊಳಿಸಲು ಯೋಚಿಸುತ್ತಿರುವೆ' ಎಂದು ಶನಿವಾರವಷ್ಟೇ ಯಾದವ್ ಹೇಳಿದ್ದರು.

'ಸಂಚುಕೋರರ ಕೈಯಲ್ಲಿ ಆರ್‌ಜೆಡಿ'

ಕಾರ್ಯಕಾರಿಣಿ ಆರಂಭಕ್ಕೂ ಮುನ್ನವೇ ಲಾಲೂ ಪ್ರಸಾದ್ ಅವರ ಪುತ್ರಿ ರೋಹಿಣಿ ಆಚಾರ್ಯ ಅವರು ಸಾಮಾಜಿಕ ಮಾಧ್ಯಮದಲ್ಲಿ ತಮ್ಮ ಅಸಮಾಧಾನ ವ್ಯಕ್ತಪಡಿಸಿದರು.

'ಪಕ್ಷವು ನುಸುಳುಕೋರರು ಮತ್ತು ಸಂಚುಕೋರರ ಕೈಗೆ ಜಾರಿದೆ. ಲಾಲೂ ಅವರ ಸಿದ್ಧಾಂತವನ್ನು ನಾಶಗೊಳಿಸುವುದೇ ಇವರ ಏಕೈಕ ಕಾರ್ಯಸೂಚಿಯಾಗಿದೆ' ಎಂದು 'ಎಕ್ಸ್'ನಲ್ಲಿ ಹರಿಹಾಯ್ದಿದ್ದಾರೆ.

ಯಾರೊಬ್ಬರ ಹೆಸರನ್ನೂ ಪ್ರಸ್ತಾಪಿಸದ ರೋಹಿಣಿ, 'ಜವಾಬ್ದಾರಿ ಹೊತ್ತವರು ಪ್ರಶ್ನೆಗಳಿಂದ ತಪ್ಪಿಸಿಕೊಳ್ಳದೇ ಅಥವಾ ಗೊಂದಲವನ್ನು ಸೃಷ್ಟಿಸುವ ಬದಲು, ಆತ್ಮಾವಲೋಕನ ಮಾಡಿಕೊಳ್ಳಬೇಕು' ಎಂದಿದ್ದಾರೆ.

ಮದ್ರಾಸ್ ಹೈಕೋರ್ಟ್‌ನ ಮದುರೆ ಪೀಠದ ನ್ಯಾ. ಜಿ.ಆರ್. ಸ್ವಾಮಿನಾಥನ್ ಹೇಳಿಕೆ

'ಕೆಲಸದಿಂದ ತೆಗೆಯುವುದಿಲ್ಲವೆಂಬ ನಂಬಿಕೆ ಇದೆ'

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು
- ವಾಗ್ದಂಡನೆ ನೋಟಿಸ್ ನೀಡಿದ್ದ 'ಇಂಡಿಯಾ' ಬಣದ ಸಂಸದರು
- ಹೃದಯದಲ್ಲಿ ಸನಾತನ ಧರ್ಮ: ಸ್ವಾಮಿನಾಥನ್

ಚೆನ್ನೈ: 'ಇಂಡಿಯಾ' ಬಣದ ಸಂಸದರು ತಮ್ಮ ವಿರುದ್ಧ ಮಂಡಿಸಿದ ವಾಗ್ದಂಡನೆ ನೋಟಿಸ್ ಕುರಿತು ಮೌನ ಮುರಿದಿರುವ ಮದ್ರಾಸ್ ಹೈಕೋರ್ಟ್‌ನ ಮದುರೆ ಪೀಠದ ನ್ಯಾಯಮೂರ್ತಿ ಜಿ.ಆರ್. ಸ್ವಾಮಿನಾಥನ್, 'ನನಗೆ ನಾಲ್ಕೂವರೆ ವರ್ಷಗಳ ಸೇವಾವಧಿ ಇದ್ದು, ನನ್ನನ್ನು ಕೆಲಸದಿಂದ ತೆಗೆದುಹಾಕುವುದಿಲ್ಲ ಎಂಬ ನಂಬಿಕೆ ಇದೆ' ಎಂದು ಹೇಳಿದರು.

ಧಾರಾ ಫೌಂಡೇಶನ್ ಶನಿವಾರ ಆಯೋಜಿಸಿದ್ದ ಕಾರ್ಯಕ್ರಮವನ್ನು ಜಿ.ಆರ್. ಸ್ವಾಮಿನಾಥನ್ ಅವರು ದೀಪಸ್ತಂಭದಲ್ಲಿ ದೀಪ ಬೆಳಗಿಸುವ ಮೂಲಕ ಉದ್ಘಾಟಿಸಿದರು. ಇದು, ಕಾರ್ತಿಕ ದೀಪೋತ್ಸವದ ಸಂದರ್ಭದಲ್ಲಿ ತಿರುಪರನ್‌ಕುಂದ್ರಂ ಬೆಟ್ಟದ ಮುರುಗನ್ ದೇವಸ್ಥಾನದ ಬಳಿ ಇರುವ ಕಲ್ಲಿನ ದೀಪಸ್ತಂಭದಲ್ಲಿ ದೀಪ ಬೆಳಗಿಸಬೇಕು ಎಂದು ಜಿ.ಆರ್. ಸ್ವಾಮಿನಾಥನ್ ಅವರೇ ಡಿ.3ರಂದು ನೀಡಿದ್ದ ತೀರ್ಪನ್ನು ಹೋಲುವಂತಿತ್ತು.

ಪೀಠದ ತೀರ್ಪನ್ನು ದೇವಸ್ಥಾನದ ಆಡಳಿತ ಮಂಡಳಿ ಪಾಲಿಸಿರಲಿಲ್ಲ. ಬೆಟ್ಟದ ದಾರಿ ಮಧ್ಯೆ ಇರುವ ಗಣೇಶ ದೇವಾಲಯದ (ಉಚ್ಚಿ ಪಿಳ್ಳಯಾರ್ ಕೋವಿಲ್) ಸಮೀಪ ಕಾರ್ತಿಕ ದೀಪವನ್ನು ಬೆಳಗಿಸಿತ್ತು. ಹೀಗಾಗಿ, ಸ್ವಾಮಿನಾಥನ್ ಅವರು ಸರ್ಕಾರದ ವಿರುದ್ಧ ನ್ಯಾಯಾಂಗ ನಿಂದನೆ ಪ್ರಕ್ರಿಯೆ ಆರಂಭಿಸಿದ್ದರು.

'ಉಳಿದ ಸೇವಾವಧಿಯಲ್ಲಿ ಸನಾತನ ಧರ್ಮವನ್ನು ಹೃದಯದಲ್ಲಿ ಹೊತ್ತುಕೊಂಡು ವೃತ್ತಿಯಲ್ಲಿ ಶ್ರೇಷ್ಠತೆ ಸಾಧಿಸುವ ಆಶಯ ಹೊಂದಿದ್ದೇನೆ. ಈ ಘಟನೆ ನನಗೆ ಅಗತ್ಯವಿರುವ ಆತ್ಮವಿಶ್ವಾಸವನ್ನು ನೀಡುತ್ತಿದೆ' ಎಂದು ನ್ಯಾಯಮೂರ್ತಿ ಹೇಳಿದರು.

ಡಿಸೆಂಬರ್ 9ರಂದು ಇಂಡಿಯಾ ಬಣದ 100ಕ್ಕೂ ಹೆಚ್ಚು ಸಂಸದರು, ಸ್ವಾಮಿನಾಥನ್ ಅವರನ್ನು ವಾಗ್ದಂಡನೆಗೆ ಗುರಿಪಡಿಸುವಂತೆ ಕೋರಿ ಲೋಕಸಭೆಯ ಸ್ಪೀಕರ್‌ಗೆ ನೋಟಿಸ್ ನೀಡಿದ್ದರು. ಇದನ್ನು ಬಿಜೆಪಿ ಮತ್ತು ಇತರ ರಾಜಕೀಯ ಪಕ್ಷಗಳು ಟೀಕಿಸಿದ್ದವು.

ಜನವರಿ 23ರಂದು ನಡೆದ ಎನ್‌ಡಿಎ ರ್‍ಯಾಲಿ ವೇಳೆ ಪ್ರಧಾನಿ ನರೇಂದ್ರ ಮೋದಿ ಅವರು ನ್ಯಾಯಮೂರ್ತಿ ಸ್ವಾಮಿನಾಥನ್ ವಿರುದ್ಧದ ವಾಗ್ದಂಡನೆ ನೋಟಿಸ್ ಕುರಿತು ಪರೋಕ್ಷವಾಗಿ ಉಲ್ಲೇಖಿಸಿದ್ದರು. 'ಈ ವಿಷಯದಲ್ಲಿ ಡಿಎಂಕೆ ತನ್ನ ಮತಬ್ಯಾಂಕ್ ರಕ್ಷಿಸಿಕೊಳ್ಳಲು ನ್ಯಾಯಾಂಗವನ್ನೂ ಬಿಟ್ಟಿಲ್ಲ' ಎಂದು ಆರೋಪಿಸಿದ್ದರು.

2014ರಲ್ಲಿ ಮದುರೆ ಪೀಠದಲ್ಲಿ ಸಹಾಯಕ ಸಾಲಿಸಿಟರ್ ಜನರಲ್ ಆಗಿ ನೇಮಕಗೊಂಡ ನ್ಯಾಯಮೂರ್ತಿ ಸ್ವಾಮಿನಾಥನ್, ತಮಿಳುನಾಡಿನಲ್ಲಿ ಹಿಂದೂಗಳ ಪರ ಹೋರಾಡುತ್ತಿರುವ ಹಿಂದೂ ಮುನ್ನಾನಿ ಸಂಘಟನೆಯೊಂದಿಗಿನ ತಮ್ಮ ಸಂಬಂಧದ ಬಗ್ಗೆ ಹಲವು ಬಾರಿ ಬಹಿರಂಗವಾಗಿ ಹೇಳಿಕೊಂಡಿದ್ದರು. ಮೂರು ವರ್ಷಗಳ ನಂತರ, ಅವರನ್ನು ಮದುರೆ ಪೀಠದಲ್ಲಿ ಹೆಚ್ಚುವರಿ ನ್ಯಾಯಮೂರ್ತಿಯನ್ನಾಗಿ ನೇಮಿಸಲಾಗಿತ್ತು. ನಂತರ ಕಾಯಂ ನ್ಯಾಯಮೂರ್ತಿಯನ್ನಾಗಿ ನೇಮಿಸಲಾಗಿತ್ತು.

ಅಭಿಷೇಕ್, ಸೂರ್ಯ ಸಿಡಿಲಬ್ಬರ

ಟಿ20 ಸರಣಿ ಕೈವಶ ಮಾಡಿಕೊಂಡ ಭಾರತ ಬೂಮ್ರಾ, ಬಿಷ್ಣೋಯಿ, ಹಾರ್ದಿಕ್ ಮಿಂಚು

11 ಟಿ20 ಕ್ರಿಕೆಟ್‌ನಲ್ಲಿ ಭಾರತ ತಂಡ (2024ರಿಂದ) ಸತತವಾಗಿ ದಾಖಲಿಸಿದ ಗೆಲುವು. ಇದರೊಂದಿಗೆ ಪಾಕಿಸ್ತಾನದ (2016–18) ದಾಖಲೆಯನ್ನು ಸರಿಗಟ್ಟಿತು

10 ತವರಿನ ಅಂಗಳದಲ್ಲಿ 2022ರಿಂದ ಭಾರತ ತಂಡ ಸತತವಾಗಿ ಗೆದ್ದ ಟಿ20 ಸರಣಿಗಳು. 2006–10ರಲ್ಲಿ ಆಸ್ಟ್ರೇಲಿಯಾ ತವರಿನಲ್ಲಿ ಸತತ 8 ಸರಣಿಗಳನ್ನು ಗೆದ್ದಿತ್ತು

14 ಅಭಿಷೇಕ್ ಶರ್ಮಾ ಅರ್ಧಶತಕ ದಾಖಲಿಸಲು ಬಳಸಿದ ಎಸೆತ. ಯುವರಾಜ್ ಸಿಂಗ್ (12ಎ) ನಂತರ ಅತಿವೇಗದ ಅರ್ಧಶತಕ ದಾಖಲಿಸಿದ ಭಾರತದ ಬ್ಯಾಟರ್

ಗುವಾಹಟಿ (ಪಿಟಿಐ): ಹದಿನಾಲ್ಕು ಎಸೆತಗಳಲ್ಲಿ ಅರ್ಧಶತಕ ಹೊಡೆದ ಅಭಿಷೇಕ್ ಶರ್ಮಾ ಮತ್ತು ತಮ್ಮ ಅಮೋಘ ಲಯವನ್ನು ಮುಂದುವರಿಸಿದ ಸೂರ್ಯಕುಮಾರ್ ಯಾದವ್ ಅವರ ಅಬ್ಬರದ ಆಟದಿಂದ ಭಾರತ ತಂಡವು ನ್ಯೂಜಿಲೆಂಡ್ ಎದುರಿನ ಪಂದ್ಯವನ್ನು 8 ವಿಕೆಟ್‌ಗಳಿಂದ ಗೆದ್ದಿತು. ಇದರೊಂದಿಗೆ ಐದು ಪಂದ್ಯಗಳ ಸರಣಿಯನ್ನು 3–0ಯಿಂದ ಕೈವಶ ಮಾಡಿಕೊಂಡಿತು.

ಆತಿಥೇಯ ತಂಡವು ಟಾಸ್ ಗೆದ್ದು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ನ್ಯೂಜಿಲೆಂಡ್ 20 ಓವರ್‌ಗಳಲ್ಲಿ 9 ವಿಕೆಟ್‌ಗಳಿಗೆ 153 ರನ್ ಗಳಿಸಿತು. ಇದಕ್ಕುತ್ತರವಾಗಿ ಭಾರತ ತಂಡವು ಕೇವಲ 10 ಓವರ್‌ಗಳಲ್ಲಿ 2 ವಿಕೆಟ್‌ಗಳಿಗೆ 155 ರನ್ ಗಳಿಸಿತು. ಆಗ ಇನಿಂಗ್ಸ್‌ನಲ್ಲಿ ಇನ್ನೂ 60 ಎಸೆತಗಳು ಬಾಕಿ ಇದ್ದವು.

ಇದಕ್ಕೆ ಕಾರಣವಾಗಿದ್ದು ಅಭಿಷೇಕ್ ಶರ್ಮಾ (ಅಜೇಯ 68; 20ಎಸೆತ) ಮತ್ತು ಸೂರ್ಯ (ಔಟಾಗದೇ 57; 26ಎ) ಅವರ ಸಿಡಿಲಬ್ಬರದ ಬ್ಯಾಟಿಂಗ್. ಬೆಂಕಿ–ಬಿರುಗಾಳಿ ಸೇರಿದಂತಿತ್ತು ಇವರಿಬ್ಬರ ಆಟ. ಮುರಿಯದ ಮೂರನೇ ವಿಕೆಟ್ ಜೊತೆಯಾಟದಲ್ಲಿ 40 ಎಸೆತಗಳಲ್ಲಿ 102 ರನ್ ಸೇರಿಸಿದರು. ಅಭಿಷೇಕ್ 14 ಎಸೆತಗಳಲ್ಲಿ ಅರ್ಧ ಶತಕದ ಗಡಿ ಮುಟ್ಟಿದರು. ಇದರೊಂದಿಗೆ ಟಿ20 ಕ್ರಿಕೆಟ್‌ನಲ್ಲಿ ಅತಿವೇಗದ ಅರ್ಧಶತಕ ಗಳಿಸಿದ ಭಾರತದ ಎರಡನೇ ಬ್ಯಾಟರ್ ಆದರು. ಅಭಿಷೇಕ್ ಅವರ 'ಗುರು' ಯುವರಾಜ್ ಸಿಂಗ್ 12 ಎಸೆತಗಳಲ್ಲಿ ಈ ಸಾಧನೆ ಮಾಡಿ ಮೊದಲ ಸ್ಥಾನದಲ್ಲಿದ್ದಾರೆ.

ಗುರಿ ಬೆನ್ನಟ್ಟಿದ ಭಾರತಕ್ಕೆ ಇನಿಂಗ್ಸ್‌ನ ಮೊದಲ ಎಸೆತದಲ್ಲಿ ಆಘಾತವಾಯಿತು. ಮ್ಯಾಟ್ ಹೆನ್ರಿ ಎಸೆತದಲ್ಲಿ ಸಂಜು ಸ್ಯಾಮ್ಸನ್ ಕ್ಲೀನ್‌ಬೌಲ್ಡ್ ಆದರು. ಆದರೆ ಕ್ರೀಸ್‌ಗೆ ಬಂದ ಇಶಾನ್ ಕಿಶನ್ (28; 13ಎ, 4X3, 6X2) ಬೀಸಾಟವಾಡಿದರು.

ಇನ್ನೊಂದು ಬದಿಯಲ್ಲಿ ಅಭಿಷೇಕ್ ಕೂಡ ತಮ್ಮ ಎಂದಿನ ಆಕ್ರಮಣಶೀಲ ಆಟವಾಡಿದರು. ಎರಡನೇ ವಿಕೆಟ್ ಜೊತೆಯಾಟದಲ್ಲಿ ಇವರಿಬ್ಬರೂ 19 ಎಸೆತಗಳಲ್ಲಿ 53 ರನ್ ಸೇರಿಸಿದರು. ಸ್ಪಿನ್ನರ್ ಈಶ್ ಸೋಧಿ ಬೌಲಿಂಗ್‌ನಲ್ಲಿ ಇಶಾನ್ ಔಟಾದರು.

ಆಗ ಅಭಿಷೇಕ್ ಅವರನ್ನು ಸೇರಿಕೊಂಡ ನಾಯಕ ಸೂರ್ಯ ಆರಂಭದಿಂದಲೇ ಚೆಂಡನ್ನು ಬೌಂಡರಿಗೆರೆ ದಾಟಿಸುವತ್ತಲೇ ಚಿತ್ತ ನೆಟ್ಟರು. 25 ಎಸೆತಗಳಲ್ಲಿ ಅರ್ಧಶತಕ ಗಳಿಸಿದರು. ಅಭಿಷೇಕ್ 5 ಸಿಕ್ಸರ್, 7 ಬೌಂಡರಿ ಹೊಡೆದರು. ಸೂರ್ಯ ಆರು ಬೌಂಡರಿ ಮತ್ತು ಮೂರು ಸಿಕ್ಸರ್ ಬಾರಿಸಿದರು. ಎರಡನೇ ಪಂದ್ಯದಲ್ಲಿಯೂ ಸೂರ್ಯ ಮಿಂಚಿನ ಅರ್ಧಶತಕ ಗಳಿಸಿದ್ದರು. ಈ ಪಂದ್ಯದ ಪವರ್‌ಪ್ಲೇನಲ್ಲಿ ಭಾರತ ತಂಡವು 95 ರನ್ ಸೂರೆ ಮಾಡಿ ದಾಖಲೆ ಬರೆಯಿತು.

ಅಭಿಷೇಕ್ ಶರ್ಮಾ

ಬೂಮ್ರಾ, ಬಿಷ್ಣೋಯಿ ಮಿಂಚು: ಕಿವೀಸ್ ಬಳಗವನ್ನು ಸಾಧಾರಣ ಮೊತ್ತಕ್ಕೆ ಕಟ್ಟಿಹಾಕುವಲ್ಲಿ ವೇಗಿ ಜಸ್‌ಪ್ರೀತ್ ಬೂಮ್ರಾ (17ಕ್ಕೆ3) ಮತ್ತು ಸ್ಪಿನ್ನರ್ ರವಿ ಬಿಷ್ಣೋಯಿ (18ಕ್ಕೆ2) ಪ್ರಮುಖ ಪಾತ್ರ ವಹಿಸಿದರು. ಅವರಿಗೆ ಹಾರ್ದಿಕ್ ಪಾಂಡ್ಯ (23ಕ್ಕೆ2) ಜೊತೆ ನೀಡಿದರು. 34 ರನ್‌ಗಳಿಗೆ 3 ವಿಕೆಟ್ ಕಳೆದುಕೊಂಡಿದ್ದ ತಂಡಕ್ಕೆ ಗ್ಲೆನ್ ಫಿಲಿಪ್ಸ್ (48; 40ಎ, 4X6, 6X1) ಮತ್ತು ಮಾರ್ಕ್ ಚಾಪ್ಮನ್ (32; 23ಎ, 4X2, 6X2) ಅವರು ಆಸರೆಯಾದರು. ಮಿಚೆಲ್ ಸ್ಯಾಂಟನರ್ 27 ರನ್ ಗಳಿಸಿದರು.

ಆದರೆ ರವಿ ಬಿಷ್ಣೋಯಿ ಅವರು ಗ್ಲೆನ್ ಮತ್ತು ಮಾರ್ಕ್ ವಿಕೆಟ್‌ಗಳನ್ನು ಗಳಿಸಿ ಕಿವೀಸ್ ತಂಡವು ದೊಡ್ಡ ಮೊತ್ತ ಗಳಿಸುವುದನ್ನು ತಪ್ಪಿಸಿದರು.

ಸಂಕ್ಷಿಪ್ತ ಸ್ಕೋರು: ನ್ಯೂಜಿಲೆಂಡ್: 20 ಓವರ್‌ಗಳಲ್ಲಿ 9ಕ್ಕೆ153 (ಟಿಮ್ ಸೀಫರ್ಟ್ 12, ಗ್ಲೆನ್ ಫಿಲಿಪ್ಸ್ 48, ಮಾರ್ಕ್ ಚಾಪ್‌ಮನ್ 32, ಮಿಚೆಲ್ ಸ್ಯಾಂಟನರ್ 27, ಹಾರ್ದಿಕ್ ಪಾಂಡ್ಯ 23ಕ್ಕೆ2, ರವಿ ಬಿಷ್ಣೋಯಿ 18ಕ್ಕೆ2, ಜಸ್‌ಪ್ರೀತ್ ಬೂಮ್ರಾ 17ಕ್ಕೆ3) ಭಾರತ: 10 ಓವರ್‌ಗಳಲ್ಲಿ 2 ವಿಕೆಟ್‌ಗಳಿಗೆ 155 (ಅಭಿಷೇಕ್ ಶರ್ಮಾ ಔಟಾಗದೇ 68, ಇಶಾನ್ ಕಿಶನ್ 28, ಸೂರ್ಯಕುಮಾರ್ ಯಾದವ್ ಔಟಾಗದೇ 57, ಮ್ಯಾಟ್ ಹೆನ್ರಿ 28ಕ್ಕೆ1, ಈಶ್ ಸೋದಿ 28ಕ್ಕೆ1) ಫಲಿತಾಂಶ: ಭಾರತಕ್ಕೆ 8 ವಿಕೆಟ್‌ಗಳ ಜಯ, ಸರಣಿ 3–0 ಮುನ್ನಡೆ. ಪಂದ್ಯದ ಆಟಗಾರ: ಜಸ್‌ಪ್ರೀತ್ ಬೂಮ್ರಾ

ಹಾಕಿ ಲೀಗ್ ಫೈನಲ್‌ಗೆ ರಾಯಲ್ಸ್

ಭುವನೇಶ್ವರ (ಪಿಟಿಐ): ರಾಂಚಿ ರಾಯಲ್ಸ್ ತಂಡವು ಭಾನುವಾರ ಪುರುಷರ ಹಾಕಿ ಇಂಡಿಯಾ ಲೀಗ್‌ನ ಎರಡನೇ ಕ್ವಾಲಿಫೈಯರ್‌ನಲ್ಲಿ 3–2ರಿಂದ ಹೈದರಾಬಾದ್ ತೂಫಾನ್ಸ್ ತಂಡವನ್ನು ಮಣಿಸಿ ಫೈನಲ್ ಪ್ರವೇಶಿಸಿತು.

ಸೋಮವಾರ ಪ್ರಶಸ್ತಿ ಸುತ್ತಿನಲ್ಲಿ ರಾಯಲ್ಸ್ ತಂಡವು ವೇದಾಂತ ಕಳಿಂಗ ಲ್ಯಾನ್ಸರ್ ತಂಡವನ್ನು ಎದುರಿಸಲಿದೆ.

ಎಲ್ಲರಿಗೂ ಗಣರಾಜ್ಯೋತ್ಸವದ ಶುಭಾಶಯಗಳು!

ಕ್ವಾರ್ಟರ್‌ಗೆ ಅಲ್ಕರಾಜ್, ಜೊಕೊವಿಚ್

ಮೆಲ್ಬರ್ನ್ (ಎಎಫ್‌ಪಿ): ಸ್ಪೇನ್ ತಾರೆ ಕಾರ್ಲೋಸ್ ಅಲ್ಕರಾಜ್ ಅವರು ಭಾನುವಾರ ಆಸ್ಟ್ರೇಲಿಯಾ ಓಪನ್ ಟೆನಿಸ್ ಟೂರ್ನಿಯಲ್ಲಿ ಸತತ ಮೂರನೇ ಬಾರಿ ಕ್ವಾರ್ಟರ್ ಫೈನಲ್ ಲಗ್ಗೆ ಹಾಕಿದರು. ಎದುರಾಳಿ ಆಟಗಾರ ಗಾಯಾಳಾದ ಕಾರಣ ಸರ್ಬಿಯಾದ ದಿಗ್ಗಜ ನೊವಾಕ್ ಜೊಕೊವಿಚ್ ಅವರೂ ಪ್ರಯಾಸವಿಲ್ಲದೆ ಅಂತಿಮ ಎಂಟರ ಘಟ್ಟಕ್ಕೆ ಮುನ್ನಡೆದರು.

ಅಗ್ರ ಶ್ರೇಯಾಂಕದ ಅರಿನಾ ಸಬಲೆಂಕಾ ನೇರ ಸೆಟ್‌ಗಳ ಗೆಲುವಿನೊಡನೆ ಮಹಿಳೆಯರ ಸಿಂಗಲ್ಸ್‌ನಲ್ಲಿ ಮೂರನೇ ಬಾರಿ ಪ್ರಶಸ್ತಿ ಜಯಿಸುವತ್ತ ಹೆಜ್ಜೆಯಿಟ್ಟರು. ಮೂರನೇ ಶ್ರೇಯಾಂಕದ ಕೊಕೊ ಗಾಫ್ ಅವರು ಮೆಲ್ಬರ್ನ್ ಪಾರ್ಕ್‌ನಲ್ಲಿ ಗೆಲುವಿಗೆ ಕೊಂಚ ಬೆವರು ಹರಿಸಿದರು. ಈ ಮಧ್ಯೆ ರಷ್ಯಾದ ಡೇನಿಯಲ್ ಮೆಡ್ವೆಡೇವ್ ಮತ್ತು ಮೀರಾ ಆ್ಯಂಡ್ರೀವಾ ಆಘಾತ ಅನುಭವಿಸಿದರು.

ವಿಶ್ವದ ಅಗ್ರಮಾನ್ಯ ಆಟಗಾರ ಅಲ್ಕರಾಜ್ 7-6 (8/6), 6-4, 7-5ರಿಂದ ಅಮೆರಿಕದ ಟಾಮಿ ಪೌಲ್ ಅವರನ್ನು ಹಿಮ್ಮೆಟ್ಟಿಸಿದರು. ಇಲ್ಲಿ ಚೊಚ್ಚಲ ಪ್ರಶಸ್ತಿಯ ನಿರೀಕ್ಷೆಯಲ್ಲಿರುವ 22 ವರ್ಷದ ಅಲ್ಕರಾಜ್ ಮುಂದಿನ ಸುತ್ತಿನಲ್ಲಿ ಆರನೇ ಶ್ರೇಯಾಂಕದ ಅಲೆಕ್ಸ್ ಡಿ ಮಿನೋರ್ ಅವರನ್ನು ಎದುರಿಸಲಿದ್ದಾರೆ. ಆತಿಥೇಯ ದೇಶದ ಅಲೆಕ್ಸ್ 6–4, 6–1, 6–1ರಿಂದ 10ನೇ ಶ್ರೇಯಾಂಕದ ಅಲೆಕ್ಸಾಂಡರ್ ಬಬ್ಲಿಕ್ (ಕಜಾಕಸ್ತಾನ) ಅವರನ್ನು ಮಣಿಸಿದರು.

ದಾಖಲೆಯ 25ನೇ ಗ್ರ್ಯಾನ್‌ಸ್ಲಾಮ್ ಕಿರೀಟ ಗೆಲ್ಲುವ ಛಲದಲ್ಲಿರುವ ಜೊಕೊವಿಚ್ ಅವರು ಸೋಮವಾರ ಅಂತಿಮ 16ರ ಸುತ್ತಿನಲ್ಲಿ ಜೇಕಬ್ ಮೆನ್ಸಿಕ್ ಅವರನ್ನು ಎದುರಿಸಬೇಕಿತ್ತು. ಆದರೆ, ಝೆಕ್ ರಿಪಬ್ಲಿಕ್‌ನ ಆಟಗಾರ ಗಾಯಾಳಾಗಿ ಸ್ಪರ್ಧೆಯಿಂದ ಹಿಂದೆ ಸರಿದಿದ್ದಾರೆ.

ಹಾಲಿ ರನ್ನರ್ ಅಪ್ ಅಲೆಕ್ಸಾಂಡರ್ ಜ್ವರೇವ್ 6-2, 6-4, 6-4ರಿಂದ ಅರ್ಜೆಂಟೀನಾದ ಫ್ರಾನ್ಸಿಸ್ಕೊ ಸೆರುಂಡೊಲೊ ಅವರನ್ನು ಮಣಿಸಿ ಮುನ್ನಡೆದರು. ಮೂರನೇ ಶ್ರೇಯಾಂಕದ ಜ್ವರೇವ್ (ಜರ್ಮನಿ) ಮುಂದಿನ ಸುತ್ತಿನಲ್ಲಿ ಅಮೆರಿಕದ ಲರ್ನರ್ ಟಿಯೆನ್ ವಿರುದ್ಧ ಆಡುವರು. 25ನೇ ಶ್ರೇಯಾಂಕದ ಟಿಯನ್ ಅವರು 6-4, 6-0, 6-3ಯಿಂದ 11ನೇ ಶ್ರೇಯಾಂಕದ ಮೆಡ್ವೆಡೇವ್ ಅವರಿಗೆ ಆಘಾತ ನೀಡಿದರು.

ಗೆಲುವಿನ ಸಂಭ್ರಮದಲ್ಲಿ ಇವಾ ಜೊವಿಕ್ ಎಎಫ್‌ಪಿ ಚಿತ್ರ

ಸಬಲೆಂಕಾ, ಗಾಫ್ ಮುನ್ನಡೆ: ಬೆಲಾರೂಸ್‌ನ ಸಬಲೆಂಕಾ 6-1, 7-6 (7/1) ರಿಂದ ಕೆನಡಾದ ವಿಕ್ಟೋರಿಯಾ ಎಂಬೊಕೊ ಅವರನ್ನು ಮಣಿಸಿದರು. 2023 ಮತ್ತು 2024ರ ಚಾಂಪಿಯನ್ ಸಬಲೆಂಕಾ ಅವರಿಗೆ ಮುಂದಿನ ಸುತ್ತಿನಲ್ಲಿ ಅಮೆರಿಕದ ಇವಾ ಜೊವಿಕ್ ಎದುರಾಳಿಯಾಗಿದ್ದಾರೆ. 29ನೇ ಶ್ರೇಯಾಂಕದ ಇವಾ 6-0, 6-1ರಿಂದ ಕಜಾಕಸ್ತಾನದ ಯೂಲಿಯಾ ಪುತಿಂಟ್ಸೆವಾ ಅವರನ್ನು ಹಿಮ್ಮೆಟ್ಟಿಸಿದರು. 18 ವರ್ಷದ ಇವಾ ಅವರು ವೀನಸ್ ವಿಲಿಯಮ್ಸ್ (1998) ನಂತರ ಆಸ್ಟ್ರೇಲಿಯಾ ಓಪನ್‌ನಲ್ಲಿ ಮಹಿಳಾ ಕ್ವಾರ್ಟರ್ ಫೈನಲ್ ತಲುಪಿದ ಅತ್ಯಂತ ಕಿರಿಯ ಆಟಗಾರ್ತಿ ಎಂಬ ಹೆಗ್ಗಳಿಕೆಗೆ ಪಾತ್ರರಾದರು.

ಅಮೆರಿಕದ ತಾರೆ ಗಾಫ್ ಅವರಿಗೆ ಮುಂದಿನ ಸುತ್ತಿನಲ್ಲಿ ಉಕ್ರೇನ್‌ನ ಎಲಿನಾ ಸ್ವಿಟೋಲಿನಾ ವಿರುದ್ಧ ಆಡುವರು. ಗಾಫ್ 6-1, 3-6, 6-3ರ ಮೂರು ಸೆಟ್‌ಗಳ ಹೋರಾಟದಲ್ಲಿ ಕಜಾಕಸ್ತಾನದ ಕರೋಲಿನಾ ಮುಚೋವಾ ವಿರುದ್ಧ ಹೋರಾಡಿ ಗೆದ್ದರೆ, 12ನೇ ಶ್ರೇಯಾಂಕದ ಎಲಿನಾ 6-2, 6-4ರಿಂದ ಎಂಟನೇ ಶ್ರೇಯಾಂಕದ ಮಿರಾ ಆ್ಯಂಡ್ರೀವಾ ಅವರನ್ನು ಮಣಿಸಿದರು.

ರಣಜಿ ಟ್ರೋಫಿ: ಕರ್ನಾಟಕದ ಓಟಕ್ಕೆ ತಡೆ; ಸಾರಾಂಶ್, ಸಾಗರ್ ಸ್ಪಿನ್ ಮೋಡಿ

ಮಧ್ಯಪ್ರದೇಶಕ್ಕೆ ಮಣಿದ ಮಯಂಕ್ ಪಡೆ

• ಗಿರೀಶ ದೊಡ್ಡಮನಿ

ಬೆಂಗಳೂರು: ಮಯಂಕ್ ಅಗರವಾಲ್ ನಾಯಕತ್ವದ ಕರ್ನಾಟಕ ಕ್ರಿಕೆಟ್ ತಂಡವು ಹದಿನೆಂಟು ದಿನಗಳ ಅಂತರದಲ್ಲಿ ಮಧ್ಯಪ್ರದೇಶದ ಎದುರು ಎರಡನೇ ಬಾರಿ ಸೋತಿತು.

ಭಾನುವಾರ ಆಲೂರಿನ ಕೆಎಸ್‌ಸಿಎ ಕ್ರೀಡಾಂಗಣದಲ್ಲಿ ನಡೆದ ರಣಜಿ ಟ್ರೋಫಿ ಎಲೀಟ್ ಬಿ ಗುಂಪಿನ ಪಂದ್ಯದಲ್ಲಿ ಕರ್ನಾಟಕ 217 ರನ್‌ಗಳಿಂದ ಮಧ್ಯಪ್ರದೇಶಕ್ಕೆ ಮಣಿಯಿತು. 362 ರನ್‌ಗಳ ಗೆಲುವಿನ ಗುರಿ ಬೆನ್ನಟ್ಟಿದ್ದ ಕರ್ನಾಟಕ ತಂಡವನ್ನು ಅಗ್ರಕ್ರಮಾಂಕದ ಅನುಭವಿ ಬ್ಯಾಟರ್‌ಗಳ ವೈಫಲ್ಯ ಕಾಡಿತು. ಡ್ರಾ ಮಾಡಿಕೊಳ್ಳುವ ಪ್ರಯತ್ನದಲ್ಲಿಯೂ ಬ್ಯಾಟರ್‌ಗಳು ವಿಫಲರಾದರು. ಎದುರಾಳಿ ಸ್ಪಿನ್ನರ್‌ಗಳಾದ ಸಾಗರ್ ಸೋಳಂಕಿ (20ಕ್ಕೆ3) ಮತ್ತು ಸಾರಾಂಶ್ ಜೈನ್ (37ಕ್ಕೆ3) ಮೇಲುಗೈ ಸಾಧಿಸಿದರು.

ಈಚೆಗೆ ವಿಜಯ್ ಹಜಾರೆ ಟ್ರೋಫಿ ಏಕದಿನ ಕ್ರಿಕೆಟ್ ಟೂರ್ನಿಯ ಗುಂಪು ಹಂತದ ಪಂದ್ಯದಲ್ಲಿ ಮಧ್ಯಪ್ರದೇಶ ಎದುರು ಕರ್ನಾಟಕ ಸೋತಿತ್ತು

ರಣಜಿ ಟೂರ್ನಿಯ ಮೊದಲ ಹಂತದಲ್ಲಿ (ಟಿ20 ಮತ್ತು ಏಕದಿನ ದೇಶಿ ಟೂರ್ನಿಗಳಿಗೂ ಮುನ್ನ) ಮಯಂಕ್ ಬಳಗವು ಅಜೇಯವಾಗಿ ಉಳಿದಿತ್ತು. 21 ಅಂಕಗಳೊಂದಿಗೆ ಅಗ್ರಸ್ಥಾನದಲ್ಲಿತ್ತು. ಆದರೆ ಎರಡನೇ ಹಂತದ ಮೊದಲ ಪಂದ್ಯದಲ್ಲಿ ಸೋಲುವ ಮೂಲಕ ಮೂರನೇ ಸ್ಥಾನಕ್ಕೆ ಕುಸಿಯಿತು. ಇದರಿಂದಾಗಿ ತಂಡದ ನಾಕೌಟ್ ಪ್ರವೇಶದ ಹಾದಿ ಕಠಿಣವಾಗಿದೆ. ಮಹಾರಾಷ್ಟ್ರ (24) ಮತ್ತು ಮಧ್ಯಪ್ರದೇಶ (22) ಕ್ರಮವಾಗಿ ಮೊದಲ ಹಾಗೂ ಎರಡನೇ ಸ್ಥಾನದಲ್ಲಿವೆ. ಗುಂಪಿನಲ್ಲಿರುವ ಎಲ್ಲ ತಂಡಗಳಿಗೂ ಇನ್ನೊಂದು ಸುತ್ತಿನ ಪಂದ್ಯ ಬಾಕಿ ಇದೆ. ಕರ್ನಾಟಕ ತಂಡವು ಮುಂದಿನ ಪಂದ್ಯದಲ್ಲಿ ಪಂಜಾಬ್ ತಂಡವನ್ನು ಎದುರಿಸಲಿದೆ. ಅದರಲ್ಲಿ ಜಯಿಸಿದರೆ ಮಾತ್ರ ನಾಕೌಟ್ ಪ್ರವೇಶಕ್ಕೆ ಒಂದು ಸಣ್ಣ ಅವಕಾಶ ಇರಲಿದೆ.

ಕರ್ನಾಟಕ ತಂಡದ ವಿದ್ವತ್ ಕಾವೇರಪ್ಪ ವಿಕೆಟ್ ಪಡೆದ ಮಧ್ಯಪ್ರದೇಶದ ಸಾರಾಂಶ್ ಜೈನ್ ಸಹ ಆಟಗಾರರೊಂದಿಗೆ ಸಂಭ್ರಮಿಸಿದರು ಚಿತ್ರ: ಕೃಷ್ಣ ಕುಮಾರ್ ಪಿ.ಎಸ್.

ಕರುಣ್ ಬದಲಿಗೆ ನಿಕಿನ್ ಬ್ಯಾಟಿಂಗ್

ಶನಿವಾರ ಕೈಬೆರಳಿಗೆ ಪೆಟ್ಟು ಬಿದ್ದು ಮೈದಾನ ತೊರೆದಿದ್ದ ಕರುಣ್ ನಾಯರ್ ಅವರು ಕೊನೆಯ ದಿನದಾಟದಲ್ಲಿ ಬ್ಯಾಟಿಂಗ್ ಮಾಡಲಿಲ್ಲ. ಅವರ ಬದಲಿಗೆ 'ಬದಲೀ ಬ್ಯಾಟರ್' ಆಗಿ ನಿಕಿನ್ ಜೋಸ್ ಆಡಿದರು. ಈ ಮೊದಲು ಕಂಕಷನ್ (ತಲೆ, ಕುತ್ತಿಗೆ ಭಾಗಕ್ಕೆ ಪೆಟ್ಟಾದರೆ) ಮಾತ್ರ ಬದಲೀ ಆಟಗಾರನನ್ನು ಒದಗಿಸುವ ಅವಕಾಶ ಇತ್ತು. ಈಚೆಗೆ ಜಾರಿಯಾದ ಹೊಸ ನಿಯಮದನ್ವಯ ಯಾವುದೇ ಆಟಗಾರ ಗಂಭೀರವಾಗಿ ಗಾಯಗೊಂಡು ನಿರ್ಗಮಿಸಿದರೆ ಸಬ್‌ಸ್ಟಿಟ್ಯೂಟ್ ನೀಡಬೇಕು. ಆ ನಿಯಮ ಕರುಣ್ ವಿಷಯದಲ್ಲಿ ಪಾಲನೆಯಾಯಿತು.

ಮಯಂಕ್, ದೇವದತ್ತ ವೈಫಲ್ಯ: ಮೊದಲ ಇನಿಂಗ್ಸ್‌ನಲ್ಲಿ 132 ರನ್ ಮುನ್ನಡೆ ಸಾಧಿಸಿದ್ದ ಪ್ರವಾಸಿ ಬಳಗವು ಭಾನುವಾರ ಬೆಳಿಗ್ಗೆ 8 ವಿಕೆಟ್‌ಗಳಿಗೆ 229 ರನ್ ಗಳಿಸಿ ಡಿಕ್ಲೇರ್ ಮಾಡಿಕೊಂಡಿತು. ಶನಿವಾರ ಮಧ್ಯಪ್ರದೇಶ ತಂಡವು ಉತ್ತಮ ಮುನ್ನಡೆ ಪಡೆಯಲು ಕಾರಣರಾಗಿ ಕ್ರೀಸ್‌ನಲ್ಲಿ ಉಳಿದಿದ್ದ ಹಿಮಾಂಶು ಮಂತ್ರಿ ಅವರು (96; 214ಎ, 4X4) ಶತಕದ ಗಡಿ ದಾಟಲು ಲೆಗ್‌ಸ್ಪಿನ್ನರ್ ಶ್ರೇಯಸ್ ಗೋಪಾಲ್ ಬಿಡಲಿಲ್ಲ. ಅವರನ್ನು ಕ್ಲೀನ್‌ಬೌಲ್ಡ್ ಮಾಡಿದರು.

ಗುರಿ ಬೆನ್ನಟ್ಟಿದ ಆತಿಥೇಯ ತಂಡದ ನಾಯಕ, ಟೆಸ್ಟ್ ಕ್ರಿಕೆಟ್ ಆಡಿದ ಅನುಭವಿ ಮಯಂಕ್ ಅಗರವಾಲ್ (7 ರನ್) ಉತ್ತಮ ಆರಂಭ ಕೊಡುವಲ್ಲಿ ಮತ್ತೊಮ್ಮೆ ವಿಫಲರಾದರು. ಆದರೆ ಮೊದಲ ಇನಿಂಗ್ಸ್‌ನಲ್ಲಿ ಅರ್ಧಶತಕ ಬಾರಿಸಿದ್ದ ಕೆ.ವಿ. ಅನೀಶ್ ದಿಟ್ಟ ಆಟವಾಡಿದರು. ಎರಡನೇ ಇನಿಂಗ್ಸ್‌ನಲ್ಲಿಯೂ ಅವರು 142 ಎಸೆತಗಳಲ್ಲಿ 57 ರನ್ ಗಳಿಸಿದರು.

ಆದರೆ, ದೇವದತ್ತ ಪಡಿಕ್ಕಲ್ ಅವರೂ ಆರ್ಯನ್ ಪಾಂಡ್ಯ ಎಸೆತದ ಚಲನೆಯನ್ನು ಅಂದಾಜಿಸುವಲ್ಲಿ ಎಡವಿದರು. ಚೆಂಡು ಸ್ಟಂಪ್ ಎಗರಿಸಿತು.

> ಬ್ಯಾಟಿಂಗ್ ಮಾಡಲು ಪಿಚ್ ಉತ್ತಮವಾಗಿತ್ತು. ಆದರೆ ಕಳಪೆ ಪ್ರದರ್ಶನದಿಂದಾಗಿ ಸೋಲುಂಟಾಗಿದೆ. ಎಲ್ಲ ಲೋಪಗಳನ್ನೂ ತಿದ್ದಿಕೊಂಡು ಮುಂದಿನ ಪಂದ್ಯದಲ್ಲಿ ಪಂಜಾಬ್ ಎದುರು ಕಣಕ್ಕಿಳಿಯುತ್ತೇವೆ.
> **ಯರೇಗೌಡ** ಕರ್ನಾಟಕ ತಂಡದ ಕೋಚ್

ಮೂರನೇ ದಿನದಾಟದಲ್ಲಿ ಗಾಯಗೊಂಡಿದ್ದ ಕರುಣ್ ನಾಯರ್ ಅವರ ಬದಲು 'ಬದಲಿ ಬ್ಯಾಟರ್' ಆಗಿ ಕಣಕ್ಕಿಳಿದ ನಿಕಿನ್ ಜೋಸ್ (26; 101ಎ, 4X2) ಅವರು ಅನೀಶ್ ಜೊತೆಗೂಡಿ 61 ರನ್ ಸೇರಿಸಿದರು. ಊಟದ ವಿರಾಮದ ನಂತರ ನಿಕಿನ್ ಔಟಾಗುವುದರೊಂದಿಗೆ ಕರ್ನಾಟಕ ಬಳಗವು ಸೋಲಿನತ್ತ ಮುಖಮಾಡಿತು. ನಂತರದ 67 ರನ್‌ಗಳ ಅಂತರದಲ್ಲಿ ಏಳು ವಿಕೆಟ್‌ಗಳು ಪತನಗೊಂಡವು. ತಂಡವು ಈ ಋತುವಿನಲ್ಲಿ ಮೊದಲ ಸೋಲಿಗೆ ಶರಣಾಯಿತು. ವಿದ್ಯಾಧರ್ ಪಾಟೀಲ (ಔಟಾಗದೇ 26; 69ಎ, 4X5) ಅವರ ಅಜೇಯ ಆಟ ಗಮನ ಸೆಳೆಯಿತು.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ಮಧ್ಯಪ್ರದೇಶ: 116.1 ಓವರ್‌ಗಳಲ್ಲಿ 323. ಕರ್ನಾಟಕ: 64.1 ಓವರ್‌ಗಳಲ್ಲಿ 191. ಎರಡನೇ ಇನಿಂಗ್ಸ್: ಮಧ್ಯಪ್ರದೇಶ: 75.1 ಓವರ್‌ಗಳಲ್ಲಿ 8ಕ್ಕೆ229 ಡಿಕ್ಲೇರ್ಡ್ (ಹಿಮಾಂಶು ಮಂತ್ರಿ 96; ವಿದ್ಯಾಧರ್ ಪಾಟೀಲ 54ಕ್ಕೆ4, ಶಿಖರ್ ಶೆಟ್ಟಿ 41ಕ್ಕೆ2, ಶ್ರೇಯಸ್ ಗೋಪಾಲ್ 58ಕ್ಕೆ2) ಕರ್ನಾಟಕ: 67.5 ಓವರ್‌ಗಳಲ್ಲಿ 144 (ಕೆ.ವಿ. ಅನೀಶ್ 57, ನಿಕಿನ್ ಜೋಸ್ 26, ವಿದ್ಯಾಧರ್ ಪಾಟೀಲ ಔಟಾಗದೇ 26, ಆರ್ಯನ್ ಪಾಂಡೆ 9ಕ್ಕೆ2, ಸಾರಾಂಶ್ ಜೈನ್ 37ಕ್ಕೆ3, ಸಾಗರ್ ಸೋಳಂಕಿ 20ಕ್ಕೆ3) ಫಲಿತಾಂಶ: ಮಧ್ಯಪ್ರದೇಶ ತಂಡಕ್ಕೆ 217 ರನ್ ಜಯ. ಪಂದ್ಯದ ಆಟಗಾರ: ಸಾರಾಂಶ್ ಜೈನ್.

ಚೆಸ್: ಗುಕೇಶ್‌ಗೆ ಮತ್ತೊಂದು ಸೋಲು

ವಿಯ್ಕ್ ಆನ್ ಝೀ (ನೆದರ್ಲೆಂಡ್ಸ್), (ಪಿಟಿಐ): ವಿಶ್ವ ಚಾಂಪಿಯನ್ ಡಿ.ಗುಕೇಶ್ ಅವರು ಟಾಟಾ ಮಾಸ್ಟರ್ಸ್ ಚೆಸ್ ಟೂರ್ನಿಯಲ್ಲಿ ಮತ್ತೊಂದು ಸೋಲು ಅನುಭವಿಸಿದರು. ಭಾನುವಾರ ನಡೆದ ಏಳನೇ ಸುತ್ತಿನಲ್ಲಿ ಗುಕೇಶ್, ಆತಿಥೇಯ ದೇಶದ ಅನೀಶ್ ಗಿರಿ ಅವರಿಗೆ ಮಣಿದರು.

ಭಾರತದ ಮತ್ತೊಬ್ಬ ಆಟಗಾರ ಅರ್ಜುನ್ ಇರಿಗೇಶಿ ಅವರು ಟರ್ಕಿಯ ಯಾಗಿಝ್ ಕಾನ್ ಎರ್ಡೋಗ್ಮಸ್ ವಿರುದ್ಧ ಸೋಲೊಪ್ಪಿಕೊಂಡರು. ಆರ್.ಪ್ರಜ್ಞಾನಂದ ಅವರು ಜರ್ಮನಿಯ ಮಥಿಯಾಸ್ ಬ್ಲೂಬಾಮ್ ಅವರೊಂದಿಗೆ ಡ್ರಾ ಸಾಧಿಸಿದರು.

ಜರ್ಮನಿಯ ವಿನ್ಸೆಂಟ್ ಕೀಮರ್ ಅವರನ್ನು ಮಣಿಸಿದ ಉಜ್ಬೇಕಿಸ್ತಾನದ ನಾದಿರ್ಬೆಕ್ ಅಬ್ದುಸತ್ತಾರೋವ್ 5.5 ಅಂಕಗಳೊಂದಿಗೆ ಅಗ್ರಸ್ಥಾನದಲ್ಲಿದ್ದಾರೆ. ಅವರದೇ ದೇಶದ ಜಾವೊಖಿರ್ ಸಿಂದರೋವ್ (4.5) ಎರಡನೇ ಸ್ಥಾನದಲ್ಲಿದ್ದಾರೆ. ಟೂರ್ನಿಯು ಒಟ್ಟು 13 ಸುತ್ತುಗಳನ್ನು ಒಳಗೊಂಡಿದೆ.

ಅಮೃತರಾಜ್‌ಗೆ ಪದ್ಮಭೂಷಣ, ರೋಹಿತ್‌ಗೆ ಪದ್ಮಶ್ರೀ

ಅಮೃತರಾಜ್ ರೋಹಿತ್ ಹರ್ಮನ್‌ಪ್ರೀತ್

ನವದೆಹಲಿ (ಪಿಟಿಐ): ಟೆನಿಸ್ ಕ್ರೀಡೆಯ ದಿಗ್ಗಜ ವಿಜಯ್ ಅಮೃತರಾಜ್ ಅವರಿಗೆ ಪದ್ಮಭೂಷಣ ಪ್ರಶಸ್ತಿ ಲಭಿಸಿದೆ. ಭಾರತ ಕ್ರಿಕೆಟ್ ತಂಡದ ನಾಯಕ ರೋಹಿತ್ ಶರ್ಮಾ ಮತ್ತು ಮಹಿಳಾ ತಂಡದ ನಾಯಕಿ ಹರ್ಮನ್‌ಪ್ರೀತ್ ಕೌರ್ ಅವರಿಗೆ ಪದ್ಮಶ್ರೀ ಪ್ರಶಸ್ತಿ ನೀಡಲಾಗಿದೆ.

ಭಾನುವಾರ ಕೇಂದ್ರ ಸರ್ಕಾರವು ಪದ್ಮ ಪುರಸ್ಕಾರಗಳ ಪಟ್ಟಿಯನ್ನು ಪ್ರಕಟಿಸಿದೆ. ಇದರಲ್ಲಿ ವಿಜಯ್ ಅವರು ಪದ್ಮಭೂಷಣಕ್ಕೆ ಭಾಜನರಾದ ಏಕೈಕ ಕ್ರೀಡಾಪಟುವಾಗಿದ್ದಾರೆ. 1983ರಲ್ಲಿ ಅವರಿಗೆ ಪದ್ಮಶ್ರೀ ಮತ್ತು 1974ರಲ್ಲಿ ಅರ್ಜುನ ಪ್ರಶಸ್ತಿ ಪ್ರದಾನ ಮಾಡಲಾಗಿತ್ತು.

2024ರ ಟಿ20 ವಿಶ್ವಕಪ್ ವಿಜೇತ ತಂಡದ ನಾಯಕ ರೋಹಿತ್ ಶರ್ಮಾ ಮತ್ತು ಹೋದ ವರ್ಷ ಮಹಿಳಾ ಏಕದಿನ ಕ್ರಿಕೆಟ್ ವಿಶ್ವಕಪ್ ಜಯಿಸಿದ್ದ ತಂಡದ ನಾಯಕಿ ಹರ್ಮನ್‌ಪ್ರೀತ್ ಕೌರ್, ಪ್ಯಾರಾಲಿಂಪಿಕ್ಸ್ ಚಿನ್ನದ ಪದಕವಿಜೇತ ಹೈಜಂಪ್ ಅಥ್ಲೀಟ್ ಪ್ರವೀಣಕುಮಾರ್, ಭಾರತ ಮಹಿಳಾ ಹಾಕಿ ತಂಡದ ಗೋಲ್‌ಕೀಪರ್ ಸವಿತಾ ಪೂನಿಯಾ, ಅನುಭವಿ ಕೋಚ್ ಬಲದೇವ ಸಿಂಗ್ ಮತ್ತು ಕೆ. ಪಜಾನಿವೆಲ್ ಅವರಿಗೆ ಪದ್ಮಶ್ರೀ ನೀಡಲಾಗಿದೆ. ಕುಸ್ತಿ ತಂಡದ ಮಾಜಿ ಕೋಚ್ ವ್ಲಾಡಿಮೆರ್ ಮೆಸ್ಟವಿರಿಶವಿಲಿ ಅವರಿಗೆ ಮರಣೋತ್ತರ ಪದ್ಮಶ್ರೀ ನೀಡಲಾಗಿದೆ. ವ್ಲಾಡಿಮೆರ್ ಅವರು ಒಲಿಂಪಿಯನ್ ಯೋಗೇಶ್ವರ್ ದತ್ ಮತ್ತು ಬಜರಂಗ್ ಪೂನಿಯಾ ಅವರ ಕೋಚ್ ಆಗಿದ್ದರು.

ಮೊಹ್ಸಿನ್‌ಗೆ ಎಂಟು ವಿಕೆಟ್

ಬೆಂಗಳೂರು: ಕರ್ನಾಟಕದ ಆಫ್ ಸ್ಪಿನ್ನರ್ ಮೊಹ್ಸಿನ್ ಖಾನ್ ಅವರು ಕರ್ನಲ್ ಸಿ.ಕೆ. ನಾಯ್ಡು ಟ್ರೋಫಿ ಎಲೀಟ್ ಡಿ ಗುಂಪಿನ ಪಂದ್ಯದಲ್ಲಿ ಚಂಡೀಗಢ ಎದುರಿನ ಮೊದಲ ಇನಿಂಗ್ಸ್‌ನಲ್ಲಿ ಎಂಟು ವಿಕೆಟ್ ಗಳಿಸಿದರು. ಇದು ಅವರ ಜೀವನಶ್ರೇಷ್ಠ ಬೌಲಿಂಗ್ ಆಗಿ ದಾಖಲಾಯಿತು.

ಆಲೂರು ಕೆಎಸ್‌ಸಿಎ ಕ್ರೀಡಾಂಗಣ (3)ದಲ್ಲಿ ನಡೆಯುತ್ತಿರುವ ಪಂದ್ಯದಲ್ಲಿ ಭಾನುವಾರ ಮೂರನೇ ದಿನದಾಟದ ಅಂತ್ಯಕ್ಕೆ ಚಂಡೀಗಢ ಎರಡನೇ ಇನಿಂಗ್ಸ್‌ನಲ್ಲಿ 3 ವಿಕೆಟ್‌ಗೆ 55 ರನ್ ಗಳಿಸಿದ್ದು, ಇನ್ನಿಂಗ್ಸ್ ಸೋಲು ತಪ್ಪಿಸಲು ಇನ್ನೂ 296 ರನ್ ಬೇಕಿದೆ. ಕೊನೆಯ ದಿನದ ಆಟ ಕುತೂಹಲ ಕೆರಳಿಸಿದ್ದು, ಕರ್ನಾಟಕದ ಗೆಲುವು ಏಳು ವಿಕೆಟ್ ದೂರದಲ್ಲಿದೆ.

3 ವಿಕೆಟ್‌ಗೆ 98 ರನ್‌ಗಳೊಂದಿಗೆ ದಿನದ ಆಟ ಆರಂಭಿಸಿದ ಚಂಡೀಗಢ ತಂಡವನ್ನು ಮೊಹ್ಸಿನ್ (114ಕ್ಕೆ 8) ಇನ್ನಿಲ್ಲದಂತೆ ಕಾಡಿದರು. ಇಬ್ಬರು ಬ್ಯಾಟರ್‌ಗಳು ರನೌಟ್ ಆದರೆ, ಉಳಿದ ಎಂಟು ಮಂದಿ 22 ವರ್ಷದ ಮೊಹ್ಸಿನ್ ಅವರಿಗೆ ವಿಕೆಟ್ ಒಪ್ಪಿಸಿದ್ದು ವಿಶೇಷ.

ಎಂಟು ವಿಕೆಟ್ ಪಡೆದ ಕರ್ನಾಟಕದ ಮೊಹ್ಸಿನ್ ಖಾನ್ ಪ್ರಜಾವಾಣಿ ಚಿತ್ರ

ಚಂಡೀಗಢ ತಂಡದ ಆರಂಭದ ಆಟಗಾರ ದುಷ್ಯಂತ್ (59;79ಎ), ನಾಯಕ ಆರುಷ್ ಭಂಡಾರಿ (63; 192ಎ) ಮತ್ತು ಅಧಿರಾಜ್ (ಔಟಾಗದೇ 64;77ಎ) ಮಾತ್ರ ಕೊಂಚ ಹೋರಾಟ ಮಾಡಿದರು. ಮೊದಲ ಇನಿಂಗ್ಸ್‌ನಲ್ಲಿ 107 ಓವರ್‌ಗಳಲ್ಲಿ 283 ರನ್‌ಗಳಿಗೆ ಕುಸಿಯಿತು.

351 ರನ್‌ಗಳ ಮುನ್ನಡೆ ಪಡೆದ ಕರ್ನಾಟಕ ತಂಡವು ಎದುರಾಳಿ ತಂಡದ ಮೇಲೆ ಫಾಲೋಆನ್ ಹೇರಿತು.

ಸಂಕ್ಷಿಪ್ತ ಸ್ಕೋರ್: ಮೊದಲ ಇನಿಂಗ್ಸ್: ಕರ್ನಾಟಕ: 138.2 ಓವರ್‌ಗಳಲ್ಲಿ 4 ವಿಕೆಟ್‌ಗೆ 634 ಡಿಕ್ಲೇರ್ಡ್. ಚಂಡೀಗಢ: 107 ಓವರ್‌ಗಳಲ್ಲಿ 283 (ದುಷ್ಯಂತ್ 59, ಆರುಷ್ ಭಂಡಾರಿ 63, ಅಧಿರಾಜ್ ಔಟಾಗದೇ 64; ಮೊಹ್ಸಿನ್ ಖಾನ್ 114ಕ್ಕೆ 8). ಎರಡನೇ ಇನಿಂಗ್ಸ್: ಚಂಡೀಗಢ: 28 ಓವರ್‌ಗಳಲ್ಲಿ 3 ವಿಕೆಟ್‌ಗೆ 55 (ಮನ್ವಂತ್ ಕುಮಾರ್ 29ಕ್ಕೆ 2).

ವಿಶ್ವಕಪ್: ತಂಡ ಪ್ರಕಟಿಸಿದ ಪಾಕಿಸ್ತಾನ

ಲಾಹೋರ್ (ಪಿಟಿಐ): ಬಾಂಗ್ಲಾದೇಶ ತಂಡವನ್ನು ಟಿ20 ವಿಶ್ವಕಪ್ ಟೂರ್ನಿಯಿಂದ ಕೈಬಿಟ್ಟಿರುವುದನ್ನು ಪಾಕಿಸ್ತಾನ ಕ್ರಿಕೆಟ್ ಮಂಡಳಿಯು ಖಂಡಿಸಿತ್ತು. ತಮ್ಮ ತಂಡವನ್ನೂ ಟಿ20 ವಿಶ್ವಕಪ್ ಟೂರ್ನಿಗೆ ಕಳಿಸುವುದಿಲ್ಲ ಎಂದು ಪಿಸಿಬಿ ಅಧ್ಯಕ್ಷ ಮೊಹಸಿನ್ ನಖ್ವಿ ಬೆದರಿಕೆ ಒಡ್ಡಿದ್ದರು.

ಆದರೆ ಈಗ ಪಿಸಿಬಿಯು ಟಿ20 ವಿಶ್ವಕಪ್ ಟೂರ್ನಿಯಲ್ಲಿ ಆಡಲಿರುವ ಪಾಕ್ ತಂಡವನ್ನು ಆಯ್ಕೆ ಮಾಡಿದೆ. 15 ಆಟಗಾರರ ತಂಡಕ್ಕೆ ಸಲ್ಮಾನ್ ಅಲಿ ಆಘಾ ನಾಯಕರಾಗಿದ್ದಾರೆ. ಫೆ.7ರಿಂದ ಮಾರ್ಚ್ 8ರವರೆಗೆ ಟೂರ್ನಿಯು ನಡೆಯಲಿದೆ.

'ನಾವು ಆಯ್ಕೆಗಾರರು. ತಂಡವನ್ನು ಆಯ್ಕೆ ಮಾಡುವುದು ನಮ್ಮ ಕರ್ತವ್ಯ. ಐಸಿಸಿ ನಿಗದಿ ಮಾಡಿದ ಸಮಯದೊಳಗೆ ತಂಡವನ್ನು ಪ್ರಕಟಿಸಿದ್ದೇವೆ' ಎಂದು ಪಾಕ್ ಆಯ್ಕೆ ಸಮಿತಿ ಅಧ್ಯಕ್ಷ ಅಕೀಬ್ ಜಾವೇದ್ ಸುದ್ದಿಗಾರರಿಗೆ ಹೇಳಿದರು.

ಸರ್ಕಾರಕ್ಕೆ ಬಿಟ್ಟಿದ್ದು: ತಂಡ ಪ್ರಕಟವಾದ ನಂತರ ಮಾಧ್ಯಮಗಳಿಗೆ ಪ್ರತಿಕ್ರಿಯಿಸಿರುವ ಮೊಹಸಿನ್ ನಖ್ವಿ, 'ವಿಶ್ವಕಪ್ ಟೂರ್ನಿಗೆ ತಂಡವನ್ನು ಕಳಿಸುವ ಕುರಿತು ನಮ್ಮ ಸರ್ಕಾರ ನಿರ್ಧರಿಸಲಿದೆ. ಸರ್ಕಾರದ ಆದೇಶಕ್ಕಾಗಿ ಕಾಯುತ್ತಿದ್ದೇವೆ. ಟೂರ್ನಿಗೆ ಹೋಗುವುದು ಬೇಡ ಎಂದು ಸರ್ಕಾರ ಹೇಳಿದರೆ ಅದನ್ನೂ ಪಾಲಿಸುತ್ತೇವೆ' ಎಂದಿದ್ದಾರೆ.

ತಂಡ: ಸಲ್ಮಾನ್ ಅಲಿ ಆಘಾ (ನಾಯಕ), ಅಬ್ರಾರ್ ಅಹಮದ್, ಬಾಬಾರ್ ಆಜಂ, ಫಹೀಂ ಅಶ್ರಫ್, ಫಕಾರ್ ಜಮಾನ್, ಖ್ವಾಜಾ ಮೊಹಮ್ಮದ್ ನಾಫೆ, ಮೊಹಮ್ಮದ್ ನವಾಜ್, ಮೊಹಮ್ಮದ್ ಸಲ್ಮಾನ್ ಮಿರ್ಜಾ, ನಸೀಂ ಶಾ, ಸಾಹಿಬಜಾದಾ ಫರ್ಹಾನ್ (ವಿಕೆಟ್‌ಕೀಪರ್), ಸೈಮ್ ಅಯೂಬ್, ಶಹೀನ್ ಶಾ ಆಫ್ರಿದಿ, ಶಾದಾಬ್ ಖಾನ್, ಉಸ್ಮಾನ್ ಖಾನ್ (ವಿಕೆಟ್‌ಕೀಪರ್), ಉಸ್ಮಾನ್ ತಾರೀಕ್.

ಇಂದರ್‌ಜಿತ್ ಸಿಂಗ್ ಬಿಂದ್ರಾ ನಿಧನ



ನವದೆಹಲಿ (ಪಿಟಿಐ): ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ (ಬಿಸಿಸಿಐ) ಮಾಜಿ ಅಧ್ಯಕ್ಷ ಇಂದರ್‌ಜಿತ್ ಸಿಂಗ್ ಬಿಂದ್ರಾ (84) ಭಾನುವಾರ ಇಲ್ಲಿ ನಿಧನರಾದರು. ಅವರಿಗೆ ಪುತ್ರ ಮತ್ತು ಪುತ್ರಿ ಇದ್ದಾರೆ.

ಬಿಂದ್ರಾ ಅವರು 1993ರಿಂದ 1996 ರವರೆಗೆ ಬಿಸಿಸಿಐ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದರು. 1978ರಿಂದ 2014 ರವರೆಗೆ ಪಂಜಾಬ್ ಕ್ರಿಕೆಟ್ ಸಂಸ್ಥೆಯ (ಪಿಸಿಐ) ಚುಕ್ಕಾಣಿ ಹಿಡಿದಿದ್ದರು. ಕ್ರಿಕೆಟ್ ಮಾರ್ಕೆಟಿಂಗ್‌ನ ಹೊಸ ಯುಗಕ್ಕೆ ನಾಂದಿ ಹಾಡುವಲ್ಲಿ ಪ್ರಮುಖ ಪಾತ್ರ ವಹಿಸಿದ್ದರು.

ಶರದ್ ಪವಾರ್ ಅಂತರರಾಷ್ಟ್ರೀಯ ಕ್ರಿಕೆಟ್ ಮಂಡಳಿ ಅಧ್ಯಕ್ಷರಾಗಿದ್ದಾಗ ಬಿಂದ್ರಾ ಅವರು ಪ್ರಧಾನ ಸಲಹೆಗಾರರಾಗಿ ಕೆಲಸ ಮಾಡಿದ್ದರು. ಕ್ರೀಡಾ ಆಡಳಿತಕ್ಕೆ ಬಿಂದ್ರಾ ನೀಡಿರುವ ಅಪೂರ್ವ ಕೊಡುಗೆಗಾಗಿ 2015ರಲ್ಲಿ ಮೊಹಾಲಿಯ ಪಿಸಿಎ ಕ್ರೀಡಾಂಗಣಕ್ಕೆ 'ಐಎಸ್ ಬಿಂದ್ರಾ ಕ್ರೀಡಾಂಗಣ' ಎಂದು ಮರುನಾಮಕರಣ ಮಾಡಲಾಯಿತು.

ಮಂದಾನ ಪಡೆಗೆ ಮುಂಬೈ ಸವಾಲು

ಮಹಿಳಾ ಪ್ರೀಮಿಯರ್ ಲೀಗ್

ವಡೋದರ (ಪಿಟಿಐ): ಸತತ ಐದು ಗೆಲುವುಗಳ ನಂತರ ಒಂದು ಪಂದ್ಯ ಸೋತಿರುವ ರಾಯಲ್ ಚಾಲೆಂಜರ್ಸ್ ಬಳಗವು ಸೋಮವಾರ ಮಹಿಳಾ ಪ್ರೀಮಿಯರ್ ಲೀಗ್ ಕ್ರಿಕೆಟ್ ಟೂರ್ನಿಯಲ್ಲಿ ಮುಂಬೈ ಇಂಡಿಯನ್ಸ್ ಎದುರು ಗೆಲುವಿನ ಹಳಿಗೆ ಮರಳುವ ಛಲದಲ್ಲಿದೆ.

ಟೂರ್ನಿಯ ಅಂಕಪಟ್ಟಿಯಲ್ಲಿ ಪ್ರಸ್ತುತ ಆರ್‌ಸಿಬಿಯು 10 ಅಂಕಗಳೊಂದಿಗೆ ಅಗ್ರಸ್ಥಾನದಲ್ಲಿದೆ. ಅಲ್ಲದೇ ಪ್ಲೇ ಆಫ್ ಕೂಡ ಪ್ರವೇಶಿಸಿದೆ. ಆದರೆ ಮುಂಬೈ ಸ್ಥಿತಿ ಚೆನ್ನಾಗಿಲ್ಲ. ಕೇವಲ 4 ಅಂಕ ಗಳಿಸಿ ನಾಲ್ಕನೇ ಸ್ಥಾನದಲ್ಲಿದೆ. ಆದ್ದರಿಂದ ಮುಂಬೈ ತಂಡಕ್ಕೆ ಈ ಪಂದ್ಯದ ಜಯ ಮುಖ್ಯವಾಗಿದೆ.

ಆದರೆ ಆರ್‌ಸಿಬಿ ಆಟಗಾರ್ತಿಯರು ಮೈ ಮರೆಯುವಂತಿಲ್ಲ. ಡೆಲ್ಲಿ ಕ್ಯಾಪಿಟಲ್ಸ್ ಎದುರಿನ ಸೋಲಿನಿಂದ ಬಹಳಷ್ಟು ಪಾಠಗಳನ್ನು ಕಲಿಯಬೇಕಿದೆ. ಪ್ರಮುಖವಾಗಿ ಬ್ಯಾಟಿಂಗ್ ವೈಫಲ್ಯದಿಂದ ಹೊರಬರಬೇಕಿದೆ. ಕೋತಂಬಿ ಕ್ರೀಡಾಂಗಣದ ಪಿಚ್ ಬೌಲರ್‌ಗಳಿಗೆ ಹೆಚ್ಚು ನೆರವು ಕೊಡುತ್ತಿರುವುದರಿಂದ ಆರ್‌ಸಿಬಿ ಬ್ಯಾಟರ್‌ಗಳು ತಮ್ಮ ಕೌಶಲಗಳಿಗೆ ಸಾಣೆ ಹಿಡಿಯಬೇಕಿದೆ.

ಪಂದ್ಯ ಆರಂಭ: ರಾತ್ರಿ 7.30,
ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್